Department of Public Instruction, Mysore

ಹಿಂದೂದೇಶದ ಚರಿತ್ರೆ

ಭಾಗ III

K. Shantha Kumari

(ಮಿಡಲ್ III ಮತ್ತು IVನೆಯ ತರಗತಿಗಳ ಉಪಯೋಗಕ್ಕಾಗಿ)

ಜಿ. ಎಸ್. ಸುಬ್ಬರಾವ್

ಮತ್ತು

ಯಲ್. ಶೇಷಗಿರಿರಾವ್

ಇವರುಗಳಿಂದ ರಚಿಸಲ್ಪಟ್ಟುದು

K. Shantha Kumari
M. IV year.

Second Edition—20,000 Copies

BANGALORE
PRINTED AT THE GOVERNMENT PRESS
1929

ವಿಷಯಸೂಚಿಕೆ

Iನೆಯ ಭಾಗ—ಹಿಂದೂಗಳ ಕಾಲ

IIನೆಯ ಭಾಗ—ಮಹಮ್ಮದೀಯರ ಕಾಲ

IIIನೆಯ ಭಾಗ: —ಬ್ರಿಟಿಷರ ಸಾಮ್ರಾಜ್ಯ

A. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯ ಆದಿಭಾಗದ ಚರಿತ್ರೆ ಕ್ರಿ.ಶ. 1498—1773

B. ಕಂಪೆನಿಯ ರಾಜ್ಯವು ನೆಲೆಗೊಂಡದ್ದು ಕ್ರಿ.ಶ. 1737—1823

C. ಕಂಪೆನಿಯ ರಾಜ್ಯವು ವಿಸ್ತಾರವಾದದ್ದು. ಕ್ರಿ.ಶ. 1823—1859

D. ಬ್ರಿಟಿಷ್ ಇಂಡಿಯಾ ಚಕ್ರಾಧಿಪತ್ಯ ಕ್ರಿ.ಶ. 1858—1926

...ಯ ಪುಟದ ೧೬ನೆಯ ಪಂಕ್ತಿಯಲ್ಲಿರುವ "ಈ ಯಾತ್ರಿ
...ದಕ್ಕೆ ಬದಲಾಗಿ "ಈ ಯಾತ್ರಿಕನು ಅನೇಕ"

ಹಿಂದೂದೇಶದ ಚರಿತ್ರೆ

ಮೂರನೆಯ ಭಾಗ

೧. ಹಿಂದೂಗಳ ಕಾಲ

ಅಧ್ಯಾಯ ೧.—ಹಿಂದೂದೇಶದ ಸ್ವಾಭಾವಿಕ ಸನ್ನಿವೇಶ

ಪ್ರತಿದೇಶದ ಜನರ ಸ್ವಭಾವವೂ, ಆಚಾರ ವ್ಯವಹಾರಗಳೂ ಆ ದೇಶದ ಭೂಗುಣ, ವಾಯುಗುಣ, ಪರ್ವತಗಳು, ನದಿಗಳು, ಇವೇ ಮೊದಲಾದವುಗಳನ್ನನುಸರಿಸುತ್ತವೆ. ಆದುದರಿಂದ ಯಾವದೇಶದ ಚರಿತ್ರೆಯನ್ನು ತಿಳಿಯಬೇಕಾದರೂ ಆ ದೇಶದ ಭೂವಿವರಣೆಯ ವಿಷಯಗಳನ್ನು ಅಲ್ಪಸ್ವಲ್ಪವಾದರೂ ವಿಚಾರಮಾಡಬೇಕು. ನಮ್ಮ ಮಾತೃಭೂಮಿಯಾದ ಹಿಂದೂ ದೇಶದ ಚರಿತ್ರೆಯನ್ನು ತಿಳಿಯುವುದಕ್ಕಾಗಿ ಇದರ ಭೂಸ್ವಭಾವವನ್ನು ತಿಳಿಯೋಣ.

ಈ ದೇಶವು ಏಷ್ಯಾಖಂಡಕ್ಕೆ ಸೇರಿದ ಒಂದು ಪರ್ಯಾಯದ್ವೀಪವಾಗಿದೆ. ಇದನ್ನು "ಭರತಖಂಡ" "ಹಿಂದೂದೇಶ" "ಹಿಂದೂಸ್ಥಾನ" "ಇಂಡಿಯಾದೇಶ" ಎಂದು ಕರೆಯುವೆವು. ಆದರೆ ಈ ವಿಶಾಲವಾದ ಭೂಭಾಗದಲ್ಲಿ "ಖಂಡದ" ಲಕ್ಷಣಗಳೆಲ್ಲವೂ ಕಂಡುಬರುತ್ತವೆ. ರಷ್ಯಾದೇಶವನ್ನು ಯೂರೋಪ್ ಖಂಡದಿಂದ ತೆಗೆದುಬಿಟ್ಟರೆ ಉಳಿಯುವ ಭಾಗವು ಎಷ್ಟು ದೊಡ್ಡದೋ, ನಮ್ಮ ದೇಶವು ಅಷ್ಟು ವಿಶಾಲವಾಗಿದೆ. ಪ್ರಜಾಸಂಖ್ಯೆಯು ಸುಮಾರು 33 ಕೋಟಿ ; ಇಷ್ಟು ವಿಶಾಲವಾದ ಪ್ರದೇಶವಾದುದರಿಂದ ಇದನ್ನು ಖಂಡವೆಂದೇ ಕರೆಯಬಹುದು. ಇಲ್ಲಿ ಅನೇಕ ಬುಡ

ಕಟ್ಟಿಗೆ ಸೇರಿದ ಬೇರೆಬೇರೆ ಮತಗಳನ್ನನುಸರಿಸತಕ್ಕ ಜನರಿರುವರು. ಈ ದೇಶದ ದಕ್ಷಿಣಭಾಗವು ಉಷ್ಣವಲಯದಲ್ಲೂ, ಉತ್ತರಭಾಗವು ಸಮ ಶೀತೋಷ್ಣವಲಯದಲ್ಲೂ ಇವೆ.

ಈ ಖಂಡದ ಎಲ್ಲಾ ಭಾಗಗಳ ಚರಿತ್ರೆಯು ಒಂದೇಬಗೆಯಾಗಿಲ್ಲದೆ ಅಲ್ಲಿನ ದೇಶಗಳಿಗೆ ಸಂಬಂಧಪಟ್ಟ ಚರಿತ್ರೆಯೇ ಬೇರೆಬೇರೆಯಾಗಿರುವುದ ರಿಂದ ಇದರ ಚರಿತ್ರೆಯನ್ನು ಒಟ್ಟುಗೂಡಿಸಿ ಸಂಕ್ಷೇಪವಾಗಿ ತಿಳಿಯುವುದು ಕಷ್ಟವೇ ಅಹುದು.

ಮೇರೆಗಳು

ಉತ್ತರಭಾಗದಲ್ಲಿ ಎತ್ತರವಾಗಿಯೂ, ಅಗಲವಾಗಿಯೂ ಇರುವ ಹಿಮಾಲಯ ಪರ್ವತಗಳೂ ಈಶಾನ್ಯ ವಾಯವ್ಯ ದಿಕ್ಕುಗಳಲ್ಲಿ ದಕ್ಷಿಣಮುಖ ವಾಗಿ ತಿರುಗಿಕೊಂಡಿರುವ ಈ ಪರ್ವತದ ಶಾಖೆಗಳೂ, ಪೂರ್ವ, ಪಶ್ಚಿಮ ದಕ್ಷಿಣ ಭಾಗಗಳಲ್ಲಿ ವಿಶಾಲವಾಗಿಯೂ, ಆಳವಾಗಿಯೂ ಇರುವ ಸಾಗರ, ಸಮುದ್ರಗಳೂ, ಈ ದೇಶಕ್ಕೆ ಮೇರೆಗಳಾಗಿ ಈ ದೇಶವನ್ನು ಶತ್ರುಗಳಿಂದ ರಕ್ಷಿಸುತ್ತಲಿವೆ. ಹಿಮಾಲಯ ಪರ್ವತವು ದಾಟಲಾರದಷ್ಟು ಎತ್ತರವಾಗಿ ರುವುದು ಮಾತ್ರವೇ ಅಲ್ಲದೆ ಸದಾಕಾಲದಲ್ಲಿಯೂ ಹಿಮದಿಂದ ಕೂಡಿರು ತ್ತದೆ. ಹೀಗಿರುವುದರಿಂದಲೇ ಉತ್ತರದಿಕ್ಕಿನಿಂದ ಹಿಂದೂದೇಶಕ್ಕೆ ಇದು ವರೆಗೆ ಯಾರೂ ದಂಡೆತ್ತಿ ಬರಲಿಲ್ಲ. ವಾಯವ್ಯ, ಈಶಾನ್ಯ ಮೂಲೆಗಳ ಲ್ಲಿರುವ ಪರ್ವತಗಳು ಅಷ್ಟು ಎತ್ತರವಾಗಿಲ್ಲದಿರುವುದರಿಂದ ಈ ಮಾರ್ಗ ವಾಗಿ ಆಗಾಗ ಹೊರದೇಶದವರು ದಂಡೆತ್ತಿಬಂದಿರುವರು.

ಉಳಿದ ದಿಕ್ಕುಗಳಲ್ಲಿ ವಿಶಾಲವಾದ ಸಮುದ್ರಗಳಿರುವುದರಿಂದ ವ್ಯಾಪಾರಕ್ಕೆ ವಿನಾ, ಈಚೀಚಿನವರೆಗೂ ಆ ದಿಕ್ಕುಗಳಿಂದಲೂ ಯಾರೂ ದಂಡೆತ್ತಿ ಬಂದಿಲ್ಲ. ಹಾಗೆ ದಂಡಯಾತ್ರೆಗೆ ಯತ್ನಿಸಲು ಪೂರ್ವದೇಶ ಗಳಲ್ಲಿ ಸಮುದ್ರದ ಮೇಲೆ ಸರ್ವಾಧಿಕಾರವನ್ನು ಪಡೆದಿದ್ದ ಜನಾಂಗಗಳಾ ವುವೂ ಇರಲಿಲ್ಲ. ದೇಶದೊಳಕ್ಕೆ ಸಮುದ್ರಗಳು ವಿಶೇಷವಾಗಿ ನುಗ್ಗದಿರು ವುದರಿಂದ ಹಿಂದೂದೇಶದ ತೀರದ ಅಳತೆಯು ಅಷ್ಟು ಹೆಚ್ಚಾಗಿಲ್ಲ. ಆದು ದರಿಂದ ದೇಶದ ಅನೇಕ ಭಾಗಗಳು ಸಮುದ್ರಕ್ಕೆ ಬಲು ದೂರದಲ್ಲಿವೆ. ಇದೂ ಅಲ್ಲದೆ ತೀರದಲ್ಲಿ ಒಳ್ಳೆಯ ಬಂದರುಗಳೂ, ತೀರಕ್ಕೆ ಸಮಿಾಪವಾಗಿ ದ್ವೀಪಗಳೂ ಇಲ್ಲ. ಈ ಕಾರಣಗಳಿಂದ ಹಿಂದೂದೇಶದವರು ಸಮುದ್ರ

ವ್ಯಾಪಾರದಲ್ಲಾಗಲೀ, ಸಮುದ್ರದಮೇಲೆ ಯುದ್ಧಮಾಡುವುದರಲ್ಲಾಗಲೀ ಯಾವಾಗಲೂ ಹೆಸರು ಪಡೆಯಲಿಲ್ಲ. ಸಮುದ್ರದ ಮೇಲೆ ಸರ್ವಾಧಿಕಾರವನ್ನು ಹೊಂದಿದ್ದ ಯೂರೋಪಿನ ಜನಾಂಗಗಳವರು 15ನೇ ಶತಮಾನದಲ್ಲಿ ವ್ಯಾಪಾರಕ್ಕಾಗಿ ಇಲ್ಲಿಗೆ ಬರುವವರೆಗೂ ಸಮುದ್ರದಮೇಲಿನ ವ್ಯಾಪಾರವು ಅಷ್ಟು ವಿಶೇಷವಾಗಿರಲಿಲ್ಲ.

ಹಿಂದೂಸ್ಥಾನದ ನದಿಗಳು

ಈ ದೇಶದ ಸಂಪತ್ತಿಗೆ ಇಲ್ಲಿನ ನದಿಗಳೇ ಕಾರಣವಾಗಿವೆ. ಅದರಲ್ಲಿಯೂ ಉತ್ತರ ಹಿಂದೂಸ್ಥಾನದ ನದಿಗಳ ಪ್ರಯೋಜನವನ್ನು ಅಷ್ಟಿಷ್ಟೆಂದು ಹೇಳಲಾಗುವುದಿಲ್ಲ. ಈ ನದಿಗಳು ಮಂಜಿನಿಂದ ಮುಚ್ಚಿರುವ ಹಿಮಾಲಯ ಪರ್ವತದಲ್ಲಿ ಹುಟ್ಟಿ, ಬೇಸಿಗೆ ಮಳಗಾಲಗಳೆನ್ನದೆ ಸದಾಕಾಲಗಳಲ್ಲಿಯೂ ಬೇಕಾದಷ್ಟು ನೀರನ್ನು ಒದಗಿಸುವುವು. ಅಲ್ಲದೆ ತಾವು ಹರಿಯುವ ಮಾರ್ಗದಲ್ಲಿರುವ ಮೆಕ್ಕಲನ್ನು ತಂದು ತಮ್ಮ ಅಕ್ಕಪಕ್ಕದ ಭೂಮಿಗಳಮೇಲೆ ಹರಡುವುದರಿಂದ ಉತ್ತರ ಹಿಂದೂಸ್ಥಾನವು ಬಹು ಫಲವತ್ತಾಗಿದೆ. ಈ ನದಿಗಳು ಮೈದಾನ ಪ್ರದೇಶಗಳಲ್ಲಿ ಹರಿಯುವಾಗ ನಿಧಾನವಾಗಿ ಹರಿಯುವುದರಿಂದ ಹಡಗಿನ ಸಂಚಾರಕ್ಕೆ ಅನುಕೂಲಿಸಿ ವ್ಯಾಪಾರವು ಹೆಚ್ಚಲು ಸಹಕಾರಿಗಳಾಗಿವೆ. ಆದುದರಿಂದ ಈ ಪ್ರದೇಶದಲ್ಲಿ ಜನಸಾಂದ್ರತೆಯೂ, ಸಂಪತ್ತೂ ವಿಶೇಷವಾಗಿವೆ.

ಸ್ವಾಭಾವಿಕ ವಿಭಾಗಗಳು

ಹಿಂದೂದೇಶವನ್ನು ಸ್ವಭಾವವಾಗಿ ಉತ್ತರದ ಬೈಲು ಅಥವಾ ಉತ್ತರ ಹಿಂದೂಸ್ಥಾನ, ದರ್ಖ ಅಥವಾ ದಕ್ಷಿಣದೇಶದ ದಿಣ್ಣೆ, ದಕ್ಷಿಣದ ಬೈಲು ಅಥವಾ "ತಮಿಳು ನಾಡು" ಎಂದು ಮೂರು ಬಗೆಯಾಗಿ ವಿಂಗಡಿಸಬಹುದು. ಕ್ರಿ. ಶ. 19ನೆಯ ಶತಮಾನದವರೆಗೂ ಈ ಸ್ವಾಭಾವಿಕವಾದ ವಿಭಾಗಗಳನ್ನನುಸರಿಸಿ ಚರಿತ್ರೆಯ ವಿಷಯಗಳು ಈ ಪ್ರದೇಶಗಳಿಗೆ ಬೇರೆಬೇರೆಯಾಗಿವೆ. ನರ್ಮದಾನದಿಯ ಉತ್ತರಕ್ಕಿರುವ ದೇಶವನ್ನು "ಆರ್ಯಾವರ್ತ" ಅಥವಾ "ಹಿಂದೂಸ್ಥಾನ" ಎನ್ನುತ್ತಾರೆ. ಈ ವಿಶಾಲವಾದ ಬಯಲಿನಲ್ಲಿ ಸಿಂಧು, ಗಂಗೆ ಮತ್ತು ಬ್ರಹ್ಮಪುತ್ರಾನದಿಗಳು ಹರಿದು ಆ ಪ್ರದೇಶವನ್ನು ಅತಿ ಫಲವತ್ತಾಗಿ ಮಾಡಿರುವುದರಿಂದ ಅಲ್ಲಿನ ಸಂಪ

ತ್ತಿಗೆ ಆಸೆಪಟ್ಟು ಹೊರದೇಶಗಳಿಂದ ಅನೇಕರು ವಲಸೆಬಂದು ಈ ನದಿಗಳ ಪಕ್ಕದ ಫಲವತ್ತಾದ ಭೂಮಿಗಳಲ್ಲಿ ನೆಲಸಿ ಪ್ರಸಿದ್ಧವಾದ ರಾಜ್ಯಗಳನ್ನು ಕಟ್ಟುತ್ತಾಬಂದರು. ಈ ದೇಶಕ್ಕೂ, ದಕ್ಷಿಣದೇಶದ ದಿಣ್ಣೆಗೂ ನಡುವೆ ವಿಂಧ್ಯ ಮತ್ತು ಸಾತ್ಪುರಾ ಬೆಟ್ಟಗಳೂ, ದಟ್ಟವಾದ ಮಹಾ ಕಾಂತಾರವೆಂಬ ಒಂದು ಅರಣ್ಯವೂ, ಅಗಲವಾದ ನರ್ಮದಾ ನದಿಯೂ ಇದ್ದುದರಿಂದ ಉತ್ತರದ ಬೈಲಿಗೂ, ದಕ್ಷಿಣದೇಶದ ದಿಣ್ಣೆಗೂ ಪರಸ್ಪರ ಸಂಬಂಧವಿರಲಿಲ್ಲ. ಉತ್ತರ ಹಿಂದೂಸ್ಥಾನದ ದೊರೆಗಳು ದಕ್ಷಿಣದೇಶಕ್ಕೆ ಪದೇಪದೇ ದಂಡೆತ್ತಿ ಹೋಗದಿರಲು ಅಲ್ಲಿನ ದುರ್ಗಮವಾದ ಪ್ರದೇಶಗಳೇ ಕಾರಣ. ಆದುದರಿಂದ ಹಿಂದೂಸ್ಥಾನಕ್ಕೆ ಮೊಟ್ಟಮೊದಲು ಬಂದ ಆರ್ಯರಾಗಲಿ, ಆ ಮೇಲೆ ಅಲ್ಲಿ ರಾಜ್ಯಕಟ್ಟಿದ ಮಹಮ್ಮದೀಯರೇ ಆಗಲಿ ಬಹುದಿನಗಳವರೆಗೂ ದಕ್ಷಿಣದೇಶಕ್ಕೆ ದಂಡೆತ್ತಿ ಹೋಗಲಿಲ್ಲ. ಕೇವಲ ಶಕ್ತರಾದ ಕೆಲವು ದೊರೆಗಳು ದಕ್ಷಿಣಕ್ಕೆ ದಂಡಯಾತ್ರೆ ಬಂದಾಗ್ಯೂ ಅಲ್ಲಿ ರಾಜ್ಯಸ್ಥಾಪನೆ ಮಾಡಲಿಲ್ಲ.

ತಪತೀ ನದಿಯಿಂಥ ಹಿಡಿದು ತುಂಗಭದ್ರಾ ನದಿಯವರೆಗಿರುವ ದೇಶಕ್ಕೆ "ದಕ್ಷಿಣದೇಶ" ಅಥವಾ "ದರ್ಖ" ಎಂದು ಹೆಸರು. ವಿಂಧ್ಯ ಪರ್ವತ, ಪಶ್ಚಿಮ ಮತ್ತು ಪೂರ್ವಘಟ್ಟ ಈ ಪರ್ವತ ಪಂಕ್ತಿಗಳು ದಕ್ಷಿಣದೇಶದ ದಿಣ್ಣೆಯನ್ನು ಸುತ್ತಿಕೊಂಡಿವೆ. ಅತಿ ಪುರಾತನ ಕಾಲದಲ್ಲಿ ಈ ಭಾಗವನ್ನು "ದಕ್ಷಿಣಾಪಥ" ಎಂದು ಕರೆಯುತ್ತಿದ್ದರು. ದ್ರಾವಿಡರಾಷ್ಟ್ರಗಳೆಲ್ಲವೂ ದಕ್ಷಿಣಾಪಥದಲ್ಲೇ ಇರುವುವು. ಇವುಗಳಲ್ಲಿ ಕರ್ನಾಟಕ ರಾಷ್ಟ್ರವು ಪುರಾತನವಾದುದು. ಉತ್ತರ ಕನ್ನಡ, ಬೆಳಗಾಂ, ರತ್ನಗಿರಿ, ಧಾರ್ವಾಡ, ಬಿಜಾಪುರ, ನಿಜಾಮರ ಸಂಸ್ಥಾನಕ್ಕೆ ಸೇರಿದ ರಾಯಚೂರು, ಗುಲ್ಬರ್ಗ, ಷೋಲಾಪುರ, ಉಸ್ಮಾನಾಬಾದ್, ಬಳ್ಳಾರಿ, ಅನಂತಪುರ, ಕೊಯಮತ್ತೂರಿನ ಕೆಲವು ಭಾಗಗಳು, ಸೇಲಂ, ನೀಲಗಿರಿ, ಕೊಡಗು ಮತ್ತು ಮೈಸೂರು ಸಂಸ್ಥಾನ, ಇವಷ್ಟನ್ನೂ ಒಟ್ಟುಗೂಡಿಸಿ ಕರ್ನಾಟಕವೆನ್ನುತ್ತಾರೆ. ಹೆಚ್ಚು ಸೆಕೆ ಇಲ್ಲದೆ ಈ ಪ್ರದೇಶದ ಜನರು ಸ್ವಭಾವವಾಗಿ ಶಕ್ತಿವಂತರು, ಸಮರ್ಥರು, ಕಷ್ಟಸಹಿಷ್ಣುಗಳು. ಇಂಥಾವರು ಪ್ರಸಿದ್ಧವಾದ ರಾಜ್ಯಗಳನ್ನು ಕಟ್ಟಿದುದು ಏನೂ ಆಶ್ಚರ್ಯವಲ್ಲ. ಹೀಗೆ ರಾಜ್ಯ ಕಟ್ಟಿದವರಲ್ಲಿ ಮರಾಟೆಯವರು ಬಹು ಪ್ರಸಿದ್ಧರು.

ತುಂಗಭದ್ರಾನದಿಯಿಂದ ಕನ್ಯಾಕುಮಾರಿಯ ವರೆಗೂ ಇರುವ ಉಳಿದ ಭರತಖಂಡಕ್ಕೆ "ದ್ರಾವಿಡನಾಡು" ಅಥವಾ "ತಮಿಳುನಾಡು" ಎಂದು ಹೆಸರು. ಈ ಸೀಮೆಯು ಫಲವತ್ತಾದ ಬಯಲುಪ್ರದೇಶವಾಗಿದೆ. ಇದು ಕೇವಲ ಉಷ್ಣರಾಜ್ಯವಾದುದರಿಂದ ಇಲ್ಲಿನ ಜನರು ಅಷ್ಟು ಶಕ್ತರಲ್ಲ. ಆದುದರಿಂದಲೇ ರಾಜ್ಯಕಟ್ಟುವ ವಿಷಯದಲ್ಲಿ ಇವರುಗಳು ಉತ್ಸಾಹಿಗಳಾಗಿರಲಿಲ್ಲ. ಇವರ ರಾಜ್ಯಗಳು ಸಮುದ್ರಕ್ಕೆ ಸಮೀಪವಾಗಿದ್ದುದರಿಂದ ಇವರು ಮೊದಲನಿಂದಲೂ ವ್ಯಾಪಾರದಲ್ಲಿಯೇ ಆಸಕ್ತರಾಗಿದ್ದರು.

ಹಿಂದೂಸ್ಥಾನದ ಅರಸುಗಳು

ಫಲವತ್ತಾದ ಈ ನಮ್ಮ ಭರತಭೂಮಿಯ ಸಂಪತ್ತನ್ನು ನೋಡಿ ಪರದೇಶದವರು ಅನೇಕರು ಅಡಿಗಡಿಗೆ ಇಲ್ಲಿಗೆ ದಂಡೆತ್ತಿ ಬಂದು ಇಲ್ಲೇ ರಾಜ್ಯಗಳನ್ನು ಕಟ್ಟಿ ನೆಲಸಿದರೆಂದು ಮೇಲೆ ಹೇಳಿದೆಯಷ್ಟೆ. ನಮ್ಮ ದೇಶದ ಪೂರ್ವ ಚರಿತ್ರೆಯು ಈ ರೀತಿ ಬಂದವರ ವ್ಯವಹಾರಗಳನ್ನು ತಿಳಿಸುತ್ತದೆ. ಮೊದಲು ಆರ್ಯರೆಂಬುವರು ರಾಜ್ಯಸ್ಥಾಪನೆ ಮಾಡಿದರು. ಇದಾದಮೇಲೆ ಮಹಮ್ಮದೀಯರೆಂಬುವರು ನಮ್ಮ ದೇಶದಲ್ಲಿ ರಾಜ್ಯಸ್ಥಾಪನೆ ಮಾಡಿದರು. ಆಮೇಲೆ ತಮಿಳು ದೇಶಗಳ ತೀರದಲ್ಲಿ ವಿಶೇಷವಾಗಿ ಸಿಕ್ಕುವ ಮುತ್ತನ್ನೂ ಪಶ್ಚಿಮಘಟ್ಟದ ಪ್ರಾಂತದಲ್ಲಿ ಬೆಳೆಯುವ ಮೆಣಸು, ಮುಂತಾದ ಸಂಬಾರದ ಪದಾರ್ಥಗಳನ್ನೂ ತಮ್ಮ ಸೀಮೆಗೆ ಒಯ್ಯುವುದಕ್ಕಾಗಿ ಕೆಲವು ಯೂರೋಪಿಯರ್ ಜನರು ಸಮುದ್ರ ಮಾರ್ಗವಾಗಿ ದಕ್ಷಿಣದೇಶಕ್ಕೆ ಬಂದರು. ಕಾಲಕ್ರಮದಲ್ಲಿ ಸುತ್ತಮುತ್ತಿನಲ್ಲಿರುವ ದೇಶಗಳ ವ್ಯಾಪಾರಗಳೆಲ್ಲವನ್ನೂ ತಮ್ಮ ಕೈಗೆ ತೆಗೆದುಕೊಳ್ಳುವುದರ ಮೂಲಕ ಇಂಗ್ಲಿಷರು ಈ ಇಡೀ ದೇಶವನ್ನೇ ವಶಪಡಿಸಿಕೊಂಡರು. ಈ ನಡವಳಿಕೆಗಳೆಲ್ಲವನ್ನೂ ವಿಶದಪಡಿಸುವುದೇ ಹಿಂದೂದೇಶದ ಚರಿತ್ರೆಯೆನಿಸುವುದು.

ಅಧ್ಯಾಯ ೨.—ಹಿಂದೂದೇಶದ ನಿವಾಸಿಗಳು

ಹಿಂದೂದೇಶದ ಈಗಿನ ನಿವಾಸಿಗಳನ್ನು ಒಟ್ಟುಗೂಡಿಸಿ ನಾಲ್ಕು ಬುಡಕಟ್ಟಿನವರನ್ನಾಗಿ ವಿಂಗಡಿಸಬಹುದು—ದ್ರಾವಿಡರು, ಆರ್ಯರು, ಸಿಥಿಯರ್ರು, ಮಂಗೋಲರು; ಇವರಲ್ಲದೆ ಇತರ ಬುಡಕಟ್ಟಿಗೆ ಸೇರಿದ ಜನರೂ ಕೆಲವರಿರುವರು. ಹಿಂದೂದೇಶದ ಸಂಪತ್ತನ್ನು ಮೋಹಿಸಿ ಆಗಾಗ್ಗೆ ವಾಯವ್ಯ, ಈಶಾನ್ಯ ದಿಕ್ಕುಗಳಿಂದ ಬಂದ ಹೊರದೇಶದ ಜನರು ಇಲ್ಲಿ ನೆಲಸಿದುದೇ ಇಷ್ಟು ಬುಡಕಟ್ಟುಗಳಾಗಲು ಮುಖ್ಯ ಕಾರಣವಾಗಿದೆ.

ಕೋಲರು, ದ್ರಾವಿಡರು

ಸಾವಿರಾರು ವರ್ಷಗಳ ಹಿಂದೆ ಈ ದೇಶದಲ್ಲಿ ನಿಗ್ರೋ ಕುಲಕ್ಕೆ ಸೇರಿದ ಕಪ್ಪುಜನರು ವಾಸವಾಗಿದ್ದರು. ಇವರು ಬೆಣಚುಕಲ್ಲಿನಿಂದ ಒರಟಾದ ಆಯುಧಗಳನ್ನು ಮಾಡಿಕೊಂಡು, ಕಾಡುಮೃಗಗಳನ್ನು ಕೊಂದು ತಿಂದು, ಗವಿಗಳಲ್ಲೂ ಮರದ ಪೊಟ್ಟರೆಗಳಲ್ಲೂ ವಾಸಿಸುತ್ತಿದ್ದರು. ಮೃಗಗಳ ಚರ್ಮ, ಮರದ ಎಲೆಗಳನ್ನು ತಮ್ಮ ಉಡುಪಿಗಾಗಿ ಉಪಯೋಗಿಸುತ್ತಿದ್ದರು. ಇವರಿಗೆ ಕೋಲರೆಂದು ಹೆಸರು.

ಕೆಲವು ಕಾಲವಾದ ಮೇಲೆ ದ್ರಾವಿಡರೆಂಬ ಜನರು ಬಂದು ಕೋಲರನ್ನು ಯುದ್ಧದಲ್ಲಿ ಸೋಲಿಸಿ ತಾವೇ ಮುಂದಾಳುಗಳಾದರು. ದ್ರಾವಿಡರು ಯಾವ ದೇಶದಿಂದ, ಯಾವ ಮಾರ್ಗವಾಗಿ ಬಂದರೆಂಬುದನ್ನು ನಿರ್ಧರವಾಗಿ ಹೇಳಲಾಗುವುದಿಲ್ಲ. ಇವರೂ ಕೋಲರಂತೆ ಕುಳ್ಳಾಗಿದ್ದರು. ಮೈಬಣ್ಣ ಕಪ್ಪು; ತಲೆ ಉದ್ದ; ಮೂಗು ಅಗಲ. ದ್ರಾವಿಡರು ಕೋಲರಿಗಿಂತ ಬುದ್ಧಿವಂತರು, ಸಾಹಸಿಗಳು, ಕಷ್ಟಸಹಿಷ್ಣುಗಳು, ನಾಗರಿಕರು. ದ್ರಾವಿಡರಿಗೆ ವ್ಯವಸಾಯವೂ, ಸಣ್ಣಸಣ್ಣ ಕೈಗಾರಿಕೆಗಳೂ ತಿಳಿದಿದ್ದುವು. ದ್ರಾವಿಡರಿಗೆ ಸೋತು ಹೋದ ಕೋಲರು ಈಗಲೂ ಹಿಂದೂದೇಶದ ಬೆಟ್ಟಗುಡ್ಡಗಳಲ್ಲಿ ಭೀಲರು, ಸಂತಾಲರು ಎಂಬ ಹೆಸರುಗಳಿಂದ ವಾಸವಾಗಿರುವರು. ಕಾಲಕ್ರಮದಲ್ಲಿ ದ್ರಾವಿಡರಲ್ಲಿ ತೆಲುಗರು, ತಮಿಳರು, ಕನ್ನಡಿಗರು ಎಂಬ ಒಳಪಂಗಡಗಳುಂಟಾದುವು.

ಆರ್ಯರು

ಇವರೂ ಹೊರಗಿನಿಂದ ಬಂದವರು. ಇವರು ಗುಂಪು ಗುಂಪಾಗಿ ಬಂದಂತೆ ಕಾಣುತ್ತದೆ. ಆರ್ಯರು ಬಂದ ಹಾಗೆಲ್ಲಾ ಈ ದೇಶದ ಪೂರ್ವ ನಿವಾಸಿಗಳು ಇವರಿಗೆ ಪರಾಜಿತರಾದರು. ಪರ್ವತಮಾರ್ಗಗಳನ್ನು ಹಾದು ಬರುವುದು ಅಷ್ಟು ಸುಲಭವಾಗಿರಲಿಲ್ಲವಾದುದರಿಂದ ಇವರಲ್ಲನೇಕರು ಸಂಸಾರಸಮೇತ ಬಂದಂತೆ ಕಾಣುವುದಿಲ್ಲ. ಇಲ್ಲಿ ಬಂದ ಮೇಲೆ ಇಲ್ಲಿನ ಜನರೊಡನೆ ಬೆರತು ಹೋದಂತೆ ಕಾಣುತ್ತದೆ. ಇಲ್ಲಿನ ಜನರು ಕ್ರಮೇಣ ಆರ್ಯರ ಭಾಷೆಯನ್ನೂ, ಆಚಾರ ವ್ಯವಹಾರಗಳನ್ನೂ ಅನುಸರಿಸುತ್ತಾ ಬಂದರು. ಈಗಲೂ ಕಾಶ್ಮೀರ, ಪಂಜಾಬ್, ರಾಜಪುಟಾಣ ಈ ದೇಶಗಳಲ್ಲಿರುವ ಜನರನ್ನು ನಿಜವಾದ ಆರ್ಯರೆಂದು ಕರೆಯಬಹುದು. ಉಳಿದವರೆಲ್ಲರೂ ಮಿಶ್ರ ಜಾತಿಯವರು.

ಸಿಥಿಯನ್ ಜನರು

ಕ್ರಿ. ಪೂ. 2ನೆಯ ಶತಮಾನದಿಂದ ಕ್ರಿ. ಶ. 5ನೆಯ ಶತಮಾನದ ವರೆಗೆ ಅನೇಕ ಗುಂಪಿನ ಜನರು ಹಿಂದೂ ದೇಶದ ಮೇಲೆ ದಂಡೆತ್ತಿ ಬಂದರು. ಇವರುಗಳು ಬೇರೆಬೇರೆ ಹೆಸರಿನಿಂದ ಬಂದಾಗ್ಯೂ, ಇವರೆಲ್ಲರೂ ಒಂದೇ ಬುಡಕಟ್ಟಿಗೆ ಸೇರಿದವರೆಂದು ತೋರುತ್ತದೆ. ಇವರನ್ನು ಸಿಥಿಯನ್ ಗುಂಪಿನವರೆಂದು ಕರೆಯಬಹುದು. ಇವರು ಕುಳ್ಳರು; ತಲೆಯು ಅಗಲ; ಬಣ್ಣ ಕಪ್ಪು; ಆದರೆ ಶೂರರು. ಈಗಲೂ ಕಚ್ ಸಂಸ್ಥಾನ ಮೊದಲುಗೊಂಡು ಕೊಡಗು ಸೀಮೆಯವರೆಗೂ ಇರುವ ಪಶ್ಚಿಮ ತೀರ ಪ್ರದೇಶದ ಜನಗಳಲ್ಲಿ ಸಿಥಿಯನ್ ಜನರ ಶೀಲಸ್ವಭಾವಗಳು ತೋರಿಬರುವುವು. ಮರಾಟೆಯವರು ಈ ಗುಂಪಿಗೆ ಸೇರಿದವರೆಂದು ಹೇಳುತ್ತಾರೆ.

ಮಂಗೋಲರು

ಇವರು ಚೀಣಾ ದೇಶದಿಂದ ಹೊರಟು ಈಶಾನ್ಯದಿಕ್ಕಿನ ಕಣಿವೆಗಳ ಮಾರ್ಗವಾಗಿ ಬಂದು ತಿಬೆಟ್, ಹಿಂದೂ ಚೀಣ, ನೇಪಾಳ, ಭೂತಾನ, ಬರ್ಮ, ಅಸ್ಸಾಂ, ಬಂಗಾಳದ ಕೆಲವು ಪ್ರದೇಶ, ಈ ಭಾಗಗಳಲ್ಲಿ ನೆಲಸಿದರು. ಇವರೂ ಕುಳ್ಳರು. ಚಪ್ಪಟೆಯಾದ ಮೂಗು, ಓರೆಯಾಗಿಯೂ

ಸಣ್ಣಗೂ ಇರುವ ಕಣ್ಣುಗಳು, ದಪ್ಪ ದವಡೆಗಳು, ಮೈಬಣ್ಣ ಒಂದು ಬಗೆಯಾದ ಹಳದಿ, ಈ ಲಕ್ಷಣಗಳಿಂದ ಮಂಗೋಲಿಯರ್ ಬುಡಕಟ್ಟಿಗೆ ಸೇರಿದವರನ್ನು ಗುರ್ತಿಸಬಹುದು.

ಮೇಲೆ ಹೇಳಿದ ಬುಡಕಟ್ಟುಗಳ ಜನರಲ್ಲದೆ, ಪಾರ್ಶೀಸ್ಥಾನದ ಪಾರ್ಸೀಯರು, ಗ್ರೀಸಿನ ಗ್ರೀಕರು, ಅರೇಬಿಯದವರು, ತುರ್ಕಿಯರು, ಆಫ್ಘನರು, ಕಟ್ಟಕಡೆಗೆ ಬಂದ ಯೂರೋಪಿಯರ್ ಜನಾಂಗದವರು, ಇವರುಗಳೆಲ್ಲರೂ ಹಿಂದೂ ದೇಶದಲ್ಲಿ ಬಂದು ನೆಲಸಿದುದರಿಂದ, ನಮ್ಮ ದೇಶದಲ್ಲಿ ಈಗ ನೂರಾರು ಬುಡಕಟ್ಟಿಗೆ ಸೇರಿದ ಜನರು ವಾಸವಾಗಿರುವರು.

ಅಧ್ಯಾಯ ೩.—ವೇದಗಳ ಕಾಲದಲ್ಲಿ ಆರ್ಯರ ಸ್ಥಿತಿ

ಕ್ರಿ. ಪೂ. (2000–1500)

ಆರ್ಯರು

ಈ ದೇಶಕ್ಕೆ ಹೊರಗಿನಿಂದ ಬಂದ ಜನಗಳಲ್ಲಿ ಆರ್ಯರು ಮುಖ್ಯರಾದವರು. ಇವರು ಉತ್ತರಧ್ರುವದಬಳಿ ವಾಸವಾಗಿದ್ದರೆಂದು ಕೆಲವರೂ, ರಷ್ಯಾದೇಶದ ದಕ್ಷಿಣಭಾಗದಲ್ಲಿದ್ದರೆಂದು ಕೆಲವರೂ, ಕ್ಯಾಸ್ಪಿಯರ್ ಸಮುದ್ರದ ಬಳಿ ಇದ್ದರೆಂದು ಮತ್ತೆ ಕೆಲವರೂ ಬೇರೆಬೇರೆ ರೀತಿಯಾಗಿ ಅಭಿಪ್ರಾಯಪಡುತ್ತಾರೆ. ಇದು ಹೇಗಾದರೂ ಇರಲಿ ; ತಮ್ಮ ದೇಶದ ಚಳಿಯನ್ನು ಸಹಿಸಲಾರದುದರಿಂದಲೋ, ದಿನದಿನಕ್ಕೆ ಹೆಚ್ಚಿಬಂದ ತಮ್ಮ ಜನ ಸಂಖ್ಯೆಗೆ ತಕ್ಕಷ್ಟು ಆಹಾರವು ತಮ್ಮ ಜನ್ಮಸ್ಥಾನದಲ್ಲಿ ಸಿಕ್ಕದುದರಿಂದಲೋ ಆರ್ಯರು ತಮ್ಮ ದೇಶದಿಂದ ಹೊರಹೊರಟಿರಬಹುದು. ಇವರಲ್ಲಿ ಒಂದು ಗುಂಪಿನವರು ಪಶ್ಚಿಮಕ್ಕೆ ಹೊರಟು ಯೂರೋಪಿನ ಕೆಲವು ಪ್ರದೇಶಗಳಲ್ಲಿ ಹರಡಿಕೊಂಡರು. ಇವರೇ ಈಗಿನ ಫರಂಗಿಯುವರ ಮೂಲಪುರುಷರು. ಇನ್ನೊಂದು ಗುಂಪಿನವರು ಪಾರ್ಶೀಸ್ಥಾನಕ್ಕೆ ಹೋಗಿ ನೆಲಸಿದರು. ಇವರೇ ಇರೇನಿಯರ್ ಗುಂಪಿನವರು. ಮತ್ತೊಂದು ಗುಂಪಿನವರು ಆಗ್ನೇಯಾಭಿಮುಖವಾಗಿ ಹೊರಟು ಹಿಂದೂದೇಶದ ಮಾರ್ಗವನ್ನು ಹಿಡಿದರು.

ಇವರೇ ಹಿಂದೂ ಆರ್ಯರು. ಆದುದರಿಂದ ಈಗಿನ ಫರಂಗಿಯುವರು, ಪಾರ್ಸಿಯವರು ಹಿಂದೂ ದೇಶದ ಕೆಲವೆಡೆಗಳಲ್ಲಿ ನೆಲಸಿರುವ ಆರ್ಯರು ಇವರೆಲ್ಲರೂ ಒಂದೇ ಬುಡಕಟ್ಟಿಗೆ ಸೇರಿದವರು. ಆದರೆ ಹಿಂದೂ ಆರ್ಯರು ಉಷ್ಣರಾಜ್ಯದಲ್ಲಿ ಬಂದು ನೆಲೆಸಿದುದರಿಂದ ಕಾಲಕ್ರಮದಲ್ಲಿ ಇವರ ರೂಪು, ಆಚಾರ-ವ್ಯವಹಾರಗಳು ದೇಶಕಾಲಗಳನ್ನನುಸರಿಸಿ ಬದಲಾವಣೆಗಳನ್ನು ಹೊಂದಿದುವು.

ಆರ್ಯರು ಕ್ರಿ. ಪೂ. 2000 ದಲ್ಲಿ ಹಿಂದೂ ದೇಶಕ್ಕೆ ಬಂದರೆಂದು ತೋರುತ್ತದೆ. ಆಫ್ಘಾನಿಸ್ಥಾನವನ್ನು ಬಿಟ್ಟ ಮೇಲೆ ಆರ್ಯರ ಗುಂಪಿನವರು, ಫಲವತ್ತಾದ ಶತದ್ರು ಮತ್ತು ಸರಸ್ವತೀ ನದಿಗಳ ತೀರಗಳಲ್ಲಿ ನೆಲೆಯಾಗಿ ನಿಂತರು. ಇವರು ಅಲ್ಲಿನ ಪೂರ್ವನಿವಾಸಿಗಳನ್ನು ದಸ್ಯುಗಳೆಂದೂ ಕಿರಾತರೆಂದೂ ಕರೆಯುತ್ತಾ ಅವರೊಡನೆ ಯುದ್ಧಮಾಡಿ, ಅವರನ್ನು ಮುಂದುಮುಂದಕ್ಕೆ ಓಡಿಸಿ ದೇಶವನ್ನು ಆಕ್ರಮಿಸುತ್ತಾ ಬಂದರು. ಹೀಗೆ ಇವರು ಮೊತ್ತಮೊದಲು ಜಯಿಸಿದ ಪ್ರಾಂತವನ್ನು "ಬ್ರಹ್ಮಾವರ್ತ" ಎಂದೂ "ಸಿಂಧೂ ದೇಶ" ಎಂದೂ ಕರೆದರು. ಪಾರ್ಸೀಕರು ಇದನ್ನು "ಹೆಂಡೂ" ಎಂದೂ, ಆ ಮೇಲೆ ಬಂದ ಗ್ರೀಕರು "ಇಂಡಾಯ್" ಎಂದೂ ಕರೆಯುತ್ತಿದ್ದುದರಿಂದ ಕೊನೆಗೆ ಈ ದೇಶಕ್ಕೆ "ಇಂಡಿಯ" ಎಂದು ಹೆಸರು ಬಂದಿತು.

ಆರ್ಯರು ಸಿಂಧೂ ದೇಶದಲ್ಲಿ ನೆಲಸಿದ್ದ 500 ವರ್ಷಗಳ ಅವಧಿಗೆ "ವೇದಗಳ ಕಾಲ" ಎಂದು ಹೆಸರು ಬಂದಿದೆ. ಈ ಕಾಲದ ಆರ್ಯರ ಸ್ಥಿತಿಯು ನಮಗೆ ಋಗ್ವೇದ ಎಂಬ ವೇದಭಾಗದಿಂದ ತಿಳಿದು ಬರುವುದೇ ಈ ಹೆಸರಿಗೆ ಕಾರಣವಾಗಿದೆ. ದೇವತಾ ಸ್ತೋತ್ರ ರೂಪವಾದ ಋಕ್ಕುಗಳನ್ನು ಆರ್ಯರು ವೇದವೆಂದು ಕರೆಯುತ್ತಿದ್ದರು. ಆರ್ಯರ ಗುರುಗಳಾದ ಬ್ರಹ್ಮರ್ಷಿಗಳು ವೇದಗಳನ್ನು ಸಾಕ್ಷಾತ್ ಬ್ರಹ್ಮನಿಂದಲೇ ಕಲಿತರೆಂದು ಹೇಳುತ್ತಾರೆ. ವೇದಗಳನ್ನು ನಾಲ್ಕು ಭಾಗವಾಗಿ ವಿಂಗಡಿಸಿದ್ದಾರೆ. ಇವುಗಳಲ್ಲಿ ಋಗ್ವೇದವೆಂಬುದು ಅತಿ ಪುರಾತನವಾದುದು. ಇದರಿಂದ ಆರ್ಯರ ಸ್ಥಿತಿಗತಿಗಳು ತಿಳಿಯ ಬರುತ್ತವೆ.

ಪುರಾತನಾರ್ಯರು ರೂಪವಂತರು. ಇವರ ತಲೆ ಕೊಂಚಮಟ್ಟಿಗೆ ಮೊಟ್ಟೆಯ ಆಕಾರ; ಕಣ್ಣುಗಳು ವಿಶಾಲವಾದುವು; ಮೂಗು ಉದ್ದ;

ಆಕಾರ ಎತ್ತರ; ಬಣ್ಣ ಬಿಳುಪು ಮಿಶ್ರವಾದ ಕೆಂಪು. ಇವರು ಧೈರ್ಯಸ್ಥರು, ಬಲಶಾಲಿಗಳು; ಆರಂಬಮಾಡುವುದೂ, ದನಕರುಗಳನ್ನು ಸಾಕುವುದೂ ಇವೇ ಇವರ ಮುಖ್ಯ ಕಸಬುಗಳು. ನೂಲುವುದು, ನೇಯುವುದು, ಮನೆಗಳನ್ನೂ ಕೋಟೆಗಳನ್ನೂ ಕಟ್ಟುವುದು, ದೋಣಿಗಳನ್ನು ಮಾಡುವುದು ಇವೆಲ್ಲವೂ ಆರ್ಯರಿಗೆ ಬರುತ್ತಿದ್ದುವು. ಇವರು ತಾಮ್ರದ ಆಯುಧಗಳನ್ನು ಉಪಯೋಗಿಸುತ್ತಿದ್ದರು. ಈ ಕಾಲದಲ್ಲಿ ನಾಣ್ಯಗಳು ಇರಲಿಲ್ಲ. ಬರವಣಿಗೆಯು ಇನ್ನೂ ಏರ್ಪಟ್ಟಿರಲಿಲ್ಲ.

ಆರ್ಯರು ತಮ್ಮ ವಾಸಕ್ಕೆ ಅನುಕೂಲವಾಗಿರುವಂತೆ ದೊಡ್ಡದೊಡ್ಡ ಮನೆಗಳನ್ನು ಕಟ್ಟುತ್ತಿದ್ದರು. ಇಂಥಾ ಮನೆಗಳು ಹತ್ತಾರು ಸೇರಿದ ಪ್ರದೇಶವನ್ನು "ಹಳ್ಳಿ" ಎನ್ನುತ್ತಿದ್ದರು. ಪ್ರತಿಹಳ್ಳಿಗೂ ಒಬ್ಬೊಬ್ಬ ಸಣ್ಣರಾಜನಿದ್ದನು. ಹಳ್ಳಿಯ ಮುಖ್ಯಸ್ಥರು ಸೇರಿ ಒಂದು ಸಭೆಯನ್ನು ಮಾಡಿ ರಾಜನಿಗೆ ಸಲಹೆಗಳನ್ನು ಕೊಡುತ್ತಿದ್ದರು. ಆರ್ಯರಲ್ಲಿ ಮನೆಗೆ ತಂದೆಯೇ ಯಜಮಾನನಾಗಿದ್ದನು. ಹೆಂಗಸರಿಗೆ ಬಹಳ ಗೌರವವಿತ್ತು. ಸಹಗಮನ ಪದ್ಧತಿಯೂ, ವಿಧವಾ ವಿವಾಹವೂ, ಸ್ವಯಂವರ ಪದ್ಧತಿಯೂ ಆರ್ಯರಲ್ಲಿ ವಾಡಿಕೆಯಲ್ಲಿದ್ದುವು. ಆರ್ಯರ ಕಾಲದಲ್ಲಿ ಯುದ್ಧಗಳು ಕಡಿಮೆಯಾಗಿರಲಿಲ್ಲ. ಇವರಿಗೂ ಇಲ್ಲಿನ ಪೂರ್ವನಿವಾಸಿಗಳಾದ "ದಸ್ಯು" ಗಳಿಗೂ ಯುದ್ಧಗಳು ನಡೆಯುತ್ತಲೇ ಇದ್ದುವು. ಬೇಕಾದಾಗ ಪ್ರತಿಯೊಬ್ಬ ಗಂಡಸೂ ಯುದ್ಧಕ್ಕೆ ಸಿದ್ಧನಾಗಿರಬೇಕಾಗಿತ್ತು. ಆರ್ಯರು ಯುದ್ಧದಲ್ಲಿ ಕಬ್ಬಿಣದ ಅಂಗಿ, ಕುಲಾವಿ, ಗುರಾಣಿ, ಕತ್ತಿ, ಈಟಿ, ಅಂಬು, ಬಿಲ್ಲು, ಬತ್ತಳಿಕೆ, ಕುದುರೆ ಕಟ್ಟಿದ ರಥ ಇವುಗಳನ್ನು ಉಪಯೋಗಿಸುತ್ತಿದ್ದರು. ಯುದ್ಧದಲ್ಲಿ ಜಯವಾಗಬೇಕೆಂದು ಪೂಜೆಪುನಸ್ಕಾರಗಳನ್ನು ಮಾಡಿ ಯುದ್ಧಕ್ಕೆ ಹೊರಡುವ ಪದ್ಧತಿಯು ಇವರಲ್ಲಿತ್ತು.

ಮತ

ಆರ್ಯರಲ್ಲಿ ಈಗಿನಂತೆ ಜಾತಿಭೇದಗಳಿರಲಿಲ್ಲ. ಅವರು ಪ್ರಪಂಚದ ತತ್ವಗಳನ್ನು ದೇವರ ಅಂತವೆಂದು ಬೇರೆಬೇರೆ ಹೆಸರಿನಿಂದ ಪೂಜಿಸುತ್ತಿದ್ದರು. ಮಳೆ, ನೀರು, ಬೆಂಕಿ, ಗಾಳಿ, ಬೆಳಕು ಇವುಗಳಿಗೆ ಆಧಾರಭೂತವಾದ ಇಂದ್ರ, ವರುಣ ಅಗ್ನಿ, ವಾಯು, ಸೂರ್ಯ, ಮೊದಲಾದ ದೇವತೆಗಳೇ ಇವರಿಗೆ ದೇವರುಗಳು. ಆದರೂ ಆರ್ಯರು ವಿಗ್ರಹಾರಾ

ಧಕರಲ್ಲ. ನಿತ್ಯವೂ ಅಗ್ನಿಕಾರ್ಯವನ್ನು ಮಾಡಿ "ಗಾಯತ್ರಿ" ಎಂಬ ಮಂತ್ರವನ್ನು ಜಪಿಸುತ್ತಿದ್ದರು.

ಸುರಾ ಮತ್ತು ಸೋಮ ಎಂಬ ಮದ್ಯಗಳನ್ನು ಕುಡಿಯುವುದೂ ಜೂಜಾಡುವುದೂ ಅಷ್ಟು ಹೇಯವಾದವುಗಳೆಂದು ಇವರು ಭಾವಿಸಿರಲಿಲ್ಲ. ಶಾಸ್ತ್ರ, ಕಲೆ ಇವುಗಳಲ್ಲಿ ಆರ್ಯರು ಇನ್ನೂ ಮುಂದರಿದಿರಲಿಲ್ಲ. ಇವರಿಗೆ ಬರೆವಣಿಗೆಯು ಬಾರದು. ವೇದಗಳನ್ನು ಬಾಯಿಪಾಠವಾಗಿ ಕಲಿಯುತ್ತಿದ್ದರು.

ಅಧ್ಯಾಯ ೪.—ಮಹಾಕಾವ್ಯಗಳ ಕಾಲ

ಕ್ರಿ. ಪೂ. (1500–1000)

ಆರ್ಯರ ಏಳಿಗೆ

ಆರ್ಯರು ಸಿಂಧು ನದಿಯ ಬಯಲಿನಲ್ಲಿ ನೂರಾರು ವರ್ಷಗಳಿದ್ದ ಮೇಲೆ, ತಮಗೆ ಪೂರ್ವದಿಕ್ಕಿನಲ್ಲಿ ಗಂಗಾ ಯಮುನಾ ನದಿಗಳ ನಡುವೆ ಇನ್ನೂ ಫಲವತ್ತಾದ ಬಯಲುಸೀಮೆ ಇದೆಯೆಂಬುದು ತಿಳಿದು ಬಂದಿತು. ಈ ವೇಳೆಗೆ ಆರ್ಯರ ಬೇರೆಬೇರೆ ತಂಡಗಳು ಬರುತ್ತಲೇ ಇದ್ದುವು. ಇಷ್ಟು ಜನಕ್ಕೆ ಸಿಂಧೂ ನದಿಯು ಬಯಲಿನಲ್ಲಿ ಸ್ಥಳ ಸಾಲದಂತಾಯಿತು. ಆದುದರಿಂದ ಆರ್ಯರು ಯಮುನಾ ನದಿಯನ್ನು ದಾಟಿ ಗಂಗಾ ನದಿಯ ಕಡೆಗೆ ಸಾಗುತ್ತ ಬಂದರು.

ಗಂಗಾನದಿಯ ಬಯಲಿನಲ್ಲಿ ರಾಜ್ಯ ಕಟ್ಟಿಕೊಂಡು ಬಹುಕಾಲದಿಂದಲೂ ನೆಲೆಯಾಗಿ ನಿಂತಿದ್ದ ದ್ರಾವಿಡರನ್ನು ಗೆದ್ದು ಅವರ ರಾಜ್ಯವನ್ನಾಕ್ರಮಿಸುವುದು ಆರ್ಯರಿಗೆ ಅಷ್ಟು ಸುಲಭವಾಗಿರಲಿಲ್ಲ. ಇವರು ದೊಡ್ಡ ದೊಡ್ಡ ತಂಡಗಳನ್ನು ಸೇರಿಸಿ ಪ್ರತಿ ಒಂದು ತಂಡಕ್ಕೂ ಒಬ್ಬ ಮುಖಂಡನನ್ನು ನೇಮಿಸಿಕೊಂಡು ಬರಬೇಕಾಯಿತು. ಈ ರೀತಿ ಮುಖಂಡರಾದವರು ಸೇನೆಯನ್ನು ನಡೆಸಿದುದಲ್ಲದೆ, ವಸತಿಗಳನ್ನು ಕಟ್ಟುವುದಕ್ಕೂ ಸಹಾಯಕರಾದರು. ಕೊನೆಗೆ ಈ ಮುಖಂಡರೇ ರಾಜರಾಗಿ ಉತ್ತರ ಹಿಂದೂ

ಸ್ಥಾನದಲ್ಲಿ ಬಲವಾದ ಅನೇಕ ರಾಜ್ಯಗಳನ್ನು ಕಟ್ಟಿದರು. ಹೀಗೆ ರಾಜ್ಯ ಕಟ್ಟಿದವರಲ್ಲಿ ಕುರುವಂಶದವರು, ಪಾಂಚಾಲರು, ಯಾದವರು, ಮಾತ್ಸ್ಯರು, ಶೂರಸೇನರು, ಕೋಸಲರು, ವಿದೇಹಿಗಳು, ಕಾಶಿಯವರು ಇವರೇ ಪ್ರಸಿದ್ಧ ರಾದವರು.

ಜಾತಿಗಳ ಉತ್ಪತ್ತಿ

ಹೀಗೆ ರಾಜ್ಯಗಳನ್ನು ಕಟ್ಟಲು ಶಕ್ತರಾದ ರಾಜರು ಬೇಕಾಯಿತಲ್ಲದೆ, ಅವರಿಗೆ ಸಹಾಯಕರಾಗಿ ಯುದ್ಧದಲ್ಲೇ ನಿರತರಾಗಿರತಕ್ಕವರು ಆವಶ್ಯಕ ವಾಯಿತು. ಕಾಲಕ್ರಮದಲ್ಲಿ ಯುದ್ಧವನ್ನೇ ಕೆಲಸವಾಗಿಟ್ಟುಕೊಂಡ ಜನರೇ ಒಂದು ಗುಂಪಾದರು. ಇವರಿಗೆ ರಾಜನ್ಯರೆಂದೂ, ಕ್ಷತ್ರಿಯರೆಂದೂ ಹೆಸರಾಯಿತು.

ಆರ್ಯರಲ್ಲಿ ಯಾಗಾದಿ ಕರ್ಮಗಳು ಪ್ರಬಲವಾಗುತ್ತಾ ಬಂದುವು. ಕಷ್ಟವಾದ ವೇದಮಂತ್ರಗಳನ್ನು ಕಲಿತು, ಯಜ್ಞಕರ್ಮಗಳನ್ನು ನೆರವೇರಿಸಿ, ಪರಮಾತ್ಮ ವಿಚಾರವನ್ನೇ ಕೆಲಸವಾಗಿಟ್ಟುಕೊಂಡಿರತಕ್ಕವರು ಮತ್ತೊಂದು ಗುಂಪಾದರು. ಇವರೇ ಬ್ರಾಹ್ಮಣರು. ವ್ಯವಸಾಯ, ವ್ಯಾಪಾರಗಳನ್ನು ಕೈಕೊಂಡಿದ್ದ ಮತ್ತೊಂದು ಪಂಗಡದವರು "ವೈಶ್ಯ" ರಾದರು. ಮೇಲಿನ ಮೂರು ಪಂಗಡದವರಿಗೆ ಸೇವೆಯನ್ನು ಮಾಡಿಕೊಂಡಿದ್ದ ಅನಾರ್ಯರು "ಶೂದ್ರ" ರೆನಿಸಿಕೊಂಡರು. ಮೊದಮೊದಲಿನಲ್ಲಿ ಜಾತಿಯ ಕಟ್ಟುಗಳು ಅಷ್ಟು ಬಿಗಿಯಾಗಿರಲಿಲ್ಲ. ಕೊನೆಗೆ ಪ್ರತಿಯೊಂದು ವರ್ಣದವರೂ ತಮ್ಮ ವರ್ಣವೇ ಹೆಚ್ಚೆಂಬ ಭಾವನೆಯಿಂದ, ಇತರ ಪಂಗಡದವರನ್ನು ತಮ್ಮ ವರ್ಣ ದೊಂದಿಗೆ ಸೇರಿಸದೆ ಹೋದರು. ಈ ರೀತಿಯಾಗಿ ಬೇರೆಬೇರೆ ವರ್ಣದ ವರು ಪರಸ್ಪರ ಹೆಣ್ಣುಕೊಟ್ಟು ತರುವುದನ್ನೂ, ಒಬ್ಬರಲ್ಲೊಬ್ಬರು ಊಟ ಮಾಡುವುದನ್ನೂ ಬಿಡುತ್ತಾ ಬಂದರು. ಕ್ರಮೇಣ, ನಾಲ್ಕು ಪಂಗಡದ ವರೂ ನಾಲ್ಕು ಜಾತಿಗಳವರಾದರು.

ಈ ಕಾಲದಲ್ಲಿ ಮನುಧರ್ಮಶಾಸ್ತ್ರ, ವ್ಯಾಸನ ಮಹಾಭಾರತ, ವಾಲ್ಮೀಕಿಯ ರಾಮಾಯಣ ಮೊದಲಾದ "ಮಹಾಕಾವ್ಯಗಳು" ಪರಿ ಷ್ಕೃತವಾದುವು. ಆದುದರಿಂದ ಈ ಕಾಲಕ್ಕೆ "ಮಹಾಕಾವ್ಯಗಳಕಾಲ" ಎಂದು ಚರಿತ್ರೆಯಲ್ಲಿ ಹೆಸರಾಗಿದೆ. ಈ ಕಾವ್ಯಗಳಿಂದ ಆ ಕಾಲದಲ್ಲಿ ಆರ್ಯರ ಸ್ಥಿತಿ ಹೇಗಿತ್ತೆಂಬುದು ತಿಳಿಯುತ್ತದೆ.

ಮಹಾಕಾವ್ಯಗಳ ಕಾಲದಲ್ಲಿ ಆರ್ಯರ ರಾಜ್ಯಗಳು ಈಗಿನ ಬಿಹಾರ ದೇಶದವರೆಗೂ ವಿಸ್ತರಿಸಿಕೊಂಡಿದ್ದುವು. ಈ ಕಾಲದಲ್ಲಿ ವೇದಗಳು ಎಲ್ಲರಿಗೂ ತಿಳಿಯುವಂತೆ ಕ್ರಮಪಟ್ಟುವು. ವ್ಯಾಕರಣ, ಛಂದಸ್ಸು, ಜ್ಯೋತಿಷ ಮುಂತಾದ ಶಾಸ್ತ್ರಗಳು ಪ್ರಸಿದ್ಧಿಗೆ ಬಂದುವು. ಆರ್ಯರು ಕಾಲವನ್ನು ಕೃತ, ತ್ರೇತ, ದ್ವಾಪರ, ಕಲಿ ಎಂದು ನಾಲ್ಕುಯುಗಗಳಾಗಿ ವಿಂಗಡಿಸಿದರು. ಕಲಿಯುಗವು ಕ್ರಿ.ಪೂ. 3102ರಲ್ಲಿ ಪ್ರಾರಂಭವಾಯಿತೆಂದು ಕೆಲವರು ಅಭಿಪ್ರಾಯಪಡುತ್ತಾರೆ.

ಜಾತಿಕಟ್ಟುಗಳು ಬಿಗಿಯಾಗುತ್ತಬಂದುವು. ಯಜ್ಞ ಯಾಗಾದಿ ಕರ್ಮಗಳೂ, ಮೂರ್ತಿಪೂಜೆಯೂ ಪ್ರಬಲವಾಗುತ್ತ ಬಂದುವು. ವೇದಗಳ ಕಾಲದಲ್ಲಿ ಪ್ರತಿಯೊಂದು ಹಳ್ಳಿಗೂ ಒಬ್ಬ ರಾಜನಿದ್ದನು. ಮಹಾಕಾವ್ಯಗಳ ಕಾಲದಲ್ಲಿ ರಾಜ್ಯಗಳು ದೊಡ್ಡವಾಗುತ್ತಾ ಬಂದು ಒಂದೊಂದು ರಾಜ್ಯಕ್ಕೆ ಒಬ್ಬೊಬ್ಬ ರಾಜನಾದನು. ಈತನಿಗೆ ತನ್ನ ಪ್ರಜೆಗಳಲ್ಲಿ ತುಂಬಾ ಅಭಿಮಾನವಿರುತ್ತಿತ್ತು. ಪ್ರಜೆಗಳು ದೊರೆಯನ್ನು ದೇವರ ಅಂಶವೆಂದು ಭಾವಿಸುತ್ತಿದ್ದರು. ದುಷ್ಟರನ್ನು ಶಿಕ್ಷಿಸುವುದೂ, ಶಿಷ್ಟರನ್ನು ಪರಿಪಾಲಿಸುವುದೂ, ದೊರೆಯ ಕೆಲಸವಾಗಿತ್ತು. ರಾಜ್ಯದಲ್ಲಿ ಅನ್ಯಾಯಗಳು ನಡೆಯದಂತೆ ದೊರೆಯು ನೋಡಿಕೊಳ್ಳುತ್ತಿದ್ದನು. ಭೂಮಿಯ ಹುಟ್ಟುವಳಿಯಲ್ಲಿ ಆರರಲ್ಲಿ ಒಂದು ಭಾಗವು ರಾಜಾದಾಯವಾಗಿತ್ತು.

ಜನರು ಶೀಲವಂತರಾಗಿಯೂ, ಸತ್ಯವಂತರಾಗಿಯೂ ಇದ್ದರು. ಭೂತದಯೆಯು ಹೆಚ್ಚುತ್ತಾಬಂದಿತು. ಉತ್ತಮವರ್ಣದವರು ಮಾಂಸಾಹಾರವನ್ನೂ, ಮದ್ಯಪಾನವನ್ನೂ ನಿಷೇಧಿಸಿದರು. ಗಂಡಸರು ಅನೇಕ ಹೆಂಡರುಗಳನ್ನು ಮದುವೆಯಾಗುತ್ತಿದ್ದರು. ಕ್ಷತ್ರಿಯರಲ್ಲಿ ಸ್ವಯಂವರದ ಪದ್ಧತಿಯಿತ್ತು. ಈ ಕಾಲದ ಹೆಂಗಸರು ವಿದ್ಯಾವತಿಯರಾಗಿದ್ದರು. ಅವರಿಗೆ ಹೆಚ್ಚು ಸ್ವಾತಂತ್ರವೂ ಇದ್ದಿತು.

ರಾಮಾಯಣ ಕಥೆ

ಶ್ರೀರಾಮನು ಕೋಸಲಾಧಿಪತಿಯಾದ ದಶರಥನ ಹಿರಿಯ ಮಗನು. ಆತನಿಗೆ ಯುವರಾಜ್ಯಾಭಿಷೇಕವನ್ನು ಮಾಡಬೇಕೆಂದಿರುವಾಗ, ದಶರಥನ ಕಿರಿಯ ಹೆಂಡತಿಯಾದ ಕೈಕೆಯು ಹಟಹಿಡಿದುದರಿಂದ ಶ್ರೀರಾಮನು

ಕಾಡಿಗೆ ಹೋಗಬೇಕೆಂತಲೂ ಭರತನಿಗೆ ಪಟ್ಟಕಟ್ಟಬೇಕೆಂತಲೂ ವ್ಯವಸ್ಥೆಯಾಯಿತು. ಶ್ರೀರಾಮನೂ, ಅವನ ತಮ್ಮ ಲಕ್ಷ್ಮಣನೂ, ಹೆಂಡತಿಯಾದ ಸೀತೆಯೂ ಕಾಡಿಗೆ ಹೊರಟರು. ಅಲ್ಲಿ ಒಂದಾನೊಂದು ದಿನ ರಾಮಲಕ್ಷ್ಮಣರು ಸಮೀಪದಲ್ಲಿಲ್ಲಬಾಗ, ಲಂಕಾಧಿಪತಿಯಾದ ರಾವಣನೆಂಬ ರಾಕ್ಷಸನು ಮಾಯಾವೇಷದಿಂದ ಬಂದು ಸೀತೆಯನ್ನು ಕದ್ದು ಲಂಕೆಗೆ ಎತ್ತಿಕೊಂಡು ಹೋದನು. ರಾಮಚಂದ್ರನು ವಾನರಶ್ರೇಷ್ಠನಾದ ಹನುಮಂತನ ಸಹಾಯದಿಂದ ಆಕೆಯನ್ನು ಹುಡುಕಿ, ದೊಡ್ಡ ಕಪಿಸೈನ್ಯದೊಡನೆ ಲಂಕೆಯನ್ನು ಸೇರಿ, ರಾವಣನನ್ನು ಕೊಂದು, ಸೀತೆಯೊಡನೆ ಅಯೋಧ್ಯೆಗೆ ಹಿಂದಿರುಗಿ ಅಲ್ಲಿ ಬಹುಕಾಲ ರಾಜ್ಯವಾಳಿದನು.

ಮಹಾಭಾರತ

ಹಸ್ತಿನಾಪುರಕ್ಕೆ ಅರಸನಾದ ಪಾಂಡುರಾಯನು ಕಾಲವಾಗಲು ಅವನ ಅಣ್ಣನಾದ ಧೃತರಾಷ್ಟ್ರನು ರಾಜ್ಯವಾಳುತ್ತಿದ್ದನು. ಅವನು ಕುರುಡನಾದುದರಿಂದ ಅವನ ದುರುಳ ಮಕ್ಕಳ ಪ್ರಾಬಲ್ಯವೇ ಹೆಚ್ಚಿತು. ಪಾಂಡುರಾಯನ ಮಕ್ಕಳಾದ ಪಾಂಡವರಿಗೂ, ಧೃತರಾಷ್ಟ್ರನ ಮಕ್ಕಳಾದ ಕೌರವರಿಗೂ ರಾಜ್ಯಕ್ಕಾಗಿ ಜಗಳ ಹತ್ತಿತು. ಕೌರವರು ಪಾಂಡವರನ್ನು ಮೋಸದಿಂದ ಜೂಜಿನಲ್ಲಿ ಗೆದ್ದು, ದೇಶದಿಂದಲೇ ಓಡಿಸಿಬಿಟ್ಟರು. ಪಾಂಡವರು ಕಾಡಿನಲ್ಲಿ ಹನ್ನೆರಡು ವರ್ಷಗಳ ಕಾಲ ಅಲೆದು, ಕಡೆಗೆ ದ್ವಾರಕಾನಾಯಕನಾದ ಶ್ರೀಕೃಷ್ಣನ ಸಹಾಯದಿಂದ ಕುರುಕ್ಷೇತ್ರದಲ್ಲಿ ಕೌರವರನ್ನು ಸೋಲಿಸಿ, ತಮ್ಮ ರಾಜ್ಯವನ್ನು ಪುನಃ ಗೆದ್ದುಕೊಂಡರು.

ರಾಮಾಯಣ ಭಾರತಗಳು ಈಗಲೂ ಜನರಿಗೆ ಆರ್ಯಧರ್ಮವನ್ನು ಬೋಧಿಸತಕ್ಕ ಗ್ರಂಥಗಳಾಗಿವೆ. ಶ್ರೀರಾಮನೂ, ಶ್ರೀಕೃಷ್ಣನೂ ದೇವರ ಅವತಾರಗಳೆಂದು ನಂಬಿ ಹಿಂದುಗಳು ಅವರನ್ನು ಪೂಜಿಸುತ್ತಾರೆ. "ಶ್ರೀರಾಮನ ಪಿತೃಭಕ್ತಿಯೂ ಕರುಣೆಯೂ, ಸೀತೆಯ ಪಾತಿವ್ರತ್ಯವೂ ಸಹನ ಶೀಲತೆಯೂ, ಲಕ್ಷ್ಮಣ ಭರತರ ಭ್ರಾತೃಭಕ್ತಿಯೂ, ಹನುಮಂತನ ಪ್ರಭುಭಕ್ತಿ ಪರಾಕ್ರಮಗುಣತೆಯೂ, ಧರ್ಮರಾಯನ ಸತ್ಯಸಂಧತೆಯೂ, ಕರ್ಣನ ದಾನಶೀಲತೆಯೂ, ದ್ರೌಪದಿಯ ವೀರಪತ್ನೀತ್ವವೂ, ಭೀಮನ ಅಗಾಧದೇಹಶಕ್ತಿಯೂ, ಅರ್ಜುನನ ಯುದ್ಧಚತುರತೆಯೂ" ಈಗಲೂ ನಮಗೆ ಮೇಲ್ಪಂಕ್ತಿಗಳಾಗಿವೆ.

ಅಧ್ಯಾಯ ೫.—ತತ್ವವಿಚಾರಕಾಲ ಕ್ರಿ.ಪೂ. (1000–320)

ಆರ್ಯರು ಹಿಂದೂದೇಶದಲ್ಲೆಲ್ಲಾ ಹರಡಿದ್ದು

ಈ ಕಾಲದಲ್ಲಿ ಮತದ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿ, ಹೊಸಮತಗಳ ಸ್ಥಾಪನೆಗೆ ಅವಕಾಶವಾದುದರಿಂದ ಈ ಅವಧಿಗೆ ತತ್ವ ವಿಚಾರಕಾಲವೆಂದು ಚರಿತ್ರೆಯಲ್ಲಿ ಹೆಸರಾಯಿತು.

ವೇದಗಳ ಕಾಲದಲ್ಲಿ ಕ್ರಿ.ಪೂ. (2000-1500) ಆರ್ಯರು ಪಂಜಾಬಿನಲ್ಲಿದ್ದ ಕಾಡುಜನರನ್ನು ಗೆದ್ದು ಸಿಂಧೂ ನದಿಯ ಬಯಲಿನಲ್ಲಿ ನೆಲೆಸಿದರು ; ಮಹಾಕಾವ್ಯಗಳ ಕಾಲದಲ್ಲಿ ಕ್ರಿ.ಪೂ. (1500–1000) ಗಂಗಾನದಿಯ ಬಯಲಿನಲ್ಲಿ ದೊಡ್ಡರಾಜ್ಯಗಳನ್ನು ಕಟ್ಟಿ, ಬಿಹಾರ ದೇಶದವರೆಗೂ ಹರಡಿಕೊಂಡರು. ಕ್ರಿ. ಪೂ. (1000–320)ರ ಒಳಗೆ, ಆರ್ಯರು ಗಂಗಾಯಮುನಾನದಿಗಳ ಪ್ರದೇಶವನ್ನು ಬಿಟ್ಟು ಮುಂದುವರಿದು ಮಗಧ (ದಕ್ಷಿಣಬಿಹಾರ), ಅಂಗ (ಪಶ್ಚಿಮಬಂಗಾಳ) ವಂಗ (ಪೂರ್ವಬಂಗಾಳ), ಅವಂತಿ (ಮಾಳವ) ಸೌರಾಷ್ಟ್ರ (ಗುಜರಾತ್) ಮೊದಲಾದ ದೇಶಗಳಲ್ಲಿ ನೆಲಸಿದರು. ಅದೂ ಅಲ್ಲದೆ ಅವರು ವಿಂಧ್ಯಪರ್ವತವನ್ನು ದಾಟಿ, ಆಂಧ್ರ, ಕಳಿಂಗ, (ಒರಿಸ್ಸ) ಚೋಳ, ಪಾಂಡ್ಯ, ಕೇರಳ ಮುಂತಾದ ದೇಶಗಳಲ್ಲಿಯೂ ತಮ್ಮ ನಾಗರಿಕತೆಯನ್ನು ಹರಡಿದರು. ಹೀಗೆ ಆರ್ಯರು ವ್ಯಾಪಿಸಿಕೊಂಡ ದೇಶಗಳಲ್ಲೆಲ್ಲಾ ಗಂಗಾನದಿಯ ಮುಖಭಾಗದಲ್ಲಿರುವ ಮಗಧ ರಾಜ್ಯವು ಅತಿಪ್ರಸಿದ್ಧವಾದುದು.

ಮಗಧ ಸಾಮ್ರಾಜ್ಯವು ಹರಡುತ್ತಿದ್ದ ವೇಳೆಯಲ್ಲಿ ಎರಡು ಹೊಸ ಮತಗಳು ಹುಟ್ಟಿದುವಲ್ಲದೆ, ವಿದೇಶೀಯರಾದ ಪಾರ್ಸಿಕರೂ, ಯವನರೂ, ಹಿಂದೂದೇಶದ ಮೇಲೆ ದಂಡೆತ್ತಿಬಂದರು.

ಹೊಸ ಮತಗಳ ಪ್ರಾಬಲ್ಯ

ಮಗಧ ರಾಜ್ಯವು ಉನ್ನತಸ್ಥಿತಿಯಲ್ಲಿದ್ದಾಗ, ಮತದ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿದುವು. ಆರ್ಯರ ಜಾತಿಭೇದಗಳು ಅನೇಕರಿಗೆ ಸರಿಬೀಳಲಿಲ್ಲ. ಅವರ ಕರ್ಮಾಚರಣೆಗಳು ಬಹಳ ತೊಡಕಾಗಿದ್ದುವು.

ಆಗ ಅನೇಕರಿಗೆ ಬೇಸರಿಕೆಹುಟ್ಟಿ ಮೋಕ್ಷವನ್ನು ಪಡೆಯುವುದಕ್ಕೆ ನಿಜವಾದ ಮಾರ್ಗವನ್ನು ಕಂಡುಹಿಡಿಯಬೇಕೆಂದು ಪ್ರಯತ್ನಪಟ್ಟರು. ಹೀಗಿರುವಾಗ ಸಾಮಾನ್ಯ ಜನರಿಂದಲೂ ಆಚರಿಸಬಹುದಾದ, ಸುಲಭಸಾಧ್ಯವಾದ ಜೈನ ಮತ್ತು ಬೌದ್ಧಮತ ಸಿದ್ಧಾಂತಗಳು ಅನೇಕರಿಗೆ ಸಾಧುವಾಗಿ ಕಂಡುವು. ಆದುದರಿಂದ ಈ ಮತಗಳು ಪ್ರಬಲವಾಗುತ್ತ ಬಂದುವು.

ಜೈನ ಮತ

ಈ ಮತವನ್ನು ಕ್ರಿ.ಪೂ. 8ನೆಯ ಶತಮಾನದಲ್ಲಿ ಪಾರ್ಶ್ವನಾಥನೆಂಬುವನು ಸ್ಥಾಪಿಸಿದನು. ಪಾಟಲೀಪುತ್ರಕ್ಕೆ ಉತ್ತರದಲ್ಲಿದ್ದ ವೈಸಾಳಿ ಎಂಬ ನಗರದ ಅರಸನಾದ ಸಿದ್ಧಾರ್ಥನಿಗೆ ಕ್ರಿ.ಪೂ. 599ರಲ್ಲಿ ವರ್ಧಮಾನನೆಂಬ ಮಗನು ಹುಟ್ಟಿದನು. ಈತನು ಕ್ಷತ್ರಿಯ ಕುಲದವನು. ಆದರೂ ತನ್ನ 30ನೆಯ ವಯಸ್ಸಿನಲ್ಲಿಯೇ ರಾಜಭೋಗಗಳನ್ನು ತ್ಯಜಿಸಿ, ಜೈನ ಸನ್ಯಾಸಿಯಾದನು. ಆದರೆ ಪಾರ್ಶ್ವನಾಥನು ಬೋಧಿಸಿದ ತತ್ವಗಳು ಇವನಿಗೆ ಸರಿಬೀಳದೇ ಇವನೇ ಜೈನಮತದ ಬೇರೊಂದು ಶಾಖೆಯನ್ನು ಸ್ಥಾಪಿಸಿ, ಅದನ್ನು ಮಗಧ, ವಿದೇಹ, ಅಂಗ ಮೊದಲಾದ ರಾಜ್ಯಗಳಲ್ಲಿ ಹರಡಿದನು. ಆ ದೇಶಗಳ ದೊರೆಗಳು ಇವನ ನೆಂಟರಾದುದರಿಂದ ಜೈನಮತ ಪ್ರಸಾರಣೆಗೆ ಅವರು ತುಂಬಾ ಉತ್ತೇಜನಕೊಟ್ಟರು. ಇವನ ಶಿಷ್ಯರು ಇವನನ್ನು "ಮಹಾವೀರ," "ಜಿನ" "ಕೇವಲಿನ್" ಎಂಬ ಹೆಸರುಗಳಿಂದ ಕರೆಯುತ್ತಿದ್ದರು. ಇವನು ಕ್ರಿ.ಪೂ. 527ರಲ್ಲಿ ಕಾಲವಾದನು. ಇವನೂ ಬೌದ್ಧಮತವನ್ನು ಸ್ಥಾಪಿಸಿದ ಗೌತಮನೂ, ಮಗಧ ರಾಜ್ಯದ ದೊರೆಯಾದ ಅಜಾತಶತ್ರುವೂ ಸಮಕಾಲೀನರೆಂದು ತಿಳಿಯ ಬರುತ್ತದೆ.

ಪ್ರಾಣಿಹಿಂಸೆ ಮಾಡದಿರುವುದೂ, ನೀತಿಮಾರ್ಗದಲ್ಲಿ ನಡೆಯುವುದೂ ಇವೇ ಜೈನಮತದ ತತ್ವಗಳು. ಜೈನರು ವೇದಗಳ ಪ್ರಮಾಣವನ್ನು ಒಪ್ಪುವುದಿಲ್ಲ. ಇವರಲ್ಲಿ ದಿಗಂಬರ, ಶ್ವೇತಾಂಬರರೆಂದೂ, ವೈದಿಕ ಲೌಕಿಕರೆಂದೂ ಭೇದಗಳುಂಟು. ಈಚೆಗೆ ಇವರಲ್ಲಿಯೂ ಜಾತಿಪದ್ಧತಿಗಳು ವಾಡಿಕೆಗೆ ಬಂದಿವೆ. ಜೈನಮತಾವಲಂಬಿಗಳಾಗಿ ಮುಕ್ತಿಪಡೆದವರನ್ನು ತೀರ್ಥಂಕರರೆಂಬ ಹೆಸರಿನಿಂದ ಪೂಜಿಸುತ್ತಾರೆ. ಸಮಾಧಾನ

ಚಿತ್ತರಾದ ಜೈನ ಬೋಧಕರು ತಮ್ಮ ಮತವನ್ನು ಹರಡಬೇಕೆಂಬುದೇ ಮುಖ್ಯ ಕೆಲಸವೆಂದು ಪ್ರವರ್ತಿಸಿದವರಲ್ಲ. ಆದುದರಿಂದ ಈ ಮತವು ಬ್ರಾಹ್ಮಣಮತದ ಅಭಿವೃದ್ಧಿಗೆ ಅಷ್ಟಾಗಿ ಅಡ್ಡಿಯಾಗಲಿಲ್ಲ. ಈ ಮತವು ಇಂಡಿಯಾದಲ್ಲಿ ಅಷ್ಟು ಹರಡಲೂ ಇಲ್ಲ. ರಾಜಪುಟಾನದಲ್ಲಿಯೂ ಮೈಸೂರು ದೇಶದಲ್ಲಿಯೂ ಕೆಲವು ಜನ ಜೈನರಿರುವರು. ಪ್ರಾಚೀನಕಾಲ ದಲ್ಲಿ ಜೈನಕವಿಗಳು ಗ್ರಂಥರಚನೆಮಾಡಿ ಕನ್ನಡ ಸಾಹಿತ್ಯವನ್ನು ವಿಶೇಷ ವಾಗಿ ಬೆಳಸಿರುವರು. ಕನ್ನಡ ಕಾವ್ಯರಚನೆಗೆ ಮೊದಲು ಕೈಹಾಕಿದವರು ಇವರೇ.

ಬೌದ್ಧಮತ

ಕೋಸಲ ದೇಶದ ಶಾಕ್ಯರೆಂಬ ಜನರಿಗೆ ಶುದ್ಧೋದನರಾಯನು ಅರಸಾಗಿದ್ದನು. ಇವನಿಗೆ ಕ್ರಿ.ಪೂ. 557ರಲ್ಲಿ ಗೌತಮನೆಂಬ ಮಗನು ಹುಟ್ಟಿದನು. ಈತನನ್ನು ಸಿದ್ಧಾರ್ಥನೆಂದೂ ಕರೆಯುತ್ತಿದ್ದರು. ಚಿಕ್ಕಂ ದಿನಿಂದಲೂ, ಯೋಚನಾಪರನಾದ ಈತನು ಒಂದುದಿನ ಅಕಸ್ಮಾತ್ತಾಗಿ ಒಬ್ಬ ಕುಷ್ಠರೋಗಿಯನ್ನೂ, ಒಬ್ಬ ದರಿದ್ರನನ್ನೂ, ಒಂದು ಹೆಣವನ್ನೂ ನೋಡಿ ಕನಿಕರದಿಂದ ಮರುಗಿ, ಪ್ರಪಂಚದ ದುಃಖ ಪರಂಪರೆಗಳನ್ನು ಪರಿಹಾರಮಾಡುವ ಮಾರ್ಗವನ್ನು ಹುಡುಕಲು ನಿಶ್ಚಯಿಸಿದನು. ಇವನ ಮನಸ್ಸಿಗೆ ನೆಮ್ಮದಿಯೂ ಶಾಂತಿಯೂ ಸಿಕ್ಕಲಿಲ್ಲ. ಶಾಶ್ವತ ಸುಖವನ್ನು ಪಡೆಯಬೇಕೆಂದು ರಾಜಭೋಗಗಳನ್ನೂ, ತನ್ನ ತಂದೆ, ಹೆಂಡತಿ, ಮಗು, ಮೊದಲಾದವರೆಲ್ಲರನ್ನೂ ಬಿಟ್ಟು ಪ್ರಸಿದ್ಧರಾದ ಬ್ರಾಹ್ಮಣ ಪಂಡಿತರಲ್ಲಿ ಶಾಸ್ತ್ರ ವನ್ನು ಅಭ್ಯಾಸಮಾಡಿದನು. ಆಗಲೂ ಮನಶ್ಶಾಂತಿಯನ್ನು ಪಡೆಯ ಲಿಲ್ಲ. ಸನ್ಯಾಸಿಯಾಗಿ ಕಾಶಿಗೆ ಹೋಗಿ ಘೋರತಪಸ್ಸನ್ನು ಮಾಡಿ ದನು. ಇದರಿಂದಲೂ ಮನಶ್ಶಾಂತಿಯುಂಟಾಗಲಿಲ್ಲ. ಕಡೆಗೆ ಗಯೆಯ ಹತ್ತಿರ ಒಂದಾನೊಂದು ಆಲದಮರದ ಕೆಳಗೆ ಕುಳಿತು ಆಲೋಚಿಸುತ್ತಿ ದ್ದಾಗ ಗೌತಮನಿಗೆ ಜ್ಞಾನೋದಯವಾಯಿತು. ಆಗಲೇ ಅವನ ಮನಸ್ಸಿನ ತಳಮಳವು ಶಾಂತವಾಯಿತು. ತನಗೆ ಉಂಟಾದ ಜ್ಞಾನದ ವಿಚಾರವನ್ನು ಇತರರಿಗೆ ತಿಳಿಸಿ, ಅವರಿಗೆ ಮೋಕ್ಷಮಾರ್ಗವನ್ನು ತೋರಿಸುವ ಆಸೆಯಿಂದ 45 ವರ್ಷಗಳಕಾಲ ಊರಿಂದೂರಿಗೆ ಹೋಗಿ ಬೋಧಿಸುತ್ತಾ ಸಂಚರಿಸು ತ್ತಿದ್ದನು. ಆಗ ಇವನು ಬುದ್ಧನಾದನು. ಇವನ ಮತಕ್ಕೆ ಬೌದ್ಧಮತ

ವೆಂದು ಹೆಸರಾಯಿತು. ಮನಸ್ಸೊಪ್ಪುವ ಈತನ ಬೋಧೆಯನ್ನು ಕೇಳಿ ಇವನ ತಂದೆಯೂ, ಇತರ ನೆಂಟರೂ, ಮಗಧರಾಜ್ಯದ ದೊರೆಯಾದ ಅಜಾತಶತ್ರುವೂ ಮತ್ತೆ ಅನೇಕರೂ ಇವನ ಶಿಷ್ಯರಾದರು. ಬಾಳೆಂಬುದೇ ದುಃಖಮಯವಾದುದು ; ಮರಣಮಾತ್ರದಿಂದ ಈ ದುಃಖವು ಕೊನೆಗಾಣು ವುದಿಲ್ಲ. ಈ ದೇಹವು ನಾಶವಾದರೂ ಪ್ರಪಂಚಾಸಕ್ತಿಯ ವಾಸನೆಯಿಂದ ಮತ್ತೆ ಮತ್ತೆ ದೇಹಗಳು ಹುಟ್ಟುತ್ತಿರುವುವು. ಈ ದುಃಖಕ್ಕೆ ಪ್ರಾಪಂಚಿಕ ಸುಖಾಸಕ್ತಿಯೇ ಬೇಕು. ಆಶಾನಿರ್ಮೂಲವೇ ದುಃಖನಿರ್ಮೂಲ. ಐಹಿಕ ಸುಖಕ್ಕ ಬಾಯಿನೀರು ಕರೆಯದಿರಲು (1) ಶ್ರದ್ಧೆ, (2) ಸತ್ಸಂಕಲ್ಪ, (3) ಒಳ್ಳೆಯಮಾತು, (4) ಸತ್ಕಾರ್ಯ, (5) ಸರಿಯಾದ ಬಾಳುವೆ, (6) ಸತ್ಪ್ರಯತ್ನ, (7) ಸದ್ವಿಚಾರ, (8) ಒಳ್ಳೆಯ ಧ್ಯಾನ, ಎಂಬ ಎಂಟು ಮುಖ್ಯ ಸಾಧನಗಳ ಅಭ್ಯಾಸವೇ ಸಂಜೀವನ.'' ಇವೇ ಬುದ್ಧನ ಮೂಲಮಂತ್ರಗಳು.

ಬುದ್ಧನು ಕ್ರಿ.ಪೂ. 487 ರಲ್ಲಿ ನಿರ್ಯಾಣಹೊಂದಿದನು. ಬುದ್ಧನು ತನ್ನ ಮತಪ್ರಸಾರಣೆಗಾಗಿ ಭಿಕ್ಷುಗಳೆಂಬುವರನ್ನು ನೇಮಿಸಿದನು. ಇವರು ಬೌದ್ಧಮತದ ತತ್ವಗಳನ್ನು ಸಾಮಾನ್ಯ ಜನರು ನಿತ್ಯವೂ ಮಾತನಾಡುವ ಪಾಳೀ ಭಾಷೆಯಲ್ಲಿ ಎಲ್ಲರಿಗೂ ತಿಳಿಯುವಂತೆ ಬೋಧಿಸುತ್ತಿದ್ದುದರಿಂದ ಬೌದ್ಧಮತವು ಹರಡುವುದಕ್ಕೆ ಅವಕಾಶವಾಯಿತು, ಈಗಲೂ ಬೌದ್ಧ ಮತವು ಸಿಂಹಳದ್ವೀಪ, ಬರ್ಮ, ಸಿಯಾಂ, ಟಿಬೆಟ್, ಮಂಗೋಲಿಯ, ಚೀಣ, ಜಪಾನ್ ಮೊದಲಾದ ರಾಜ್ಯಗಳಲ್ಲಿ ವಿಶೇಷ ಪ್ರಬಲವಾಗಿದೆ. ಆದರೆ ಜನ್ಮಭೂಮಿಯಲ್ಲಾದರೋ ಎಲ್ಲೋ ಕೆಲವು ಜನರು ಮಾತ್ರ ಈ ಮತವನ್ನು ಈಗ ಅವಲಂಬಿಸಿದಾರೆ.

ಜೈನಬೌದ್ಧ ಸಿದ್ಧಾಂತಗಳೆರಡೂ ಬ್ರಾಹ್ಮಣಮತದ ಆಧಾರದ ಮೇಲೆ ಹುಟ್ಟಿದವುಗಳಾದರೂ, ವೇದವನ್ನು ಪ್ರಮಾಣವೆಂದು ನಂಬುವು ದಿಲ್ಲ. ದೇವರುಗಳನ್ನು ಪೂಜಿಸದೆಯೇ, ಧರ್ಮಮಾರ್ಗವನ್ನವಲಂಬಿಸಿ, ಪ್ರಾಣಿಹಿಂಸೆಯನ್ನು ಮಾಡದೆ ಇದ್ದರೆ, ಸಂಸಾರವೆಂಬ ಜನ್ಮಪರಂಪರೆ ಯಿಂದ ಬಿಡುಗಡೆಯನ್ನು ಪಡೆಯಬಹುದೆಂಬುದೇ ಈ ಎರಡು ಮತಗಳ ಧರ್ಮವಾಗಿದೆ.

ವಿದೇಶಿಯರ ದಂಡಯಾತ್ರೆಗಳು

ಪಾರಸೀಕರು

ಇವರು ಆರ್ಯರ ಗುಂಪಿನವರೆಂದು ಹಿಂದೆಯೇ ಹೇಳಿದೆ. ಈ ಪಾರಸೀಕರು ಪಾರಸೀಸ್ಥಾನದಲ್ಲಿ ಒಂದು ದೊಡ್ಡ ಚಕ್ರಾಧಿಪತ್ಯವನ್ನು ಕಟ್ಟಿದರು. ಡೇರಿಯಸ್ ಎಂಬ ಚಕ್ರವರ್ತಿಯು ಪಾರಸೀಸ್ಥಾನವನ್ನು ಇನ್ನೂ ವಿಸ್ತರಿಸಬೇಕೆಂದು ಕ್ರಿ. ಪೂ. 521ರಲ್ಲಿ ಹಿಂದೂದೇಶದ ಮೇಲೆ ದಂಡೆತ್ತಿ ಬಂದು ಸಿಂಧೂನದಿಯ ಪ್ರಾಂತವನ್ನೆಲ್ಲಾ ತನ್ನ ಚಕ್ರಾಧಿಪತ್ಯಕ್ಕೆ ಸೇರಿಸಿಕೊಂಡು, ಅಲ್ಲಿ "ಕ್ಷತ್ರಪ" ನೆಂಬ ಹೆಸರಿನಿಂದ ತನ್ನಕಡೆಯ ಅಧಿಕಾರಿಯನ್ನು ಬಿಟ್ಟು ತನ್ನ ದೇಶಕ್ಕೆ ಹಿಂದಿರುಗಿದನು. ಈ ಚಕ್ರವರ್ತಿಯ ರಾಜ್ಯದ ಒಟ್ಟು ಉತ್ಪತ್ತಿಯ ಮೂರನೆಯ ಒಂದು ಭಾಗವು ಪಂಜಾಬ್ ದೇಶ ಒಂದರಿಂದಲೇ ಬರುತ್ತಿದ್ದಿತಂತೆ. ಡೇರಿಯಸ್ಸನು ಕಾಲವಾದ ಮೇಲೆ ಹಿಂದೂಗಳು ಅಲ್ಲಲ್ಲೇ ಸ್ವತಂತ್ರರಾದರು.

ಪಾರಸೀಕರು ಬಂದು ಹೋದಮೇಲೆ ಹಿಂದೂದೇಶಕ್ಕೂ ಪಶ್ಚಿಮ ದೇಶಗಳಿಗೂ ನಡೆಯುತ್ತಿದ್ದ ವ್ಯಾಪಾರವು ಹೆಚ್ಚುವುದಕ್ಕೆ ಅವಕಾಶವಾಯಿತು. ಪಾರಸೀಕರು ಜ್ಯೋತಿಷಶಾಸ್ತ್ರ, ಗಣಿತಶಾಸ್ತ್ರಗಳನ್ನು ಹಿಂದೂಗಳಿಂದ ಕಲಿತರು; ಅವರಿಂದ ಹಿಂದೂಗಳು ರಾಜ್ಯಭಾರಕ್ರಮಗಳನ್ನರಿತರು.

ಗ್ರೀಕರು (ಯವನರು)

ಮ್ಯಾಸಿಡೋನಿಯ (ಈಗಿನ ಗ್ರೀಸ್) ರಾಜ್ಯದ ದೊರೆಯಾದ ಅಲೆಕ್ಸಾಂಡರ್ ಎಂಬ ಮಹಾವೀರನು ಪಾರಸೀಸ್ಥಾನವನ್ನು ತನ್ನ ವಶಮಾಡಿಕೊಂಡು, ಹಿಂದೂಸ್ಥಾನದಲ್ಲಿ ಪಾರಸೀಕರಿಗೆ ಸೇರಿದ್ದು ಆಗತಾನೆ ಅವರ ಕೈಬಿಟ್ಟುಹೋಗಿದ್ದ ರಾಜ್ಯಗಳನ್ನು ಪುನಃ ಗೆಲ್ಲಬೇಕೆಂಬ ಆಸೆಯಿಂದಲೂ, ಹಿಂದೂದೇಶದ ವಿದ್ಯಾ, ಸಂಪತ್ತು, ಐಶ್ವರ್ಯ ಇವುಗಳನ್ನು ಕಣ್ಣಾರೆ ನೋಡಬೇಕೆಂಬ ಆಸೆಯಿಂದಲೂ, ಹಿಂದೂ ದೇಶದಮೇಲೆ ದಂಡೆತ್ತಿ ಬಂದನು. ಆಗ ವಾಯುವ್ಯಪ್ರಾಂತಗಳಲ್ಲಿಯೂ, ಪಶ್ಚಿಮ ಪ್ರದೇಶಗಳಲ್ಲಿಯೂ ಶಕ್ತರಾದ ದೊರೆಗಳಿಲ್ಲದೆ, ಒಬ್ಬರಿಗೊಬ್ಬರು ಕಲಹಮಾಡಿ ಐಕಮತ್ಯವಿಲ್ಲ

ದುದು ಅಲೆಕ್ಸಾಂಡರನಿಗೆ ಅನುಕೂಲವಾಗಿಯೇ ಪರಿಣಮಿಸಿತು. ಕ್ರಿ.ಪೂ. 326ರಲ್ಲಿ ಆತನು ಒಂದು ಅಪಾರವಾದ ಸೈನ್ಯದೊಡನೆ ಅಟಕ್ ಪಟ್ಟಣದ ಬಳಿ ಸಿಂಧೂನದಿಯನ್ನು ದಾಟಿ, ಪಂಜಾಬಿನಲ್ಲೆಲ್ಲಾ ದೊಡ್ಡಪಟ್ಟಣವಾದ ತಕ್ಷಶಿಲೆಯ ಅರಸಾದ ಅಂಭಿಯನ್ನು ಸೋಲಿಸಿ ತನ್ನ ಅಧೀನಮಾಡಿಕೊಂಡನು. ಅಲ್ಲಿಂದ ಮುಂದಕ್ಕೆ ಹೊರಟಾಗ, ಜೀಲಂನದಿಯ ತೀರಪ್ರದೇಶಗಳ ಅರಸಾಗಿದ್ದ ಪೌರವನು ಅಲೆಕ್ಸಾಂಡರನನ್ನು ಇದಿರಿಸಿದನು. ಹಿಂದೂಗಳು ಬಹು ಶೌರ್ಯದಿಂದ ಕಾದಿದರು. ದಕ್ಷನಾದ ದಳಪತಿಯ ಕೈಕೆಳಗೆ ತಯಾರಾದ ಗ್ರೀಕ್‌ಯೋಧರ ಶಕ್ತಿಯಿಂದಲೂ, ಅಲೆಕ್ಸಾಂಡರನು ಮಾಡಿದ ಒಂದು ಉಪಾಯದಿಂದಲೂ, ಗ್ರೀಕರಿಗೆ ಜಯವಾಯಿತು. ಆದರೂ ಪೌರವನಂತಹ ಧೀರನನ್ನೂ ವೀರನನ್ನೂ ಸೋಲಿಸಿ ಶತ್ರುವಾಗಿ ಮಾಡಿಕೊಳ್ಳುವುದಕ್ಕಿಂತಲೂ, ಮಿತ್ರನನ್ನಾಗಿಟ್ಟುಕೊಳ್ಳುವುದೇ ಮೇಲೆಂದು, ಅಲೆಕ್ಸಾಂಡರನು ಅವನ ರಾಜ್ಯವನ್ನು ಅವನಿಗೇ ಕೊಟ್ಟು ಮುಂದಕ್ಕೆ ಹೊರಟನು. ಬಿಯಾಸ್ ನದಿಯವರೆಗೂ ಇದ್ದ ರಾಜ್ಯಗಳು ಸುಲಭವಾಗಿ ಗ್ರೀಕರ ಕೈಸೇರಿದುವು. ತರುವಾಯ ತಾನು ಗೆಲ್ಲಬೇಕೆಂದು ಮೊದಲಿನಿಂದಲೂ ಆಸೆಪಡುತ್ತಿದ್ದ ಮಗಧರಾಜ್ಯದಮೇಲೆ ಹೊರಡಬೇಕೆಂದಿರುವಾಗ, ಬಹುವರ್ಷಗಳಹಿಂದೆ ತಮ್ಮ ಮನೆಮಠಗಳನ್ನು ಬಿಟ್ಟು, ವಿಶ್ರಾಂತಿಯಿಲ್ಲದೆ ಯುದ್ಧಮಾಡಿ ಬಳಲಿ ಬೆಂಡಾಗಿದ್ದ ಯವನ ಸೈನಿಕರು ತಮ್ಮ ದೇಶಕ್ಕೆ ಹೋಗಬೇಕೆಂದು ಪುಷ್ಕರ ಹಿಡಿದುದರಿಂದ, ಅಲೆಕ್ಸಾಂಡರನು ಹಿಂದಿರುಗಬೇಕಾಯಿತು. ಆಗ ಸಿಕಂದರನು ತಾನು ಜಯಿಸಿದ್ದ ಪಂಜಾಬನ್ನು ಅಂಭಿಗೂ ಪೌರವನಿಗೂ ಹಂಚಿಕೊಟ್ಟು ತನ್ನ ದೇಶವನ್ನು ಕುರಿತು ಭೂಮಾರ್ಗವಾಗಿ ಹೊರಟು ಕ್ರಿ.ಪೂ. 324ರಲ್ಲಿ ತನ್ನ ರಾಜ್ಯವನ್ನು ತಲಪಿದನು. ಇದಾದ ಸ್ವಲ್ಪದಿನಗಳಲ್ಲಿಯೇ ಅಲೆಕ್ಸಾಂಡರನು ತನ್ನ 32ನೆಯ ವಯಸ್ಸಿನಲ್ಲೇ ಕಾಲವಾದನು. ಈತನು ಬಹು ಪರಾಕ್ರಮಿ, ಧೈರ್ಯಶಾಲಿ ; ಈತನು ಹಿಂದೂ ದೇಶದಲ್ಲಿ ಮಾಡಿದ ಕೆಲಸಗಳನ್ನು ನೋಡಿದರೆ ಈ ದೇಶವನ್ನು ಪೂರ್ತಿಯಾಗಿ ಗೆಲ್ಲುವ ಉದ್ದೇಶದಿಂದಲೇ ಬಂದಿದ್ದನೆಂದು ಕಾಣುತ್ತದೆ. ಆದರೆ ಇವನು ಸತ್ತ ಕೆಲವು ದಿನಗಳಲ್ಲಿಯೇ ಇವನ ರಾಜ್ಯವು ಒಡೆದು, ಹಿಂದೂಗಳ ಕೈವಶವಾಯಿತು.

ಈತನ ದಂಡಯಾತ್ರೆಯಿಂದ ನಮ್ಮ ದೇಶಕ್ಕೂ, ಪಶ್ಚಿಮದೇಶ

ಗಳಿಗೂ ಸಂಸರ್ಗ ಉಂಟಾಗಿ ವ್ಯಾಪಾರವು ಹೆಚ್ಚಲು ಅವಕಾಶವಾಯಿತು. ಸಾಹಿತ್ಯ, ಕಲೆ, ಮೊದಲಾದ ಕೆಲವು ವಿದ್ಯೆಗಳನ್ನು ಒಬ್ಬರಿಂದೊಬ್ಬರು ಕಲಿತರು. ಅಶಿಕ್ಷಿತರಾದ ಅಸಂಖ್ಯಾತ ಸೈನಿಕರಿಗಿಂತಲೂ, ಸರಿಯಾದ ಮಾರ್ಗದಲ್ಲಿ ತಿದ್ದಿ, ಯುಕ್ತಿವಂತರಾದ ದಳಪತಿಗಳನ್ನುಳ್ಳ ಅಲ್ಪಮಂದಿ ಸೈನಿಕರೇ ಉತ್ತಮವೆಂದೂ, ಒಕ್ಕಟ್ಟಾಗಿದ್ದರೆ ಶತ್ರುಗಳ ಭಯವಿಲ್ಲವೆಂದೂ ಹಿಂದೂಗಳಿಗೆ ತಿಳಿಯ ಬಂದಿತು. ರಾಜಕೀಯ ವಿಷಯಗಳಲ್ಲಿಯೂ ಹಿಂದೂಗಳಿಗೆ ತಿಳಿವಳಿಕೆಯುಂಟಾಯಿತು. ಇವೆಲ್ಲವೂ ಮುಂದೆ ಚಂದ್ರ ಗುಪ್ತನು ರಾಜ್ಯ ಕಟ್ಟುವುದಕ್ಕೆ ಅನುಕೂಲವಾದುವು.

ಮಗಧರಾಜ್ಯದ ಏಳಿಗೆ (ಕ್ರಿ. ಪೂ. 642-320)

ಕ್ರಿ.ಪೂ. 7ನೆಯ ಶತಮಾನದ ವರೆಗೆ ಬರೆದಿರುವ ಭರತಖಂಡದ ವೃತ್ತಾಂತವು ಕ್ರಮವಾದ ಚರಿತ್ರೆಯೆನಿಸಿಕೊಳ್ಳಲಾರದು. ಈ ಖಂಡದ ಕ್ರಮವಾದ ಚರಿತ್ರಲೇಖನವು ಸುಮಾರು ಕ್ರಿ.ಪೂ. 7ನೆಯ ಶತಮಾನದಿಂದ ಪ್ರಾರಂಭವಾಯಿತೆಂದು ಹೇಳಬಹುದು.

ಕ್ರಿ.ಪೂ. 650ರಲ್ಲಿ ಕುರು, ಪಾಂಚಾಲ, ಕಾಶಿ ಈ ದೇಶಗಳು ಕೋಸಲ ರಾಜ್ಯದ ಅಧೀನವಾಗಿದ್ದುವು. ಈಗ ನಾವು ಕರೆಯುವ ರಾಜ ಪುಟಾಣಾ ಮತ್ತು ಮಾಳವ ದೇಶಗಳು ಆಗಿನ ಕಾಲದಲ್ಲಿ ಅವಂತೀ ರಾಜ್ಯ ವೆಂದು ಸುಪ್ರಸಿದ್ಧವಾಗಿದ್ದುವು. ಈಗ ದಕ್ಷಿಣ ಬಿಹಾರಪ್ರಾಂತವಿರುವ ಎಡೆ ಯಲ್ಲಿ ಪೂರ್ವದಲ್ಲಿ ಮಗಧರಾಜ್ಯವೆಂಬ ಒಂದು ದೇಶವು ಹೆಸರುಪಡೆದಿದ್ದಿತು. ಮಹಾಭಾರತದಲ್ಲಿ ಹೆಸರು ಪಡೆದ ಜರಾಸಂಧನು ಮಗಧರಾಜ್ಯದಲ್ಲಿ ದೊರೆ ಯಾಗಿದ್ದನೆಂದು ಹೇಳುತ್ತಾರೆ. ಇವನ ವಂಶದವರು 30 ತಲೆಗಳ ವರೆಗೂ ಮಗಧರಾಜ್ಯದಲ್ಲಿ ಆಳುತ್ತಿದ್ದರಂತೆ. ಜರಾಸಂಧನ ಸಂತತಿಯು ರಾಜರಾದಮೇಲೆ ಶಿಶುನಾಗ ಸಂತತಿಯವರು ಪಟ್ಟಕ್ಕೆ ಬಂದರು. ಕ್ರಿ.ಪೂ. 642ರಲ್ಲಿ ದೊರೆತನಕ್ಕೆ ಬಂದ ಶಿಶುನಾಗನೂ ಅವನ ಸಂತತಿ ಯಲ್ಲಿ ಐದನೆಯವನಾದ ಬಿಂಬಸಾರನೂ ಮಗಧರಾಜ್ಯವನ್ನು ಅಭಿವೃದ್ಧಿಗೆ ತಂದರು. ಬಿಂಬಸಾರನು ಅಂಗದೇಶವನ್ನೂ, ಕಾಶೀಪ್ರಾಂತವನ್ನೂ, ವೈಸಾಳೀ ಎಂಬ ರಾಜ್ಯವನ್ನೂ, ಮಗಧರಾಜ್ಯಕ್ಕೆ ಸೇರಿಸಿದನು. ಮಗಧ ಸಾಮ್ರಾಜ್ಯಕ್ಕೆ ಈತನೇ ಮೂಲಪುರುಷನೆನ್ನಬಹುದು. ಬಿಂಬಸಾರನನ್ನು

ಇವನ ಮಗನಾದ ಅಜಾತಶತ್ರುವು ಕೊಂದು ತಾನೇ ಅರಸನಾದನು. ಅಜಾತಶತ್ರುವು ಕೋಸಲ ಮತ್ತು ವಿದೇಹರಾಜ್ಯಗಳನ್ನು ಮಗಧರಾಜ್ಯಕ್ಕೆ ಸೇರಿಸಿಕೊಂಡನು. ಇವನ ಕಾಲದಲ್ಲಿ ಮಗಧರಾಜ್ಯವು ಪಂಜಾಬಿನವರೆಗೂ ಉತ್ತರದಲ್ಲಿ ಹಿಮಾಲಯದ ತಪ್ಪಲಿನವರೆಗೂ, ಪೂರ್ವದಲ್ಲಿ ವಂಗರಾಜ್ಯದ ವರೆಗೂ, ದಕ್ಷಿಣದಲ್ಲಿ ಬಂಗಾಳಾಕೊಲ್ಲಿಯುವರೆಗೂ ವಿಸ್ತರಿಸಿತ್ತು. ಇವನು ಗಂಗಾ ಶೋಣಾ ನದಿಗಳು ಸೇರುವ ಸ್ಥಳದಲ್ಲಿ ಪಾಟಲೀಪುತ್ರವೆಂಬ ಒಂದು ಕೋಟೆಯನ್ನು ಕಟ್ಟಿಸಿದನು.

ನಂದರ ಸಂತತಿ— ಇವನ ತರುವಾಯ ಬಂದ ದೊರೆಗಳು ಶಕ್ತರಾಗಿರಲಿಲ್ಲ. ಆದುದರಿಂದ ಶಿಶುನಾಗನ ಸಂತತಿಯು ಕ್ರಿ.ಪೂ. 370ರಲ್ಲಿ ಖಿಲವಾಗಿ ಶೂದ್ರಜಾತಿಯ ಮಹಾಪದ್ಮನಂದನ ಕೈಸೇರಿತು. ಇವನಿಗೂ ಇವನ ತರುವಾಯ ಆಳಿದ ಎಂಟುಜನ ನಂದರಿಗೂ " ನವನಂದ " ರೆಂದು ಹೆಸರಾಯಿತು. ನಂದರ ಆಳಿಕೆಯಲ್ಲಿ ಜನರಿಗೆ ನೆಮ್ಮದಿ ಇರಲಿಲ್ಲ. ಇವರು ಮದಾಂಧರಾಗಿ, ರಾಜನೀತಿಗಳನ್ನು ದೂರಮಾಡಿ, ರಾಜ್ಯವನ್ನು ಆಳುತಿದ್ದರು. ಆದುದರಿಂದ ಜನರು ದಂಗೆಯದ್ದರು. ಚಂದ್ರಗುಪ್ತನೆಂಬ ಶೂದ್ರನು ಈ ದಂಗೆಗೆ ಪ್ರಮುಖನೆಂದು ತಿಳಿದುದರಿಂದ, ನಂದರಾಜನು ಅವನನ್ನು ತನ್ನ ದೇಶದಿಂದ ಓಡಿಸಿದನು. ಚಂದ್ರಗುಪ್ತನು ಪಂಜಾಬಿಗೆ ಹೋಗಿ, ಅಲ್ಲಿಗೆ ಆಗತಾನೆ ದಂಡೆತ್ತಿಬಂದಿದ್ದ ಯವನ ದೊರೆಯಾದ ಅಲೆಕ್ಸಾಂಡರನ ಬಳಿ ಸೇರಿಕೊಂಡನು. ಅಲೆಕ್ಸಾಂಡರನು ತನ್ನ ದೇಶಕ್ಕೆ ಹಿಂದಿರುಗಿ ಸತ್ತುಹೋದಮೇಲೆ, ಚಂದ್ರಗುಪ್ತನು ಪಂಜಾಬಿನಲ್ಲಿ ಒಂದು ಬಲವಾದ ಸೈನ್ಯವನ್ನು ಕಟ್ಟಿ ಯವನರ ಪಾಲಾಗಿದ್ದ ಹಿಂದೂದೇಶಗಳನ್ನು ತನ್ನ ವಶಮಾಡಿಕೊಂಡು, ರಾಜತಂತ್ರನಿಪುಣನಾದ ಚಾಣಿಕ್ಯನೆಂಬ ಬ್ರಾಹ್ಮಣನ ಸಹಾಯದಿಂದ ನಂದರನ್ನು ನಿರ್ಮೂಲಮಾಡಿ ಕ್ರಿ.ಪೂ. 320ರಲ್ಲಿ ಮಗಧರಾಜ್ಯಕ್ಕೆ ತಾನೇ ಅರಸಾದನು. ಇವನು " ಮುರಾ " ಎಂಬ ಶೂದ್ರ ಹೆಂಗಸಿನ ವಂಶಕ್ಕೆ ಸೇರಿದವನಾದುದರಿಂದ ಇವನಿಗೂ ಇವನ ಸಂತತಿಯವರಿಗೂ " ಮೌರ್ಯ " ರೆಂದು ಹೆಸರಾಯಿತು.

ಮೇಲೆ ಹೇಳಿದ ರೀತಿಯಲ್ಲಿ ಮಗಧರಾಜ್ಯವು ಪ್ರಬಲವಾಗುತ್ತಿದ್ದಾಗ ಹಿಂದೂದೇಶದ ಇತರ ರಾಜ್ಯಗಳಲ್ಲಿಯೂ, ಆರ್ಯರ ನಾಗರಿಕತೆಯು ತಲೆದೋರುತ್ತಿತ್ತು. ಅಂಗರಾಜ್ಯವು ಮಗಧರಾಜ್ಯಕ್ಕೆ ಸೇರಿಹೋಯಿತು.

ವಂಗದೇಶ (ಈಗಿನ ಪೂರ್ವ ಬಂಗಾಳ), ಕಳಿಂಗರಾಜ್ಯ (ಈಗಿನ ದಕ್ಷಿಣಬಂಗಾಳ) ಇವುಗಳಲ್ಲಿ ಆರ್ಯರ ದೊರೆಗಳೇ ಆಳುತ್ತಿದ್ದರು. ಗುಜರಾತಿನಲ್ಲಿ ಸೌರಾಷ್ಟ್ರದೊರೆಗಳು ಒಂದು ಪ್ರಸಿದ್ಧವಾದ ರಾಜ್ಯವನ್ನು ಕಟ್ಟಿದರು. ಮಾಳವ ದೇಶದಲ್ಲಿಯೂ, ಆರ್ಯರ ಮೇಲ್ಮೆಯೇ ಕಾಣುತ್ತಿತ್ತು. ಆರ್ಯರ ರಾಜ್ಯಸ್ಥಾಪನೆಯ ಕಾರ್ಯವು ಇಷ್ಟಕ್ಕೆ ಮುಗಿಯಲಿಲ್ಲ. ಇವರು ವಿಂಧ್ಯ ಪರ್ವತವನ್ನು ದಾಟಿಬಂದು, ನರ್ಮದಾ, ಕೃಷ್ಣಾ ನದಿಗಳ ನಡುವೆ "ಆಂಧ್ರದೇಶ" ಎಂದು ಪ್ರಸಿದ್ಧಿಪಡೆದ ರಾಜ್ಯವನ್ನು ಕಟ್ಟಿದರು. ಕೃಷ್ಣಾ ನದಿಗೆ ದಕ್ಷಿಣದಲ್ಲಿದ್ದ ಚೋಳ, ಚೇರ, ಪಾಂಡ್ಯ, ಎಂಬ ರಾಜ್ಯಗಳಿಗೂ ಆರ್ಯರ ನಾಗರಿಕತೆಯು ಹರಡಿತು. ಆರ್ಯರ ವರ್ತಕರು ದಂತ, ಮುತ್ತು ಇವುಗಳ ವ್ಯಾಪಾರಕ್ಕಾಗಿ ಸಿಂಹಳ ದ್ವೀಪಕ್ಕೂ ಹೋಗಿದ್ದರೆಂಬುದಕ್ಕೆ ನಿದರ್ಶನಗಳಿವೆ. ಹೀಗೆ ಕ್ರಿ.ಪೂ. 4ನೆಯ ಶತಮಾನದ ಕೊನೆಯಲ್ಲಿ ಮಧ್ಯಹಿಂದೂದೇಶದ ಕೆಲವು ಕಾಡುಪ್ರದೇಶಗಳ ವಿನಾ ಉಳಿದ ಹಿಂದೂದೇಶದಲ್ಲೆಲ್ಲಾ ಆರ್ಯರ ನಾಗರಿಕತೆಯು ಹರಡಿಕೊಂಡಿತ್ತು.

ಕ್ರಿ. ಪೂ. 1000-300 ವರೆಗೆ ಸಾಮಾನ್ಯ ಜನರ ಜೀವನ ವಿಧಾನ

ಬೌದ್ಧರು, ಜೈನರು, ಗ್ರೀಕರು ಇವರುಗಳ ಬರೆವಣಿಗೆಯಿಂದ ಆಕಾಲದ ಸ್ಥಿತಿಗತಿಗಳನ್ನು ತಿಳಿಯಬಹುದು.

ಜನರು ವಿಶೇಷವಾಗಿ ಹಳ್ಳಿಗಳಲ್ಲಿಯೇ ವಾಸಮಾಡುತ್ತಿದ್ದರು. ವಿವಾದಗಳನ್ನು ತೀರ್ಪುಮಾಡುವುದಕ್ಕೆ ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದು (ಪಂಚಾಯಿತ) ಸಭೆಯು ಇರುತ್ತಿತ್ತು. ಗ್ರಾಮದ ಆಡಳಿತಗಳು ಚೆನ್ನಾಗಿದ್ದುವು. ಕೆರೆಗಳನ್ನು ಕಟ್ಟುವುದಕ್ಕೂ, ಕಾಲುವೆಗಳನ್ನು ಅಗೆಯುವುದಕ್ಕೂ ರಸ್ತೆಗಳನ್ನು ಮಾಡುವುದಕ್ಕೂ, ಗ್ರಾಮಸ್ಥರೆಲ್ಲರೂ ಒಟ್ಟುಗೂಡಿ ಹಣವನ್ನು ಒದಗಿಸುತ್ತಿದ್ದರು. ಭೂಮಿಯ ಹುಟ್ಟುವಳಿಯ ಆರರಲ್ಲಿ ಒಂದು ಭಾಗವು ರಾಜಾದಾಯವಾಗಿತ್ತು.

ವ್ಯಾಪಾರಕ್ಕೆ ತಕ್ಕ ಸೌಕರ್ಯಗಳಿರಲಿಲ್ಲ. ಭಾರವಿಲ್ಲದ ಸರಕುಗಳನ್ನು ಒಂಟೆಗಳ ಮೇಲೆ ಸಾಗಿಸುತ್ತಿದ್ದರು. ವ್ಯಾಪಾರದ ಸರಕುಗಳ ಮೇಲೆ ಹೆಚ್ಚು ತೆರಿಗೆಯು ಬೀಳುತ್ತಿತ್ತು. ವ್ಯಾಪಾರಮಾರ್ಗಗಳು ವಿರಳವಾಗಿದ್ದು

ದರಿಂದ ಕ್ಷಾಮಗಳು ಅಗಾಗ ತಲೆದೋರುತ್ತಿದ್ದುವು. ನಾಣ್ಯಗಳು ಚಲಾವಣೆಯಲ್ಲಿದ್ದರೂ, ಪದಾರ್ಥಗಳನ್ನು ಅದಲು ಬದಲು ಮಾಡುವುದೇ ವಾಡಿಕೆಯಾಗಿತ್ತು. ನಾಗರೀಕರಲ್ಲಿ ವಾಡಿಕೆಯಲ್ಲಿರುವ ವೃತ್ತಿಗಳು ಈ ಕಾಲದಲ್ಲಿ ಆಚರಣೆಯಲ್ಲಿದ್ದುವು. ಬೇಕಾದವರು ಬೇಕಾದ ವೃತ್ತಿಯನ್ನು ಅನುಸರಿಸಬಹುದಾಗಿದ್ದಿತು.

ವಿದ್ಯೆಯನ್ನು ಕಲಿಯುವುದಕ್ಕೆ ಹೆಚ್ಚು ವೆಚ್ಚ ಮಾಡಬೇಕಾಗಿರಲಿಲ್ಲ. ಗುರುಗಳಲ್ಲಿ ಶಿಷ್ಯವೃತ್ತಿ ಮಾಡಿ ವಿದ್ಯೆ ಕಲಿಯಬಹುದಾಗಿದ್ದಿತು. ತಕ್ಷಶಿಲಾ, ಕಾಶೀ, ನಳಂದ ಮೊದಲಾದ ಪಟ್ಟಣಗಳು ಸಕಲ ವಿದ್ಯಾನಿಲಯಗಳಾಗಿದ್ದುವು.

ಆರ್ಯರಲ್ಲಿ ಜಾತಿಪದ್ಧತಿಗಳು ರೂಢಿಗೆ ಬಂದಮೇಲೆ ಬ್ರಾಹ್ಮಣರಿಗೆ ಕಾವ್ಯಗಳನ್ನು ಬರೆಯುವುದಕ್ಕೂ, ಧರ್ಮಶಾಸ್ತ್ರವನ್ನು ರಚಿಸುವುದಕ್ಕೂ ಕಲೆಗಳನ್ನೂ ಶಾಸ್ತ್ರಗಳನ್ನೂ ಅಭ್ಯಾಸ ಮಾಡುವುದಕ್ಕೂ ಹೆಚ್ಚಾದ ಅವಕಾಶ ದೊರೆಯಿತು. ಸಂಸ್ಕೃತಭಾಷೆಗೆ ಮೇಲ್ಮೆಯುಂಟಾಯಿತು. ಜ್ಯೋತಿಷ ಶಾಸ್ತ್ರ, ಅಂಕಗಣಿತ, ರೇಖಾಗಣಿತ ನ್ಯಾಯ ಮೊದಲಾದ ಶಾಸ್ತ್ರಗಳು ಪ್ರಚಾರಕ್ಕೆ ಬಂದುವು. ಈ ವೇಳೆಗೆ ಬ್ರಾಹ್ಮಣ ಮತದಲ್ಲಿಯೂ ಅನೇಕ ಬದಲಾವಣೆಗಳುಂಟಾದುವು. ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ಕಲ್ಪನೆಯು ಜನರ ಮನಸ್ಸಿನಲ್ಲುಂಟಾಯಿತು. ಆಚಾರ ವ್ಯವಹಾರಗಳಿಗೆ ಸಂಬಂಧಪಟ್ಟ ಕಟ್ಟಲೆಗಳು ಪರಿಷ್ಕೃತವಾದುವು. ಧರ್ಮಶಾಸ್ತ್ರರೀತಿಯಾಗಿ ತಪ್ಪಿತಸ್ಥರಿಗೆ ಕೊಡುತ್ತಿದ್ದ ಶಿಕ್ಷೆಯು ಅವರ ಜಾತಿಗನುಸಾರವಾಗಿದ್ದಿತು.

ಅಧ್ಯಾಯ ೬.—ಮೌರ್ಯಸಂತತಿ (ಕ್ರಿ. ಪೂ. 320-237)

ಬೌದ್ಧರಕಾಲ. ಕ್ರಿ. ಪೂ. 300—ಕ್ರಿ. ಶ. 300

ಮೌರ್ಯ ಸಂತತಿಯಿಂದೀಚೆ ಭರತಖಂಡದ ಚರಿತ್ರೆಯು ಕ್ರಮವಾಗಿ ತಿಳಿಯಲು ಅನುಕೂಲವಾಯಿತು. ಸಣ್ಣ ಸಣ್ಣ ರಾಜ್ಯಗಳಿಂದ ಕೂಡಿದ್ದ ಭರತಖಂಡವು ಇವರಕಾಲದಲ್ಲಿ ಒಟ್ಟಾಗಿಸೇರಿ ಒಂದು ಮಹಾ

ಚಕ್ರಾಧಿಪತ್ಯವಾಯಿತು. ಈ ಚಕ್ರಾಧಿಪತ್ಯಕ್ಕೆ ಚಂದ್ರಗುಪ್ತನೇ ಮೊದಲನೆಯ ಚಕ್ರವರ್ತಿಯಾದನು.

ಚಂದ್ರಗುಪ್ತಮೌರ್ಯ (ಕ್ರಿ. ಪೂ. 320-297)

ಮಗಧರಾಜ್ಯದಲ್ಲಿ ನವನಂದರ ಕೊನೆಯ ದೊರೆಯು ಆಳುತ್ತಿದ್ದಾಗ ಆತನ ಬಂಧುವಾದ ಚಂದ್ರಗುಪ್ತನು ದೊರೆಯ ಹಿಂಸೆಯನ್ನು ತಡೆಯಲಾರದೆ ಪಂಜಾಬಿಗೆ ಓಡಿಹೋಗಿ ಅಲೆಕ್ಸಾಂಡರನ ಬಿಡಾರದಲ್ಲಿ ಸೇರಿಕೊಂಡನು. ಚಂದ್ರಗುಪ್ತನು ತಾನು ಕಣ್ಣಾರೆಕಂಡ ಅಲೆಕ್ಸಾಂಡರನ ಅಮಿತ ಸಾಹಸವನ್ನೂ ವಿಜಯಗಳನ್ನೂ ನೋಡಿ ತಾನೂ ಆತನಂತೆ ಪ್ರಸಿದ್ಧ ಪುರುಷನಾಗಬೇಕೆಂಬ ಬಲವಾದ ಆಸೆಯುಳ್ಳವನಾದನು.

ಸೆಲ್ಯೂಕಸ್

ಚಂದ್ರಗುಪ್ತನು ಮಗಧರಾಜ್ಯಕ್ಕೆ ದೊರೆಯಾದಮೇಲೆ, ಅಲೆಕ್ಸಾಂಡರನಕಡೆ ಅಧಿಕಾರಿಯಾದ ಸೆಲ್ಯೂಕಸ್ ಎಂಬ ಯವನನು ಹಿಂದೂಸ್ಥಾನದಲ್ಲಿ ಗ್ರೀಕರ ಕೈಬಿಟ್ಟುಹೋಗಿದ್ದ ರಾಜ್ಯಗಳನ್ನು ಪುನಃ ಗೆಲ್ಲಬೇಕೆಂದು ಕ್ರಿ.ಪೂ. 321ರಲ್ಲಿ ಹಿಂದೂಸ್ಥಾನದ ಮೇಲೆ ದಂಡೆತ್ತಿಬಂದು ಚಂದ್ರಗುಪ್ತನನ್ನು ಇದಿರಿಸಿದನು. ಆತನಿಗೆ ಯುದ್ಧದಲ್ಲಿ ಸೋಲಾದುದರಿಂದ ಅವನು ಪಂಜಾಬ್, ಸಿಂಧೂದೇಶಗಳನ್ನೂ, ಆಫ್ಘಾನಿಸ್ಥಾನದ ಪೂರ್ವಭಾಗವನ್ನೂ, ಚಂದ್ರಗುಪ್ತನಿಗೆ ಒಪ್ಪಿಸಿದನು. ಅಲ್ಲದೆ ಹಿಂದೂ ದೊರೆಯ ಶೌರ್ಯಕ್ಕೆ ಮೆಚ್ಚಿ ತನ್ನ ಮಗಳನ್ನು ಅವನಿಗೆ ಮದುವೆಮಾಡಿಕೊಟ್ಟು ಅವನ ಸಭೆಯಲ್ಲಿ ಮೆಗಾಸ್ತನೀಸ್ ಎಂಬ ತನ್ನಕಡೆಯ ರಾಯಭಾರಿಯನ್ನಿಟ್ಟನು.

ಚಂದ್ರಗುಪ್ತನ ರಾಜ್ಯ*

ತನಗುಂಟಾದ ಜಯದಿಂದ ಧೈರ್ಯ ಹೆಚ್ಚಿ, ಚಂದ್ರಗುಪ್ತನು ಹಿಂದೂಸ್ಥಾನವನ್ನೆಲ್ಲಾ ತನ್ನ ವಶಮಾಡಿಕೊಳ್ಳಬೇಕೆಂದು ಯತ್ನಿಸಿ ಜಯಶೀಲನಾದನು. ಚಂದ್ರಗುಪ್ತನ ರಾಜ್ಯವು ಆಫ್ಘಾನಿಸ್ಥಾನದಿಂದ ಗಂಗಾನದಿಯ ಮುಖದವರೆಗೂ, ಹಿಮಾಲಯದಿಂದ ವಿಂಧ್ಯಪರ್ವತದವರೆಗೂ

*ಚಂದ್ರಗುಪ್ತನು ಜೈನದೀಕ್ಷೆಯನ್ನವಲಂಬಿಸಿ, ರಾಜ್ಯವನ್ನು ಬಿಟ್ಟು ಮೈಸೂರು ದೇಶಕ್ಕೆ ಸೇರಿದ ಶ್ರವಣಬೆಳಗುಳದಲ್ಲಿ ಸತ್ತನೆಂದು ಜೈನರು ಹೇಳುತ್ತಾರೆ.

ವ್ಯಾಪಿಸಿತು. ಇದುವರೆಗೂ ಹಿಂದೂದೇಶದಲ್ಲಿ ಇಷ್ಟು ವಿಸ್ತಾರವಾದ ರಾಜ್ಯವನ್ನು ಕಟ್ಟಿದ ದೊರೆಗಳೇ ಇರಲಿಲ್ಲ. ಚಂದ್ರಗುಪ್ತನು ಕ್ರಿ. ಪೂ. 297ರಲ್ಲಿ ಕಾಲವಾದನು.

ಚಂದ್ರಗುಪ್ತನು ತನ್ನ ಬ್ರಾಹ್ಮಣ ಮಂತ್ರಿಯಾದ ಚಾಣಕ್ಯನ ಸಹಾಯದಿಂದ ತನ್ನ ರಾಜ್ಯವನ್ನು ಬಲು ಬಿಗಿಯಿಂದಲೂ, ದರ್ಪದಿಂದಲೂ ಆಳಿದನು. ಮೆಗಾಸ್ತನೀಸ್ ರಾಯಭಾರಿಯು ಈತನ ಕಾಲದ ರಾಜ್ಯದ ಸ್ಥಿತಿಯನ್ನು ಕುರಿತು ಬರೆದಿಟ್ಟಿರುವನು. ಚಂದ್ರಗುಪ್ತನ ತರುವಾಯ ದೊರೆಯಾದ ಇವನ ಮಗ ಬಿಂದುಸಾರ (ಬಿಂಬಸಾರ) ನ ವಿಷಯವು ಹೆಚ್ಚಾಗಿ ತಿಳಿದಿಲ್ಲ. ಬಿಂದು (ಬಿಂಬ) ಸಾರನು ಸತ್ತಮೇಲೆ ಅವನ ಮಗ ಅಶೋಕವರ್ಧನನು ಚಕ್ರವರ್ತಿಯಾದನು.

ಅಶೋಕ (272–232).—ತನ್ನ ತಂದೆಯು ಚಕ್ರವರ್ತಿಯಾಗಿದ್ದಾಗ ಅಶೋಕನು ವಾಯವ್ಯ ಪ್ರಾಂತಗಳ ಮಾಂಡಲಿಕ (Viceroy) ನಾಗಿದ್ದನು. ದೊರೆಯು ಸತ್ತ ಮೂರು ವರ್ಷದಮೇಲೆ ಇವನಿಗೆ ಪಟ್ಟಾಭಿಷೇಕವಾಯಿತು. ದೊರೆಯಾದ ಕೂಡಲೆ ಇದುವರೆಗೂ ಮಗಧ ರಾಜರ ಕೈಸೇರದೆ ಇದ್ದ ಕಳಿಂಗರಾಜ್ಯದ (ಈಗಿನ ಒರಿಸ್ಸ) ಮೇಲೆ ಅಶೋಕನು (ಕ್ರಿ. ಪೂ. 261ರಲ್ಲಿ) ದಂಡೆತ್ತಿ ಹೋದನು. ಕಳಿಂಗರನ್ನು ಸೋಲಿಸಿ, ಆ ರಾಜ್ಯವನ್ನು ಮಗಧಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ಆದರೆ ಮೂರುವರ್ಷಗಳ ಕಾಲ ನಡೆದ ಆ ಘೋರಯುದ್ಧದಲ್ಲಿ ಲಕ್ಷಾಂತರ ಜನರು ಮಡಿದರು ; ಅನೇಕರು ಸೆರೆಸಿಕ್ಕಿದರು ; ಸಂಸಾರಗಳೇ ಹಾಳಾದುವು. ಇದನ್ನೆಲ್ಲಾ ಕಣ್ಣಲ್ಲಿ ನೋಡಿದ ಅಶೋಕನಿಗೆ ಮನಸ್ಸು ಕರಗಿಹೋಗಿ ಅವನು ವೈರಾಗ್ಯದಿಂದ ಬೌದ್ಧಮತವನ್ನವಲಂಬಿಸಿ "ಪ್ರಿಯದರ್ಶಿ" ಎಂಬ ಹೆಸರಿನ್ನಿಟ್ಟುಕೊಂಡು ಇನ್ನು ಮುಂದೆ ಯುದ್ಧಮಾಡುವುದಿಲ್ಲವೆಂದು ಪ್ರತಿಜ್ಞೆಮಾಡಿದನು. ಇವನಷ್ಟು ಧರ್ಮಮಾರ್ಗದಲ್ಲಿ ರಾಜ್ಯವಾಳಿದ ದೊರೆಗಳೇ ಇಲ್ಲವೆನ್ನಬಹುದು.

ಅಶೋಕನ ಶಾಸನಗಳು ಮತ್ತು ಧರ್ಮಬೋಧೆ—ಅಶೋಕನಿಗೆ ಬೌದ್ಧಮತದಲ್ಲಿ ವಿಶೇಷ ನಂಬಿಕೆಯುಂಟಾಗಿ, ಅದನ್ನು ಹರಡಲು ಅವನು ಅನೇಕ ಪ್ರಯತ್ನಗಳನ್ನು ಮಾಡಿದನು. ಎಲ್ಲರಿಗೂ ತಿಳಿಯುವಂತೆ ಬೌದ್ಧ ಮತದ ಧರ್ಮತತ್ವಗಳನ್ನು ಬಂಡೆಗಳ ಮೇಲೂ, ಕಲ್ಲುಕಂಬಗಳಮೇಲೂ

ಪ್ರಾಕೃತಭಾಷೆಯಲ್ಲಿ ಕೆತ್ತಿಸಿ, ಅವುಗಳನ್ನು ಹಿಂದೂದೇಶದ ಅನೇಕ ಭಾಗಗಳಲ್ಲಿ ನೆಡಿಸಿದನು. ತನ್ನ ದೇಶಗಳಲ್ಲೂ ಪರರಾಯರ ರಾಜ್ಯಗಳಲ್ಲೂ, ಧರ್ಮಭೋಧೆಯನ್ನು ಮಾಡುವುದಕ್ಕಾಗಿ ಅನೇಕ ಬೌದ್ಧಸನ್ಯಾಸಿಗಳನ್ನು ಕಳುಹಿಸಿದನು. ಹೀಗೆ ಬೋಧಿಸುತ್ತಾ ಹೋದವರಲ್ಲಿ ಅವನ ತಮ್ಮನೂ, ಅವನ ಮಗಳೂ, ಅನೇಕಮಂದಿ ನೆಂಟರೂ ಇದ್ದರು. ಇವರ ಬೋಧನೆಯಿಂದ ಬೌದ್ಧಮತವು ಹಿಂದೂದೇಶದಲ್ಲೆಲ್ಲಾ ಹರಡಿದ್ದಲ್ಲದೆ ಸಿಂಹಳದ್ವೀಪ, ಸಿರಿಯ, ಈಜಿಪ್ಟ್. ಗ್ರೀಸ್ ಮುಂತಾದ ರಾಜ್ಯಗಳಿಗೂ ಹಬ್ಬಿತು. ಮತಬೋಧೆಗಾಗಿ ಕ್ರೈಸ್ತಪಾದ್ರಿಗಳು ಹೊರಟುದು ಚರಿತ್ರೆಯಲ್ಲಿ ಹೊಸದೇನೂ ಅಲ್ಲ. ಯೇಸುಕ್ರಿಸ್ತನು ಹುಟ್ಟುವುದಕ್ಕೆ ಎರಡು ಮೂರು ಶತಮಾನಗಳ ಹಿಂದೆಯೇ ಈ ಪದ್ಧತಿಯು ನಮ್ಮ ದೇಶದಲ್ಲೇ ವಾಡಿಕೆಯಲ್ಲಿತ್ತೆಂಬುವುದು ಇದರಿಂದ ಗೊತ್ತಾಗುವುದು.

ಬರಿಯ ಬೋಧನೆಯೇ ಸಾಲದೆಂದೂ ತನ್ನ ನಡವಳಿಕೆಯನ್ನು ನೋಡಿ ಇತರರು ಅನುಸರಿಸಲೆಂದೂ, ಅಶೋಕನು ಮಾಂಸಾಹಾರವನ್ನೂ, ಬೇಟೆಯಾಡುವುದನ್ನೂ ತ್ಯಜಿಸಿ, ತಾನೂ ಸನ್ಯಾಸವನ್ನು ಸ್ವೀಕರಿಸಿ ತೀರ್ಥಯಾತ್ರೆಗಳಿಗಾಗಿ ಹೊರಟನು. ಬೌದ್ಧಸನ್ಯಾಸಿಗಳ ವಾಸಕ್ಕಾಗಿ ಅನೇಕ ಸ್ತೂಪಗಳನ್ನೂ "ವಿಹಾರ" ಗಳನ್ನೂ ಕಟ್ಟಿಸಿದನು. ಕ್ರಿ. ಪೂ. 244ರಲ್ಲಿ ಬೌದ್ಧಸನ್ಯಾಸಿಗಳ ಮೂರನೆಯ ಸಂಘವೊಂದನ್ನು ಪಾಟಲೀಪುತ್ರದಲ್ಲಿ ಏರ್ಪಡಿಸಿದನು. ಈ ಸಭೆಗೆ ದೇಶದೇಶಗಳ ಭಿಕ್ಷುಬೌದ್ಧಸಸ್ಯಾಸಿಗಳು ಬಂದಿದ್ದರಂತೆ. ಅಶೋಕಚಕ್ರವರ್ತಿಯ ಸಹಾಯದಿಂದ ಅಭಿವೃದ್ಧಿಯಾದ ಭೌದ್ಧಮತವು ದಿನದಿನಕ್ಕೆ ಪ್ರಬಲವಾಗುತ್ತ ಬಂದಿತು. ಅಶೋಕನಿಗೆ ಬೌದ್ಧಮತದಲ್ಲಿ ತುಂಬಾ ಆಸಕ್ತಿಯಿದ್ದರೂ, ಇತರ ಮತದವರಿಗೆ ಯಾವ ಹಿಂಸೆಯನ್ನೂ ಕೊಡುತ್ತಿರಲಿಲ್ಲ. ಬೇಕಾದವರು ಬೇಕಾದ ಮತವನ್ನು ಅವಲಂಬಿಸಬಹುದೆಂದು ಸಾರಿಸಿದನು; ಇಷ್ಟೇ ಅಲ್ಲದೆ ಬ್ರಾಹ್ಮಣರಿಗೂ, ಜೈನರಿಗೂ ಬೇಕಾದಷ್ಟು ಸಹಾಯಮಾಡುತ್ತಿದ್ದನು. ಈಗಲೂ ಇತರ ಮತಸ್ಥರ ಸಂಖ್ಯೆಗಿಂತಲೂ ಪ್ರಪಂಚದಲ್ಲಿ ಬೌದ್ಧಮತಾವಲಂಬಿಗಳ ಸಂಖ್ಯೆಯೇ ಹೆಚ್ಚಾಗಿದೆ.

ಅಶೋಕನ ರಾಜ್ಯಭಾರ--ಈಗಿನ ಆಫ್ಘಾನಿಸ್ಥಾನ, ಬೆಲೂಚಿಸ್ಥಾನಗಳನ್ನು ಸೇರಿಸಿಕೊಂಡು ಮೈಸೂರು ದೇಶದ ಉತ್ತರಭಾಗದವರೆಗೆ

ಇರುವ ಹಿಂದೂದೇಶವಷ್ಟೂ ಅಶೋಕನ ಚಕ್ರಾಧಿಪತ್ಯಕ್ಕೆ ಸೇರಿತ್ತು. ಇಷ್ಟು ದೊಡ್ಡ ರಾಜ್ಯವನ್ನು ಐದು ಪ್ರಾಂತಗಳಾಗಿ ವಿಭಾಗಿಸಿ, ಅವುಗಳಲ್ಲಿ ನಾಲ್ಕಕ್ಕೆ ಒಬ್ಬೊಬ್ಬ ಮಾಂಡಲಿಕನನ್ನು ನೇಮಿಸಿ, ಉಳಿದ ಪ್ರಾಂತವನ್ನು ತಾನೇ ಆಳುತ್ತಿದ್ದನು. ಮಾಂಡಲಿಕರೆಲ್ಲರೂ ಚಕ್ರವರ್ತಿಗೆ ಅಧೀನರಾಗಿದ್ದರು. ಧರ್ಮಬೋಧೆಯಲ್ಲಿ ಮಾತ್ರವಲ್ಲದೆ ದುಷ್ಟನಿಗ್ರಹಶಿಷ್ಟಪರಿಪಾಲನೆಗಳಲ್ಲೂ ಅಶೋಕನು ದಕ್ಷನಾಗಿದ್ದನು. ಪರರಾಜರು ಆತನನ್ನು ಸನ್ಮಾನಿಸುತ್ತಿದ್ದರು. ತನ್ನ ರಾಜ್ಯದಲ್ಲಿ ಅನೃತ, ಅನ್ಯಾಯ, ಅಧರ್ಮ ಇವುಗಳಿಗೆ ಅವಕಾಶವಿಲ್ಲದಂತೆ ಅಶೋಕನು ಬಹು ದರ್ಪದಿಂದ ಆಳಿದನು. ಪ್ರಜಾಕ್ಷೇಮದಲ್ಲಿ ಇವನಷ್ಟು ಆಸಕ್ತರಾಗಿದ್ದ ದೊರೆಗಳೇ ಅಪೂರ್ವ. ಪ್ರಯಾಣಿಕರ ಅನುಕೂಲ್ಯಕ್ಕಾಗಿ ರಸ್ತೆಗಳನ್ನು ಮಾಡಿಸಿ, ಸಾಲುಮರಗಳನ್ನು ಹಾಕಿಸಿದನು. ಅಲ್ಲಲ್ಲಿ ಬಾವಿಗಳನ್ನು ತೋಡಿಸಿದನು. ಪ್ರಯಾಣಿಕರು ತಂಗುವುದಕ್ಕೆ ಅಲ್ಲಲ್ಲಿ ಧರ್ಮಸತ್ರಗಳನ್ನು ಕಟ್ಟಿದನು. ರೋಗದಿಂದ ನರಳುವ ಮನುಷ್ಯರನ್ನೂ, ಪಶುಗಳನ್ನೂ ಉಪಚರಿಸಲು ವೈದ್ಯಶಾಲೆಗಳನ್ನಿಡಿಸಿದನು.

ಅಶೋಕನು ಕ್ರಿ.ಪೂ. 232ರಲ್ಲಿ ಕಾಲವಾದನು. "ರಾಜನಿಗೆ ತಕ್ಕ ವಿವೇಕವೂ, ಸನ್ಯಾಸಿಗೆ ತಕ್ಕ ವೈರಾಗ್ಯವೂ" ಈತನಲ್ಲಿ ಸಮನಾಗಿ ಕೂಡಿದ್ದುವು. ಭರತಖಂಡವನ್ನು ಆಳಿ, ಚರಿತ್ರೆಯಲ್ಲಿ ಹೆಸರುಗೊಂಡ ಚಕ್ರವರ್ತಿಗಳಲ್ಲಿ ಅಶೋಕನೇ ಅತ್ಯಂತ ಧರ್ಮಿಷ್ಠನು. ಚರಿತ್ರಕಾರರು ಈತನನ್ನು ಮೊಗಲರ ಚಕ್ರವರ್ತಿಯಾದ ಅಕ್ಬರ್, ಬ್ರಿಟಿಷ್ ಸಾರ್ವಭೌಮಳಾಗಿದ್ದ ವಿಕ್ಟೋರಿಯಾ ರಾಣಿ ಇವರೊಡನೆ ಹೋಲಿಸುತ್ತಾರೆ.

ಮೌರ್ಯರ ಕಾಲದಲ್ಲಿ (ಕ್ರಿ. ಪೂ. 321–232) ಜನರ ಸ್ಥಿತಿ

ಈ ಕಾಲದ ಜನರ ಸ್ಥಿತಿಗತಿಗಳನ್ನು ತಿಳಿಯುವುದಕ್ಕೆ ಚಂದ್ರಗುಪ್ತನ ಆಸ್ಥಾನದಲ್ಲಿದ್ದ ಮೆಗಾಸ್ತನೀಸ್ ರಾಯಭಾರಿಯ ಬರೆವಣಿಗೆಯೂ, ಅಶೋಕನ ಶಾಸನಗಳೂ ಆಧಾರಗಳಾಗಿವೆ. ಚಂದ್ರಗುಪ್ತನ ರಾಜ್ಯವು ವಿಂಧ್ಯಪರ್ವತದಿಂದ ಹಿಮಾಚಲದವರೆಗೂ, ಬಂಗಾಳದಿಂದ ಹಿಂದೂಕುಷ್ ಪರ್ವತದವರೆಗೂ ಹಬ್ಬಿತ್ತು. ಅವನ ಮೊಮ್ಮಗನ ಕಾಲದಲ್ಲಿ ಇನ್ನೂ ವಿಸ್ತಾರವಾಯಿತು. ಚಂದ್ರಗುಪ್ತನೂ, ಅಶೋಕನೂ ತಮ್ಮ ವಿಸ್ತಾರವಾದ ರಾಜ್ಯ

ಗಳನ್ನು ಬಹು ದರ್ಪದಿಂದಲೂ, ವಿಚಕ್ಷಣೆಯಿಂದಲೂ ಆಳುತ್ತಿದ್ದರು. ಇವರುಗಳ ಕೈಕೆಳಗೆ ಮಾಂಡಲಿಕರೆಂಬ ಪ್ರಾಂತಾಧಿಕಾರಿಗಳಿದ್ದರು. ಪ್ರಾಂತಾಧಿಕಾರಿಗಳ ಕೈಕೆಳಗೆ ಸಾವಿರಾರು ಅಧಿಕಾರಿಗಳಿಂದ ಕೂಡಿದ ಅನೇಕ ಇಲಾಖೆಗಳಿದ್ದುವು. ಜನರ ಕುಂದುಕೊರತೆಗಳನ್ನು ತಿಳಿದು ಅವುಗಳನ್ನು ಸರಿಪಡಿಸಬೇಕೆಂಬುದೇ ಮೌರ್ಯದೊರೆಗಳ ಆಸೆಯಾಗಿತ್ತು. ಪ್ರಾಂತಾಧಿಕಾರಿಗಳ ಮತ್ತು ಅವರ ಕೈಕೆಳಗಿನ ಅಧಿಕಾರಿಗಳ ಅಕ್ರಮಗಳನ್ನು ದೊರೆಗೆ ತಿಳಿಸಲು ಗುಪ್ತಚಾರರೂ, ಪ್ರತಿವೇದಕರೂ (News writers) ಇರುತ್ತಿದ್ದರು.

ದೊರೆಯು ಅತಿ ವೈಭವದಿಂದ ಆಳುತ್ತಿದ್ದನು. ಈತನ ಬೆಂಗಾವಲಿಗೆ ಅಯುಧಪಾಣಿಗಳಾದ ಅಂಗರಕ್ಷಕರಿರುತ್ತಿದ್ದರು. ಚಂದ್ರಗುಪ್ತನ ರಾಜ್ಯಭಾರದಲ್ಲಿ ಜನರ ಪ್ರತಿದಿನದ ನಡವಳಿಯೂ ದೊರೆಗೆ ತಿಳಿಯುತ್ತಿತ್ತು. ಚಂದ್ರಗುಪ್ತನ ರಾಜ್ಯಭಾರಕ್ಕೆ ಸೈನ್ಯವೇ ದೊಡ್ಡ ಬೆಂಬಲವಾಗಿತ್ತು. ಮಗಧರಾಜ್ಯದಲ್ಲಿ ಆರುಲಕ್ಷ ಕಾಲುಬಲವೂ, ಮೂವತ್ತುಸಾವಿರ ಕುದುರೆಯೂ, ಒಂಭತ್ತುಸಾವಿರ ಆನೆಗಳೂ ಇದ್ದುವು. ಸೈನ್ಯವನ್ನು ತರಬೇತು ಮಾಡುವುದಕ್ಕೂ, ಅದಕ್ಕೆ ಬೇಕಾದ ಆಹಾರಪದಾರ್ಥಗಳನ್ನು ಒದಗಿಸುವುದಕ್ಕೂ ಬೇರೆಬೇರೆ ಅಧಿಕಾರಿಗಳಿರುತ್ತಿದ್ದರು. ಭೂಸೈನ್ಯದ ಇಲಾಖೆಯನ್ನೂ, ನೌಕಾಸೇನೆಯ ವಿಚಾರಣೆಯನ್ನೂ ನೋಡಿಕೊಳ್ಳುವುದಕ್ಕಾಗಿಯೇ 30 ಜನಗಳ ಮೇಲ್ವಿಚಾರಣೆಗೆ ಒಳಪಟ್ಟ ಒಂದು ಸಭೆಯು ಇದ್ದಿತು.

ಚಕ್ರಾಧಿಪತ್ಯದ ಒಳ ಆಡಳಿತಗಳನ್ನು ನೋಡಿಕೊಳ್ಳುವುದಕ್ಕೆ ಆರು ಸಭೆಗಳಿದ್ದುವು. ಈ ಸಭೆಗಳು ಕೈಗಾರಿಕೆ, ವ್ಯಾಪಾರ, ಸುಂಕ, ಪರದೇಶೀಯರ ಮೇಲ್ವಿಚಾರಣೆ, ಜನನಮರಣ ಇವೇ ಮುಂತಾದ ಕೆಲಸಗಳನ್ನು ನೋಡಿಕೊಳ್ಳುತ್ತಲಿದ್ದುವು. ಈ ಬಗೆಯಾದ ಪ್ರತಿಮಂಡಲಿಯಲ್ಲಿಯೂ 30 ಮಂದಿ ಸಾಮಾಜಿಕರಿದ್ದರು. ನ್ಯಾಯವಿಚಾರಣೆಗಾಗಿ ಅಲ್ಲಲ್ಲಿ ನ್ಯಾಯಸ್ಥಾನಗಳಿದ್ದುವು. ಜನರು ಬಲುಮಟ್ಟಿಗೆ ಸಾತ್ವಿಕರಾಗಿದ್ದರು. ಅಪರಾಧಗಳೇ ಕಡಿಮೆ ; ಅದರೆ ತಪ್ಪು ಮಾಡಿದವರನ್ನು ಮಾತ್ರ ಅತಿ ಕ್ರೂರವಾಗಿ ಶಿಕ್ಷಿಸುತ್ತಿದ್ದರು. ಸುಳ್ಳು ಸಾಕ್ಷ್ಯ ಹೇಳುವುದು, ಸರ್ಕಾರದ ತೆರಿಗೆಗಳನ್ನು ಕೊಡದಿರುವುದು, ಇವುಗಳಿಗೆ ಮರಣದಂಡನೆಯನ್ನು ವಿಧಿಸುತಿ

ದ್ದರು. ಅಶೋಕನ ಕಾಲದಲ್ಲಿ ಅಧರ್ಮವೂ, ಪ್ರಾಣಿಹಿಂಸೆಯೂ ಹೇಯವಾದ ಅಪರಾಧಗಳಾಗಿದ್ದುವು.

ಮೆಗಾಸ್ತನೀಸನು ಮೌರ್ಯರಾಜ್ಯದಲ್ಲಿದ್ದಾಗ ಜಾತಿಕಟ್ಟುಗಳು ಬಲವಾಗಿದ್ದುವು. ಬೌದ್ಧ, ಬ್ರಾಹ್ಮಣಮತಗಳೆರಡೂ ಪರಸ್ಪರ ವಿರೋಧವಿಲ್ಲದಂತೆ ಏಳಿಗೆಯನ್ನು ಪಡೆಯುತಿದ್ದುವು. ಜನರು ಬಗೆಬಗೆಯಾದ ಕಸಬುಗಳನ್ನು ಅವಲಂಬಿಸುತ್ತಿದ್ದರು. ರಾಜ್ಯವೆಲ್ಲವೂ ಸುಭಿಕ್ಷವಾಗಿತ್ತು. ಕ್ಷಾಮದ ಹೆಸರೇ ಇರಲಿಲ್ಲ. ಕಳ್ಳಕಾಕರ ಸುದ್ದಿಯೇ ಇಲ್ಲ. ರಾಜಾದಾಯವು ಬಲು ಮಟ್ಟಿಗೆ ಭೂಮಿಯ ಕಂದಾಯದಿಂದ ಬರುತ್ತಿತ್ತು. ಭೂಮಿಯ ಹುಟ್ಟುವಳಿಯಲ್ಲಿ ನಾಲ್ಕರಲ್ಲಿ ಒಂದು ಪಾಲನ್ನು ಸರ್ಕಾರಕ್ಕೆ ಕೊಡಬೇಕಾಗಿತ್ತು. ಇದಕ್ಕೆ ಪ್ರತಿಯಾಗಿ ಸರ್ಕಾರವು ನೀರಾವರಿಯ ಕೆಲಸಗಳನ್ನೂ, ವ್ಯಾಪಾರ, ಮಾರ್ಗ, ಸೇತುವೆ, ಸತ್ರಗಳು ಮೊದಲಾದ ಸೌಕರ್ಯಗಳನ್ನೂ ಒದಗಿಸಿ ಕೊಡುತ್ತಿತ್ತು.

ಚಂದ್ರಗುಪ್ತನ ರಾಜ್ಯಭಾರದಲ್ಲಿ ಪಟ್ಟಣ ಮತ್ತು ನಗರಗಳ ಅಭಿವೃದ್ಧಿಗೆ ಮಾತ್ರ ಹೆಚ್ಚು ಗಮನಕೊಟ್ಟು ಹಳ್ಳಿಗಳನ್ನು ದೂರಮಾಡಿರಲಿಲ್ಲ. ಗ್ರಾಮಗಳೂ, ಅವುಗಳ ಸುವ್ಯವಸ್ಥೆಗಳೂ ರಾಜನ ಕೆಲಸವಾಗಿದ್ದುವು. ಗ್ರಾಮಾಭಿವೃದ್ಧಿ, ಗ್ರಾಮನೈರ್ಮಲ್ಯ, ಇವುಗಳೆಲ್ಲವನ್ನೂ ಗ್ರಾಮಸಭೆಯವರೇ ನೋಡುತ್ತಿದ್ದರು.

ಚಕ್ರವರ್ತಿಯಾದ ಚಂದ್ರಗುಪ್ತನು ವಿದ್ವಾಂಸರಿಗೆ ತುಂಬಾ ಆಸರೆಯನ್ನು ಕೊಡುತಿದ್ದನು. ಪ್ರಜೆಗಳ ಕಷ್ಟಸುಖಗಳನ್ನು ತಾನೇ ಕೇಳುವುದರಲ್ಲಿ ಆತನಿಗೆ ಪ್ರೀತಿ ಹೆಚ್ಚು. ಆತನು ಪ್ರತಿದಿನವೂ ಒಂದು ಸಲ ರಾಜಾಸ್ಥಾನಕ್ಕೆ ಬಂದು ಸಿಂಹಾಸನದಲ್ಲಿ ಕುಳಿತು ಪ್ರಜೆಗಳ ಮನವಿಗಳನ್ನು ಕೇಳುತಿದ್ದನು.

ಪರದೇಶೀಯನೂ, ನಿಷ್ಪಕ್ಷಪಾತಿಯೂ ಆದ ಯವನರಾಯಭಾರಿಯು ಹೇಳುವುದೆಲ್ಲವನ್ನೂ ನೋಡಿದರೆ ಹಿಂದೂಸ್ಥಾನವು ಹಿಂದಿನಕಾಲದಲ್ಲಿಯೇ ಬಹಳ ನಾಗರಿಕತೆಯನ್ನು ಪಡೆದಿತ್ತೆಂದು ತಿಳಿಯಬರುವುದು.

ಮಗಧರಾಜ್ಯವು ಖಿಲವಾದುದು (ಕ್ರಿ. ಪೂ. 232- ಕ್ರಿ. ಶ. 300)

ಅಶೋಕನ ತರುವಾಯ ಬಂದ ಅರಸರು ಅತಿ ವಿಸ್ತಾರವಾದ ಮೌರ್ಯಚಕ್ರಾಧಿಪತ್ಯವನ್ನು ಆಳುವಷ್ಟು ಸಮರ್ಥರಾಗಿರಲಿಲ್ಲ. ಚಕ್ರಾಧಿ

ಪತ್ಯದ ಮೂಲೆ ಮೂಡುಕುಗಳಲ್ಲಿ ನಡೆಯತಕ್ಕ ಕೆಲಸಕಾರ್ಯಗಳನ್ನು ದೊರೆಯೇ ನೋಡಲು ಮೌರ್ಯರ ರಾಜಧಾನಿಯು ಮಧ್ಯರಾಷ್ಟ್ರದಲ್ಲಿರಲಿಲ್ಲ. ಬ್ರಾಹ್ಮಣಮತವು ತಲೆಯೆತ್ತಿ ಬೌದ್ಧಮತವು ಕ್ಷೀಣವಾಯಿತು. ಇವುಗಳೆಲ್ಲವೂ ಮಗಧರಾಜ್ಯದ ಕ್ಷೀಣದೆಶೆಗೆ ಕಾರಣಗಳಾದುವು.

ಅಶೋಕನಾದಮೇಲೆ ಅವನ ಸಂತತಿಯ ಐದು ಜನ ದೊರೆಗಳು ಮಗಧರಾಜ್ಯವನ್ನಾಳಿದರು. ಅನಂತರ ಈ ರಾಜ್ಯವು ಕೆಲವು ವರ್ಷಗಳು ಸಂಗವಂಶದವರಿಗೂ, ಆಮೇಲೆ ಕಾಣ್ವಸಂತತಿಯವರಿಗೂ ಸೇರಿದ್ದು ಕೊನೆಗೆ ಕ್ರಿ. ಪೂ. 27ರಲ್ಲಿ ದಕ್ಷಿಣದೇಶದಲ್ಲಿ ಪ್ರಬಲರಾಗಿದ್ದ ಆಂಧ್ರರಾಜರಿಗೆ ಸೇರಿತು.

ಆಂಧ್ರಸಂತತಿ (ಕ್ರಿ. ಪೂ. 27–ಕ್ರಿ. ಶ. 226)

ಅಶೋಕನ ಕಾಲದಲ್ಲಿ ಮಗಧರಾಜ್ಯಕ್ಕೆ ಅಧೀನರಾಗಿದ್ದ ಆಂಧ್ರರು ದಕ್ಷಿಣದೇಶದ ಈಗಿನ ತೆಲುಗುರಾಜ್ಯಗಳಲ್ಲಿ ಆಳುತ್ತಿದ್ದರು. ಅಶೋಕನ ಮರಣಾನಂತರ ಮಗಧರಾಜ್ಯದ ಬಿಗಿ ತಪ್ಪಿದಮೇಲೆ ಆಂಧ್ರರು ಪಶ್ಚಿಮ ಘಟ್ಟದ ರಾಜ್ಯಗಳನ್ನು ಜಯಿಸಿ ತಮ್ಮ ರಾಜ್ಯವನ್ನು ನಾಸಿಕ್ ಪಟ್ಟಣದ ವರೆಗೂ ವಿಸ್ತರಿಸಿದರು. ದ್ರಾವಿಡರು ಉತ್ತರದಲ್ಲಿ ರಾಜ್ಯ ಕಟ್ಟಿದುದಕ್ಕೆ ಇದೇ ಮೊದಲು. ಆಂಧ್ರರ ಸಾಮ್ರಾಜ್ಯವು ಸುಮಾರು 250 ವರ್ಷಗಳು ನಡೆದುಬಂದು, ತರುವಾಯ ರಾಜ್ಯವೆಲ್ಲಾ ಅವರ ಕೈಬಿಟ್ಟು ಒಡೆದು ಹೋಯಿತು.

ಹೀಗೆ ಮಗಧರಾಜ್ಯವು ಖಿಲವಾಗುತ್ತ ಬಂದಮೇಲೆ ಹೊರದೇಶದವರು ಪುನಃ ವಾಯವ್ಯದ ಮಾರ್ಗವಾಗಿ ಬರಲಾರಂಭಿಸಿದರು. ಶಕರೆಂಬ ಜನರು ಮಧ್ಯ ಏಷ್ಯದಿಂದ ಬಂದು ಪಂಜಾಬ್, ಸಿಂಧು, ಗುಜರಾತ್, ಮಾಳವ ಮೊದಲಾದ ರಾಜ್ಯಗಳನ್ನು ತಮ್ಮ ವಶಮಾಡಿಕೊಂಡರು. ಮಧ್ಯ ಏಷ್ಯದಿಂದಲೇ ಹೊರಟ "ಯೂಚಿ" ಎಂಬ ಮತ್ತೊಂದು ಬಗೆಯ ಜನರು ಹಿಂದೂದೇಶದಮೇಲೆ ನುಗ್ಗಿ, ಶಕರನ್ನು ಓಡಿಸಿ ವಾಯವ್ಯದಲ್ಲಿ ನೆಲಸಿದರು. ಈ ಯೂಚಿ ಜನಗಳಲ್ಲಿ ಕುಶಾನರೆಂಬುವರು ತುಂಬಾ ಹೆಸರಾದವರು. ಕುಶಾನರಾಜರಲ್ಲಿ ಪ್ರಸಿದ್ಧನಾದ ಕಾನಿಷ್ಕನು ಕ್ರಿ. ಶ. 125ರಲ್ಲಿ ದೊರೆಯಾದನು. ಇವನ ರಾಜ್ಯವು ಬಿಹಾರಿನಿಂದ ಪಾರ್ಶೀಸ್ಥಾನದವರೆಗೂ ವಿಸ್ತರಿಸಿತ್ತು. ಪಿಷಾವರ್ ಪಟ್ಟಣವು ಇವನ ರಾಜ

ಧಾನಿಯಾಗಿತ್ತು. ಇವನು ಬೌದ್ಧಮತದವನು. ಖಿಲವಾಗುತ್ತಿದ್ದ ಬೌದ್ಧಮತವನ್ನು ಹರಡುವುದಕ್ಕೆ ಕಾನಿಷ್ಕನು ಬಹಳ ಸಾಹಸಪಟ್ಟನು. ಇವನ ಕಾಲದಲ್ಲಿ ಬೌದ್ಧರ ನಾಲ್ಕನೆಯ ಸಭೆಯು ಕಾಶ್ಮೀರದಲ್ಲಿ ಸೇರಿತ್ತು. ಕಾನಿಷ್ಕನ ರಾಜ್ಯದಲ್ಲಿ ಎಲ್ಲೆಲ್ಲಿಯೂ ಬೌದ್ಧದೇವಾಲಯಗಳೂ, ಸ್ತೂಪಗಳೂ ಕಟ್ಟಲ್ಪಟ್ಟುವು. ಈತನು ಕ್ರಿ. ಶ. 153ರಲ್ಲಿ ಕಾಲವಾದನು. ಇವನ ಆಸ್ಥಾನದಲ್ಲಿ ವೈದ್ಯಶಾಸ್ತ್ರನಿಪುಣರಾದ ಚರಕ, ಶುಶ್ರುತ ಮೊದಲಾದ ಪಂಡಿತರಿದ್ದರು. ಕಾನಿಷ್ಕನಾದಮೇಲೆ ಕುಶಾನ ರಾಜ್ಯದಲ್ಲಿ ಬಿಗಿತಪ್ಪಿ ಅಲ್ಲಲ್ಲಿ ಸಣ್ಣಸಣ್ಣ ರಾಜರು ಸ್ವತಂತ್ರರಾಗುತ್ತ ಬಂದರು.

ಕ್ರಿ. ಪೂ. 232:—ಕ್ರಿ. ಶ. 300 ವರೆಗೆ ಜನರ ಸ್ಥಿತಿ

ಮೌರ್ಯರ ಕಾಲವಾದಮೇಲೆ ಬೌದ್ಧಮತಕ್ಕೆ ಪ್ರೋತ್ಸಾಹ ಕಡಿಮೆಯಾಗಿ, ಬ್ರಾಹ್ಮಣಮತವು ತಲೆ ಎತ್ತುವುದಕ್ಕೆ ಮೊದಲಾಯಿತು. ಇದುವರೆಗೂ ವಿಗ್ರಹಾರಾಧನೆಯನ್ನು ಒಪ್ಪದಿದ್ದ ಬೌದ್ಧರು ಬುದ್ಧನನ್ನು ದೇವರೆಂದು ಪೂಜಿಸಲು ಆರಂಭಿಸಿದರು. ಎಲ್ಲೆಲ್ಲಿಯೂ ದೇವಾಲಯಗಳು ನಿರ್ಮಿತವಾದುವು. ಆಂಧ್ರರಾಜರು ಬ್ರಾಹ್ಮಣಮತದಲ್ಲಿ ವಿಶೇಷ ಅಭಿಮಾನವನ್ನಿಟ್ಟಿದ್ದರು. ಬ್ರಾಹ್ಮಣಮತವು ಅಭಿವೃದ್ಧಿಗೆ ಬಂದಹಾಗೆಲ್ಲಾ ಸಂಸ್ಕೃತ ಭಾಷೆಗೆ ಉತ್ತೇಜನವುಂಟಾಯಿತು. ಪಾಣಿನಿಯ ವ್ಯಾಕರಣವೂ, ಮನುಧರ್ಮಶಾಸ್ತ್ರವೂ ಈ ಕಾಲದಲ್ಲಿ ಹುಟ್ಟಿದುವು. ಭಾಸ ಮತ್ತು ಶೂದ್ರಕರೆಂಬ ಕವಿಗಳೂ, ಚರಕ ಶುಶ್ರುತರೆಂಬ ವೈದ್ಯರೂ ಈ ಕಾಲದವರು.

ಈ ಕಾಲದಲ್ಲಿ ವ್ಯಾಪಾರಕ್ಕೆ ಪ್ರಾಶಸ್ತ್ಯವುಂಟಾಯಿತು. ಆಂಧ್ರ, ಚೇರ, ಪಾಂಡ್ಯ ಈ ರಾಜ್ಯಗಳವರು ಅನ್ಯದೇಶಗಳೊಡನೆ ವ್ಯಾಪಾರ ನಡೆಸುತ್ತಿದ್ದರು.

ಅಧ್ಯಾಯ ೭--ಹಿಂದೂಮತದ ಪುನರುತ್ಥಾನಕಾಲ

(ಕ್ರಿ. ಶ. 300-650)

ಗುಪ್ತ ಚಕ್ರಾಧಿಪತ್ಯ

ಒಂದನೆಯ ಚಂದ್ರಗುಪ್ತ (ಕ್ರಿ.ಶ. 320-326) ಮಗಧಸಾಮ್ರಾಜ್ಯವು ಕೊನೆಗಂಡಮೇಲೆ ಆಂಧ್ರರು ಕೆಲವುಕಾಲ ಪ್ರಬಲರಾಗಿ ದೊಡ್ಡ ರಾಜ್ಯವನ್ನು ಕಟ್ಟಿದರೆಂದು ಹಿಂದೆಯೇ ತಿಳಿಸಿದೆ. ಒಂದು ಕಡೆ ಈ ರಾಜ್ಯವೂ, ಮತ್ತೊಂದು ಕಡೆ ಕುಶಾನರಾಜ್ಯವೂ ಒಡೆದುಹೋಗಿ ಉತ್ತರ ಹಿಂದೂಸ್ಥಾನದಲ್ಲಿ ಅನೇಕ ಸಣ್ಣ ಸಣ್ಣ ರಾಜರು ಸ್ವತಂತ್ರರಾದರು. ಇವರುಗಳಲ್ಲಿ ಗುಪ್ತವಂಶಕ್ಕೆ ಸೇರಿದ ಚಂದ್ರಗುಪ್ತನು ತನ್ನ ಹೆಂಡತಿಯ ಕಡೆಯಿಂದ ಪಾಟಲೀಪುತ್ರವನ್ನು ಸಂಪಾದಿಸಿ, ಕ್ರಮೇಣ ಬಿಹಾರ, ಮಿಥಿಲ, ಅಯೋಧ್ಯೆ ಮೊದಲಾದ ರಾಜ್ಯಗಳನ್ನು ಗೆದ್ದು ಒಂದನೆಯ ಚಂದ್ರಗುಪ್ತನೆಂಬ ಹೆಸರಿನಿಂದ ಉತ್ತರ ಹಿಂದೂಸ್ಥಾನದಲ್ಲಿ ಪ್ರಸಿದ್ಧಿ ಪಡೆದನು.

ಸಮುದ್ರಗುಪ್ತ—ಚಂದ್ರಗುಪ್ತನ ಮಗ ಸಮುದ್ರಗುಪ್ತನೂ (ಕ್ರಿ. ಶ. 326-375) ಸಮರ್ಥನಾದ ದೊರೆ; ಪ್ರಖ್ಯಾತನಾದ ಯೋಧನು; ವಿದ್ಯೆಗೂ, ಕುಶಲ ಕಲೆಗಳಿಗೂ ಬಹಳ ಪ್ರೋತ್ಸಾಹ ಕೊಟ್ಟವನು. ಈತನು ಉತ್ತರ ಹಿಂದೂಸ್ಥಾನದ ದೊರೆಗಳೆಲ್ಲರನ್ನೂ, ದಕ್ಷಿಣದೇಶದ ಪಲ್ಲವರಾಜರನ್ನೂ ಗೆದ್ದು ಅಶ್ವಮೇಧಯಾಗವನ್ನು ಮಾಡಿದನು. ಇವನ ರಾಜ್ಯವು ಹಿಮಾಚಲದಿಂದ ನರ್ಮದಾ ನದಿಯವರೆಗೂ, ಚಂಬಲ್‌ನದಿಯಿಂದ ಬಂಗಾಳದವರೆಗೂ ವಿಸ್ತರಿಸಿತ್ತು. ಅನೇಕ ರಾಜರು ಇವನಿಗೆ ಕಪ್ಪಕಾಣಿಕೆಗಳನ್ನು ಕೊಡುತ್ತಿದ್ದರು. ಈತನ ಕಾಲದಲ್ಲಿ ಬ್ರಾಹ್ಮಣ ಮತವು ಪ್ರಬಲವಾಗುತ್ತಾ ಬಂದಿತು. ದೊರೆಗೆ ವಾಕ್ಯರಚನೆಯಲ್ಲಿಯೂ, ಸಂಗೀತದಲ್ಲಿಯೂ ಹೆಚ್ಚಾದ ಪಾಂಡಿತ್ಯವಿತ್ತು.

ಎರಡನೆಯ ಚಂದ್ರಗುಪ್ತ--ಸಮುದ್ರಗುಪ್ತನ ಮಗ ಎರಡನೆಯ ಚಂದ್ರಗುಪ್ತನು (375-413) ಸೌರಾಷ್ಟ್ರ (ಕಾಥೆವಾಡ) ಮಾಳವ, ಗುಜರಾತ್ ಮೊದಲಾದ ಪ್ರಾಂತಗಳನ್ನು ಜಯಿಸಿ ವಿಕ್ರಮಾದಿತ್ಯನೆಂಬ ಬಿರುದನ್ನು ವಹಿಸಿದನು. ಈ ಚಕ್ರವರ್ತಿಯು ಆಳುತ್ತಿದ್ದಾಗ ಫಾಹಿಯಾನ್

ಎಂಬ ಚೀಣಾದೇಶದ ಯಾತ್ರಿಕನು ಬೌದ್ಧಮತ ಗ್ರಂಥಗಳನ್ನು ಶೇಖರಿಸುವುದಕ್ಕಾಗಿ ಕ್ರಿ. ಶ. 406ರಲ್ಲಿ ಹಿಂದೂದೇಶಕ್ಕೆ ಬಂದು ಇಲ್ಲಿನ ಸ್ಥಿತಿಗತಿಗಳನ್ನು ಬರೆದಿಟ್ಟನು. ಬ್ರಾಹ್ಮಣ ಬೌದ್ಧಮತಗಳೆರಡೂ ರೂಢಿಯಲ್ಲಿದ್ದುವು ; ಇವುಗಳಿಗೆ ಪರಸ್ಪರ ದ್ವೇಷವಿರಲಿಲ್ಲ ; ಬೇಕಾದವರು ಬೇಕಾದ ಮತವನ್ನವಲಂಬಿಸಬಹುದು ; ಯಾರೂ ಪ್ರಾಣಿಹಿಂಸೆಯನ್ನಾಗಲಿ, ಮದ್ಯಪಾನವನ್ನಾಗಲಿ ಮಾಡುತ್ತಿರಲಿಲ್ಲ ; ಬಡವರಿಗೆ ಔಷಧವನ್ನೂ, ಆಹಾರವನ್ನೂ ಸರ್ಕಾರದವರೇ ಧರ್ಮಾರ್ಥವಾಗಿ ಕೊಡುತ್ತಿದ್ದರು ; ದೇಶದಲ್ಲಿ ಕಳ್ಳಕಾಕರ ಭೀತಿ ಇರಲಿಲ್ಲ; ಎಂದು ಫಾಹಿಯಾನನ ಬರೆವಣಿಗೆಯಿಂದ ತಿಳಿಯಬರುತ್ತದೆ.

ಗುಪ್ತಸಾಮ್ರಾಜ್ಯದ ಕೊನೆಗಾಲ—ಕ್ರಿ. ಶ. 480

ಚಂದ್ರಗುಪ್ತನ ಮಗ ಕುಮಾರಗುಪ್ತ ಮತ್ತು ಮೊಮ್ಮಗ ಸ್ಕಾಂದಗುಪ್ತ ಇವರ ಆಡಳಿತವು ಕ್ರಿ. ಶ. 480ಕ್ಕೆ ಮುಗಿಯಿತು. ಇವರ ಕಾಲದಲ್ಲಿ ಹೂಣರೆಂಬ ವಿದೇಶೀಯರು ಬಂದು ಗುಪ್ತರಾಜ್ಯವನ್ನು ಹಾಳು ಮಾಡಿದರು. ಇವರ ಹಾವಳಿಯ ದೆಸೆಯಿಂದ ಕ್ರಿ. ಶ. ೬ನೆಯ ಶತಮಾನದ ಅಂತ್ಯದವರೆಗೂ ಹಿಂದೂದೇಶದ ಚರಿತ್ರೆಯು ಸ್ಪಷ್ಟವಾಗಿ ತಿಳಿಯುವಂತಿಲ್ಲ. ಇವರ ಹಾವಳಿಯನ್ನು ತಡೆಯಲಾರದೆ, ಉತ್ತರ ಹಿಂದೂಸ್ಥಾನದ ಸಣ್ಣ ಸಣ್ಣ ರಾಜರೆಲ್ಲರೂ ಮಾಳವದೇಶದ ದೊರೆಯಾಗ ಯಶೋಧರ್ಮನ ಕೈಕೆಳಗೆ ಯುದ್ಧಕ್ಕೆ ಹೊರಟು ಹೂಣರನ್ನು ಕ್ರಿ. ಶ. 528ರಲ್ಲಿ ಕೆರೂರಿನ ಬಳಿಯಲ್ಲಿ ಸಂಪೂರ್ಣವಾಗಿ ಸೋಲಿಸಿದರು. ತನಗುಂಟಾದ ಈ ಜಯಕ್ಕಾಗಿ ಯಶೋಧರ್ಮನು "ವಿಕ್ರಮಾದಿತ್ಯ" ನೆಂಬ ಬಿರುದನ್ನು ವಹಿಸಿದನು.

ಶಕಪುರುಷನಾದ ವಿಕ್ರಮಾದಿತ್ಯ

ಶಕಪುರುಷನೆಂದು ಪ್ರಸಿದ್ಧಿಪಡೆದ ವಿಕ್ರಮಾದಿತ್ಯನು ಎರಡನೆಯ ಚಂದ್ರಗುಪ್ತನೇ ಎಂದು ಕೆಲವರೂ, ಹೂಣರನ್ನು ಕೆರೂರಿನಲ್ಲಿ ಜಯಿಸಿದ ಮಾಳವದ ಯಶೋಧರ್ಮನೇ ಎಂದು ಕೆಲವರೂ, ನಮ್ಮ ಕಾವ್ಯಗಳಲ್ಲಿ ಪ್ರಸಿದ್ಧನಾದ ವಿಕ್ರಮಾದಿತ್ಯನು ಕ್ರಿ. ಪೂ. ೧ನೆಯ ಶತಮಾನದಲ್ಲಿ ಉಜ್ಜಯಿನಿಯಲ್ಲಿ ಆಳಿದನೆಂದು ಕೆಲವರೂ ಅಭಿಪ್ರಾಯಪಟ್ಟಿರುತ್ತಾರೆ. ಇವನು

ಉಜ್ಜಯಿನಿಯಲ್ಲಿ ಆಳುತ್ತಿದ್ದನೆಂಬುದೂ, ಶಕರನ್ನು ಮುಲ್ತಾನಿನ ಸಮೀಪ ದಲ್ಲಿರುವ ಕೆರೂರಿನಲ್ಲಿ ಸೋಲಿಸಿದನೆಂಬುದೂ, ತನಗುಂಟಾದ ಜಯ ಕ್ಕಾಗಿ ಒಂದು ಶಕವನ್ನು ಸ್ಥಾಪಿಸಿದನೆಂಬುದೂ, ನ್ಯಾಯವಿಮರ್ಶೆಯ ಲ್ಲಿಯೂ, ಪರಾಕ್ರಮದಲ್ಲಿಯೂ, ಕವಿಗಳಿಗೆ ಬಹುಮಾನ ಮಾಡುವುದ ರಲ್ಲಿಯೂ ಇವನಿಗೆ ಸಮಾನರಿಲ್ಲವೆಂಬುದೂ ನಿಜವಾದ ವಿಷಯಗಳಾಗಿವೆ. ಆದರೆ ಎಂದಿನಿಂದ ಈ ಶಕವನ್ನು ಎಣಿಸಬೇಕೆಂಬುದು ಸರಿಯಾಗಿ ತಿಳಿ ಯದು. ಇವನು ಉತ್ತರ ಹಿಂದೂಸ್ಥಾನವನ್ನೆಲ್ಲಾ ಏಕಚಕ್ರಾಧಿಪತ್ಯಕ್ಕೆ ಒಳಪಡಿಸಿ, ಶತ್ರುಗಳ ಕಾಟವಿಲ್ಲದಂತೆ ಮಾಡಿದನು. ಇವನ ರಾಜ್ಯದಲ್ಲಿ ಶಾಂತಿ ಸಮಾಧಾನಗಳು ನೆಲೆಗೊಂಡಿದ್ದುವು. ಚಕ್ರವರ್ತಿಯು ವಿದ್ಯಾವಂ ತರಿಗೆ ಬಹಳ ಆಸರೆಯಾಗಿದ್ದನು. ಕಾಳಿದಾಸನೇ ಮೊದಲಾದ ನವಮಣಿ ಗಳು ಇವನ ಸಭೆಯನ್ನು ಅಲಂಕರಿಸುತ್ತಿದ್ದರು.

ಶ್ರೀಹರ್ಷ (ಕ್ರಿ. ಶ. 606–648)

ಹೂಣರು ಸೋತುಹೋದಮೇಲೆ ಅವರು ಉತ್ತರ ಹಿಂದೂಸ್ಥಾನ ದಲ್ಲಿ ಕಟ್ಟಿದ್ದ ರಾಜ್ಯವೂ ನಾಶವಾಯಿತು. ಇವರ ಹಾವಳಿಯು ತಪ್ಪಿದಂ ದಿನಿಂದ ಅನೇಕ ದೊರೆಗಳು ಅಲ್ಲಲ್ಲಿ ರಾಜ್ಯವನ್ನು ಕಟ್ಟಿಕೊಂಡರು. ಹೀಗೆ ರಾಜ್ಯಕಟ್ಟಿದವರಲ್ಲಿ ಒಬ್ಬನಾದ ಪ್ರಭಾಕರವರ್ಧನನು ಸ್ಥಾನೇಶ್ವರದಲ್ಲಿ ಆಳುತ್ತಿದ್ದನು. ಇವನ ನಂತರ ಇವನ ಮಗ ಹರ್ಷವರ್ಧನನು ಎರಡ ನೆಯ ಶಿಲಾದಿತ್ಯನೆಂಬ ಹೆಸರಿನಿಂದ ಆಳಿದನು.

ಹರ್ಷನ ರಾಜ್ಯಭಾರ

ಹರ್ಷವರ್ಧನನು ತನ್ನ 16ನೆಯ ವಯಸ್ಸಿನಲ್ಲಿಯೇ ದೊರೆಯಾ ದನು. ಇವನು ಪಟ್ಟಕ್ಕೆ ಬಂದಾಗ ಹಿಂದೂಸ್ಥಾನದ ರಾಜ್ಯಗಳೆಲ್ಲವೂ ಅನಾಯಕವಾಗಿದ್ದುವು. ಇದರಿಂದ ಹರ್ಷವರ್ಧನನು ರಾಜ್ಯ ಕಟ್ಟುವು ದಕ್ಕೆ ಅನುಕೂಲವೇ ಅಯಿತು. ದೊರೆಯು ಚಿಕ್ಕವಯಸ್ಸಿನಲ್ಲಿಯೇ ಸಂಸಾ ರದ ದುಃಖಪರಂಪರೆಗಳಿಗೆ ಸಿಕ್ಕಿದುದರಿಂದ ಇವನಲ್ಲಿ ವೀರತ್ವವೂ, ಧರ್ಮ ಗುಣವೂ ನೆಲೆಗೊಂಡುವು. ಹರ್ಷವರ್ಧನನು ತನ್ನ ಪಿತ್ರಾರ್ಜಿತವಾದ ಸಣ್ಣ ರಾಜ್ಯವನ್ನು ವಿಸ್ತರಿಸಿ ಚಕ್ರಾಧಿಪತ್ಯವನ್ನು ಕಟ್ಟಿದನೆಂದು ತಿಳಿಯ

ಬರುತ್ತದೆ. ಮೌರ್ಯವಂಶದ ಚಂದ್ರಗುಪ್ತ, ಗುಪ್ತರ ಎರಡನೆಯ ಚಂದ್ರ ಗುಪ್ತ ಇವರುಗಳಾದಮೇಲೆ ಹಿಂದೂಸ್ಥಾನವನ್ನೆಲ್ಲಾ ಆಳಿದ ದೊರೆಗಳಲ್ಲಿ ಹರ್ಷನೇ ಕೊನೆಯವನು. ಕ್ರಿ. ಶ 620ರ ವೇಳೆಗೆ ಪಂಜಾಬು, ಕಾಶ್ಮೀರ ದೇಶಗಳನ್ನು ಬಿಟ್ಟು, ಉಳಿದ ಉತ್ತರ ಹಿಂದೂಸ್ಥಾನವೆಲ್ಲಾ ಇವನ ವಶ ವಾಗಿತ್ತು. ಕಾಮರೂಪ (ಅಸ್ಸಾಂ) ವಲ್ಲಭಿ (ಗುಜರಾತ್) ಈ ದೇಶದ ಅರಸರು ಇವನಿಗೆ ಕಪ್ಪಕಾಣಿಕೆಗಳನ್ನು ಕೊಡುತ್ತಿದ್ದರು. ಕನ್ಯಕುಬ್ಜವೇ ಇವನ ರಾಜಧಾನಿ. ಹೀಗೆ ಹಿಂದೂಸ್ಥಾನದಲ್ಲೆಲ್ಲಾ ತನ್ನ ಸಾಮ್ರಾಜ್ಯ ವನ್ನು ಸ್ಥಾಪಿಸಿ, ದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸಿದ ಮೇಲೆ, ದೊರೆಯು ರಾಜ್ಯಗಳನ್ನು ಜಯಿಸುವುದಕ್ಕೆ ದಕ್ಷಿಣದೇಶದಕಡೆ ತಿರುಗಿದನು. ಆದರೆ ದಕ್ಷಿಣದೇಶದ, ಚಾಲೂಕ್ಯವಂಶದ, ಎರಡನೆಯ ಪುಲಿಕೇಶಿಯು ಪ್ರಬಲನಾಗಿದ್ದುದರಿಂದ ಅವನಮೇಲೆ ಮಾತ್ರ ಹರ್ಷನ ಕೈ ಸಾಗಲಿಲ್ಲ. ಇವರಿಬ್ಬರಿಗೂ ನರ್ಮಧಾ ನದಿಯ ದಡದಲ್ಲಿ ಘೋರವಾದ ಯುದ್ಧವು ನಡೆದು ಹರ್ಷನು ಸೋತು ಹಿಂದಿರುಗಬೇಕಾಯಿತು ಹರ್ಷನಿಗೆ ಉಂಟಾದ ಸೋಲು ಇದೊಂದೇ.

ಇದಾದಮೇಲೆ ಹರ್ಷನು ವಿಜಯ ಯಾತ್ರೆಗಳನ್ನು ನಿಲ್ಲಿಸಿ, ಧರ್ಮ ಕಾರ್ಯಗಳಲ್ಲಿ ಪ್ರವೃತ್ತನಾದನು. ಇವನು ಬೌದ್ಧಮತಕ್ಕೆ ಸೇರಿದವನಾ ದರೂ ಇವನಿಗೆ ಬ್ರಾಹ್ಮಣ ಮತದಲ್ಲಿ ದ್ವೇಷವಿರಲಿಲ್ಲ. ಇವನು ಅನೇಕ ಬೌದ್ಧರ ವಿಹಾರಗಳನ್ನೂ, ಹಿಂದೂ ದೇವಾಲಯಗಳನ್ನೂ ಕಟ್ಟಿಸಿದನು. ಪ್ರಯಾಗದಲ್ಲಿ ಈತನು ಮಾಡಿಸಿದ ಉತ್ಸವದ ಸಮಯದಲ್ಲಿ ಬುದ್ಧ, ಶಿವ, ವಿಷ್ಣು ಇವರುಗಳ ಮೂರ್ತಿ (ವಿಗ್ರಹ)ಗಳನ್ನು ಮಾಡಿಸಿದನಂತೆ ವಿಕ್ರಮಾ ದಿತ್ಯನಂತೆ ಇವನೂ ವಿದ್ಯಾವಂತರಿಗೆ ಆಸರೆಯಾಗಿದ್ದನು. ಇದೂ ಅಲ್ಲದ ಚಕ್ರವರ್ತಿಯೇ "ರತ್ನಾವಳಿ" "ನಾಗಾನಂದ" ಎಂಬ ಪ್ರಸಿದ್ಧವಾದ ನಾಟಕಗಳನ್ನು ರಚಿಸಿರುವನು. ಇವನು ಕ್ರಿ. ಶ. 648ರಲ್ಲಿ ಕಾಲವಾ ದನು. ಇವನಿಗೆ ಕೆಲಸಮಾಡುವುದೆಂದರೆ ಅಲಸಿಕೆಯೇ ಇರಲಿಲ್ಲ. ಇವನು ಪ್ರಜಾನುರಾಗಿಯಾಗಿಯೂ. ವಿದೇಶೀಯ ಅರಸರ ಗೌರವಕ್ಕೆ ಪಾತ್ರನಾ ಗಿಯೂ ಇದ್ದನು. ಬಾಣನೆಂಬ ಕವಿಯು ಬರೆದಿರುವ "ಹರ್ಷ ಚರಿತ್ರೆ" ಯಿಂದಲೂ, ಹ್ಯೂಯನ್‌ತ್ಸಾಂಗ್ ಎಂಬ ಚೀಣಾ ಯಾತ್ರಿಕನ ಬರೆವಣಿಗೆಯಿಂದಲೂ ಹರ್ಷನ ಚರಿತ್ರೆಯನ್ನು ತಿಳಿಯಬಹುದು. ಇವನೂ

ಮಹಮ್ಮದೀಯರ ಮತಸ್ಥಾಪಕನಾದ ಮಹಮ್ಮದನೂ ಸಮಕಾಲೀನರೆನ್ನ ಬಹುದು. ಹರ್ಷನು ಬುದ್ಧ ಸಭೆಯನ್ನು ಸೇರಿಸಿ ಬೌದ್ಧತತ್ವಗಳನ್ನು ಚರ್ಚಿಸುತ್ತಿದ್ದಾಗ ಮಹಮ್ಮದನ ಶಿಷ್ಯರು ಇಸ್ಲಾಮಿನ ಮತವನ್ನು ಪರ್ಷಿಯಾ ದೇಶದಲ್ಲಿ ಹರಡುತ್ತಿದ್ದರು.

ಹರ್ಷನು ಸತ್ತುಹೋದಮೇಲೆ ಇವನ ರಾಜ್ಯವು ಒಡೆದುಹೋಗಿ ಅನೇಕ ಸ್ವತಂತ್ರ ರಾಜ್ಯಗಳಾದುವು. ಆದರೆ ಅವುಗಳ ಸಂಪೂರ್ಣವಾದ ಚರಿತ್ರೆಯೇ ತಿಳಿದಿಲ್ಲ. ಕ್ರಿ. ಶ. 700ರಲ್ಲಿ ಯಶೋವರ್ಮನೆಂಬ ದೊರೆಯು ಕನ್ಯಕುಬ್ಜದಲ್ಲಿ ಆಳುತ್ತಿದ್ದನು. ಇವನ ಆಸ್ಥಾನದಲ್ಲಿ ಭವಭೂತಿಯೆಂಬ ಕವಿಶ್ರೇಷ್ಠನಿದ್ದನು. ಯಶೋವರ್ಮನು ಕಾಲವಾದಮೇಲೆ ಎರಡು ಶತಮಾನಗಳ ವರೆಗೂ ಹಿಂದೂ ದೇಶದ ಚರಿತ್ರೆಯನ್ನು ತಿಳಿಯಲು ಯಾವ ಆಧಾರವೂ ಇಲ್ಲ.

ಚೀಣಾದೇಶದ ಯಾತ್ರಿಕರು

ಬುದ್ಧನು ಹುಟ್ಟಿದುದೂ, ಶ್ರೇಷ್ಠವಾದ ಉಪದೇಶಗಳನ್ನು ಮಾಡಿದುದೂ ಭರತಖಂಡದಲ್ಲಿಯೇ ಆದುದರಿಂದ, ಇಲ್ಲಿಗೆ ತೀರ್ಥಯಾತ್ರೆಗಾಗಿ ಬರುವುದು ಬೌದ್ಧರಿಂದ ಚೀಣರಲ್ಲಿ ವಾಡಿಕೆಗೆ ಬಂದಿತು. ಹೀಗೆ ಬಂದವರಲ್ಲಿ ಫಾಹಿಯಾನ್, ಹ್ಯೂಯನ್‌ತ್ಸಾಂಗ್ ಎಂಬವರೇ ಮುಖ್ಯರಾದವರು. ಇವರು ತಾವು ಬಂದಾಗ ಕಂಡುಕೇಳಿದ ಸಂಗತಿಗಳೆಲ್ಲವನ್ನೂ ಬರೆದಿಟ್ಟಿರುವರು. ಇದರಿಂದ ಹಿಂದೂದೇಶದಲ್ಲಿನ ಆ ಕಾಲಗಳ ಚರಿತ್ರೆಯು ಸ್ಪಷ್ಟವಾಗುತ್ತದೆ.

ಫಾಹಿಯಾನ್

ಈತನು ಕ್ರಿಸ್ತಶಕ 406ರಲ್ಲಿ ಚೀಣಾದೇಶದಿಂದ ವಾಯವ್ಯ ಪ್ರಾಂತಗಳ ಮಾರ್ಗವಾಗಿ ಈ ದೇಶಕ್ಕೆ ಬಂದು, ಅನೇಕ ಬೌದ್ಧ ಗ್ರಂಥಗಳನ್ನು ಶೇಖರಿಸಿಕೊಂಡು ಆರುವರ್ಷಗಳ ಕಾಲವಾದಮೇಲೆ ಬಂಗಾಳಾಸಮುದ್ರದ ಮಾರ್ಗವಾಗಿ ತನ್ನ ದೇಶಕ್ಕೆ ಹೊರಟುಹೋದನು. ಇವನು ಬಂದಾಗ ಹಿಂದೂದೇಶದಲ್ಲಿ ಎರಡನೆಯ ಚಂದ್ರಗುಪ್ತನು ಸಾಮ್ರಾಜನಾಗಿದ್ದನು. ಫಾಹಿಯಾನನು ಬಂದಾಗ ಪಾಟಲೀಪುತ್ರವು ಇನ್ನೂ ವೈಭವಸ್ಥಿತಿಯಲ್ಲಿಯೇ ಇದ್ದಿತು. ಎಲ್ಲೆಲ್ಲಿಯೂ ಸತ್ರಗಳೂ, ಔಷಧಶಾಲೆಗಳೂ ತುಂಬಿದ್ದುವು. ದೇಶದಲ್ಲಿ ವಾಡಿಕೆಯಲ್ಲಿದ್ದ ಮತಗಳಿಗೆ

ಪರಸ್ಪರ ದ್ವೇಷವಿರಲಿಲ್ಲ. ಬ್ರಾಹ್ಮಣ ವಿದ್ವಾಂಸರೇ ಅನೇಕವೇಳೆ ಬೌದ್ಧ ಮತ ತತ್ವಗಳ ಪಾಠವನ್ನು ಕಲಿಸುತ್ತಿದ್ದರು. ಜನರು ಶಾಂತಚಿತ್ತರಾಗಿಯೂ, ಉದಾರಿಗಳಾಗಿಯೂ ಇದ್ದರು. ಯಾರೂ ಮದ್ಯಪಾನವನ್ನೂ, ಪ್ರಾಣಿಹಿಂಸೆಯನ್ನೂ ಮಾಡುತ್ತಿರಲಿಲ್ಲ. ದೇಶದಲ್ಲಿ ಕಳ್ಳಕಾಕರ ಭೀತಿಯಾಗಲೀ, ಕ್ರೂರವಾದ ಪಾಪಕೃತ್ಯಗಳಾಗಲೀ ಇರಲಿಲ್ಲ. ಗುಪ್ತಸಂತತಿಯ ರಾಜರು ಬ್ರಾಹ್ಮಣರು. ಈ ಸಂತತಿಯ ರಾಜರಲ್ಲಿ ಅನೇಕರು ಅಶ್ವಮೇಧ ಯಾಗವನ್ನು ಮಾಡಿದ್ದರು. ಇವರು ಬ್ರಾಹ್ಮಣರಾದರೂ ಇತರ ಮತಗಳ ವಿಷಯದಲ್ಲಿ ಇವರಿಗೆ ಸೈರಣೆ ಇದ್ದಿತು. ಇವೇ ಮೊದಲಾದ ವಿಷಯಗಳನ್ನು ಫಾಹಿಯಾನನು ಬರೆದಿರುವನು.

ಹ್ಯೂಯರ್ನತ್ಸಾಂಗ್ (ಕ್ರಿ. ಶ. 629--646.)

ಫಾಹಿಯರ್ನ ಯಾತ್ರಿಕನು ಬಂದು ಹೋದ ಇನ್ನೂರು ವರ್ಷಗಳ ಮೇಲೆ ಹ್ಯೂಯರ್ನತ್ಸಾಂಗ್ ಎಂಬ ಮತ್ತೊಬ್ಬ ಚೀಣಾದೇಶದ ಯಾತ್ರಿಕನು ಬೌದ್ಧರಿಗೆ ಪವಿತ್ರವಾದ ಕ್ಷೇತ್ರಗಳನ್ನು ನೋಡುವುದಕ್ಕೂ,, ಬೌದ್ಧ ಮತಗ್ರಂಥಗಳನ್ನು ಹುಡುಕುವುದಕ್ಕೂ ವಾಯವ್ಯದ ಕಡೆಯಿಂದಲೇ ಬಂದು ಹಿಂದೂದೇಶದಲ್ಲೆಲ್ಲಾ ಸಂಚರಿಸಿದನು. ಈತನು ಬಂದಾಗ ಹಿಂದೂದೇಶದಲ್ಲಿ ಇಬ್ಬರು ಪ್ರಬಲರಾದ ಚಕ್ರವರ್ತಿಗಳಿದ್ದರು. ಉತ್ತರದಲ್ಲಿ ಶ್ರೀಹರ್ಷ, ದಕ್ಷಿಣದಲ್ಲಿ 2ನೆಯ ಪುಲಿಕೇಶಿ. ಈ ವೇಳೆಗೆ ಹೊರದೇಶದವರ ದಂಡಯಾತ್ರೆಗಳೂ, ದೇಶದಲ್ಲಿನ ರಾಜ್ಯಗಲಭೆಗಳೂ ನಿಂತುಹೋಗಿದ್ದುವು. ಹರ್ಷಚಕ್ರವರ್ತಿಯು ಅಲಸಿಕೆಯಿಲ್ಲದೆ ದೇಶದಲ್ಲೆಲ್ಲಾ ಸುತ್ತಾಡಿ ರಾಜ್ಯವನ್ನು ಬಹು ದರ್ಪದಿಂದ ಆಳುತ್ತಿದ್ದನು. ಅಪರಾಧಿಗಳಿಗೆ ಕಠಿಣವಾದ ಶಿಕ್ಷೆಗಳಾಗುತ್ತಿದ್ದುವು

ಎಲ್ಲೋ ಕೆಲವು ದೇಶಗಳಲ್ಲಿ ಮಾತ್ರ ಬೌದ್ಧಮತವು ಪ್ರಬಲವಾಗಿತ್ತು. ಉಳಿದ ಪ್ರಾಂತಗಳಲ್ಲೆಲ್ಲಾ ಬ್ರಾಹ್ಮಣ ಮತವು ತಲೆ ಎತ್ತುತ್ತಿತ್ತು; ಅದರೂ ಜನರಲ್ಲಿ ಮತವೈರವಿರಲಿಲ್ಲ. ರಾಜನು ಎಲ್ಲಾ ಮತಗಳ ವಿಷಯಗಳಲ್ಲಿಯೂ ಒಂದೇಸಮನಾದ ಅಭಿಮಾನವನ್ನಿಟ್ಟಿದ್ದನು. ದೇಶದಲ್ಲೆಲ್ಲಾ ಅತಿ ಸುಂದರವಾದ ವಿಹಾರಗಳಿದ್ದುವು. ದೊಡ್ಡವರ ಮಕ್ಕಳು, ಬಡವರ ಮಕ್ಕಳು ಎಂಬ ಭೇದವಿಲ್ಲದೆ, ಏಳುವರ್ಷದ ಮಕ್ಕಳೆಲ್ಲರೂ ವಿದ್ಯೆ

ಯನ್ನು ಕಲಿಯಬೇಕೆಂಬ ನಿರ್ಬಂಧವಿದ್ದಿತು. ವಿದ್ವಾಂಸರಿಗೆ ವಿಶೇಷ ಗೌರವವಿತ್ತು. ನಲಂದ ಮುಂತಾದ ಸ್ಥಳಗಳಲ್ಲಿ ವಿದ್ಯಾನಿಲಯಗಳಿದ್ದುವು. ಹ್ಯೂಯೆನ್‌ತ್ಸಾಂಗನೂ ನಲಂದ ವಿಶ್ವವಿದ್ಯಾನಿಲಯದಲ್ಲಿ ಯೋಗಶಾಸ್ತ್ರವನ್ನು ಕಲಿಯುತ್ತಿದ್ದನು.

ಹರ್ಷನು ಕನೂಜಿನಲ್ಲಿ ಒಂದು ದೊಡ್ಡ ಸಭೆಯನ್ನು ಕೂಡಿಸಿದ್ದನು. ಈ ಸಭೆಗೆ ಅನೇಕಮಂದಿ ಸಾಮಂತರಾಜರು ಬಂದಿದ್ದರು. ಈ ಸಭೆಯಲ್ಲಿ ಬ್ರಾಹ್ಮಣರೂ, ಬೌದ್ಧಯತಿಗಳೂ ತಮ್ಮ ತಮ್ಮ ಮತಗಳನ್ನು ಕುರಿತು ಉಪನ್ಯಾಸಮಾಡಿದರು. ಈ ಸಭೆಯು ಹದಿನೆಂಟು ದಿನ ಜರುಗಿತು.

ಚೀಣನು ಬಂದಾಗ ಕನ್ಯಕುಬ್ಜವು ಬಹಳ ವೈಭವಸ್ಥಿತಿಯಲ್ಲಿದ್ದಿತು. ತಕ್ಷಶಿಲ, ಪಾಟಲೀಪುತ್ರ ಮೊದಲಾದ ಪ್ರಾಚೀನ ನಗರಗಳು ಹೀನಸ್ಥಿತಿಗೆ ಬಂದಿದ್ದುವು. ಇವೇ ಮೊದಲಾದ ವಿಷಯಗಳನ್ನು ಯಾತ್ರಿಕನು ಬರೆದಿಟ್ಟಿರುವನು.

ಚೀಣನು ಚಕ್ರವರ್ತಿಗೆ ಪರಮಮಿತ್ರನಾದನು. ಸ್ವಾರಸ್ಯವಾದ ಇವನ ಮತಬೋಧೆಯನ್ನು ಕೇಳುವುದರಲ್ಲಿ ಚಕ್ರವರ್ತಿಗೂ, ಕಾಮರೂಪದ ದೊರೆಗೂ ತುಂಬಾ ಆಸೆ ಇದ್ದಿತು. ಆತನನ್ನು ತನ್ನ ದೇಶದಲ್ಲಿಯೇ ಇರುವಂತೆ ದೊರೆಯು ಬಹುವಾಗಿ ಹೇಳಿದರೂ ಆತನು ಕೇಳದೆ ಕ್ರಿ. ಶ. 645ರಲ್ಲಿ ತನ್ನ ದೇಶಕ್ಕೆ ಹಿಂದಿರುಗಿದನು. ಈಯಾತ್ರಿಕನು 700ರಲ್ಲಿ ಬೌದ್ಧ ಮತ ಗ್ರಂಥಗಳನ್ನೂ, ಬುದ್ಧನ ಮೂಳೆಗಳನ್ನೂ ಕುದುರೆಗಳ ಮೇಲೆ ಹೇರಿಸಿಕೊಂಡು ಹೋದನು. ಈ ಯಾತ್ರಿಕನು ಪುಲಿಕೇಶಿ ಚಕ್ರವರ್ತಿಯ ರಾಜ್ಯದಲ್ಲಿಯೂ ಸಂಚಾರಮಾಡಿ ಆ ರಾಜನ ಜಾಣತನ, ಔದಾರ್ಯ, ಪ್ರಜಾಹಿತಚಿಂತನೆ ಇವುಗಳನ್ನೂ, ಅಲ್ಲಿಯ ಪ್ರಜೆಗಳ ಧೈರ್ಯ, ಸತ್ಯ, ರಾಜಭಕ್ತಿ ಇವುಗಳನ್ನೂ ತನ್ನ ಗ್ರಂಥಗಳಲ್ಲಿ ವರ್ಣಿಸಿದ್ದಾನೆ.

ಕ್ರಿ. ಶ. 300-650 ರವರೆಗೆ ಜನರಸ್ಥಿತಿ

ಈ ಕಾಲದ ಜನರ ಸ್ಥಿತಿಗತಿಗಳನ್ನು ತಿಳಿಯುವುದಕ್ಕೆ ಚೀಣರ ಬರೆವಣಿಗೆಗಳೂ, ಸಂಸ್ಕೃತದಲ್ಲಿ ಬರೆದಿರುವ ಶಾಸನಗಳೂ, ಕಾವ್ಯಗಳೂ ಮೂಲಾಧಾರವಾಗಿವೆ.

ಈ ಪರ್ಯಾಯದ ಆದಿಭಾಗದಲ್ಲಿ ಬೌದ್ಧಮತವು ವಿಶೇಷವಾಗಿ ಹರಡಿತ್ತು. ಕಡೆಕಡೆಗೆ ಬ್ರಾಹ್ಮಣಮತವು ತಿದ್ದುಪಡಿ ಹೊಂದಿ ಜೀರ್ಣೋ

ದ್ಧಾರವಾಗುತ್ತ ಬಂದುದರಿಂದ ಬೌದ್ಧಮತವು ಖಿಲವಾಗುತ್ತ ಬಂದಿತು. ಈ ರೀತಿಯಾಗಿ ಸರಿಪಟ್ಟ ಬ್ರಾಹ್ಮಣ ಮತಕ್ಕೆ ಅಲ್ಲಿಂದ ಮುಂದೆ ವೈದಿಕ ಮತವೆಂದು ಹೆಸರಾಯಿತು. ಜನಸಾಮಾನ್ಯರು ಇದನ್ನು ಹಿಂದೂಮತ ವೆಂದು ವಾಡಿಕೆಯಾಗಿ ಕರೆಯುತ್ತಾರೆ. ವೈದಿಕಮತವು ಪ್ರಾಬಲ್ಯಕ್ಕೆ ಬಂದಮೇಲೆ ಮನುಧರ್ಮಶಾಸ್ತ್ರರೀತಿಯಾಗಿ ಕೆಲವು ಬದಲಾವಣೆಗಳಾ ದುವು. ಅಪರಾಧಮಾಡಿದವರಿಗೆ ಅವರವರ ಜಾತಿಗಳಿಗನುಸಾರವಾಗಿ ಶಿಕ್ಷೆಗಳಾಗುತ್ತಿದ್ದುವು.

ಜನರು ಸಾಮಾನ್ಯವಾಗಿ ಶೀಲವಂತರಾಗಿಯೂ, ನೆಮ್ಮದಿಯಾ ಗಿಯೂ ಇದ್ದರು. ಬೌದ್ಧರು ಜೀವವುಳ್ಳ ಪ್ರಾಣಿಗಳಲ್ಲಿ ವಿಶೇಷ ದಯೆ ಯುಳ್ಳವರಾಗಿದ್ದುದರಿಂದ ಎಲ್ಲೆಲ್ಲಿಯೂ ಧರ್ಮಾರ್ಥವಾಗಿ ಅನೇಕ ವೈದ್ಯ ಶಾಲೆಗಳನ್ನು ಕಟ್ಟಿಸಿದರು. ಇದೇ ಕೆಲಸಕ್ಕಾಗಿ ಅವರು ವೈದ್ಯಶಾಸ್ತ್ರ ವನ್ನು ಬಲು ಚೆನ್ನಾಗಿ ಅಭ್ಯಾಸಮಾಡಿದರು. ಜ್ಯೋತಿಷ ಪ್ರವೀಣನಾದ ಆರ್ಯಭಟ್ಟನೂ, ವಿಕ್ರಮಾದಿತ್ಯನ ಸಭೆಯಲ್ಲಿದ್ದ ಕಾಳಿದಾಸನೇ ಮೊದಲಾದ "ನವಮಣಿ" ಗಳೆಂಬ ಕವಿಗಳೂ ಅನೇಕ ಗ್ರಂಥಗಳನ್ನು ರಚಿಸಿದ್ದು ಈ ಕಾಲದಲ್ಲಿಯೇ. ಅಂಕಗಣಿತ, ಬೀಜಗಣಿತ ಮೊದಲಾದ ಗಣಿತಶಾಸ್ತ್ರ ಗಳಿಗೆ ಉತ್ತೇಜನವುಂಟಾಯಿತು.

ಮೊದಲು ಬೌದ್ಧರು, ಆಮೇಲೆ ಹಿಂದೂಗಳೂ ಅನೇಕ ಗುಡಿ ಗೋಪುರಗಳನ್ನು ಕಟ್ಟಿಸಿ, ವಿಗ್ರಹಗಳನ್ನು ಕೆತ್ತಿಸಿ, ಸುಂದರವಾದ ಚಿತ್ರ ಗಳನ್ನು ಬರೆಯಿಸಿದರು. ಗುಪ್ತರ ಕಾಲದ ಶಿಲ್ಪವು ಅತ್ಯುತ್ತಮವಾದುದು. ಅಜಂಟ, ಎಲ್ಲೋರ, ಎಲಿಫಾಂಟ ಈ ಸ್ಥಳಗಳಲ್ಲಿರುವ ಗುಹಾಂತರ್ದೇವಾ ಲಯಗಳು ಲೋಕೋತ್ತರವಾದುವು.

ಕೈಗಾರಿಕೆಗಳು ಅಭಿವೃದ್ಧಿಸ್ಥಿತಿಯಲ್ಲಿದ್ದುವು. ಹಿಂದೂ ವರ್ತಕರು ವ್ಯಾಪಾರಕ್ಕಾಗಿ ನೀರಿನಮೇಲೆ ಪರದೇಶಗಳಿಗೆ ಹೋಗುತ್ತಿದ್ದರು. ಪಾಟ ಲೀಪುತ್ರ, ಉಜ್ಜಯಿನಿ, ಅಯೋಧ್ಯೆ ಮೊದಲಾದ ರಾಜಧಾನಿಗಳು ಬಹಳ ಅಭಿವೃದ್ಧಿಸ್ಥಿತಿಯಲ್ಲಿದ್ದುವು. ರಾಜರುಗಳು ಸ್ವತಃ ವಿದ್ಯಾವಂತರಾಗಿ ವಿದ್ಯೆಗೆ ಹೆಚ್ಚಾದ ಗೌರವವನ್ನೂ, ಪ್ರೋತ್ಸಾಹವನ್ನೂ ಕೊಡುತ್ತಿದ್ದರು. ಗುಪ್ತರಾಜ್ಯವು ಒಡೆದುಹೋದಮೇಲೂ ವಿದ್ಯೆಗೆ ಮೊದಲಿನಹಾಗೆಯೇ ಪ್ರೋತ್ಸಾಹವಿತ್ತು.

ಅಧ್ಯಾಯ ೮.—ರಾಜಪುತ್ರರ ಕಾಲ

(ಕ್ರಿ. ಶ. 650–1200)

ರಾಜಪುತ್ರರು

ಕ್ರಿ. ಶ. 647ರಲ್ಲಿ ಹರ್ಷಚಕ್ರವರ್ತಿಯು ಕಾಲವಾದಮೇಲೆ ಅವನ ದೊಡ್ಡ ಚಕ್ರಾಧಿಪತ್ಯವನ್ನು ಆಳುವಷ್ಟು ಸಮರ್ಥರಾದ ದೊರೆಗಳು ಇರಲಿಲ್ಲ. ಆದುದರಿಂದ ಅವನಿಗೆ ಅಧೀನರಾಗಿದ್ದ ರಾಜರೆಲ್ಲರೂ ಸ್ವತಂತ್ರರಾದರು. ಹೀಗೆ ಸ್ವತಂತ್ರವಾದ ರಾಜ್ಯಗಳಲ್ಲಿ ಸಿಂದೂದೇಶ, ವಲ್ಲಭಿ (ಗುಜರಾತ್) ಕನ್ಯಕುಬ್ಜ, ಬಿಹಾರ, ಬಂಗಾಳ, ಚೇದಿ, ಆಜ್ಮೀರ, ನೇಪಾಳ, ಕಾಶ್ಮೀರ, ಪಂಜಾಬ್ ಈ ರಾಜ್ಯಗಳು ಮುಖ್ಯವಾದುವುಗಳು. ಈ ರೀತಿಯಾಗಿ ಸ್ವತಂತ್ರವಾದ ರಾಜ್ಯಗಳೆಲ್ಲವೂ ರಾಜಪುತ್ರರೆಂಬವರ ಆಳಿಕೆಯಲ್ಲಿದ್ದುವು. ಈ ರಾಜಪುತ್ರರು ಯಾರೆಂಬುದನ್ನು ತಿಳಿಯೋಣ; ಹಿಂದೂದೇಶದಮೇಲೆ ಶಕರು, ಪಲ್ಲವರು, ಹೂಣರು ಎಂಬ ವಿದೇಶಿಯರು ವಾಯುವ್ಯಮಾರ್ಗವಾಗಿ ಆಗಾಗ್ಗೆ ದಂಡೆತ್ತಿ ಬರುತ್ತಿದ್ದರೆಂದು ಹಿಂದೆಯೇ ಹೇಳಿದೆಯಷ್ಟೆ. ಇವರುಗಳು ಈ ದೇಶಕ್ಕೆ ಬಂದು ಅಲ್ಲಲ್ಲಿ ರಾಜ್ಯಗಳನ್ನು ಕಟ್ಟಿದರು. ಇವರು ಬಲುಮಟ್ಟಿಗೆ ಹಿಂದೂ ಮತಾಚಾರ ಪದ್ಧತಿಗಳನ್ನೇ ಅನುಸರಿಸಿದರೂ, ಹಿಂದಿನ ಕ್ಷತ್ರಿಯರಂತೆ ಹಿಂದೂಗಳೊಡನೆ ಬೆರತುಹೋಗಲಿಲ್ಲ. ಇವರೇ ರಾಜಪುತ್ರರು. ಆರ್ಯಧರ್ಮೋದ್ಧಾರಕ್ಕಾಗಿ ಬ್ರಹ್ಮನ ಯಜ್ಞಕುಂಡದಿಂದ ಬಂದವರಾದುದರಿಂದ ತಾವು "ಅಗ್ನಿಕುಲ" ರೆಂದು ಕೆಲವು ರಾಜಪುತ್ರರು ಹೇಳಿಕೊಂಡರು. ಇದು ಹೇಗಾದರೂ ಇರಲಿ, ಇವರ ಸಹಾಯದಿಂದ ಇದುವರೆಗೂ ಖಿಲವಾಗುತ್ತಿದ್ದ ಹಿಂದೂಮತವು ಜೀರ್ಣೋದ್ಧಾರವಾಯಿತು. ಯುದ್ಧಾಸಕ್ತರಾದ ಇವರಿಗೆ ಪ್ರಾಣಿಹಿಂಸೆಯನ್ನು ಮಾಡಲಾಗದೆಂದು ವಿಧಿಸುವ ಬೌದ್ಧಮತದ ತತ್ವಗಳು ಒಪ್ಪಲಿಲ್ಲ. ರಾಜ್ಯಪರಿಪಾಲನೆಯು, ಯುದ್ಧಮಾಡುವುದು ಇವೇ ತಮ್ಮ ಧರ್ಮವೆಂದು ಇವರು ತಿಳಿದಿದ್ದರು. ಇವರಲ್ಲಿ ಅನೇಕ ಸುಗುಣಗಳಿದ್ದುವು. ಶೌರ್ಯ, ಧೈರ್ಯ, ಔದಾರ್ಯ, ಸ್ವಧರ್ಮಾಭಿಮಾನ ಇವು

ಗಳಿಗೆ ಇವರ ಹೆಸರನ್ನು ಹೇಳಬೇಕು. ಇವರು ಅತಿಥಿಗಳನ್ನು ಬಹಳ ಆದರದಿಂದ ಸತ್ಕರಿಸುತ್ತಿದ್ದರು. ಆಡಿದ ಮಾತಿಗೆ ಎಂದಿಗೂ ಇವರು ತಪ್ಪುತ್ತಿರಲಿಲ್ಲ. ಶತ್ರುವನ್ನು ನೋಡಿ ಯುದ್ಧದಲ್ಲಿ ಹಿಮ್ಮೆಟ್ಟುತ್ತಿರಲಿಲ್ಲ. ಇತರರಿಂದ ತಮಗಾದ ಅಪಮಾನವನ್ನು ಎಂದಿಗೂ ಸಹಿಸತಕ್ಕವರಲ್ಲ. ಈ ರಾಜಪುತ್ರರಲ್ಲಿ ಗಂಡಸರಂತೆಯೇ ಹೆಂಗಸರೂ ಧೈರ್ಯಶಾಲಿಗಳು. ವೀರ ಪತ್ನೀತ್ವದಲ್ಲಿ ಇವರನ್ನು ಮೀರಿಸಿದ ಹೆಂಗಸರೇ ಇಲ್ಲ. ಸ್ವತಂತ್ರರಾಜರಾದ ರಾಜಪುತ್ರರು ತಮ್ಮಲ್ಲಿ ತಾವೇ ಕಾದಾಡುತ್ತಾ ಐಕಮತ್ಯವಿಲ್ಲದಿದ್ದುದರಿಂದ ನಮ್ಮ ಭರತದೇಶವು ಮುಸಲ್ಮಾನರ ಕೈವಶವಾಗುವುದಕ್ಕೆ ಕಾರಣವಾಯಿತು. ಪರಸ್ಪರ ಜಗಳವಾಡಿ ಬಲಹೀನರಾಗಿದ್ದ ರಾಜಪುತ್ರರು ಶತ್ರುಗಳಾದ ಮುಸಲ್ಮಾನರೊಡನೆ ಕಾದಲಾರದೆ ಸೋತುಹೋಗಿ ರಾಜಪುಟಾಣದ ಮರಳುಭೂಮಿಯನ್ನು ಸೇರಿ ಅಲ್ಲಿ ರಾಜ್ಯಗಳನ್ನು ಕಟ್ಟಿಕೊಂಡರು ವಿಂಧ್ಯಪರ್ವತದ ಉತ್ತರದಲ್ಲಿ ಅರಾವಳಿ ಬೆಟ್ಟದ ಇರ್ಕಡೆಗಳಲ್ಲಿರುವ ಸೀಮೆಯನ್ನು ಈಗಲೂ ರಾಜಪುತಾನವೆಂದು ಕರೆಯುತ್ತಾರೆ. ಕ್ರಿ. ಶ. 12ನೆಯ ಶತಮಾನದ ಹೊತ್ತಿಗೆ ರಾಜಪುತ್ರರ ಮೊದಲಿನ ರಾಜ್ಯಗಳೆಲ್ಲವೂ ಒಂದೊಂದಾಗಿ ಮಹಮದೀಯರ ಪಾಲಾದುವು. ಕ್ರಿ. ಶ. 7ನೆಯ ಶತಮಾನದಿಂದ ಮಹಮ್ಮದೀಯರು ಇಲ್ಲಿ ರಾಜ್ಯವನ್ನು ಕಟ್ಟುವವರೆಗಿನ ಕಾಲವನ್ನು ಚರಿತ್ರೆಯಲ್ಲಿ "ರಾಜಪುತ್ರರ ಕಾಲ" ಎಂದೂ, "ಪುರಾಣಗಳ ಕಾಲ" ಎಂದೂ ಕರೆಯುವ ವಾಡಿಕೆಯುಂಟು. ರಾಜಪುತ್ರರ ಕಾಲವೆನ್ನುವುದಕ್ಕೆ ಆ ಮಹಿಮರ ಔನ್ನತ್ಯವೇ ಕಾರಣವಾಗಿದೆ. ಪ್ರಾಚೀನ ಸಂಗತಿಗಳನ್ನು ಕುರಿತು ಅನೇಕ ಗ್ರಂಥಗಳನ್ನು ಈ ಕಾಲದಲ್ಲಿ ಬರೆದುದರಿಂದ ಇದನ್ನು ಪುರಾಣಗಳ ಕಾಲವೆಂದು ಕರೆಯುತ್ತಾರೆ.

ಕ್ರಿ. ಶ. 650ರಿಂದ ಕ್ರಿ. ಶ. 1200ರವರೆಗೆ ಉತ್ತರ ಹಿಂದೂಸ್ಥಾನದ ಸ್ಥಿತಿ

ಈ ಪರ್ಯಾಯದಲ್ಲಿ ಬೌದ್ಧಮತವು ಖಿಲವಾಗಿ, ರಾಜಪುತ್ರರ ಸಹಾಯದಿಂದ ಬ್ರಾಹ್ಮಣಮತವು ಜೀರ್ಣೋದ್ಧಾರವಾಯಿತು. ಜೈನಮತವು ಅಲ್ಲಲ್ಲಿ ಹತ್ತಿಕೊಂಡಿತ್ತು. ಮಹಮ್ಮದೀಯರ ಮತವು ಹೊಸದಾಗಿ ತಲೆದೋರುವುದಕ್ಕೆ ಆರಂಭಿಸಿತು. ಬೌದ್ಧಮತಬೋಧಕರ ವಿರೋಧಾಚರಣೆ

ಗಳೂ, ಆಗಿನ ರಾಜರು ಬೌದ್ಧಮತದಂತೆ ಇತರ ಮತಗಳಿಗೂ ಮಾಡಿದ ಸಹಾಯಗಳೂ, ಪ್ರಾಣಿಹಿಂಸೆಯು ನಿಷಿದ್ಧವೆಂಬ ಬೌದ್ಧಮತದ ತತ್ವದಿಂದ ಯುದ್ಧಾಸಕ್ತರಾದ ರಾಜಪುತ್ರರು ಬೇಸತ್ತು ಹಿಂದೂಮತವನ್ನವಲಂಬಿಸಿದ್ದೂ, ಇವೆಲ್ಲವೂ ಬೌದ್ಧಮತದ ವಿನಾಶಕ್ಕೆ ಕಾರಣಗಳು. ಹಲವು ಶತಮಾನಗಳಿಂದಲೂ ಹಿಂದೂದೇಶದಲ್ಲಿ ಅತ್ಯಂತ ಪ್ರಬಲವಾಗಿದ್ದ ಬೌದ್ಧಮತವು ಈಗ ಅನ್ಯದೇಶೀಯ ಮತವೆಂದು ತೋರುವಷ್ಟು ಮಟ್ಟಿಗೆ ಇಲ್ಲಿ ನಿಶ್ಶೇಷವಾಗಿಹೋಗಿದೆ. ಆದರೂ ಪ್ರಪಂಚದ ಜನಸಂಖ್ಯೆಯಲ್ಲಿ $\frac{1}{3}$ ಪಾಲು ಜನರು ಬೌದ್ಧಮತವನ್ನವಲಂಬಿಸಿರುವರು.

ಬೌದ್ಧಮತವು ಖಿಲವಾಗುತ್ತಿದ್ದ ಸಮಯಕ್ಕೆ ಗುಪ್ತರೂ, ರಾಜಪುತ್ರರೂ ಬ್ರಾಹ್ಮಣ ಮತಕ್ಕೆ ವಿಶೇಷ ಪ್ರೋತ್ಸಾಹ ಕೊಟ್ಟದ್ದರಿಂದಲೂ ಕುಮಾರಿಲಭಟ್ಟ, ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ ಇವರೇ ಮೊದಲಾದ ಮಹಾಪಂಡಿತರು ಪ್ರಬಲಿಸಿ, ವೇದಪ್ರಾಮಾಣ್ಯವನ್ನು ಸಕಲರೂ ಅಂಗೀಕರಿಸುವಂತೆ ಬ್ರಾಹ್ಮಣಮತ ತತ್ವಗಳನ್ನು ಎಲ್ಲೆಲ್ಲೂ ಬೋಧಿಸಿದುದರಿಂದಲೂ, ಹಿಂದೂಗಳ ವೈದಿಕಮತವು ಪ್ರಬಲವಾಯಿತು

ಬ್ರಾಹ್ಮಣಮತವು ಅಭಿವೃದ್ಧಿಗೆ ಬಂದುದರಿಂದ ಸಂಸ್ಕೃತಭಾಷೆಗೂ, ಜೈನಮತವು ಗರಿಕಟ್ಟಿಕೊಂಡುದರಿಂದ ಕನ್ನಡ ಭಾಷೆಗೂ ಹೆಚ್ಚು ಸಹಾಯವಾಯಿತು. ಈ ಕಾಲದಲ್ಲಿ ಪ್ರಸಿದ್ಧರಾದ ಅನೇಕ ವಿದ್ವಾಂಸರಿದ್ದರು. ಅವರಲ್ಲಿ ವರಾಹಮಿಹಿರ, ಭಾಸ್ಕರಾಚಾರ್ಯ ಎಂಬ ಜ್ಯೋತಿಷ್ಯರೂ; ದಂಡಿ, ಭಾರವಿ, ಅಮರಸಿಂಹ, ಬಾಣ, ಭವಭೂತಿ ಎಂಬ ಕವಿಗಳೂ ಮುಖ್ಯರಾದವರು. ಈ ಪಂಡಿತೋತ್ತಮರಿಂದ ಶಿಲ್ಪಶಾಸ್ತ್ರ, ಗಣಿತಶಾಸ್ತ್ರ, ವೈದ್ಯಶಾಸ್ತ್ರ, ಗಾಯನಶಾಸ್ತ್ರ, ನರ್ತನಶಾಸ್ತ್ರ, ಚಿತ್ರಶಾಸ್ತ್ರ, ಮೊದಲಾದುವುಗಳು ಅಭಿವೃದ್ಧಿಗೆ ಬಂದುವು. ಈ ಶಾಸ್ತ್ರಗಳು ಈಗಿನಷ್ಟು ಅಭಿವೃದ್ಧಿಯನ್ನು ಮತ್ತಾವಾಗಲೂ ಹೊಂದಲಿಲ್ಲ. ಈ ಕಾಲದಲ್ಲಿ ರಾಜರು ಕವಿಗಳಿಗೆ ವಿಶೇಷವಾಗಿ ಪ್ರೋತ್ಸಾಹ ಕೊಟ್ಟು ದೊಡ್ಡ ದೊಡ್ಡ ಗ್ರಂಥಗಳನ್ನು ಬರೆಯಿಸಿದರು. ಕವಿಗಳೂ ಸ್ವಂತವಾಗಿ ಅನೇಕಾನೇಕ ಕಾವ್ಯಗಳನ್ನು ಬರೆದರು. ಚದುರಂಗವೇ ಮೊದಲಾದ ಜಾಣತನದ ಆಟಗಳು ಏರ್ಪಟ್ಟಿದ್ದುವು. ರಾಜಪುಟಾಣದ ಎಲ್ಲಾ ಭಾಗಗಳಲ್ಲಿಯೂ ನೀರಾವರಿಯ ಏರ್ಪಾಡು ತೃಪ್ತಿಕರವಾಗಿತ್ತು. ಈ ನೀರಾವರಿಯ ಏರ್ಪಾಡನ್ನು "ಅಲ್‌ಬರೋನಿ"

ಎಂಬ ಯಾತ್ರಿಕನು ಬಹುಮಟ್ಟಿಗೆ ಶ್ಲಾಘಿಸಿದ್ದಾನೆ. ಈ ಕಾರಣಗಳಿಂದ ಈ ಕಾಲವನ್ನು "ಅತ್ಯಂತ ನಾಗರಿಕತೆಯ ಕಾಲ" (ಕಾವ್ಯಕಲಾಯುಗ) ಎಂದು ಕರೆಯಬಹುದು.

ಮತಸ್ಥಾಪಕರು

ಪುರಾಣಕಾಲದಲ್ಲಿ ಅನೇಕ ಮಹಾತ್ಮರು ಬ್ರಾಹ್ಮಣಮತವನ್ನು ಉದ್ಧರಿಸುವುದಕ್ಕಾಗಿ ದೇಶದೇಶಗಳಲ್ಲಿಯೂ ತಮ್ಮ ತತ್ವಗಳನ್ನು ಭೋಧಿಸಿದರು. ಇವರುಗಳಲ್ಲಿ ಕೆಲವರ ಹೆಸರನ್ನು ಮಾತ್ರ ಹೇಳಲಾಗುವುದು.

ಕುಮಾರಿಲಭಟ್ಟ—ಈತನು ಬಿಹಾರದೇಶದ ಬ್ರಾಹ್ಮಣನು. ಕ್ರಿ.ಶ: 725ರಲ್ಲಿ ಆಗ ಆಚರಣೆಯಲ್ಲಿದ್ದ ಬೌದ್ಧ ಜೈನಮತಗಳನ್ನು ಖಂಡಿಸಿ, ವೇದಪ್ರಾಮಾಣ್ಯವನ್ನು ಸಕಲರೂ ಅಂಗೀಕರಿಸುವಂತೆ ಮಾಡಿ, ಬ್ರಾಹ್ಮಣ ಮತದ ತತ್ವಗಳನ್ನುಪದೇಶಿಸಿ, ಅನೇಕರನ್ನು ಬ್ರಾಹ್ಮಣ ಮತಕ್ಕೆ ಸೇರಿಸಿ, ಬೌದ್ಧರ ಹುಟ್ಟು ಅಡಗಿಸುವ ಪ್ರಯತ್ನಮಾಡಿದನು.

ಶ್ರೀ ಶಂಕರಾಚಾರ್ಯ—ಈತನು ಕ್ರಿ. ಶ. 788ರಲ್ಲಿ ಮಲೆಯಾಳದಲ್ಲಿರುವ ಕಾಲಟಿ ಎಂಬ ಗ್ರಾಮದಲ್ಲಿ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದನು. ಈತನು ಪೂರ್ವ ವಯಸ್ಸಿನಲ್ಲಿಯೇ ಸನ್ಯಾಸಿಯಾಗಿ, ಕಾಶಿ ಮೊದಲಾದ ಕ್ಷೇತ್ರಗಳಿಗೆ ಪ್ರಯಾಣಮಾಡಿ ಪ್ರಸಿದ್ಧರಾದ ಪಂಡಿತರ ಮುಂದೆ ಬೌದ್ಧ ಜೈನ ಮತಗಳನ್ನು ಖಂಡಿಸಿ, ಬ್ರಾಹ್ಮಣ ಮತವನ್ನು ಸ್ಥಿರಪಡಿಸಿ ಅದ್ವೈತ ಮತವನ್ನು ಹರಡಿದನು. "ಯಾವ ಯಾವ ಹೆಸರಿನಿಂದ ದೇವರನ್ನು ಭಜಿಸಿ, ಸೇವಿಸಿ ಪೂಜಿಸಿದರೂ ಅದು ಅದ್ವಿತೀಯನಾದ ಪರಮಾತ್ಮನಿಗೆ ಸಲ್ಲುವುದು. ಸರ್ವವೂ ಪರಮಾತ್ಮಸ್ವರೂಪ. ಇದೇ ಅದ್ವೈತಮತದ ಸಾರ ನಾನಾ ಜಾತಿಯ ಜನರು ಪೂಜಿಸುವ ದೇವರುಗಳೆಲ್ಲವೂ ಪರಮಾತ್ಮನೊಬ್ಬನ ಸ್ವರೂಪಗಳೇ ಆದುದರಿಂದ ಯಾವ ದೇವರನ್ನಾದರೂ ಪೂಜಿಸಬಹುದು. ದೈವಭಕ್ತಿ, ದೈವಜ್ಞಾನ, ದೇವರಪೂಜೆ ಇವುಗಳೇ ಜನರಿಗೆ ಮೋಕ್ಷಸಾಧನಗಳು" ಎಂದು ಬೋಧಿಸಿದನು.

ಶಂಕರನು ತನ್ನ 32ನೆಯ ವಯಸ್ಸಿನಲ್ಲಿಯೇ ಹಿಮಾಚಲ ಪರ್ವತದಲ್ಲಿ ಕಾಲವಾದನು. ಈತನ ಕೀರ್ತಿಯು ಶಾಶ್ವತವಾಗಿ ನಿಂತಿದೆ. ಈತನಂಥ ಬುದ್ಧಿ ಶಕ್ತಿಯುಳ್ಳ ತತ್ವವಿಚಾರಪರರೇ ಬಹಳ ಅಪರೂಪವೆಂದು ಹೇಳುವರು. ಈತನು ಹಿಂದೂಗಳ ಮುಖ್ಯ ಮತಗ್ರಂಥಗಳಾದ ಉಪ

ನಿಷತ್ತು, ವ್ಯಾಸರ ಉತ್ತರಮೀಮಾಂಸ, ಭಗವದ್ಗೀತಾ ಇವುಗಳಿಗೆ ಅಮೋಘವಾದ ಭಾಷ್ಯವನ್ನು ರಚಿಸಿದನು. ಶೃಂಗೇರಿ, ಜಗನ್ನಾಥ, ದ್ವಾರಕಿ, ಬದರೀನಾಥ ಎಂಬ ಸ್ಥಳಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದನು.

ಶ್ರೀ ರಾಮಾನುಜಾಚಾರ್ಯ-ಈತನು ಕ್ರಿ.ಶ. 1050ರಲ್ಲಿ ಮದ್ರಾಸ್ ಪಟ್ಟಣಕ್ಕೆ ಸಮೀಪದಲ್ಲಿರುವ ಶ್ರೀ ಪೆರಂಬೂರಿನಲ್ಲಿ ಹುಟ್ಟಿ ಶ್ರೀರಂಗದಲ್ಲಿ ಬೆಳೆದು ಮೊದಲು ಗೃಹಸ್ಥನಾಗಿದ್ದು ಅಮೇಲೆ ಸನ್ಯಾಸವನ್ನು ತೆಗೆದುಕೊಂಡು ವಿಶಿಷ್ಟಾದ್ವೈತವನ್ನು ಬೋಧಿಸಿದರು. ಶಿವನ ಪೂಜೆಗಿಂತಲೂ ವಿಷ್ಣುವಿನ ಪೂಜೆಯೇ ಶ್ರೇಷ್ಠವೆಂಬುದು ಈತನ ಬೋಧೆ. ಶಿವಭಕ್ತನಾಗಿದ್ದ ಆದಿರಾಜೇಂದ್ರನೆಂಬ ಚೋಳರ ದೊರೆಗೆ ಇದು ಸಮ್ಮತಿಸಲಿಲ್ಲ. ರಾಮಾನುಜಾಚಾರ್ಯನು ಆತನ ಕಿರುಕುಳವನ್ನು ತಡೆಯಲಾರದೆ ಮೈಸೂರು ಪ್ರಾಂತದ ದ್ವಾರಸಮುದ್ರಕ್ಕೆ ಬಂದು, ಹೊಯಿಸಳ ರಾಜನ ಆಸರೆಯಲ್ಲಿ ಸೇರಿದನು. ಅಗ ಅಲ್ಲಿ ಆಳುತ್ತಿದ್ದ ಬಿಟ್ಟಿದೇವನು ಜೈನಮತದವನು. ಆತನು ರಾಮಾನುಜಾಚಾರ್ಯನ ಶಿಷ್ಯನಾಗಿ ಶ್ರೀವೈಷ್ಣವಮತವನ್ನು ಅಂಗೀಕರಿಸಿ ವಿಷ್ಣುವರ್ಧನನೆಂಬ ಹೆಸರನ್ನು ಇಟ್ಟುಕೊಂಡನು. ರಾಮಾನುಜನು ನಾನಾ ಜಾತಿಗಳವರನ್ನು ತಮ್ಮ ಮತಕ್ಕೆ ಸೇರಿಸಿಕೊಂಡುದರಿಂದ ಮುಸಲ್ಮಾನರ ಹೊಡತದಿಂದ ಚದುರಿಹೋಗಿದ್ದ ಹಿಂದೂ ಜನಾಂಗವು ಮತ್ತೆ ಒಂದಾಗಲು ಅವಕಾಶವಾಯಿತು.

ಶ್ರೀಮಧ್ವಾಚಾರ್ಯ.—ಈತನು ಉಡುಪಿಯ ಹತ್ತಿರ ಒಂದು ಹಳ್ಳಿಯಲ್ಲಿ ಕ್ರಿ. ಶ. 1199ರಲ್ಲಿ ಹುಟ್ಟಿದನು. ಈತನೂ ಪ್ರಸಿದ್ಧನಾದ ಪಂಡಿತನೆನಿಸಿಕೊಂಡು ದ್ವೈತಮತ ಸಿದ್ಧಾಂತವನ್ನು ಸ್ಥಾಪಿಸಿದನು. ಮಧ್ವಾಚಾರ್ಯನ ತರುವಾಯ 150 ವರುಷಗಳೊಳಗಾಗಿ ಮಧ್ವಮತವು ಕರ್ಣಾಟಕದೇಶದಲ್ಲೆಲ್ಲಾ ಹರಡಿ, ಕನ್ನಡದಲ್ಲಿ ಭಕ್ತಿರಸದಿಂದ ತುಂಬಿದ ಕೀರ್ತನೆಗಳಿಗೆ ಅವಕಾಶವನ್ನುಂಟುಮಾಡಿತು.

ವೀರಶೈವಮತ—ಬಸವೇಶ್ವರ

ಈತನು ಕ್ರಿ.ಶ. 12ನೆಯ ಶತಮಾನದಲ್ಲಿ ದೊರೆಯಾಗಿದ್ದ ಬಿಜ್ಜಳನೆಂಬುವನಿಗೆ ಮಂತ್ರಿಯಾಗಿದ್ದನು. ಬಿಜ್ಜಳನು ಜೈನನು. ಅವನ ಮಂತ್ರಿಯು ಮಾತ್ರ ಆರಾಧ್ಯಬ್ರಾಹ್ಮಣನಾಗಿ ಶಿವನೇ ಸರ್ವೋತ್ತಮನೆಂದೂ,

ಲಿಂಗಧಾರಣೆಯಿಂದ ಎಲ್ಲರೂ ಪರಿಶುದ್ಧರಾಗಬಹುದೆಂದೂ ಬೋಧಿಸಿ, ವೀರಶೈವಮತವನ್ನು ಸ್ಥಾಪಿಸಿದನು. ಇದಕ್ಕಾಗಿ ಬಿಜ್ಜಳ ಬಸವರಿಗೆ ಮನಸ್ತಾಪ ಹುಟ್ಟಿ ಯುದ್ಧಕ್ಕೆ ಮೊದಲಾಯಿತು.

ರಾಮಾನುಜಾಚಾರ್ಯನ ತರುವಾಯ ಸುಮಾರು ನೂರುವರ್ಷಗಳಾದಮೇಲೆ ರಾಮಾನಂದನೆಂಬುವನು ಉತ್ತರ ಹಿಂದೂಸ್ಥಾನದಲ್ಲಿ ಶ್ರೀವೈಷ್ಣವಮತವನ್ನು ಹರಡಿ ನೀಚ ಜಾತಿಯವರನ್ನೂ ಆ ಮತಕ್ಕೆ ಸೇರಿಸಿ ಸಂಸ್ಕೃತದಲ್ಲಿದ್ದ ತನ್ನ ಮತಗ್ರಂಥಗಳನ್ನು ಹಿಂದೀ ಭಾಷೆಯಲ್ಲಿ ಬರೆದನು.

ಅಧ್ಯಾಯ ೯.—ದಕ್ಷಿಣದೇಶದ ಚರಿತೆ,

ಇದುವರೆಗೂ ಉತ್ತರ ಹಿಂದೂಸ್ಥಾನದ ಚರಿತ್ರೆಯನ್ನು ವಿಶದವಾಗಿ ಹೇಳಿಯಾಯಿತು. ಇನ್ನು ದಕ್ಷಿಣದ ಬಯಲುಸೀಮೆ, ಅದಕ್ಕೆ ದಕ್ಷಿಣದಲ್ಲಿರುವ ತಮಿಳುದೇಶ, ಇವುಗಳ ಚರಿತ್ರೆಯನ್ನು ತಿಳಿಯಬೇಕು.

ದಕ್ಷಿಣದೇಶದ ಪ್ರಸ್ಥಭೂಮಿ.—ನರ್ಮದಾ ಕೃಷ್ಣನದಿಗಳ ನಡುವೆ ಇರುವ ದೇಶಕ್ಕೆ ದಕ್ಷಿಣದೇಶ ಅಥವಾ ದಖ್ಖನ್ ಎಂಬ ಹೆಸರು ವಾಡಿಕೆಯಾಗಿದೆ. ಈ ದೇಶದ ಉತ್ತರ ಪಶ್ಚಿಮ ದಿಕ್ಕುಗಳಲ್ಲಿ ಬೆಟ್ಟದ ಸಾಲುಗಳಿರುವುದರಿಂದ ಆ ಕಡೆಗಳಿಂದ ಶತ್ರುಗಳು ದಂಡೆತ್ತಿ ಬಂದುದೇ ಅಪೂರ್ವ. ದಕ್ಷಿಣದೇಶದ ಪಶ್ಚಿಮಭಾಗಕ್ಕೆ ಮಹಾರಾಷ್ಟ್ರವೆಂದೂ, ಪೂರ್ವಭಾಗಕ್ಕೆ ತೆಲುಗಾಣ್ಯವೆಂದೂ ಹೆಸರು. ದ್ರಾವಿಡರು ಇಲ್ಲಿನ ಪೂರ್ವನಿವಾಸಿಗಳು. ಇವರು ಆರ್ಯರ ಸಂಬಂಧದಿಂದ ಬಲುಮಟ್ಟಿಗೆ ನಾಗರಿಕರಾಗಿದ್ದರು. ಕ್ರಿ. ಪೂ. 3ನೆಯ ಶತಮಾನದಲ್ಲಿ ದಕ್ಷಿಣದೇಶವು ಮೌರ್ಯರ ಅಧೀನವಾಗಿತ್ತು. ಅಶೋಕನು ಸತ್ತಮೇಲೆ ಆ ದೇಶವು ಸ್ವತಂತ್ರರಾಜ್ಯವಾಗಿ ಕ್ರಿ. ಪೂ. 230 ರಿಂದ ಕ್ರಿ. ಶ. 226 ರವರೆಗೆ ಆಂಧ್ರರಾಜರ ಆಡಳಿತಕ್ಕೆ ಸೇರಿತ್ತು. ಇವರ ಕಾಲವಲ್ಲಿ ಬೌದ್ಧ ಬ್ರಹ್ಮಣ ಮತಗಳೆರಡೂ ಪ್ರಚಾರದಲ್ಲಿದ್ದುವು. ಇವರ ಕಾಲದ ಶಿಲ್ಪವು ಶ್ರೇಷ್ಠವಾದುದೆನ್ನುವುದಕ್ಕೆ ಇವರು ಕಟ್ಟಿಸಿದ ಗುಹಾಂತರ್ದೇವಾಲಯಗಳೇ ಸಾಕ್ಷಿಯಾಗಿರುವುವು. ವ್ಯಾಪಾ

ರವೂ ಕೈಗಾರಿಕೆಯೂ ಉತ್ತಮ ಸ್ಥಿತಿಯಲ್ಲಿದ್ದುವು. ಆಂಧ್ರರ ಕಾಲದಲ್ಲಿ ದಕ್ಷಿಣದೇಶದ ವರ್ತಕರು ಈಜಿಫ್ಟ್, ಗ್ರೀಸ್, ರೋಮ್ ಮೊದಲಾದ ಪಾಶ್ಚಾತ್ಯ ದೇಶಗಳೊಡನೆ ಸಮುದ್ರ ವ್ಯಾಪಾರವನ್ನು ನಡೆಸುತ್ತಿದ್ದರು.

ಇಲ್ಲಿಂದ 350 ವರ್ಷಗಳ ವರೆಗಿನ ದಕ್ಷಿಣದೇಶದ ಚರಿತ್ರೆಯು ಅಷ್ಟು ಸ್ಪಷ್ಟವಾಗಿಲ್ಲ. ಮತಬೋಧಕರ ಸಹಾಯದಿಂದಲೂ, ಆರ್ಯರ ಸಂಪ್ರದಾಯವನ್ನೇ ಅನುಸರಿಸಿ ಆಳುತ್ತಿದ್ದ ರಾಜರುಗಳ ಸಹಾಯದಿಂದಲೂ, ಆರ್ಯರ ನಾಗರಿಕತೆಯು ಕ್ರಮ ಕ್ರಮವಾಗಿ ದಕ್ಷಿಣಕ್ಕೂ ಹರಡಿತ್ತು. ಅಶೋಕನ ತರುವಾಯ ದಕ್ಷಿಣದೇಶವು ಉತ್ತರ ಹಿಂದೂಸ್ಥಾನದ ದೊರೆಗಳ ಆಳ್ವಿಕೆಗೆ ಒಳಪಡದಿದ್ದರೂ ಈ ಎರಡು ಪ್ರದೇಶಗಳಿಗೂ ಮತಾಚಾರ ಮತ್ತು ವಿದ್ಯೆ ಈ ವಿಷಯಗಳಲ್ಲಿ ಪರಸ್ಪರ ಸಂಬಂಧವು ಬೆಳೆಯುತ್ತಲೇ ಬಂದಿತು. ತಮ್ಮ ದೇಶದಲ್ಲಿಯೇ ಮಧುರೆಯಲ್ಲಿ ವಿದ್ಯಾಪೀಠವಿದ್ದರೂ ದಕ್ಷಿಣದೇಶದ ಪಂಡಿತರು ಆಗಾಗ ಕಾಶಿ, ಉಜ್ಜಯಿನಿ ಮುಂತಾದ ವಿದ್ಯಾಪೀಠಗಳಿಗೆ ಹೋಗಿ ಹೆಚ್ಚು ಪಾಂಡಿತ್ಯವನ್ನು ಪಡೆಯುತಿದ್ದರು. ಮತದ ವಿಷಯದಲ್ಲಿಯೂ ಹೀಗೆಯೇ ದಕ್ಷಿಣದೇಶದ ಜನರಿಗೆ ಗೌತಮಬುದ್ಧ, ಮಹಾವೀರ ಮೊದಲಾದ ಉತ್ತರದೇಶದ ಮತಸ್ಥಾಪಕರ ವಿಷಯದಲ್ಲಿ ಕೇವಲ ಭಕ್ತಿ ಉಂಟಾಗುತ್ತಿತ್ತು.

ಪಲ್ಲವರು ಚಾಲುಕ್ಯರು ರಾಷ್ಟ್ರಕೂಟ ವಂಶದವರು

ಚಾಲುಕ್ಯರು

ಈ ಮಧ್ಯೆ ಸಿಥಿಯನ್ ಕುಲಕ್ಕೆ ಸೇರಿದ ಪಲ್ಲವರೆಂಬ ವಿದೇಶೀಯರು ಗೋದಾವರಿ ನದಿಯ ದಕ್ಷಿಣ ಭಾಗದಲ್ಲಿ ಆಳುತ್ತಿದ್ದರು. ಕ್ರಿ. ಶ. 6ನೆಯ ಶತಮಾನದಲ್ಲಿ ಚಾಲುಕ್ಯರೆಂಬ ರಾಜಪುತ್ರರು ಪಲ್ಲವರನ್ನು ಮೂಲೆಗೊತ್ತಿ, ದಕ್ಷಿಣ ದೇಶವನ್ನೆಲ್ಲಾ ತಮ್ಮ ಸ್ವಾಧೀನಮಾಡಿ ಕೊಂಡರು. ಈಗಿನ ಬಿಜಾಪುರಕ್ಕೆ ಸೇರಿರುವ ಬಾದಾಮಿ ಎಂಬ ಊರು ಇವರ ರಾಜಧಾನಿಯಾಗಿತ್ತು. ಇವರಲ್ಲಿ ಪ್ರಸಿದ್ಧನಾದವನು ಎರಡನೆಯ ಪುಲಿಕೇಶಿ. (ಇಮ್ಮಡಿ ಪುಲಿಕೇಶಿ ಕ್ರಿ. ಪೂ. 608—642). ಈತನು ಮಾಳವ, ದಕ್ಷಿಣ ಕೋಸಲ,

ಕಳಿಂಗ ಮೊದಲಾದ ರಾಜ್ಯಗಳನ್ನು ಗೆದ್ದು, ಕ್ರಿ. ಶ. 620 ರಲ್ಲಿ ಉತ್ತರ ಹಿಂದೂ ಸ್ಥಾನದಲ್ಲೆಲ್ಲಾ ಪರಾಕ್ರಮಿಯೆನಿಸಿದ ಹರ್ಷಚಕ್ರವರ್ತಿಯನ್ನು ಸೋಲಿಸಿದನು. ಇದೂ ಅಲ್ಲದೆ ಚೋಳ, ಪಾಂಡ್ಯ, ಕೇರಳ ಈ ದೇಶಗಳ ಮೇಲೆ ದಂಡೆತ್ತಿ ಹೋಗಿ, ಆ ದೊರೆಗಳನ್ನು ಗೆದ್ದು "ದಕ್ಷಿಣಾಪಥೇಶ್ವರ" ಎಂಬ ಹೆಸರನ್ನು ಪಡೆದನು. ಇವನು ಬಹು ಸಮರ್ಥನಾದ ದೊರೆ. ಇವನು ಅಶ್ವಮೇಧ ಯಾಗವನ್ನು ಮಾಡಿದನಂತೆ. ಇವನ ಕೀರ್ತಿಯು ಪಾರ್ಸೀಸ್ಥಾನದವರೆಗೂ ಹಬ್ಬಿತ್ತು. ಕೊನೆಗೆ ಚಾಲುಕ್ಯರ ಸಾಮಂತರಾಗಿದ್ದ ರಾಷ್ಟ್ರಕೂಟರು ಕ್ರಿ. ಶ. 8ನೆಯ ಶತಮಾನದಲ್ಲಿ ತಮ್ಮ ಒಡೆಯರನ್ನು ಮೂಲೆಗೆ ಕೂರಿಸಿ ತಾವೇ ದೊರೆಗಳಾದರು.

ಕಾಲಚೂರ್ಯರು ಯಾದವರು ಮತ್ತು ಕಾಕತೀಯರು

10ನೆಯ ಶತಮಾನದ ಅಂತ್ಯಭಾಗದಲ್ಲಿ ಚಾಲುಕ್ಯರು ರಾಷ್ಟ್ರಕೂಟರನ್ನು ಸೋಲಿಸಿ ಪುನಃ ಅಧಿಕಾರಕ್ಕೆ ಬಂದರು. ಅನಂತರ ಅವರ ಸಾಮಂತರಾಗಿದ್ದ ಕಾಲಚೂರ್ಯರು ಅವರನ್ನು ಸೋಲಿಸಿ ಪ್ರಬಲರಾದರು. ಆದರೆ ಅವರು ರಾಜ್ಯವಾಳಿದ್ದು ಅತ್ಯಲ್ಪಕಾಲವೇ.

ಈ ಸ್ವಲ್ಪಕಾಲದಲ್ಲಿಯೇ ಕಾಲಚೂರ್ಯವಂಶದ ಬಿಜ್ಜಳನ ಮಂತ್ರಿಯಾದ ಬಸವನೆಂಬಾತನು ವೀರಶೈವ ಮತವನ್ನು ಸುಧಾರಿಸಿದನು. ಕೆಲವು ಕಾಲಾನಂತರ ಚಾಲುಕ್ಯರು ಪುನಃ ತಮ್ಮ ರಾಜ್ಯವನ್ನು ಸ್ಥಾಪಿಸುವುದಕ್ಕೆ ಯತ್ನಿಸಿದರು. ಅದು ಸಾಗದೆ, ಹನ್ನೆರಡನೆಯ ಶತಮಾನದ ಅಂತ್ಯದಲ್ಲಿ ಚಾಲುಕ್ಯರಾಜ್ಯವು ಒಡೆದು ಹೋಗಿ, ದೇವಗಿರಿಯಲ್ಲಿ ಯಾದವರೂ, ಓರಂಗಲ್ಲಿನಲ್ಲಿ ಕಾಕತೀಯರೂ, ದ್ವಾರಸಮುದ್ರದಲ್ಲಿ ಹೊಯ್ಸಳ ಬಲ್ಲಾಳರೂ ಪ್ರಾಬಲ್ಯಕ್ಕೆ ಬಂದರು.

ಹೊಯ್ಸಳರು

ಮಂಜರಾಬಾದಿನ ಬಳಿ ಒಂದು ಹಳ್ಳಿಯಲ್ಲಿದ್ದ ಜೈನಮತಸ್ಥನಾದ ಸಳನೆಂಬುವನು ಹೊಯ್ಸಳರ ಮೂಲಪುರುಷನಂತೆ. ಈತನು ಒಂದು ದಿನ ತನ್ನ ಗುರುವಾದ ಸುದತ್ತನೆಂಬ ತಪಸ್ವಿಯ ಪೂಜೆಗೆ ಅಣಿಪಡಿಸಿ ಕೊಡುತ್ತಿದ್ದಾಗ ಒಂದು ಹುಲಿಯು ಬಂದಿತು. ಅದನ್ನು ನೋಡಿ ಗುರುವು

"ಹೊಯ್ ಸಳ" (ಸಳನೆಂಬುವನೇ, ಹೊಡೆ) ಎಂದನಂತೆ. ಅದೇ ರೀತಿ ಸಳನು ಅದನ್ನು ಹೊಡೆದುಕೊಂದುದರಿಂದ ಅವನಿಗೆ ಹೊಯ್ಸಳನೆಂತಲೂ, ಅವನ ವಂಶದವರಿಗೆ ಹೊಯ್ಸಳ ವಂಶದವರೆಂತಲೂ ಹೆಸರಾಯಿತಂತೆ. ಹೊಯ್ಸಳರು ದ್ವಾರಕಿಯ ಕೃಷ್ಣನ ವಂಶದವರೆಂದು ಹೇಳುವರು. ಇವರು ಮೊದಲು ಬೇಲೂರಿನಲ್ಲೂ ಆ ಮೇಲೆ ದ್ವಾರಸಮುದ್ರದಲ್ಲೂ (ಹಳೇಬೀಡು) ಆಳುತ್ತಿದ್ದರು. ಹೊಯ್ಸಳ ರಾಜರು ಬೇಲೂರು, ಹಳೇಬೀಡು, ಸೋಮನಾಥಪುರ, ಮುಂತಾದ ಸ್ಥಳಗಳಲ್ಲಿ ಕಟ್ಟಿಸಿದ ದೇವಾಲಯಗಳು ಈಗಲೂ ಲೋಕಪ್ರಸಿದ್ಧವಾಗಿವೆ.

ವಿಷ್ಣುವರ್ಧನ

ಹೊಯ್ಸಳ ರಾಜರಲ್ಲಿ ಬಿಟ್ಟಿದೇವನೆಂಬುವನು ಕೇವಲ ಸಮರ್ಥನು. ಇವನು ತನ್ನ ರಾಜ್ಯವನ್ನು ತುಂಬಾ ವಿಸ್ತರಿಸಿದನು. ಹೊಯ್ಸಳ ರಾಜರು ಜೈನ ಮತಸ್ಥರು. ಆದರೆ ಕ್ರಿ. ಶ. 1115ರಲ್ಲಿ ಬಿಟ್ಟಿದೇವನು ರಾಮಾನುಜಾಚಾರ್ಯರ ಬೋಧನೆಯಿಂದ ಶ್ರೀವೈಷ್ಣವಮತವನ್ನು ಅಂಗೀಕರಿಸಿ ವಿಷ್ಣುವರ್ಧನನೆಂಬ ಹೆಸರು ಪಡೆದನು. ಇವನಾದ ಮೇಲೆ ವೀರಬಲ್ಲಾಳನೆಂಬುವನು ತುಂಬಾ ಖ್ಯಾತಿವಂತನಾಗಿದ್ದನು. ಈತನು ಹೊಯ್ಸಳರ ಸ್ವಾತಂತ್ರ್ಯವನ್ನು ಸ್ಥಾಪಿಸಿದನು. ಇವನು ದೇವಗಿರಿಯ ಯಾದವರನ್ನು ಗೆದ್ದು "ದಕ್ಷಿಣ ಚಕ್ರವರ್ತಿ" ಯೆನಿಸಿಕೊಂಡನು. ಕೊನೆಕೊನೆಗೆ ಹೊಯ್ಸಳ ರಾಜ್ಯವೂ, ದೇವಗಿರಿಯೂ ದಕ್ಷಿಣ ದೇಶದಲ್ಲಿ ಪ್ರಸಿದ್ಧಿಗೆ ಬಂದಿದ್ದ ಕದಂಬ, ಗಂಗ ಎಂಬ ಕರ್ಣಾಟಕ ರಾಜ್ಯಗಳೂ ತುರಕರ ಪಾಲಾದುವು.

ಅಧ್ಯಾಯ ೧೦.—ತಮಿಳು ನಾಡಿನ ಚರಿತ್ರೆ

ಕೃಷ್ಣಾ, ತುಂಗಭದ್ರಾ ನದಿಗಳ ದಕ್ಷಿಣಭಾಗದ ದೇಶಗಳ ಪುರಾತನ ಚರಿತ್ರೆಯು ಹೇಗೆಯೇ ಇದ್ದಿತೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಆರ್ಯರು ಹಿಂದೂ ದೇಶಕ್ಕೆ ಬರುವುದಕ್ಕೆ ಮೊದಲೇ ಇಲ್ಲಿನ ನಿವಾಸಿಗಳಾದ ದ್ರಾವಿಡರು ನಾಗರಿಕರಾಗಿದ್ದರೆಂಬುದಕ್ಕೆ ನಿದರ್ಶನಗಳಿವೆ. ಈ ದ್ರಾವಿಡರು

ಮೊದಲು ಹಿಂದೂ ದೇಶದಲ್ಲೆಲ್ಲಾ ತುಂಬಿದ್ದರು. ಆರ್ಯರು ಮುಂದರಿದು ಬಂದ ಮೇಲೆ, ಇವರು ದಕ್ಷಿಣದಲ್ಲಿ ನಿಂತರು. ಇವರ ನಾಗರಿಕತೆಯನ್ನು ನೋಡಿ ಆರ್ಯರು ಇವರೊಡನೆ ಕ್ರಮೇಣ ಸಂಬಂಧಬೆಳಸಿದರು. ಇವರ ಭಾಷೆಗಳು ಕನ್ನಡ, ತಮಿಳು, ತೆಲುಗು, ತುಳು ಮತ್ತು ಮಲೆಯಾಳ. ಇವರು ಬಲು ಹಿಂದಿನ ಕಾಲದಿಂದಲೂ, ಚೀಣ, ಪರ್ಷಿಯಾ ಮತ್ತು ಇಟಲಿ ದೇಶಗಳೊಡನೆ ಸಮುದ್ರ ಮಾರ್ಗವಾಗಿ ವ್ಯಾಪಾರಮಾಡುತ್ತಿದ್ದರು. ವ್ಯಾಪಾರದಲ್ಲಿ ಮಾತ್ರವಲ್ಲದೆ, ಯುದ್ಧಮಾಡುವುದರಲ್ಲಿಯೂ ಕುಶಲವಿದ್ಯೆಗಳಲ್ಲಿಯೂ ಇವರು ಅಗ್ರಗಣ್ಯರು. ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ ಕಾಲುವೆಗಳನ್ನು ತೆಗೆಯುವುದರಲ್ಲಿಯೂ, ಅಂದವಾದ ಗುಡಿಗಳನ್ನು (ಮಹಾಬಲಿಪುರ, ಅಮರಾವತಿ) ಕಟ್ಟುವುದರಲ್ಲಿಯೂ ಇವರು ನಿಪುಣರು.

ದ್ರಾವಿಡ ರಾಜ್ಯಗಳಲ್ಲಿ ಪಲ್ಲವ, ಕೇರಳ, ಚೋಳ, ಪಾಂಡ್ಯ ಎಂಬಿವುಗಳು ಪ್ರಸಿದ್ಧವಾದವುಗಳು. ಇವುಗಳಲ್ಲದೆ ತಲಕಾಡಿನಲ್ಲಿ ಗಂಗರಾಜರೂ. ಬನವಾಸಿಯಲ್ಲಿ ಕದಂಬರೂ ರಾಜ್ಯವಾಳುತ್ತಿದ್ದರು.

ಪಲ್ಲವರು

ಕ್ರಿ. ಶ. ೩ನೆಯ ಶತಮಾನದಲ್ಲಿ ಪಲ್ಲವರು ಕೃಷ್ಣಾನದಿಯಿಂದ ಕಾವೇರಿ ನದಿಯವರೆಗಿನ ರಾಜ್ಯಕ್ಕೆಲ್ಲಾ ಅಧಿಪತಿಗಳಾಗಿದ್ದರು. ಕಂಚಿಯು ಇವರ ರಾಜಧಾನಿ, ಇವರು ವಿಶೇಷವಾಗಿ ಶಿವೋಪಾಸಕರು. ಇವರಲ್ಲಿ ಕಡೆಕಡೆಗೆ ಬಂದ ಅರಸರು ಶಕ್ತರಲ್ಲದುದರಿಂದ ಚಾಲುಕ್ಯರೂ, ರಾಷ್ಟ್ರಕೂಟರೂ, ಚೋಳರೂ ಇವರನ್ನು ಸೋಲಿಸಿ ಇವರ ಸೀಮೆಗಳನ್ನು ಕಿತ್ತುಕೊಂಡರು. ಕ್ರಿ. ಶ. 13ನೆಯ ಶತಮಾನದ ಹೊತ್ತಿಗೆ ಇವರ ಸೀಮೆಯಲ್ಲಾ ಕೈಬಿಟ್ಟುಹೋಗಿ ಪಲ್ಲವ ರಾಜರು ಸಣ್ಣಸಣ್ಣ ಪಾಳೆಯಗಾರರಾಗಿ ಕ್ರಮೇಣ ಜನರಲ್ಲಿ ಬೆರೆತು ಹೋದರು.

ಕೇರಳ

ಕೇರಳಕ್ಕೆ ಚೇರರಾಜ್ಯವೆಂದೂ ಹೆಸರಿತ್ತು. ಈಗ ಇದಕ್ಕೆ ತಿರುವಾಂಕೂರು ಎಂದು ಹೆಸರು ಇರುತ್ತದೆ. ಈ ರಾಜ್ಯವು ಮೊದಲು ಪಾಂಡ್ಯರ ಕೈವಶವಾಗಿ ಆಮೇಲೆ ಪಲ್ಲವರಿಗೆ ಅಧೀನವಾಯಿತು.

ಪಾಂಡ್ಯ

ಈ ರಾಜ್ಯವು ಈಗಿನ ಪುದುಕೋಟೆಯಿಂದ ಕನ್ಯಾಕುಮಾರಿಯವರೆಗೂ ವಿಸ್ತರಿಸಿತ್ತು. ಇವರ ರಾಜಧಾನಿ ಮಧುರೆ. ಇಲ್ಲಿ ಅನೇಕ ತಮಿಳು ಪಂಡಿತರಿದ್ದರು. ಈ ದೇಶದಲ್ಲಿ ಮುತ್ತುಗಳ ವ್ಯಾಪಾರವು ವಿಶೇಷವಾಗಿ ನಡೆಯುತ್ತಿತ್ತು. ಈ ರಾಜ್ಯವು ಕ್ರಿ. ಶ. 14ನೆಯ ಶತಮಾನದಲ್ಲಿ ತುರಕರ ಕೈಸೇರಿತು. ಪಾಂಡ್ಯ ರಾಜರಲ್ಲಿ ಕೆಲವರು ಬೌದ್ಧ ಮತವನ್ನೂ, ಮತ್ತೆ ಕೆಲವರು ಜೈನಮತವನ್ನೂ ಅವಲಂಬಿಸಿದರು.

ಚೋಳ

ಚೋಳರಾಜ್ಯವು ಮೌರ್ಯರಕಾಲದಲ್ಲಿಯೇ ಪ್ರಸಿದ್ಧಿಪಡೆದಿದ್ದು ಕ್ರಿ. ಶ. 985 ರಿಂದೀಚೆಗೆ ಇನ್ನೂ ಪ್ರಾಬಲ್ಯಕ್ಕೆ ಬಂದಿತು. ಇಲ್ಲಿನ ದೊರೆಗಳಲ್ಲಿ ರಾಜರಾಜನೆಂಬುವನು ಪ್ರಮುಖನು. ಈತನ ರಾಜ್ಯವು ಗೋದಾವರಿ ನದಿಯಿಂದ ಸಿಂಹಳದ್ವೀಪದವರೆಗೂ ವಿಸ್ತರಿಸಿತ್ತು. ಇವನನ್ನು ಚೋಳ ಸಾಮ್ರಾಜ್ಯಸ್ಥಾಪಕನೆಂದು ಕರೆಯುತ್ತಾರೆ. 1ನೆಯ ರಾಜೇಂದ್ರಚೋಳನು ರಾಜ್ಯವನ್ನು ಮತ್ತಷ್ಟು ವಿಸ್ತರಿಸಿದನು. ಇವನ ತರುವಾಯ ಬಂದ ದೊರೆಗಳು ಕೇವಲ ಅಸಮರ್ಥರಾದುದರಿಂದ ಚೋಳ ರಾಜ್ಯವು ಒಡೆದು ಹೋಗಿ ಸಣ್ಣಸಣ್ಣ ಪಾಳೆಯಗಾರರ ವಶವಾಯಿತು. ಇವರುಗಳು ವಿಜಯ ನಗರದ ರಾಜನಿಗೆ ಕಪ್ಪಕಾಣಿಕೆಯನ್ನು ಒಪ್ಪಿಸುತ್ತಿದ್ದರು. ಚೋಳರಾಜರು ಶೈವ ಮತಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟರು. ಇವರು ಕಟ್ಟಿಸಿದವುಗಳೆಲ್ಲಾ ಶಿವಾಲಯಗಳೇ. ಇವರ ಕಾಲದ ಗುಡಿಗೋಪುರಗಳು ಈಗಲೂ ದಕ್ಷಿಣದೇಶದಲ್ಲಿ ಇವರ ನೆನಪನ್ನುಂಟುಮಾಡುತ್ತವೆ.

ತಮಿಳು ರಾಜ್ಯಗಳ ಸಾಮಾನ್ಯ ಸ್ಥಿತಿ

ಚೋಳರ ರಾಜ್ಯಭಾರಕ್ರಮವು ಬಹಳ ಸಮರ್ಪಕವಾದುದು. ಇವರ ಕಾಲದಲ್ಲಿದ್ದ ತೆರಿಗೆಗಳು ಹೆಚ್ಚೆಂದೇ ಹೇಳಬೇಕು. ಕಸಬುಗಳ ಮೇಲೂ, ಕೆಲವು ವ್ಯಾಪಾರದ ಸರಕುಗಳ ಮೇಲೂ ತೆರಿಗೆಗಳಿದ್ದರೂ, ಭೂಕಂದಾಯವೇ ಮುಖ್ಯವಾದ ರಾಜಾದಾಯವಾಗಿದ್ದಿತು. ಕ್ಷಾಮ ಕಾಲದಲ್ಲಿ ಕಂದಾಯವನ್ನು ಬಿಟ್ಟುಬಿಡುವ ಪದ್ಧತಿ ಇದ್ದಿತು. ಪ್ರಜೆಗಳಿಗೆ ಹಿತವಾಗುವ

ಕೆಲಸಗಳಿಗಾಗಿ ದೊರೆಯು ವಿಶೇಷ ದ್ರವ್ಯವನ್ನು ವೆಚ್ಚಮಾಡುತ್ತಿದ್ದನು. ದ್ರಾವಿಡ ದೇಶದ ದೊರೆಗಳು ಅನೇಕ ದೇವಾಲಯಗಳನ್ನು ಕಟ್ಟಿಸಿದರು. ಈ ದೇವಾಲಯಗಳಲ್ಲಿ ಜನರು, ದೇವರ ಪೂಜೆಗೆ ಮಾತ್ರವಲ್ಲದೆ ಪೌರಸಾ ಮಾಜಿಕ ಕಾರ್ಯಗಳಿಗೂ ಇಲ್ಲಿಯೇ ಸೇರುತ್ತಿದ್ದರು. ಸಂಗೀತ, ನಾಟಕ, ಸಂಭಾಷಣ ಇವುಗಳೆಲ್ಲವೂ ದೇವಸ್ಥಾನಗಳಲ್ಲಿಯೇ ನಡೆಯುತ್ತಿದ್ದುವು. ಈ ದೇವಾಲಯಗಳನ್ನು ಕಟ್ಟಿಸುವುದರ ಜತೆಗೆ ಯಾತ್ರಾರ್ಥಿಗಳ ಉಪ ಯೋಗಕ್ಕಾಗಿ ರಸ್ತೆಗಳೂ, ಸೇತುವೆಗಳೂ, ಕೊಳಗಳೂ, ಸ್ನಾನಘಟ್ಟ ಗಳೂ ಇವುಗಳೆಲ್ಲಕ್ಕೂ ತಮಿಳು ದೇಶದ ದೊರೆಗಳು ತಮ್ಮ ಹಣವನ್ನು ವಿನಿ ಯೋಗಿಸುತ್ತಿದ್ದರು.

ಆರ್ಯರು ಮೊದಲು ಸಿಂಧೂ ನದಿಯ ತೀರದಲ್ಲಿ ನೆಲಸಿ ಅಲ್ಲಿಂದ ಕ್ರಮವಾಗಿ ಮುಂದರಿದು ತಮ್ಮ ನಾಗರಿಕತೆಯನ್ನು 50—60 ಶತಮಾನ ಗಳ ವರೆಗೆ ಹಿಂದೂದೇಶದಲ್ಲೆಲ್ಲಾ ಹರಡಿದ ಚರಿತ್ರೆಯನ್ನು ಇದುವರೆಗೂ ತಿಳಿದಾಯಿತು. ಇನ್ನು ಮುಂದೆ ನಮ್ಮ ಭರತಭೂಮಿಯ ನಡೆವಳಿಯು "ಹಿಂದೂ, ಮುಸಲ್ಮಾನ್" ಎಂಬ ಎರಡು ಬಗೆಯನ್ನು ಹೊಂದಿದ ಚರಿತ್ರೆಯನ್ನು ಮುಂದಿನ ಅಧ್ಯಾಯದಲ್ಲಿ ತಿಳಿಸಲಾಗುವುದು.

---

೨. ಮಹಮದೀಯರ ಚರಿತ್ರೆ

ಅಧ್ಯಾಯ ೧.—ತುರುಕರ ಆಗಮನ

ರಾಜಪುತ್ರರು ಬ್ರಾಹ್ಮಣ ಮತವನ್ನು ಜೀರ್ಣೋದ್ಧಾರ ಮಾಡುತ್ತಿದ್ದ ಸಮಯದಲ್ಲೇ ಅರೇಬಿಯಾದಲ್ಲಿ ಆಗತಾನೇ ಸ್ಥಾಪಿತವಾಗಿದ್ದ ಮಹಮದೀಯರ ಮತವು ಹಿಂದೂದೇಶಕ್ಕೆ ತಲೆಹಾಕುತ್ತಿದ್ದಿತೆಂದು ಹಿಂದೆಯೇ ಹೇಳಿದೆ. ಈಗ ಈ ಮತದ ವಿಚಾರವನ್ನು ಸ್ವಲ್ಪಮಟ್ಟಿಗೆ ತಿಳಿಯೋಣ.

ಮಹಮ್ಮದೀಯ ಮತಸ್ಥಾಪನೆ

ಅರಬ್ಬೀಸ್ಥಾನವು ಹಿಂದಿನ ಕಾಲದಿಂದಲೂ ಬಹಳ ಹೀನಸ್ಥಿತಿಯಲ್ಲಿತ್ತು. ಅದು ಸ್ವಭಾವವಾಗಿ ಮಳೆಯಿಲ್ಲದ ಬೆಂಗಾಡು ಸೀಮೆ. ಅಲ್ಲಿ ವಿಶಾಲವಾದ ಮರುಭೂಮಿಗಳಿರುವುವು. ಅಲ್ಲಿ ಕೆರೆ ಕುಂಟೆಗಳಾವುವೂ ಇಲ್ಲ. ಅಲ್ಲಿಯ ಜನರಿಗೆ ಜೀವನಕ್ಕೆ ಸೌಕರ್ಯಗಳಿಲ್ಲ. ಇಂಥ ಪ್ರದೇಶದಲ್ಲಿ ವಾಸಮಾಡತಕ್ಕವರು ಒರಟಾಗಿಯೂ, ಕಲಹಪ್ರಿಯರಾಗಿಯೂ ಇರುವುದು ಸಹಜವಾಗಿಯೇ ಇದೆ. ಅಲ್ಲಿಯ ಜನರಲ್ಲಿ ಐಕಮತ್ಯವಿರಲಿಲ್ಲ. ಅವರು ಕಲ್ಲು, ಮರ, ವಿಗ್ರಹ ಇವುಗಳನ್ನು ಆರಾಧಿಸುತ್ತಾ ಇದ್ದರು. ಮಕ್ಕಾ ಪಟ್ಟಣದಲ್ಲಿದ್ದ ಒಂದು ಬಾವಿಯೂ, ಒಂದು ಕರೀಕಲ್ಲೂ ಇವರ ಶ್ರೇಷ್ಠವಾದ ದೇವರುಗಳು. ಈ ದುರಾಚಾರಗಳನ್ನು ತಪ್ಪಿಸಬೇಕೆಂದು ಅರೇಬಿಯಾದಲ್ಲಿ ಜನಿಸಿದ ಮಹಮ್ಮದ್ ಎಂಬಾತನು "ದೇವರು ಒಬ್ಬನೇ ; ವಿಗ್ರಹರಾಧನೆಯು ಕೂಡದು ; ದಾನಧರ್ಮಗಳನ್ನು ಮಾಡಿ ತೀರ್ಥಯಾತ್ರೆಗಳನ್ನು ಮಾಡಿದರೆ ಮುಕ್ತಿಯುಂಟಾಗುವುದು. ಪರಸ್ಪರ ಪ್ರೀತಿ ಇರಬೇಕು. ಈ ತತ್ವಗಳನ್ನು ಪ್ರಪಂಚಕ್ಕೆಲ್ಲಾ ಬೋಧಿಸುವುದಕ್ಕಾಗಿ ದೇವರು ನನ್ನನ್ನು ದೂತನಾಗಿ ಕಳುಹಿಸಿರುವನು" ಎಂದು ಬೋಧಿಸುತ್ತಾ ಹೊರಟನು. ಅನೇಕರು ಇವನ ಬೋಧೆಯನ್ನು ಅಂಗೀಕರಿಸಿದರು. ಇವರಿಗೆ ಮಹಮದೀಯರೆಂದು ಹೆಸರಾಯಿತು.

ಮಹಮದನು ಬೋಧಿಸಿದ ತತ್ವಗಳು ಅನೇಕರಿಗೆ ಒಪ್ಪಿತು. ವಿಗ್ರಹಾರಾಧನೆಯು ಕೂಡದೆಂಬ ಇವನ ಬೋಧೆಯು ಹೊಸದಲ್ಲ. ಹಿಂದೆಯೇ ಆರ್ಯಮಹರ್ಷಿಗಳೂ, ಬುದ್ಧದೇವನೂ ಇದನ್ನು ನಿಷೇಧಿಸಿದ್ದರು.

ಹಿಜಿರಾ

ಆದರೆ ಮಹಮದೀಯರು ಇತರ ರಾಜ್ಯಗಳನ್ನು ಗೆದ್ದು, ಲೂಟಿ ಮಾಡಿ ಅಲ್ಲಿಯ ಜನರನ್ನು ತಮ್ಮ ಮತಕ್ಕೆ ಬಲಾತ್ಕಾರದಿಂದ ಸೇರಿಸುವುದು ತಮ್ಮ ಕರ್ತವ್ಯವೆಂದು ತಿಳಿದಿದ್ದರು. ಹೀಗೆ ಅವರು ತಿಳಿಯಲು ಜೀವನಕ್ಕೆ ತಕ್ಕ ಅನುಕೂಲವಿಲ್ಲದ ಅವರ ದೇಶವೇ ಕಾರಣವಾಗಿದ್ದಿತು. ಲೂಟೀಮಾಡಿ ತರದಿದ್ದರಾಗಲೀ, ಗುಲಾಮರನ್ನು ಹಿಡಿದುತಂದು ದುಡಿಸದಿದ್ದರಾಗಲೀ ಅವರಿಗೆ ತಿನ್ನುವುದಕ್ಕೆ ಇರುತ್ತಿರಲಿಲ್ಲ. ಮಹಮದನೂ, ಅವನ ಮತವನ್ನು ಅವಲಂಬಿಸಿದ ಅವನ ಶಿಷ್ಯರೂ ಮಹಮದನ ಮತವನ್ನು ಹರಡುತ್ತಾ ಅಲ್ಲಲ್ಲಿ ರಾಜ್ಯಗಳನ್ನು ಕಟ್ಟಿದರು. ಮಕ್ಕಾ ಪಟ್ಟಣದ ಜನಗಳಲ್ಲಿ ಅನೇಕರು ಇವನ ಮತವನ್ನೊಪ್ಪದೆ ಇವನಿಗೆ ಶತ್ರುಗಳಾದರು. ಅವರು ತನ್ನನ್ನು ಕೊಲ್ಲುವರೆಂದು ಭಯಪಟ್ಟು ಮಹಮದನು ಕ್ರಿ. ಶ. 622ರಲ್ಲಿ ಮಕ್ಕಾದಿಂದ ಮದೀನಕ್ಕೆ ಓಡಿಹೋದನು. ಮಹಮದೀಯರು ಈ ಇಸವಿಯನ್ನು ಮೊದಲುಮಾಡಿ ತಮ್ಮ ಶಕವನ್ನು ಎಣಿಸುತ್ತಾರೆ. ಇದಕ್ಕೆ "ಹಿಜಿರಾ" ಎಂದು ಹೆಸರಾಯಿತು.

ಮಹಮದೀಯರ ರಾಜ್ಯಸ್ಥಾಪನೆ

ಮಹಮದನು ಮಕ್ಕಾ ಪಟ್ಟಣವನ್ನು ಬಿಟ್ಟುಹೋದಮೇಲೂ ಅರಬ್ಬಿಯವರು ಅವನ ಕಡೆಯವರನ್ನು ಹಿಂಸಿಸುತ್ತಿದ್ದರು. ಇದನ್ನು ನೋಡಿ ಸಹಿಸಲಾರದೆ, ಮಹಮದನು ಸಾತ್ವಿಕಮಾರ್ಗವನ್ನು ತ್ಯಜಿಸಿ, ಸೈನ್ಯವನ್ನು ಕಟ್ಟಿ, ತನ್ನ ಮತವನ್ನು ಹರಡುವುದಕ್ಕೂ, ರಾಜ್ಯವನ್ನು ಕಟ್ಟುವುದಕ್ಕೂ ಆರಂಭಿಸಿದನು. ಮಹಮದನು ಕ್ರಿ. ಶ. 632ರಲ್ಲಿ ಕಾಲವಾದನು. ಇವನ ನಂತರ ಅಧಿಕಾರಕ್ಕೆ ಬಂದವರಿಗೆ ಕಲೀಫರೆಂದು ಹೆಸರು. ಬಳಿಕ ಎಂಟು ವರ್ಷಗಳೊಳಗಾಗಿ ಪರ್ಷಿಯಾ, ಸಿರಿಯಾ, ತುರ್ಕಿ, ಈಜಿಪ್ಟ್ ದಕ್ಷಿಣ ಸ್ಪೇನ್ ಈ ಪ್ರಾಂತಗಳೆಲ್ಲವೂ ಮಹಮದೀಯರ ವಶವಾಗಿ, ಅಲ್ಲಿನ

ಜನರು ಮಹಮದೀಯ ಮತವನ್ನವಲಂಬಿಸಿದರು. ತುರ್ಕಿಸ್ಥಾನದಲ್ಲಿ ಇವರ ಸಂಖ್ಯೆ ಹೆಚ್ಚಿದುದರಿಂದ ಇವರಿಗೆ ತುರುಕರೆಂಬ ಹೆಸರು ರೂಢಿಗೆ ಬಂದಿತು.

ಯುದ್ಧಾಸಕ್ತರಾದ ಮಹಮದೀಯರು ಸುಮ್ಮನಿರದೆ ಕ್ರಿ. ಶ. ೭೧೨ರಲ್ಲಿ ಅರಬ್ಬಿದೇಶದ ಮಹಮದ್ ಖಾಸೀಮನನ್ನು ಸಿಂಧೂದೇಶದ ಮೇಲೆ ಕಳುಹಿಸಿದರು. ಆ ದೇಶವು ಮಹಮದೀಯರ ಪಾಲಾಯಿತು. ಅನೇಕ ಅರಬ್ಬಿಯವರು ಸಿಂಧೂದೇಶದಲ್ಲಿಯೇ ನೆಲೆಯಾಗಿ ನಿಂತರು. ಆದರೆ ಒಂದೆರಡು ಶತಮಾನಗಳನಂತರ ಹಿಂದೂಗಳು ಮಹಮ್ಮದೀಯರನ್ನು ಅಟ್ಟಿಬಿಟ್ಟರು. ಬಳಿಕ ಮಹಮ್ಮದೀಯರು ಇನ್ನೂರು ವರುಷಗಳ ವರೆಗೂ ನಮ್ಮ ದೇಶದ ತಂಟೆಗೆ ಬರಲಿಲ್ಲ.

ಸಬಕ್ತಗೀನ್ (ಘುಸ್ನಿಯ ತುರುಕರು)

ಕ್ರಿ. ಶ. ೧೦ನೆಯ ಶತಮಾನದಲ್ಲಿ ಸಬಕ್ತಗೀನ್ ಎಂಬ ತುರ್ಕಿಸ್ಥಾನದ ಗುಲಾಮನು ಪ್ರಬಲನಾಗಿ ಘುಸ್ನಿಯಲ್ಲಿ ರಾಜ್ಯದ ಪಟ್ಟಕ್ಕೆ ಬಂದನು. ಇವನಿಗೂ ಇವನ ಕಡೆಯವರಿಗೂ ಘುಸ್ನಿಯ ತುರುಕರೆಂದು ಹೆಸರಾಯಿತು. ಘುಸ್ನಿಯ ರಾಜ್ಯದ ಪರಿಪಾಲನೆಗಾಗಿ ವಿಶೇಷ ಹಣ ಬೇಕಾಗಿದ್ದಿತು. ಇದಕ್ಕಾಗಿ ಸಬಕ್ತಗೀನನು ಸಮೀಪದಲ್ಲಿದ್ದ ಸಂಪದ್ಯುಕ್ತವಾದ ಪಂಜಾಬು ರಾಜ್ಯದಮೇಲೆ ಆಗಾಗ್ಗೆ ಬೀಳಲಾರಂಭಿಸಿದನು. ಸಬಕ್ತಗೀನನು ಕಾಲವಾದಮೇಲೆ ಅವನ ಮಗ ಮಹಮದ್ ಎಂಬುವನು ಸುಲ್ತಾನ್ ಮಹಮದ್ ಎಂಬ ಹೆಸರಿನಿಂದ ಘುಸ್ನಿ ಸಿಂಹಾಸನವನ್ನು ಏರಿದನು.

ಸುಲ್ತಾನ್ ಮಹಮದ್, ಅವನ ದಂಡಯಾತ್ರೆಗಳು

ಈತನಿಗೆ ತಾನೇ ಕಲೀಫನಾಗಬೇಕೆಂಬ ಆಸೆಯಿದ್ದಿತು. ಇದನ್ನು ಸಾಧಿಸಬೇಕಾದರೆ ದೊಡ್ಡ ಸೈನ್ಯವೇ ಬೇಕಾಯಿತು. ಈ ಕೆಲಸಕ್ಕೆ ಅಪಾರವಾದ ದ್ರವ್ಯ ಬೇಕಾಯಿತು. ಇದಕ್ಕಾಗಿ ಇವನು ತನ್ನ ಮತವನ್ನು ಹರಡುವ ನೆವದಿಂದ, ಇಂಡಿಯಾ ದೇಶಕ್ಕೆ ಅನೇಕಸಾರಿ ದಂಡಯಾತ್ರೆಗೆ ಹೊರಟನು. ಮೊದಲನೆಯ ದಂಡಯಾತ್ರೆಯಲ್ಲಿ ಲಾಹೋರಿನ ಜಯಪಾಲನು ಪೆಷಾವರಿನ ಬಳಿ ಸೋತು ಅಪಮಾನಪಟ್ಟು, ತನ್ನ ಮಗನಾದ ಅನಂಗ

ಪಾಲನಿಗೆ ರಾಜ್ಯವನ್ನು ಬಿಟ್ಟು ಅಗ್ನಿಪ್ರವೇಶಮಾಡಿದನು. ಎರಡನೆಯ ಬಾರಿ ಭಾಟಿಯ ಪಾಳೆಯಗಾರರನ್ನೂ, ಮೂರನೆಯ ಬಾರಿ ಮುಲ್ತಾನಿನ ದೊರೆಯನ್ನೂ ಸೋಲಿಸಿದನು ; ನಾಲ್ಕನೆಯ ಬಾರಿ ಮುಲ್ತಾನಿನ ದೊರೆಗೆ ಸಹಾಯ ಮಾಡಿದ್ದ ಅನಂಗಪಾಲನ ಸೊಕ್ಕನ್ನು ಮುರಿಯುವುದಕ್ಕಾಗಿ 1008ರಲ್ಲಿ ದಂಡೆತ್ತಿಬಂದನು. ಆಗ ಅನಂಗಪಾಲನು ಇತರ ಹಿಂದೂ ದೊರೆಗಳನ್ನು ಸೇರಿಸಿಕೊಂಡು ಯುದ್ಧಮಾಡಿ ಸೋತನು. ಜಯಶೀಲನಾದ ಮಹಮೂದನು ನಾಗರಕೋಟೆಯನ್ನು ಹಿಡಿದು ಅಲ್ಲಿದ್ದ ದೇವಾಲಯವನ್ನು ಲೂಟಿಮಾಡಿ, ಬೇಕಾದಷ್ಟು ಹಣವನ್ನು ದೋಚಿಕೊಂಡು ಹಿಂದಕ್ಕೆ ಹೊರಟುಹೋದನು. ಐದನೆಯ ಬಾರಿ ಮತ್ತೆ ಮುಲ್ತಾನಿನ ಮೇಲೂ, ಆರನೆಯ ಬಾರಿ ಸ್ಥಾಣೇಶ್ವರದಮೇಲೂ ದಂಡೆತ್ತಿಹೋಗಿ ಕೊಳ್ಳೆಹೊಡೆದು ಬೇಕಾದಷ್ಟು ಐಶ್ವರ್ಯವನ್ನು ತಂದನು. ಏಳು, ಎಂಟನೆಯ ದಂಡಯಾತ್ರೆಗಳಲ್ಲಿ ಕಾಶ್ಮೀರ ರಾಜ್ಯವನ್ನು ಸೇರಿಸಿಕೊಳ್ಳುವ ಪ್ರಯತ್ನವನ್ನು ಮಾಡಿದುದು ಸಾರ್ಥಕವಾಗಲಿಲ್ಲ. ಒಂಭತ್ತನೆಯ ಸಲ ಕನ್ಯಕುಬ್ಜವನ್ನು ಜಯಿಸಿ, ಮಧುರಾಕ್ಷೇತ್ರವನ್ನು ಸೂರೆಮಾಡಿ, ಅಲ್ಲಿದ್ದ ದೇವಾಲಯಗಳನ್ನು ನೆಲಸಮಮಾಡಿದನು. ಹತ್ತನೆಯ ದಂಡಯಾತ್ರೆಯಲ್ಲಿ (1023) ಪಂಜಾಬ್ ಎಲ್ಲವೂ ಇವನ ಸ್ವಾಧೀನವಾಯಿತು. ಆಗ ಅವನು ಲಾಹೋರಿನಲ್ಲಿ ಒಂದು ಸೈನ್ಯವನ್ನಿಟ್ಟನು. ಈ ದೇಶದಲ್ಲಿ ತುರುಕರು ನೆಲೆಯಾಗಿ ನಿಲ್ಲುವುದಕ್ಕೆ ಇದೇ ಮೊದಲು. ಹನ್ನೆರಡನೆಯ ಸಲ ಕ್ರಿ. ಶ. 1024ರಲ್ಲಿ ಗುಜರಾತಿನಲ್ಲಿದ್ದ ಸೋಮನಾಥ ದೇವಾಲಯವನ್ನು ಮುತ್ತಿದನು. ಈ ದೇವಾಲಯವನ್ನು ಉಳಿಸುವುದಕ್ಕಾಗಿ ಹಿಂದುಗಳು ಬಹು ಪ್ರಯತ್ನಪಟ್ಟರು. ಆದರೂ ಅವನಿಗೇ ಜಯವಾಯಿತು. ದೇವಸ್ಥಾನವು ಇವನ ಕೈಸೇರಿತು. ಹಿಂದೂಗಳು ಎಷ್ಟು ಪ್ರಾರ್ಥಿಸಿದರೂ ಬಿಡದೆ ಇವನು ಅಲ್ಲಿದ್ದ ಸುಂದರವಾದ ವಿಗ್ರಹವನ್ನು ಒಡೆದುಹಾಕಿ, ಆ ದೇವಸ್ಥಾನದ ಗಂಧದ ಬಾಗಿಲುವಾಡವನ್ನೂ, ವಿಶೇಷ ಹಣವನ್ನೂ ದೋಚಿಕೊಂಡು ತನ್ನ ದೇಶಕ್ಕೆ ಹಿಂದಿರುಗಿದನು. ಈ ರೀತಿಯಾಗಿ ವಿಗ್ರಹಗಳನ್ನು ಒಡೆಯುತ್ತಿದ್ದ ಇವನಿಗೆ ''ವಿಗ್ರಹಭೇದಕ'' ಎಂಬ ಹೆಸರಾಯಿತು. ಇವನು ಕ್ರಿ. ಶ. 1030ರಲ್ಲಿ ಕಾಲವಾದನು.

ಅವನ ಗುಣದೋಷಗಳು

ಈ ರೀತಿಯಾಗಿ ಇಪ್ಪತ್ತೈದು ವರ್ಷಗಳ ಕಾಲದವರೆಗೂ ದೋಚಿ ಕೊಂಡುಹೋದ ಹಣದಿಂದ ಮಹಮದನು ಘಸ್ನಿಪಟ್ಟಣವನ್ನು ಅಲಂಕರಿಸಿದನು. ಹಿಂದೂದೇಶದಲ್ಲಿ ಸೆರೆಸಿಕ್ಕಿದ ಗಂಡಸರನ್ನು ಘಸ್ನಿಯಲ್ಲಿ ಗುಲಾಮರಂತೆ ವಿಕ್ರಯಿಸಿದನು. ಸುಂದರಿಯರಾದ ಹೆಂಗಸರನ್ನು ತನ್ನ ಅಂತಃಪುರಕ್ಕೆ ಸೇರಿಸಿದನು. ಈತನು ಹಿಂದೂದೇಶವನ್ನು ಕೊಳ್ಳೆಹೊಡೆದನೇ ಹೊರತು ಇಲ್ಲಿಯೇ ನೆಲೆಯಾಗಿ ತುರುಕರ ರಾಜ್ಯವನ್ನು ಕಟ್ಟಲಿಲ್ಲ. ಆದುದರಿಂದ ಉತ್ತರ ಹಿಂದೂಸ್ಥಾನವನ್ನು ಮುಂದೆರಡು ಶತಮಾನಗಳವರೆಗೂ ರಾಜಪುತ್ರರೇ ಆಳುತ್ತಿದ್ದರು. ಪಂಜಾಬು, ಸಿಂಧೂರಾಜ್ಯ ಇವುಗಳು ಮಾತ್ರ ತುರುಕರ ವಶದಲ್ಲಿದ್ದುವು.

ಮಹಮೂದನು ರಣಧೀರ; ರಾಜ್ಯಭಾರದಲ್ಲಿ ವಿವೇಕಿ; ಅನ್ಯಮತದಲ್ಲಿ ದ್ವೇಷಿ, ಆದರೂ ವಿದ್ಯಾಪಕ್ಷಪಾತಿ. ಇವನು ಘಸ್ನಿಯಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದನು. ಇವನ ಸಭೆಯಲ್ಲಿ ಅನ್ಸಾರಿ, ಫಿರ್ದೌಸಿ ಎಂಬ ಕವಿಗಳೂ, ಆಲ್ಬಿರೂನಿ ಎಂಬ ಖಗೋಳಶಾಸ್ತ್ರ ಪಂಡಿತನೂ ಇದ್ದರು.

ಇವನ ತರುವಾಯ ಬಂದ ಸುಲ್ತಾನರು ಅಷ್ಟು ಸಮರ್ಥರಾಗಿರಲಿಲ್ಲ. ಈ ಸಂತತಿಯವರು ಕ್ರಿ. ಶ. 1173ರ ವರೆಗೂ ಘಸ್ನಿರಾಜ್ಯವನ್ನು ಆಳುತ್ತಿದ್ದರು.

ಅಧ್ಯಾಯ ೨—ತುರಕರ ಏಳಿಗೆ

(೧) ಘೋರಿ ಸಂತತಿ (ಕ್ರಿ. ಶ. 1173–1206)

ಮಹಮದ್‌ಘೋರಿಯ ದಂಡಯಾತ್ರೆಗಳು. — ಮಹಮದನ ನಂತರ ಕೆಲವು ಕಾಲದಮೇಲೆ ಅಫ್ಘಾನಿಸ್ಥಾನದ ವಾಯುವ್ಯದಲ್ಲಿರುವ ಘೋರ ಎಂಬ ಒಂದು ಸಣ್ಣ ದೇಶದ ಅರಸರಾದ ಘೋರಿ ಸಂತತಿಯವರು ಘಸ್ನಿಯವರನ್ನು ಸೋಲಿಸಿ ಅವರ ರಾಜ್ಯಕ್ಕೆ ತಾವೇ ದೊರೆಗಳಾದರು.

ಇವರೂ ಮಹಮದೀಯರೆ. ಇವರಲ್ಲಿ ಮಹಮದ್‌ಘೋರಿ ಎಂಬುವನು ಬಹು ಪ್ರಸಿದ್ಧನು.

ಇವನೂ ಮಹಮದ್ ಘಸ್ನಿಯಂತೆ ಹಿಂದೂದೇಶದ ಮೇಲೆ ಅನೇಕ ವೇಳೆ ದಂಡೆತ್ತಿ ಬಂದನು. ಆದರೆ ಬರೀ ಕೊಳ್ಳೆಯೇ ಇವನ ಉದ್ದೇಶ ವಲ್ಲ ; ಇವನು ಇಲ್ಲಿ ನೆಲಸುವುದಕ್ಕಾಗಿ ಬಂದು ಸಿಂಧೂದೇಶ, ಪಂಜಾಬು ಇವುಗಳನ್ನು ವಶಮಾಡಿಕೊಂಡು ಮುಂದರಿದು ಬರುತ್ತಿದ್ದನು. ಇದನ್ನು ಕಂಡು ಹಿಂದೂ ರಾಜರೆಲ್ಲರೂ ಒಟ್ಟುಗೂಡಿ, ಘೋರನನ್ನು ಸ್ಥಾನೇಶ್ವರದ ಬಳಿ 1191ರಲ್ಲಿ ಸೋಲಿಸಿದರು. ಹಿಂದೂಗಳು ಇಷ್ಟಕ್ಕೇ ಬಿಡದೆ ಮಹ ಮದನನ್ನು ಈ ದೇಶದ ಎಲ್ಲೆಯಿಂದಲೇ ಓಡಿಸಿದ್ದರೆ ಹಿಂದೂಸ್ಥಾನದ ಚರಿತ್ರೆಯೇ ಬೇರೆಯಾಗಬಹುದಾಗಿತ್ತು. ಸುಖಾಪೇಕ್ಷಿಗಳಾದ ಹಿಂದೂ ಗಳು ಹಾಗೆ ಮಾಡಲಿಲ್ಲ. 1193ರಲ್ಲಿ ಮಹಮದನು ಪುನಃ ದೊಡ್ಡ ಸೈನ್ಯವನ್ನು ತಂದು ಎರಡನೆಯ ಸಾರಿ ಅದೇ ಸ್ಥಾನೇಶ್ವರದಲ್ಲಿ ಯುದ್ಧ ಮಾಡಿದನು. ಈ ವೇಳೆಗೆ ಹಿಂದೂಗಳಲ್ಲಿ ಅಂತಃಕಲಹಗಳುಂಟಾಗಿ ಒಕ್ಕ ಟ್ಟಿಲ್ಲದುದರಿಂದ, ಹಿಂದೂಗಳಿಗೆ ಸಂಪೂರ್ಣ ಸೋಲಾಯಿತು. ವೀರ ನಾದ ಪೃಥ್ವೀರಾಜನು ಯುದ್ಧದಲ್ಲಿ ಸತ್ತುಹೋದಮೇಲೆ ದೆಹಲಿಯು ತುರುಕರಪಾಲಾಯಿತು. ಕನ್ಯಕುಬ್ಜದ ದೊರೆಯಾದ ಜಯಚಂದ್ರನು ಪೃಥ್ವೀ ರಾಜನಿಗೆ ಸಹಾಯಮಾಡಿದ್ದರೆ ಹಿಂದೂಗಳಿಗೆ ಈ ದುರ್ದೆಶೆಯು ಬರುತ್ತಿರ ಲಿಲ್ಲ. ಆದರೆ ಇವರಿಬ್ಬರಿಗೂ ಮೊದಲಿನಿಂದಲೂ ದ್ವೇಷವಿದ್ದೇ ಇತ್ತು. ಹೀಗಿರುವಾಗ, ದೆಹಲಿ ರಾಜ್ಯವು ಜಯಚಂದ್ರನಿಗೆ ತಪ್ಪಿ ಪೃಥ್ವೀರಾಜನಿಗೆ ಸೇರಿದುದೂ, 1ನೆಯ ಸ್ಥಾನೇಶ್ವರ ಯುದ್ಧದಲ್ಲಿ ಪೃಥ್ವೀರಾಜನು ಬಹಳ ಹೆಸರುವಾಸಿಯನ್ನು ಹೊಂದಿದುದೂ, ಪೃಥ್ವೀರಾಜನು ಜಯಚಂದ್ರನ ಮಗ ಳಾದ ಸಂಯುಕ್ತೆಯನ್ನು ಒಲಿಸಿ ಎತ್ತಿಕೊಂಡುಹೋಗಿ ಮದುವೆಯಾ ದುದೂ ಇವರಿಬ್ಬರ ವಿರೋಧಕ್ಕೆ ಕಾರಣಗಳಾಗಿದ್ದುವು. ಈ ಬಗೆಯಾದ ಕ್ರೋಧಗಳೇ ಹಿಂದೂ ಸಾಮ್ರಾಜ್ಯದ ಪರಿಸಮಾಪ್ತಿಗೆ ಮೂಲಕಾರಣವೆನ್ನ ಬಹುದು. ಮಾರನೆಯ ವರುಷ ಜಯಚಂದ್ರನಿಗೂ ಇದೇ ಗತಿಯಾ ಯಿತು. ಆದರೆ ರಾಜಪುತ್ರರು ತುರುಕರಿಗೆ ಅಧೀನರಾಗುವುದಕ್ಕೆ ಇಷ್ಟ ಪಡದೆ, ರಾಜಪುಟಾನಕ್ಕೆ ಓಡಿಹೋಗಿ ಜೋತ್‌ಪುರ, ಜಯಪುರ ಪ್ರಾಂತಗ ಳನ್ನು ಕಟ್ಟಿ ಅಲ್ಲಿ ನೆಲಸಿದರು. ಕ್ರಮೇಣ ಬಿಹಾರ, ಬಂಗಾಳಾ ರಾಜ್ಯ

ಗಳೂ ತುರುಕರ ವಶವಾಗಿ ಕ್ರಿ. ಶ. 1205ಕ್ಕೆ ಉತ್ತರ ಹಿಂದೂಸ್ಥಾನವೆಲ್ಲವೂ ತುರುಕರ ಅಧೀನವಾಗಿತ್ತು.

ಹಿಂದೂಗಳ ಅಪಜಯಕ್ಕೆ ಕಾರಣಗಳು

ಹಿಂದೂಗಳಲ್ಲಿ ಐಕಮತ್ಯವಿರಲಿಲ್ಲ. ಇವರು ತಮ್ಮ ಜನ್ಮಭೂಮಿಯಾದ ಚಳಿದೇಶವನ್ನು ಬಿಟ್ಟು ಬಂದು ಬಹಳಕಾಲ ಉಷ್ಣದೇಶದಲ್ಲಿ ನೆಲಸಿ ಶಕ್ತಿಹೀನರಾಗುತ್ತ ಬಂದಿದ್ದರು. ಯುದ್ಧರಂಗದಲ್ಲಿ ತಾವೇ ಶತ್ರುಗಳನ್ನು ಪ್ರತಿಭಟಿಸಿ ನಿಂತು ಮರಣಹೊಂದುವುದಕ್ಕಿಂತಲೂ, ಸೈನ್ಯವನ್ನು ನಡೆಯಿಸುವುದು ಮುಖ್ಯಕಾರ್ಯವೆಂದು ಹಿಂದೂಸೇನಾಧಿಪತಿಗಳು ತಿಳಿದಿದ್ದಂತೆ ಕಾಣಲಿಲ್ಲ. ಪರ್ವತನಿವಾಸಿಗಳಾದ ತುರುಕರು ಒಳ್ಳೆಯ ಯೋಧರಾಗಿಯೂ, ಕಷ್ಟಸಹಿಷ್ಣುಗಳಾಗಿಯೂ ಇದ್ದರು. ಇವರಿಗೆ ತಮ್ಮ ಮತವನ್ನು ಹರಡಿ, ಹಿಂದೂದೇಶದ ಐಶ್ವರ್ಯವನ್ನು ಲೂಟಿ ಹೊಡೆಯುವ ಆಸೆಯು ವಿಶೇಷವಾಗಿದ್ದುದರಿಂದ ಇವರು ವೀರಾವೇಶದಿಂದ ಯುದ್ಧ ಮಾಡುತ್ತಿದ್ದರು.

(೨) ಗುಲಾಮಿಾ ಅರಸರು (ಕ್ರಿ. ಶ. 1206-1290)

ಕುತ್ಬುದ್ದೀನ್—ಘೋರಿನು ತನ್ನ ದೇಶಕ್ಕೆ ಹಿಂದಿರುಗಿದಾಗ, ಗುಲಾಮನಾದ ಕುತ್ಬುದ್ದೀನನನ್ನು ಉತ್ತರಹಿಂದೂಸ್ಥಾನದಲ್ಲಿ ತನ್ನ ಪ್ರತಿನಿಧಿಯಾಗಿ ನಿಯಮಿಸಿದ್ದನು. ಘೋರಿನು ಸತ್ತಬಳಿಕ ಸಮರ್ಥನಾದ ಕುತ್ಬುದ್ದೀನನೇ ದೆಹಲಿಯ ಸಾಮ್ರಾಜ್ಯಕ್ಕೆ ಸ್ವತಂತ್ರಾಧಿಪತಿಯಾಗಿ, ಹಿಂದೂಸ್ಥಾನದ ಮಹಮದೀಯ ರಾಜರಲ್ಲಿ ಮೊದಲನೆಯವನಾದನು. ಇವನ ಸಂತತಿಯ ಅರಸರಿಗೆಲ್ಲರಿಗೂ ಗುಲಾಮಿಾ ಅರಸರೆಂದು ಹೆಸರು. ಈತನು ಬಹಳ ಶಕ್ತನು, ಧರ್ಮಿಷ್ಠ, ಉದಾರಿಯು. ಇವನು ದೆಹಲಿಯಲ್ಲಿ ಕುಟುಬ್ ಮಿಾನಾರ್ ಎಂಬ ಅತ್ಯುನ್ನತವಾದ ಸ್ತಂಭವನ್ನು ಕಟ್ಟಿಸಲು ಆರಂಭಿಸಿದನು. ಇವನು ಕುದುರೆಯಮೇಲೆ ಚಂಡನ್ನಾಡುತ್ತಿದ್ದಾಗ ಬಿದ್ದು ಸತ್ತುಹೋದನು. ಇವನ ಮಗನಾದ ಆರಾಮನು ಸ್ವಲ್ಪದಿವಸ ರಾಜ್ಯವಾಳಿದ ಮೇಲೆ ಕುತ್ಬುದ್ದೀನನ ಅಳಿಯನಾದ ಅಲ್ತಮಷನು ಸಿಂಹಾಸನವನ್ನು ಹತ್ತಿದನು.

ಅಲ್ತಮಷ್ (ಕ್ರಿ. ಶ. 1211–36)

ಇವನು ಸಿಂಧೂದೇಶ, ಬಿಹಾರ, ಬಂಗಾಳ, ಮಾಳವ ಈ ದೇಶಗಳ ಮೇಲೆ ಹೊರಟು ಅವುಗಳನ್ನು ತಹಬಂದಿಗೆ ತರುವ ಏರ್ಪಾಡುಗಳನ್ನು ಮಾಡಿದನು. ಇವನು ಅನೇಕ ಹಿಂದೂ ದೇವಾಲಯಗಳನ್ನು ಕೆಡವಿ, ಅವುಗಳ ಸಾಮಾನಿನಿಂದ ಕುಟುಬ್‌ಮಿನಾರ್ ಕಟ್ಟಡವನ್ನು ಕಟ್ಟಿ ಮುಗಿಸಿದನು. ಈ ವೇಳೆಗೆ ಅನಾಗರಿಕರಾಗಿಯೂ, ಘಾತಕರಾಗಿಯೂ ಇದ್ದ ಕೆಲವು ಮಂಗೋಲರು ಪ್ರಸಿದ್ಧನಾದ ಚಂಗೇಸ್‌ಖಾನ್ ಎಂಬುವನ ಕೈಕೆಳಗೆ ತುರ್ಕಿಸ್ಥಾನ ಮೊದಲಾದ ಪ್ರದೇಶಗಳಲ್ಲಿ ಕೊಳ್ಳೆಹೊಡೆದು ಜೀವಿಸುತ್ತಾ ಪ್ರಪಂಚಕ್ಕೇ ಭಯವನುಂಟುಮಾಡುತ್ತಿದ್ದರು. ತನ್ನ ಶತ್ರುವಾದ ಕಾಬೂಲಿನ ದೊರೆಗೆ ಅಲ್ತಮಷನು ಆಸರೆ ಕೊಟ್ಟನೆಂಬ ಕಾರಣದಿಂದ ಕೋಪಗೊಂಡ ಚಂಗೇಸ್‌ಖಾನನು ದೆಹಲಿಯಮೇಲೆ ಬೀಳುವ ಸಂಭವವಿತ್ತು. ಆದರೆ ದೆಹಲಿಯ ದೊರೆಯು ಭಯಪಟ್ಟು ಕಾಬೂಲಿನ ದೊರೆಯನ್ನು ಓಡಿಸಿಬಿಟ್ಟುದರಿಂದ ಮೊಗಲರ ಹಾವಳಿಯು ಸದ್ಯಕ್ಕೆ ತಪ್ಪಿತು. ದೊರೆಯು 1236ರಲ್ಲಿ ಸತ್ತುಹೋದಮೇಲೆ ಕೆಲಸಕ್ಕೆ ಬಾರದ ಇವನ ಮಗನು 8 ತಿಂಗಳು ಮಾತ್ರ ಆಳಿದನು. ಆಮೇಲೆ ಅವನ ತಂಗಿಯಾದ ರಿಸಿಯಳು ಪಟ್ಟಕ್ಕೆ ಬಂದಳು.

ಸುಲ್ತಾನ್ ರಿಸ್ಸಿಯಾ (ಕ್ರಿ. ಶ. 1236—9)

ಮುಸಲ್ಮಾನರ ಹೆಂಗಸರಲ್ಲಿ ದೊರೆತನ ಮಾಡಿದವರಲ್ಲಿ ಈಕೆಯೇ ಮೊದಲನೆಯವಳು. ಶೌರ್ಯ, ಧೈರ್ಯ, ಔದಾರ್ಯ, ದರ್ಪ, ಮೊದಲಾದ ರಾಜಗುಣಗಳೆಲ್ಲವೂ ಈಕೆಯಲ್ಲಿದ್ದುವು. ಈಕೆಯು ಹೆಂಗುಸಾಗಿದ್ದುದೇ ಒಂದು ದೊಡ್ಡ ಕೊರತೆಯಾಗಿ ಪರಿಣಮಿಸಿತು. ಹೆಂಗುಸಿನ ಆಳ್ವಿಕೆಯು ಇವಳ ಕೈಕೆಳಗಿನ ಅಧಿಕಾರಿಗಳಿಗೆ ಸರಿಬೀಳದೆ ಅವರು ದಂಗೆಯೆದ್ದು ಇವಳನ್ನು ಕೊಂದರು. ಈಕೆಯ ನಂತರ ಅಪ್ರಯೋಜಕಗಾದ ಇಬ್ಬರು ದೊರೆಗಳು ಸಿಂಹಾಸನವನ್ನೇರಿ ದೊರೆಗಳೆನಿಸಿಕೊಂಡಿದ್ದರು.

ನಾಸಿರುದ್ದೀನ್ (ಕ್ರಿ. ಶ. 1246-66)

ಇವನು ರಿಸಿಯಳ ತಮ್ಮನು. ರಾಜ್ಯದ ಆಡಳಿತದಲ್ಲಿ ಈತನಿಗೆ ಸಾಮರ್ಥ್ಯ ಸಾಲದು. ಆದುದರಿಂದ ಇವನು ರಾಜ್ಯವಿಚಾರವನ್ನು

ಮಂತ್ರಿಯಾದ ಬಲ್ಬನ್ನನಿಗೆ ಒಪ್ಪಿಸಿ ತಾನು ಸರ್ವದಾ ವಿದ್ಯಾವ್ಯಾಸಂಗ ದಲ್ಲಿಯೇ ಕಾಲವನ್ನು ಕಳೆಯುತ್ತಿದ್ದನು. ಈತನು ಅನೇಕ ಕವಿಗಳಿಗೆ ಆಶ್ರಯನಾಗಿದ್ದನು. ರಾಜಬೊಕ್ಕಸದ ಹಣವು ಪ್ರಜೆಗಳ ಉಪಯೋಗಕ್ಕೆ ಮಾತ್ರವೇ ಇರತಕ್ಕುದೆಂದು ಈತನು ತಿಳಿದು ಕುರಾನಿನ ಪ್ರತಿಗಳನ್ನು ಬರೆದು ಮಾರಿ, ಬಂದ ಹಣದಿಂದ ತಾನು ಜೀವನಮಾಡುತ್ತಿದ್ದನು. ಇವನ ಹತ್ತಿರ ಆಳುಗಳೂ ಇರಲಿಲ್ಲ. ತನ್ನ ಹೆಂಡತಿಯೇ ಮನೆಯ ಕೆಲಸ ವನ್ನೆಲ್ಲಾ ಮಾಡುತ್ತಿದ್ದಳು. ಈತನು ತುಂಬಾ ದಯಾಳು ; ಯಾರ ಮನ ಸ್ಸನ್ನೂ ನೋಯಿಸುತ್ತಿರಲಿಲ್ಲ. ಇವನನ್ನು ಕೆಲವರು ರಾಜರ್ಷಿಯೆಂದು ಕರೆಯುತ್ತಿದ್ದರು. ಈತನ ಕಾಲದಲ್ಲಿ ಘಸ್ನಿಯು ದೆಹಲಿರಾಜ್ಯಕ್ಕೆ ಸೇರಿತು. ಚಂಗೇಸ್‌ಖಾನನ ಕಡೆಯವರು ಲಾಹೋರಿನವರೆಗೂ ಬಂದಿದ್ದರು. ಇವನು ಸತ್ತಮೇಲೆ ಇವನ ಸರ್ವಾಧಿಕಾರಿಯಾದ ಬಲ್ಬನ್ನನಿಗೆ ಪಟ್ಟವಾಯಿತು.

ಬಲ್ಬನ್ (ಕ್ರಿ. ಶ. 1266–87)

ಈತನ ರಾಜ್ಯದ ಆಡಳಿತವು ಬಹಳ ಬಿಗಿಯಾಗಿತ್ತು. ಇವನು ತನ್ನ ದೇಶದಮೇಲೆ ಬೀಳುವುದಕ್ಕೆ ಬರುತ್ತಿದ್ದ ಮಂಗೋಲರನ್ನು ಅಡ ಗಿಸಿದನು ; ದೇಶದಲ್ಲಿ ಕಳ್ಳಕಾಕರ ಭೀತಿ ಇಲ್ಲದಂತೆ ಮಾಡಿದನು. ವಿದ್ಯಾ ವಂತರಿಗೆ ತುಂಬಾ ಆಶ್ರಯನಾಗಿದ್ದನು. ಇವನ ಒಬ್ಬನೇ ಮಗನು ಮಂಗೋಲರ ಮೇಲಿನ ಯುದ್ಧದಲ್ಲಿ ಮಡಿದುಹೋದನು. ಈ ಕೊರಗಿ ನಿಂದಲೇ ಬಲ್ಬನ್ನನು ಸತ್ತುಹೋದನು. ಇವನ ಮುಮ್ಮಗನು ದುರ್ಮಾ ರ್ಗನಾಗಿದ್ದುದರಿಂದ ಇವನ ಸರದಾರರು ಜಲಾಲುದ್ದೀನ್ ಖಿಲ್ಜಿ ಎಂಬುವನ ನಿಗೆ ಪಟ್ಟಕಟ್ಟಿದರು. ಗುಲಾಮಿಾ ಸಂತತಿಯು ಕೊನೆಗಂಡಿತು.

ಗುಲಾಮಿಾ ಅರಸರನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಕೆಲವರು ಸ್ವಮತದಲ್ಲಿ ಅಭಿಮಾನಿಗಳಾಗಿಯೂ, ಯುದ್ಧಪ್ರಿಯರಾಗಿಯೂ ಇದ್ದರು. ಉಳಿದವರು ಕೆಲಸಕ್ಕೆ ಬಾರದವರಾಗಿದ್ದರು. ರಾಜ್ಯಭಾರ ಕ್ರಮದಲ್ಲಿ ಸೈನ್ಯದ ಆಡಳಿತಕ್ಕೆ ಪ್ರಾಶಸ್ತ್ಯವಿತ್ತು. ಈ ಅರಸರ ಕಾಲದಲ್ಲಿ ಪಂಜಾಬ್, ಆಗ್ರ, ಆಯೋಧ್ಯೆ, ಬಿಹಾರ, ಗ್ವಾಲಿಯರ್, ಸಿಂಧೂದೇಶ, ಮಧ್ಯಹಿಂದೂಸ್ಥಾನ, ರಾಜಪುಟಾನದ ಕೆಲವು ಭಾಗಗಳು_ಇವೆಲ್ಲವೂ ಇವರ ಸ್ವಾಧೀನದಲ್ಲಿದ್ದುವು. ಬಂಗಾಳವು ಸ್ವತಂತ್ರರಾಜ್ಯವಾಗಿತ್ತು. ಮಾಳವ, ಗುಜರಾತ್, ಈ ರಾಜ್ಯಗಳಲ್ಲಿ ಹಿಂದೂರಾಜರೇ ಆಳುತ್ತಿದ್ದರು.

(೨) ಖಿಲ್ಜೀವಂಶ (ಕ್ರಿ. ಶ. 1290–1320)

ಗುಲಾಮಿಾ ವಂಶದವರಾದಮೇಲೆ ಖಿಲ್ಜಿ ಸಂತತಿಯುವರು ಸಿಂಹಾಸನಕ್ಕೆ ಬಂದರು. ಇವರು ಮೊದಲು ತುರ್ಕಿಸ್ಥಾನದಲ್ಲಿದ್ದರು. ಆದರೆ ಇವರು ಬಹುಕಾಲ ಅಫ್ಘಾನಿಸ್ಥಾನದಲ್ಲಿ ನೆಲೆಸಿದ್ದುದರಿಂದ ಇವರನ್ನೂ ಪಠಾಣರೆಂದು ಕರೆಯುತ್ತಾರೆ.

ಜಲಾಲು ದೀೕ (ಕ್ರಿ. ಶ. 1290—95)

ಜಲಾಲುದೀನನೇ ಖಿಲ್ಜಿಸಂತತಿಯವರ ಮೂಲಪುರುಷ. ಈತನು ಸಿಂಹಾಸನವನ್ನೇರಿದಾಗ ಇವನಿಗೆ 70 ವರುಷವಾಗಿತ್ತು. ಇವನು ಅತಿ ಕ್ಷಮಾಶೀಲನಾಗಿದ್ದನು ; ಆದುದರಿಂದ ಇವನ ಆಳ್ವಿಕೆಯಲ್ಲಿ ಜನರಿಗೆ ಭೀತಿ ಇರಲಿಲ್ಲ. ಇವನು ಆಳುತ್ತಿದ್ದಾಗ ದೇಶದಲ್ಲಿ ಒಂದು ಘೋರವಾದ ಕ್ಷಾಮವು ತಲೆದೋರಿತು. ಮಂಗೋಲರು ಲಾಹೋರಿನವರೆಗೂ ಬಂದಿದ್ದರು ; ಆದರೆ ಅವರು ಸೋತು ಓಡಿಹೋಗಬೇಕಾಯಿತು. ಸಾವಿರಾರು ಜನ ಮಂಗೋಲರು ಮಹಮದೀಯರಾಗಿ ಹಿಂದೂದೇಶದಲ್ಲೇ ನೆಲಸಿದರು.

ತುರುಕರು ಕ್ರಿ.ಶ. 1194ರಲ್ಲಿ ಉತ್ತರ ಹಿಂದೂಸ್ಥಾನದಲ್ಲಿ ನೆಲಗೊಂಡರೆಂದು ಹಿಂದೆಯೇ ಹೇಳಿದೆ. ಇದಾದ ಒಂದು ಶತಮಾನದಮೇಲೆ ಅಂದರೆ ಕ್ರಿ.ಶ. 1294ರಲ್ಲಿ ಅವರು ದಕ್ಷಿಣದೇಶಕ್ಕೂ ಕಾಲಿಟ್ಟರು. ದಕ್ಷಿಣದೇಶಕ್ಕೆ ಇದೇ ಮುಸಲ್ಮಾನರ ಪ್ರಥಮ ಪ್ರವೇಶ. ದೊರೆಯ ಅಣ್ಣನ ಮಗನಾದ ಅಲ್ಲಾವುದೀನನು ದೇವಗಿರಿಯ ರಾಮದೇವನಮೇಲೆ ದಂಡೆತ್ತಿ ಹೊರಟು, ವಿಶೇಷ ದ್ರವ್ಯವನ್ನೂ, ಎಲಿಚ್‌ಪೂರ್ ಪ್ರಾಂತವನ್ನೂ ಕಿತ್ತುಕೊಂಡನು. ಜಯಶಾಲಿಯಾಗಿ ಹಿಂತಿರುಗಿ ಬರುತ್ತಿದ್ದ ತನ್ನನ್ನು ಎದುರುಗೊಳ್ಳುವುದಕ್ಕೆ ಬಂದ, ವೃದ್ಧನಾದದೊರೆಯನ್ನು ರಾಜ್ಯಾಪೇಕ್ಷಿಯಾದ ಅಲ್ಲಾವುದೀನನು ದ್ರೋಹದಿಂದ ಕೊಲ್ಲಿಸಿ ತಾನೇ ರಾಜನಾದನು.

ಅಲ್ಲಾವುದೀೕ (ಕ್ರಿ. ಶ. 1296–1316)

ಇವನನ್ನು ಗುಲಾಮಿಾ ಸಂತತಿಯ ಬಲ್ಬನಿನೊಡನೆ ಹೋಲಿಸಬಹುದು. ಈತನು ಅವನಂತೆಯೇ ಸಮರ್ಥನೂ ಹೌದು ; ನಿಷ್ಕರುಣಿಯೂ ಹೌದು ; ಅವನಂತೆಯೇ ದೊಡ್ಡ ರಾಜ್ಯವನ್ನೂ ಕಟ್ಟಿದನು.

ಇವನು ಗಾದಿಗೆ ಬಂದೊಡನೆಯೇ ತನ್ನ ಚಿಕ್ಕಪ್ಪನ ಕಡೆಯವರನ್ನೆಲ್ಲಾ ಕೊಲ್ಲಿಸಿ, ದಂಗೆಗಳನ್ನು ಅಡಗಿಸಿದನು. ಧನಿಕರಾದ ಹಿಂದೂಗಳನ್ನು ಸುಲಿಗೆಮಾಡಿ, ಬೇಕಾದಷ್ಟು ಹಣವನ್ನು ಕೂಡಿಟ್ಟು ಅದರ ಸಹಾಯದಿಂದ ಬಲವಾದ ಸೈನ್ಯವನ್ನು ಕಟ್ಟಿ, ಯಮುನಾನದಿಯವರೆಗೂ ನುಗ್ಗಿಬಂದಿದ್ದ ಮಂಗೋಲರನ್ನು ಹಿಮ್ಮೆಟ್ಟಿಸಿದನು ; ದೆಹಲಿಯಲ್ಲಿ ನೆಲೆಸಿದ್ದ ಸಾವಿರಾರು ಮಂಗೋಲರನ್ನು ಕಡಿಸಿಹಾಕಿದನು.

ತರುವಾಯ ಗುಜರಾತಿನಮೇಲೆ ಹೊರಟು, ಅಲ್ಲಿನ ಹಿಂದೂ ದೊರೆಯನ್ನು ಕೈಸೆರೆ ಹಿಡಿದು, ಅವನ ಹೆಂಡತಿಯನ್ನು ತಾನೂ, ಅವನ ಮಗಳನ್ನು ತನ್ನ ಮಗನೂ ಮದುವೆಯಾದರು. ಅನಂತರ ರಾಜಪುತ್ರರಮೇಲೆ ಹೊರಟು ಅವರ ಮುಖ್ಯ ಕೋಟೆಯೊಂದನ್ನು ತನ್ನ ವಶಮಾಡಿಕೊಂಡು 1303ರಲ್ಲಿ ಚಿತ್ತೋರನ್ನು ಮುತ್ತಿದನು. ಅಲ್ಲಿದ್ದ ರಾಜಪುತ್ರರು ಧೈರ್ಯದಿಂದ ಕಾದಿದರು. ಆದರೂ ತುರುಕರಮೇಲೆ ಇವರ ಕೈ ನಡೆಯಲಿಲ್ಲ. ಆಗ ಹೆಂಗಸರು ಶತ್ರುಗಳ ಕೈಗೆ ಸಿಕ್ಕದೆ ಸುಮಂಗಲಿಯರಾಗಿಯೇ ಅಗ್ನಿಪ್ರವೇಶ ಮಾಡಿದರು ; ಗಂಡಸರು "ಪರಾಜಿತರಾಗಿ ಬದುಕುವುದಕ್ಕಿಂತಲೂ ಯುದ್ಧದಲ್ಲಿ ಪ್ರಾಣತ್ಯಾಗಮಾಡುವುದೇ ಮೇಲೆಂಬ" ಕ್ಷತ್ರಿಯ ಧರ್ಮವನ್ನವಲಂಬಿಸಿ ವೀರಾವೇಶದಿಂದ ಘೋರಯುದ್ಧವನ್ನು ಮಾಡಿ ಮಡಿದರು. ಈ ಪದ್ಧತಿಯನ್ನು "ಜೋಹರ್" ಎಂಬ ಹೆಸರಿನಿಂದ ಕರೆಯುವರು. ಅಂತೂ ಅಲ್ಲಾವುದೀನನಿಗೆ ರಾಜಪುತ್ರಸ್ಥಾನವನ್ನು ಜಯಿಸಲು ಸಾಧ್ಯವಾಗಲಿಲ್ಲ.

ಮಲ್ಲಿಕ್‌ಕಾಫರನ ದಂಡಯಾತ್ರೆ—ಇದಾದ ಸ್ವಲ್ಪ ದಿನಗಳಮೇಲೆ ಸುಲ್ತಾನನು ತನ್ನ ದಳಪತಿಯಾದ ಮಲ್ಲಿಕ್‌ಕಾಫರನನ್ನು ದೊಡ್ಡ ಸೈನ್ಯದೊಡನೆ ದಕ್ಷಿಣದೇಶಕ್ಕೆ ಕಳುಹಿಸಿದನು. ಈತನು 1307ರಲ್ಲಿ ದೇವಗಿರಿಯನ್ನೂ, ಕಾಕತೀಯರ ರಾಜಧಾನಿಯಾದ ಓರಗಲ್ಲನ್ನೂ, 1311ರಲ್ಲಿ ಹೊಯಿಸಳರ ಮುಖ್ಯಪಟ್ಟಣವಾದ ದ್ವಾರಸಮುದ್ರವನ್ನೂ ವಶಮಾಡಿಕೊಂಡು, ತರುವಾಯ ರಾಮೇಶ್ವರದವರೆಗೂ ಹೋಗಿ ದಾರಿಯಲ್ಲಿ ಸಿಕ್ಕಿದ ಸೀಮೆಗಳನ್ನು ಸೂರೆಮಾಡಿ, ರಾಮೇಶ್ವರದಲ್ಲಿ ಒಂದು ಮಸೀತಿಯನ್ನು ಕಟ್ಟಿಸಿ, ವಿಶೇಷ ಹಣದೊಡನೆ ದೆಹಲಿಗೆ ಬಂದನು. ಈ ರೀತಿಯಾಗಿ ಕ್ರಿ. ಶ. 1131ಕ್ಕೆ ಹಿಂದೂದೇಶವೆಲ್ಲಾ ಮಹಮದೀಯರ ಸಾಮ್ರಾಜ್ಯಕ್ಕೆ

ಸೇರಿತು. ಇಷ್ಟಾದರೂ ಅಲ್ಲಾವುದೀನನು ಮನಶ್ಶಾಂತಿಯನ್ನು ಪಡೆಯದೆ, ಪ್ರಪಂಚವನ್ನೆಲ್ಲಾ ಜಯಿಸಿ "ಎರಡನೆಯ ಸಿಕಂದರ್" ಎಂದೆನಿಸಿಕೊಳ್ಳಬೇಕೆಂಬ ಇಚ್ಛೆಯು ಇವನ ಮನಸ್ಸಿನಲ್ಲಿ ಬೇರೂರಿತ್ತು. ಆದರೆ ಇದಕ್ಕೆ ಅವಕಾಶವಾಗಲಿಲ್ಲ.

ಅಲ್ಲಾವುದೀನನ ರಾಜಕೀಯ ಕ್ರಮಗಳು—ಅಲ್ಲಾವುದೀನನು ರಾಜ್ಯವನ್ನು ವಿಸ್ತರಿಸಿದ್ದಷ್ಟೇ ಅಲ್ಲ; ಅದನ್ನು ಬಲುಮಟ್ಟಿಗೆ ತಹಬಂದಿಗೂ ತಂದನು. ಜನರು ಧನಮದದಿಂದಲೂ, ಮದ್ಯಮದಿಂದಲೂ, ಒಬ್ಬರೊಡನೊಬ್ಬರು ಕಲೆಯುವುದರಿಂದ ಪಿತೂರಿಗೆ ಅವಕಾಶವಾಗುವುದೆಂದು ಭಾವಿಸಿ, ದೆಹಲಿಯಲ್ಲಿ ಮದ್ಯಪಾನವನ್ನು ನಿಲ್ಲಿಸಬೇಕೆಂದೂ, ಶ್ರೀಮಂತರು ತನ್ನ ಅಪ್ಪಣೆಯಿಲ್ಲದೆ ಒಬ್ಬರಮನೆಗೊಬ್ಬರು ಹೋಗಕೂಡದೆಂದೂ ಆಜ್ಞೆ ಮಾಡಿದನು. ಅನೇಕ ದೇವಸ್ಥಾನಗಳ ಆದಾಯಗಳನ್ನು ಸರ್ಕಾರಕ್ಕೆ ಸೇರಿಸಿಕೊಂಡುದಲ್ಲದೆ ಶ್ರೀಮಂತರೂ ಬಡವರೂ ಎನ್ನದೆ ಜನರಿಂದ ಹಣವನ್ನು ಸುಲಿದುಕೊಳ್ಳುತ್ತಿದ್ದನು. ಹಿಂದುಗಳು ತಾವು ಬೆಳೆದುದರಲ್ಲಿ ಅರ್ಧ ಬೆಳೆಯನ್ನು ಕಂದಾಯಕ್ಕಾಗಿ ಕೊಡಬೇಕೆಂದು ಕಟ್ಟುಮಾಡಿದನು; ದವಸಧಾನ್ಯಗಳನ್ನು ಸರ್ಕಾರದಿಂದ ಗೊತ್ತಾದ ಬೆಲೆಗೇ ಮಾರಬೇಕೆಂದು ವಿಧಿಸಿದನು. ಇದರಿಂದ ಧಾರಣೆವಾಸಿಗಳು ತಗ್ಗಿದುವು.

ಅವನ ಗುಣದೋಷಗಳು—ಅಲ್ಲಾವುದೀನನು 1316ರಲ್ಲಿ ಸತ್ತುಹೋದನು. ಇವನಿಗೆ ಓದುಬರಹ ಬಾರದು; ಆದರೂ ವಿದ್ಯಾಪಕ್ಷಪಾತಿ. ಈತನು ಬಹು ಸಾಹಸಿ; ಆದರೆ ಕಠಿನಹೃದಯನು, ಕೃತ್ರಿಮಿ, ದ್ರೋಹಿ. ಇವನು ಹಿಂದೂ ಮಹಮದೀಯರ ಮತಗಳನ್ನು ಬಿಟ್ಟು ಬೇರೊಂದು ಮತವನ್ನೇ ಸ್ಥಾಪಿಸಬೇಕೆಂದಿದ್ದನು.

ಅಲ್ಲಾವುದೀನನ ಮಗ ದರುಳನಾದ ಮುಬಾರಕನು ಕೆಲವುಕಾಲ ಮಾತ್ರ ಸಿಂಹಾಸನವನ್ನೇರಿದನು. ಆಮೇಲೆ ಇವನ ರಾಜ್ಯದ ಆಡಳಿತವನ್ನು ನೋಡುತ್ತಿದ್ದ ಖುಸ್ರುಖಾನ್ ಎಂಬ ಜಾತಿಕೆಟ್ಟ ಹಿಂದುವು ದೊರೆಯನ್ನು ಕೊಂದು ತಾನೇ ಪಟ್ಟಕ್ಕೆ ಬಂದನು. ಇವನ ಗತಿಯೂ ಹೀಗೆಯೇ ಆಗಿ, ಸಿಂಹಾಸನವು ಪಂಜಾಬಿಗೆ ಅಧಿಕಾರಿಯಾಗಿದ್ದ ಗಯಾಸುದ್ದೀನ್ ತೊಗಲಕ್ ಎಂಬವನ ಕೈಸೇರಿತು.

(೪) ತೊಗಲಕ್ ಮನೆತನ (ಕ್ರಿ. ಶ. 1320–1414)

ಗಯಾಸುದ್ದೀನ್ (ಕ್ರಿ. ಶ. 1320–25)

ಇವನು ರಾಜ್ಯವನ್ನು ಸುವ್ಯವಸ್ಥೆಗೆ ತಂದು, ತೆರಿಗೆಗಳನ್ನು ತಗ್ಗಿಸಿದನು. ಇವನ ಕಾಲದಲ್ಲಿ ಬಂಗಾಳದೇಶವು ದೆಹಲಿಗೆ ಸೇರಿತು. ಇವನು ಬಂಗಾಳದಿಂದ ಬರುವ ದಾರಿಯಲ್ಲಿ, ಇವನ ಮಗ ಜೂನನು ಮಾಡಿದ ಪಿತೂರಿಯಿಂದ ಒಂದು ಗುಡಾರವು ಇವನ ತಲೆಯಮೇಲೆ ಬಿದ್ದು ಸತ್ತು ಹೋದನು. ಬಳಿಕ ಇವನ ಮಗನಾದ ಜೂನನೇ ದೊರೆಯಾದನು.

ಮಹಮದ್ ಬಿನ್ ತೊಗಲಕ್ (ಕ್ರಿ. ಶ. 1325–51)

ಮೇಲೆ ಹೇಳಿದ ಜೂನನೇ ಈ ಹೆಸರಿನಿಂದ ಆಳಿದನು. ಇವನು ಸಾಮಾನ್ಯನಲ್ಲ. ಗಣಿತಶಾಸ್ತ್ರದಲ್ಲಿಯೂ, ಪದಾರ್ಥವಿಜ್ಞಾನಶಾಸ್ತ್ರದಲ್ಲಿಯೂ, ತರ್ಕಶಾಸ್ತ್ರದಲ್ಲಿಯೂ ಈತನು ಪಂಡಿತನು. ಇವನ ಆಲೋಚನೆಗಳನ್ನೂ, ಇವನು ಪ್ರಯತ್ನಿಸಿದ ಕೆಲಸಗಳನ್ನೂ ನೋಡಿದರೆ ಇವನಷ್ಟು ಸಮರ್ಥನೂ, ವಿವೇಕಿಯೂ ಮತ್ತಾರೂ ಆಗಿನಕಾಲದಲ್ಲಿ ಇರಲಿಲ್ಲವೆಂದು ಕಾಣುತ್ತದೆ. ಆದರೆ ಕೈಗೊಂಡ ಕೆಲಸಗಳನ್ನು ನೆರವೇರಿಸುವುದಕ್ಕೆ ಇವನು ಅನುಸರಿಸುತ್ತಿದ್ದ ನಡೆವಳಿಕೆಗಳಿಗಾಗಿ ಕೆಲವು ಚರಿತ್ರಕಾರರು ಇವನಿಗೆ " ಖಿಲುದೊರೆ " ಎಂಬ ಹೆಸರನ್ನು ಕೊಟ್ಟಿದ್ದಾರೆ. ಇವನು ನಡೆಸಿದ ಕೆಲವು ಕೃತ್ಯಗಳು ಅತಿ ಘೋರವಾದವುಗಳು ; ಮತ್ತೆ ಕೆಲವು ಕೇವಲ ದಯೆಯನ್ನು ಪ್ರಕಟಿಸುವುವು ; ಬಡಬಗ್ಗರಿಗಾಗಿ ಔಷಧಾಲಯಗಳನ್ನೂ, ಧರ್ಮಸತ್ರಗಳನ್ನೂ ಕಟ್ಟಿಸಿದನು. ಉತ್ತರಕ್ಷಣದಲ್ಲಿಯೇ ಸಾವಿರಾರು ಜನರನ್ನು ಕೊಲ್ಲಿಸುವುದಕ್ಕೆ ಹೇಸುತ್ತಿರಲಿಲ್ಲ. ತನ್ನ ಮತ ಕರ್ಮಗಳನ್ನು ನಿತ್ಯವೂ ಅನುಷ್ಠಾನ ಮಾಡುವುದನ್ನು ಬಿಡುತ್ತಿರಲಿಲ್ಲ; ಆದರೆ ತನ್ನ ಅಣ್ಣನ ಮಗನೊಬ್ಬನನ್ನು ಚರ್ಮ ಸುಲಿಸಿ ಕೊಲ್ಲಿಸಿದನು. ಅನೇಕ ಫಲವತ್ತಾದ ಪ್ರದೇಶಗಳನ್ನು ತನ್ನ ಸೂರೆಯಿಂದ ಬೆಂಗಾಡು ಮಾಡಿ, ಕೃಷಿಗೆ ಉತ್ತೇಜನವಾಗಲೆಂದು ಬೇರೊಂದುಕಡೆ ವಿಶೇಷಹಣವನ್ನು ವೆಚ್ಚಮಾಡುತ್ತಿದ್ದನು. ಇಂಥವನನ್ನು ಏನೆಂದು ಕರೆಯಬೇಕೆನ್ನುವುದೇ ಕಷ್ಟವಾಗಿದೆ.

ಹುಚ್ಚು ಆಡಳಿತ—ಮಂಗೋಲರು ಹಿಂದೂದೇಶದಮೇಲೆ ಬಂದಾಗಲೆಲ್ಲಾ ದೊರೆಯು ಅವರನ್ನು ಓಡಿಸದೆ, ವಿಶೇಷ ಹಣವನ್ನು ಕೊಟ್ಟು ಹಿಂದೆ ತಿರುಗುವಂತೆ ಮಾಡುತ್ತಿದ್ದುದರಿಂದ ಅವರು ಪದೇಪದೇ ಬರಲಾರಂಭಿಸಿದರು. ದೊರೆಯು ಪ್ರಪಂಚಕ್ಕೇ ಒಡೆಯನಾಗಬೇಕೆಂಬ ಆಸೆಯಿಂದ ಹಿಮಾಲಯದ ಮಾರ್ಗವಾಗಿ ಚೀಣಾರಾಜ್ಯದ ಮೇಲೆ ಒಂದು ಸೇನೆಯನ್ನೂ, ಪರ್ಷಿಯಾರಾಜ್ಯದಮೇಲೆ ಮತ್ತೊಂದು ಸೇನೆಯನ್ನೂ ಕಳುಹಿಸಿದನು. ಇದಕ್ಕೆ ಲಕ್ಷಾಂತರ ಹಣ ವೆಚ್ಚವಾದುದಲ್ಲದೆ, ಕಾರ್ಯವು ಕೈಗೂಡದೆ, ಸೈನಿಕರು ಹಿಮಾಲಯದ ಮಂಜಿನಲ್ಲಿ ಸಿಕ್ಕಿ ಸತ್ತುಹೋದರು.

ಕಡೆ ಮೂಲೆಯಲ್ಲಿರುವ ದೆಹಲಿಗಿಂತಲೂ, ಮಧ್ಯರಾಷ್ಟ್ರದಲ್ಲಿರುವ ದೇವಗಿರಿಯನ್ನು ರಾಜಧಾನಿಯಾಗಿ ಮಾಡಬೇಕೆಂದು ಯೋಚಿಸಿ, ದೆಹಲಿಯ ಜನರೆಲ್ಲರೂ ಸಂಸಾರಸಮೇತರಾಗಿ ದೇವಗಿರಿಗೆ ಹೋಗುವಂತೆ ದೊರೆಯು ಆಜ್ಞೆಮಾಡಿದನು. ರಾಜಾಜ್ಞೆಯನ್ನು ಉಲ್ಲಂಘಿಸಿದವರನ್ನು ಕ್ರೂರಶಿಕ್ಷೆಗೆ ಗುರಿಮಾಡಿದನು. ಇದಕ್ಕೆ ಹೆದರಿ ಸಾವಿರಾರುಮಂದಿ ದೇವಗಿರಿಯನ್ನು ಕುರಿತು ತೆರಳಿದರು. ಇದರಿಂದ ದೆಹಲಿ ನಗರವು ಪಾಳು ಬಿದ್ದಿತು. ಅದನ್ನು ನೋಡಿ ಸಹಿಸಲಾರದೆ, ದೇವಗಿರಿಗೆ ಹೋದವರೆಲ್ಲರೂ ಪುನಃ ದೆಹಲಿಗೇ ಹಿಂದಿರುಗಬೇಕೆಂದು ಹೇಳಿ ಕಳುಹಿಸಿದನು.

ಇವನ ಹುಚ್ಚು ಕಾರಬಾರಿನ ಫಲ

ಮಂಗೋಲರಿಗೆ ಕೊಟ್ಟ ಲಂಚವೂ, ಚೀಣಾಯಾತ್ರೆಗಾಗಿ ವೆಚ್ಚವಾದ ಹಣವೂ, ಅವನ ಬೊಕ್ಕಸವನ್ನು ಬರಿದುಮಾಡಿದುವು. ಇದಕ್ಕಾಗಿ ಇವನು ತೆರಿಗೆಯನ್ನು ಹೆಚ್ಚಿಸಿದನು. ಹಾಗೆ ಕೊಡದವರಿಗೆ ಇವನು ಕೊಟ್ಟ ಹಿಂಸೆಗಳು ಎದೆಯೊಡೆಯುವಂತಿದ್ದುವು. ರಾಜ್ಯದಲ್ಲಿ ಕ್ಷಾಮವು ತಲೆದೋರಿತು. ಅದರ ನಿವಾರಣೆಗಾಗಿ ವಿಶೇಷ ಹಣವು ಬೇಕಾಯಿತು ಇದಕ್ಕಾಗಿ ತಾಮ್ರದ ನಾಣ್ಯಗಳನ್ನು ಛಾಪಾಹಾಕಿಸಿ, ಅವು ಚಿನ್ನದ ನಾಣ್ಯಗಳ ಬೆಲೆಗೆ ಸಮನೆಂದು ಸಾರಿಸಿದನು. ಹೀಗೆ ಮಾಡುವುದು ಕೆಲವುವೇಳೆ ಅತ್ಯಾವಶ್ಯಕವಾಗಿದ್ದರೂ ಸರ್ಕಾರದವರ ಜತೆಗೆ ಇತರರು ಸುಲಭಬೆಲೆಯ ತಾಮ್ರದ ನಾಣ್ಯಗಳನ್ನು ತಯಾರಿಸದಂತೆ ತಕ್ಕ ಏರ್ಪಾಡು ಮಾಡಬೇ

ಕಾಗಿತ್ತು. ಆದರೆ ಇವನು, ಹಾಗೆ ಮಾಡಲಿಲ್ಲ. ಆದುದರಿಂದ ಎಲ್ಲೆಲ್ಲಿಯೂ ಖೋಟಾ ನಾಣ್ಯಗಳೇ ಹೆಚ್ಚಾಗಿ ಚಲಾವಣೆಗೆ ಬಂದುವು. ಹೊರದೇಶದ ವ್ಯಾಪಾರಿಗಳು ಈ ತಾಮ್ರದ ನಾಣ್ಯಗಳನ್ನು ಅಂಗೀಕರಿಸುತ್ತಿರಲಿಲ್ಲ. ಚಿನ್ನದ ನಾಣ್ಯಗಳೆಲ್ಲವೂ ಅವರ ಪಾಲಾಯಿತು. ಕಡಗೆ ವ್ಯಾಪಾರಕ್ಕೇ ತುಂಬಾ ಅನಾನುಕೂಲವಾಗಿ, ಸರ್ಕಾರದವರು ತಾಮ್ರದ ನಾಣ್ಯಗಳನ್ನು ಚಲಾವಣೆಯಿಂದ ರದ್ದುಮಾಡಿದರು. ಈ ದೊರೆಯ ಹುಚ್ಚು ಆಡಳಿತದಿಂದ ರಾಜ್ಯದ ಬಿಗಿತಪ್ಪಿತು. ಬಂಗಾಳವು ಪುನಃ ಸ್ವತಂತ್ರ ರಾಜ್ಯವಾಯಿತು. ಗುಲ್ಬರ್ಗದಲ್ಲಿ ಬಹಮನೀ ತುರುಕರೂ, ವಿಜಯನಗರದಲ್ಲಿ ಹಿಂದೂ ಅರಸರೂ, ಸ್ವತಂತ್ರಾಧಿಕಾರವನ್ನು ವಹಿಸಿದರು. ಈ ರೀತಿಯಾಗಿ ದಕ್ಷಿಣದೇಶವೆಲ್ಲವೂ ತುರುಕರ ಕೈಬಿಟ್ಟುಹೋಯಿತು. ಅಯೋಧ್ಯೆ, ಗುಜರಾತ್, ಮಾಳವ, ಸಿಂಧೂರಾಜ್ಯ ಈ ದೇಶಗಳಲ್ಲಿ ದಂಗೆಗಳು ತಲೆದೋರಿದುವು. ಈ ಹುಚ್ಚುದೊರೆಯು 1351ರಲ್ಲಿ ಮೃತನಾದನು. ಇವನ ಪ್ರಯತ್ನಗಳಲ್ಲಿ ಕೆಲವು ರಾಜಕಾರ್ಯನಿಪುಣತ್ವವುಳ್ಳವುಗಳಾದರೂ ಅವುಗಳನ್ನು ಸಾಧಿಸುವಷ್ಟು ಶಕ್ತಿಯನ್ನು ಇವನು ಪಡೆದಿರಲಿಲ್ಲ.

ಫಿರೋಸ್ ಷಾ (ಕ್ರಿ. ಶ. 1351–1388)

ಈತನು ಮಹಮದ್ ಬಿನ್ ತೊಗಲಕನ ತಮ್ಮನ ಮಗನು. ಅವಿವೇಕಿಯೂ, ಪರಮತದ್ವೇಷಿಯೂ ಆದ ತೊಗಲಕನ ಆಳಿಕೆಯಾದೊಡನೆಯೇ ಒದಗಿದ ಫಿರೋಸನ ಆಳಿಕೆಯು ಜನರಿಗೆ ಬಹಳ ನೆಮ್ಮದಿಯನ್ನುಂಟುಮಾಡಿದುದರಿಂದ, ಅವರು ಇವನನ್ನು ಧರ್ಮಪ್ರಭುವೆಂದು ಭಾವಿಸಿದರು. ಫಿರೋಸನು ಸ್ವತಂತ್ರವಾದ ರಾಜ್ಯಗಳ ಗೋಜಿಗೆ ಹೋಗದೆ, ಉಳಿದಿರುವ ಪ್ರಾಂತ್ಯಗಳನ್ನು ಮಾತ್ರ ವಿತರಣೆಯಿಂದ ಆಳಿದನು. ಬೀಳು ಬಿದ್ದಿದ್ದ ಜಮೀನುಗಳನ್ನು ಸಾಗುವಳಿಗೆ ತಂದು ಸರ್ಕಾರದ ವರಮಾನವನ್ನು ಹೆಚ್ಚಿಸಿದನು; ಅನೇಕ ಪಟ್ಟಣಗಳನ್ನೂ, ಪಾಠಶಾಲೆಗಳನ್ನೂ ವೈದ್ಯಶಾಲೆಗಳನ್ನೂ, ಸತ್ರಗಳನ್ನೂ ಕಟ್ಟಿಸಿ, ಯಮುನಾನದಿಯಿಂದ ನೀರಾವರಿಯ ಕಾಲುವೆಗಳನ್ನು ತೋಡಿಸಿ ಬಡಬಗ್ಗರಿಗೆ ತುಂಬಾ ಧರ್ಮ ಮಾಡಿದನು. ಇಷ್ಟಾದರೂ ಇವನನ್ನು ಅನ್ಯಮತದ್ವೇಷಿಯೆಂದೇ ಕರೆಯಬೇಕು. ಇವನು ಹಿಂದುಗಳನ್ನೂ, ತನ್ನ ಪಂಗಡಕ್ಕೆ ಸೇರದಿದ್ದ ತುರುಕರನ್ನೂ ಹಿಂಸಿಸುತ್ತಿದ್ದನು.

ತುರುಕರ ರಾಜ್ಯವು ಒಡೆದುಹೋದುದು.–ಇವನಾದಮೇಲೆ ದೊರೆತನಮಾಡಿದ ಇವನ ಮಕ್ಕಳೂ, ಮೊಮ್ಮಕ್ಕಳೂ ತುಂಬಾ ದುರ್ಬಲರಾಗಿದ್ದುದರಿಂದ ಅಯೋಧ್ಯೆ, ಮಾಳವ, ಗುಜರಾತ್, ಕಾಶ್ಮೀರ, ಜಾನ್ಪುರ, ಬಂಗಾಳ, ರಾಜಪುಟಾಣ ಮೊದಲಾದ ರಾಜ್ಯಗಳು ಕ್ರಮೇಣ ಸ್ವಂತಂತ್ರವಾದುವು. ಚಕ್ರವರ್ತಿಗೆ ದೆಹಲಿಯೂ, ಅದರ ಸುತ್ತಲಿದ್ದ ಪ್ರದೇಶಗಳೂ ಮಾತ್ರ ಉಳಿದುವು.

ತೈಮೂರ್.–ದೇಶದಲ್ಲಿ ನಡೆಯುತ್ತಿದ್ದ ಗಲಭೆಯ ನಡುವೆ ಮಂಗೋಲರ ವಂಶಕ್ಕೆ ಸೇರಿದ ತೈಮೂರ್‌ಲಂಗನು 1398ರಲ್ಲಿ ಸಿಂಧೂನದಿಯನ್ನು ದಾಟಿ, ದಾರಿಯಲ್ಲಿ ಸಿಕ್ಕಿದ ಊರುಗಳನ್ನು ಸುಟ್ಟು, ಜನರನ್ನು ಕೊಂದು, ಕೈಗೆ ಸಿಕ್ಕಿದುದನ್ನು ದೋಚಿ, ದೆಹಲಿಯನ್ನು ಸೇರಿದನು. ಅಲ್ಲಿದ್ದ ತುರುಕ ದೊರೆಯು ಗುಜರಾತಿಗೆ ಓಡಿಹೋದನು. ತೈಮೂರನು ಸಾವಿರಾರು ಜನರನ್ನು ಕೊಂದು ಮೂರುದಿನಗಳವರೆಗೂ ದೆಹಲಿಯನ್ನು ಸೂರೆಮಾಡಿ, ತಾನೇ ಚಕ್ರವರ್ತಿಯೆನಿಸಿಕೊಂಡು, ತನ್ನ ಕಡೆಯ ಅಧಿಕಾರಿಯನ್ನು ಮುಲ್ತಾನಿನಲ್ಲಿಟ್ಟು 1399ರಲ್ಲಿ ತನ್ನ ರಾಜ್ಯಕ್ಕೆ ಹಿಂದಿರುಗಿದನು.

ಆಗ ಗುಜರಾತಿಗೆ ಓಡಿಹೋಗಿದ್ದ ತುರುಕದೊರೆಯು ದೆಹಲಿಯನ್ನು ಪುನಃ ಸ್ವಾಧೀನಪಡಿಸಿಕೊಂಡನು. ಇವನು 1412ರಲ್ಲಿ ಕಾಲವಾಗಲು ತೊಗಲಕ್ ಸಂತತಿಯು ಕೊನೆಗೊಂಡಿತು. ರಾಜ್ಯವು ಮುಲ್ತಾನಿಗೆ ಅಧಿಕಾರಿಯಾದ ಖಿಸರ್‌ಖಾನನ ಕೈಸೇರಿತು.

ಸೈಯದ್ ವಂಶ. (ಕ್ರಿ. ಶ. 1414–1450)

ಖಿಸರ್‌ಖಾ ಮತ್ತು ಅಲ್ಲಾವುದೀನ್:–ಖಿಸರ್‌ಖಾನನು ಮಹಮದೀಯ ಮತಸ್ಥಾಪಕನಾದ ಮಹಮ್ಮದನ ವಂಶದವನೆಂದೂ ಈ ಸಂತತಿಗೆ "ಸೈಯದ್" ಎಂಬ ಹೆಸರೆಂದೂ ಹೇಳುತ್ತಾರೆ. ಇವನು 1421ನೇ ಇಸವಿಯವರೆಗೆ ವಿವೇಕವಾಗಿ ರಾಜ್ಯವಾಳಿದನು. ಆದರೆ ಇವನನ್ನು ಹಿಂಬಾಲಿಸಿದ ದೊರೆಗಳು ಅಸಮರ್ಥರಾದುದರಿಂದ ಈ ಸಂತತಿಯು ಕ್ಷಿಪ್ರದಲ್ಲಿಯೇ ಕೊನೆಗೊಂಡಿತು. ಕಡೆಯ ದೊರೆಯಾದ ಅಲ್ಲಾವುದೀನನೆಂಬವನು ಆಳುತ್ತಿರುವಾಗ ಲಾಹೋರಿನಲ್ಲಿ ಅಧಿಕಾರಿಯಾಗಿದ್ದ ಬಹ್ಲೂಲ್

ಲೂದಿಯು ಅಲ್ಲಾವುದೀನನನ್ನು ಸಿಂಹಾಸನದಿಂದ ತಳ್ಳಿ ತಾನೇ ಪಟ್ಟಕ್ಕೆ ಬಂದನು.

ಈ ಸೈಯದ್ ದೊರೆಗಳ ಕಾಲದಲ್ಲಿ ದೆಹಲಿಯ ರಾಜ್ಯವು ದೆಹಲಿಯ ಸುತ್ತಲೂ ಕೆಲವು ಮೈಲಿಗಳಷ್ಟು ಮಾತ್ರ ವಿಸ್ತಾರವುಳ್ಳ ಸಣ್ಣ ನಾಡಿನಂತೆ ಇತ್ತು. ಉಳಿದ ರಾಜ್ಯಗಳೆಲ್ಲವೂ ಸಂಪೂರ್ಣ ಸ್ವಾತಂತ್ರವನ್ನು ಪಡೆದಿದ್ದುವು.

ಅಧ್ಯಾಯ ೨—ತುರುಕರ ಕ್ಷೀಣಗತಿ

ಲೂದೀವಂಶ (1451-1526)

ಬಹ್ಲೂಲ್ ಲೂದಿ—ಇಬ್ರಾಹಿಂಲೂದಿ

ಬಹಲೂಲ್ ಲೂದಿಯೂ ಇವನಾದಮೇಲೆ ದೊರೆಯಾದ ಇವನ ಮಗ ಸಿಕಂದರನೂ ಬಹು ಸಾಮರ್ಥ್ಯದಿಂದ ಯುದ್ಧಗಳನ್ನು ಮಾಡಿ, ದೆಹಲಿಯ ರಾಜ್ಯವನ್ನು ವಿಸ್ತರಿಸಿದರು. ಅಯೋಧ್ಯೆ, ಬಿಹಾರ, ಪಂಜಾಬ್ ಈ ರಾಜ್ಯಗಳು ಪುನಃ ದೆಹಲಿಯ ಚಕ್ರವರ್ತಿಯ ಕೈಸೇರಿದುವು.

ಆದರೆ ಸಿಕಂದರನ ಮಗ ಇಬ್ರಾಹಿಂ ಲೂದಿಯು ರಾಜ್ಯವನ್ನು ಸರಿಯಾಗಿ ಆಳಲಿಲ್ಲ. ಇವನು ಕೇವಲ ಅಸಮರ್ಥ, ಇವನು ಹಿಂದೂಗಳಿಗೂ, ತನ್ನ ಸರದಾರರಿಗೂ ಬಗೆಬಗೆಯಾದ ಹಿಂಸೆಗಳನ್ನು ಕೊಟ್ಟಿದ್ದರಿಂದ ಅವರೆಲ್ಲರೂ ಇವನಿಗೆ ಕೇಡನ್ನು ಬಯಸಿದರು. ರಾಜ್ಯದಲ್ಲಿ ಎಲ್ಲೆಲ್ಲೂ ದಂಗೆಗಳು ತಲೆದೋರಿದುವು. ಜಾನ್ಪುರವು ಸ್ವತಂತ್ರ ರಾಜ್ಯವಾಯಿತು.

ಪಂಜಾಬಿನ ಅಧಿಕಾರಿಯಾದ ದೌಲತ್‌ಲೂದಿಯು, ತನ್ನ ದೊರೆಯ ಮೇಲೆ ಯುದ್ಧಮಾಡುವುದಕ್ಕೆ ತನಗೆ ಸಹಾಯ ಮಾಡಬೇಕೆಂದು ಕಾಬೂಲಿನ ದೊರೆಯಾದ ಬಾಬರನಿಗೆ ಅಕ್ಷತೆಯನ್ನು ಕೊಟ್ಟನು. ಇಂತಹ ಸಮಯವನ್ನೇ ಕಾಯುತ್ತಿದ್ದ ಬಾಬರನು ದೊಡ್ಡ ಸೈನ್ಯದೊಡನೆ ಬಂದು ಇಬ್ರಾಹಿಮನನ್ನು ಪಾಣಿಪಟ್ಟದ ಮೊದಲನೆಯ ಯುದ್ಧದಲ್ಲಿ 1526ರಲ್ಲಿ ಸೋಲಿಸಿ, ದೆಹಲಿಯನ್ನು ತನ್ನ ವಶಮಾಡಿಕೊಂಡನು. ಇಂದಿನಿಂದ ಹಿಂದೂಸ್ಥಾನದಲ್ಲಿ ಮೊಗಲರ ಆಳಿಕೆಯು ಪ್ರಾರಂಭವಾಯಿತು.

ಪಠಾಣರ ದೊರೆತನದ ಗೋಪ್ಸ್ವಾರೆ

ಕ್ರಿ. ಶ. 1206 ರಿಂದ 1526ರ ವರೆಗೆ ಪಠಾಣರಾಜರು ಪ್ರಬಲರಾಗಿದ್ದರು. ಅದರಲ್ಲಿಯೂ ಕುತ್ಬುದ್ದೀನ್, ಅಲ್ತಮಷ್, ಬಲ್ಬನ್ ಇವರುಗಳ ಕಾಲದಲ್ಲಿ ಪಠಾಣರ ರಾಜ್ಯವು ಸಿಂಧೂನದಿಯಿಂದ ಬ್ರಹ್ಮಪುತ್ರಾನದಿಯವರೆಗೂ ವಿಸ್ತರಿಸಿತ್ತು. ಅಲ್ಲಾವುದ್ದೀನನು ದಕ್ಷಿಣದೇಶವನ್ನು ಕೂಡ ಜಯಿಸಿದನು. ಮಹಮದ್ ಬಿನ್ ತೊಗಲಕನು ಓರಗಲ್ ಸೀಮೆಯನ್ನು ಸೇರಿಸಿಕೊಂಡು ಪ್ರಬಲರಾಗಿದ್ದ ರಾಜಪುತ್ರರ ಸೊಕ್ಕನ್ನು ಮುರಿದಿದ್ದನು. ಇಲ್ಲಿಂದ ಮುಂದಕ್ಕೆ ದೆಹಲಿಯ ರಾಜ್ಯದ ಪ್ರಾಬಲ್ಯವು ಕಡಿಮೆಯಾಗುತ್ತ ಬಂದರೂ, ಪಠಾಣರ ಹೆಸರಿಗೆ ಲೋಪವಿರಲಿಲ್ಲ. ದೆಹಲಿಯ ರಾಜ್ಯದಿಂದ ಒಡೆದುಹೋಗಿ ಸ್ವತಂತ್ರವಾದ ರಾಜ್ಯಗಳಲ್ಲಿ ಬಂಗಾಳ, ಗುಜರಾತ್, ಮಾಳವ, ಜಾನ್ಪುರ ಮೊದಲಾದ ಉತ್ತರ ಹಿಂದೂಸ್ಥಾನದ ರಾಜ್ಯಗಳೂ, ಬಹಮನೀ, ವಿಜಯನಗರ ಮೊದಲಾದ ದಕ್ಷಿಣದೇಶದ ರಾಜ್ಯಗಳೂ, ಮುಖ್ಯವಾದುವು. ಆದರೂ ವಿಜಯನಗರರಾಜ್ಯ ಹೊರತು ಉಳಿದ ರಾಜ್ಯಗಳೆಲ್ಲವೂ ಮಹಮದೀಯರಾಜರ ವಶದಲ್ಲಿಯೇ ಇದ್ದುವು. ದಕ್ಷಿಣದೇಶದ ಸ್ವತಂತ್ರರಾಜ್ಯಗಳ ಚರಿತ್ರೆಯನ್ನು ಬೇರೆಯಾಗಿ ತಿಳಿಯುವುದೇ ಉತ್ತಮ.

ಪಠಾಣರಾಜರ ನಾಶಕ್ಕೆ ಕಾರಣಗಳು

ದೆಹಲಿಯ ಸುಲ್ತಾನರು ರಾಜ್ಯವನ್ನು ಕಳೆದುಕೊಳ್ಳುವುದಕ್ಕೆ ಬಗೆಬಗೆಯಾದ ಕಾರಣಗಳಿದ್ದುವು. ಅವರಲ್ಲಿ ಕೆಲವರು ಹುಚ್ಚು ದರ್ಬಾರನ್ನು ಮಾಡಿದರು. ಮತ್ತೆ ಕೆಲವರು ಪರಮತದ್ವೇಷದಿಂದ ಹಿಂದೂಗಳನ್ನು ದೂರಮಾಡಿದರು. ಈ ಕಾರಣಗಳಿಂದ ರಾಜ್ಯದ ಬಿಗಿತಪ್ಪಿ ಅನೇಕ ಪ್ರಾಂತಗಳು ಸ್ವತಂತ್ರವಾದುವು. ಆಗಾಗ ದಂಡೆತ್ತಿ ಬರುತ್ತಿದ್ದ ಮಂಗೋಲರ ಹಾವಳಿಯು ಅದರಲ್ಲಿಯೂ ತೈಮೂರನ ಹಾವಳಿಯು, ರಾಜ್ಯದ ಬಲವನ್ನು ಮತ್ತಷ್ಟು ಕುಗ್ಗಿಸಿತು. ಹಿಂದಿನಕಾಲದಲ್ಲಿ ತುಂಬಾ ಸಮರ್ಥರೆನಿಸಿಕೊಂಡಿದ್ದ ಮಹಮದೀಯರು ಉಷ್ಣರಾಜ್ಯವಾದ ಹಿಂದೂಸ್ಥಾನದಲ್ಲಿ ದೀರ್ಘಕಾಲ ನೆಲಸಿದ್ದುದರಿಂದ, ಅವರ ಕಷ್ಟಸಹಿಷ್ಣುತೆಯೂ, ಶೌರ್ಯವೂ ಬಹಳ ಮಟ್ಟಿಗೆ ಕಡಿಮೆಯಾಗಿದ್ದುವು. ಚಳಿದೇಶದಿಂದ ಆಗತಾನೆ ಬರುತ್ತಿದ್ದ ಮೊಗಲರು ಬಹಳ ಶಕ್ತರಾಗಿ, ಯುದ್ಧದಲ್ಲಿ

ಫಿರಂಗಿಗಳನ್ನು ಪಯೋಗಿಸಿದುದರಿಂದ ದೆಹಲಿಯ ಸುಲ್ತಾನರಿಗೆ ಸೋಲಾಯಿತು.

ದಕ್ಷಿಣದೇಶದ ರಾಜ್ಯಗಳು

ಬಹಮನೀರಾಜ್ಯ ಕ್ರಿ. ಶ. 1347—1526

ಮಹಮದ್ ಬಿನ್ ತೊಗಲಕನ ಕಿರುಕುಳವನ್ನು ತಡೆಯಲಾರದೆ, ಅವನ ಅಧಿಕಾರಿಗಳಲ್ಲಿ ಒಬ್ಬನಾದ ಹಸ್ಸ್ ಎಂಬವನು 1347ರಲ್ಲಿ ದೌಲತಾಬಾದನ್ನು ಆಕ್ರಮಿಸಿಕೊಂಡು ಸ್ವತಂತ್ರನಾದನು. ಕ್ರಮೇಣ ಇವನು ದಕ್ಷಿಣದೇಶದಲ್ಲೆಲ್ಲಾ ದೊಡ್ಡದೆಂದು ಪ್ರಸಿದ್ಧಿಪಡೆದ ಬಹಮನೀ ರಾಜ್ಯವನ್ನು ಕಟ್ಟಿದನು. ತನ್ನ ಪೂರ್ವದ ಯಜಮಾನನಾದ "ಗಂಗೂ" ಎಂಬ ಬ್ರಾಹ್ಮಣನ ಜ್ಞಾಪಕಾರ್ಥವಾಗಿ ತಾನು "ಹಸ್ಸ್ ಗಂಗೂ" ಎಂಬ ಅಡ್ಡ ಹೆಸರನ್ನಿಟ್ಟುಕೊಂಡು, ತಾನು ಪರ್ಷಿಯಾದೇಶದ ದೊರೆಯಾದ ಬ್ಹಾಮನ್ ಸಂತತಿಯವನಾದುದರಿಂದ ತನ್ನ ರಾಜ್ಯಕ್ಕೆ ಬ್ಹಾಮನೀ ರಾಜ್ಯವೆಂದು ಹೆಸರಿಟ್ಟನು. ತನ್ನ ಬ್ರಾಹ್ಮಣಯಜಮಾನನು ಮುಂದಾಗಿಯೇ ಹೇಳಿದ್ದಂತೆ ಫಲಿಸಿ ತನಗೆ ರಾಜ್ಯಸಿಕ್ಕಿದ್ದರಿಂದ ಅದನ್ನು "ಬ್ರಾಹ್ಮಣಿ" ಅಥವಾ "ಬಹಮನೀ" ಎಂದು ಕರೆದನೆಂದು ಕೆಲವರು ಹೇಳುವರು. ಇದು ನಿಜವಿರಲಾರದು.

ಬಹಮನೀ ರಾಜ್ಯವು ಅರಬ್ಬೀ ಸಮುದ್ರದಿಂದ ಬಂಗಾಳದವರೆಗೂ ಮಾಳವದಿಂದ ಕೃಷ್ಣಾನದಿಯವರೆಗೂ ವ್ಯಾಪಿಸಿತ್ತು. ಈಗಿನ ಹೈದರಾಬಾದ್ ಸೀಮೆಯು ಈ ರಾಜ್ಯದಲ್ಲಿ ಅಡಕವಾಗಿತ್ತು. ಇದಕ್ಕೆ ರಾಜಧಾನಿ ಕಲ್ಬುರ್ಗಿ. ಮಹಮದ್ ಗವಾನ್ ಎಂಬ ಮಂತ್ರಿಯು ಈ ದೊಡ್ಡ ರಾಜ್ಯವನ್ನು ಅಭಿವೃದ್ಧಿಗೆ ತಂದುದಲ್ಲದೆ ಮುಲ್ಕೀ ಕಂದಾಯದ ತಿದ್ದುಪಾಟುಗಳನ್ನು ಮಾಡಿದನು. ಭೂಕಂದಾಯವನ್ನು ಕ್ರಮಪಡಿಸುವುದಕ್ಕೆ ಗವಾನನು ಮಾಡಿದ ಏರ್ಪಾಡುಗಳನ್ನು ನೋಡಿ ಅಕ್ಬರನ ಮಂತ್ರಿಯಾದ ತೋಡರಮಲ್ಲನು ಮೊಗಲರ ರಾಜ್ಯದಲ್ಲಿ ಈ ಕ್ರಮಗಳನ್ನೇ ಅನುಸರಿಸಿದನು.

ಬಹಮನೀ ಸುಲ್ತಾನರಲ್ಲಿ ಫಿರೋಸನೆಂಬವನು ಅಗ್ರಗಣ್ಯನು. ಕೊನೆಕೊನೆಗೆ ಬಂದ ದೊರೆಗಳು ಶಕ್ತರಲ್ಲದುದರಿಂದ ಈ ರಾಜ್ಯವು

ಒಡೆದು 1526ರಲ್ಲಿ ಬಿರಾರ್, ಅಹಮದ್‌ನಗರ, ಬಿದರೆ, ಬಿಜಾಪುರ, ಗೋಲ್ಕಂಡ ಎಂಬ ಐದು ರಾಜ್ಯಗಳಾದುವು. ಇವುಗಳಿಗೆ ದಖನ್ನಿನ ಷಾಹೀರಾಜ್ಯಗಳೆಂದು ಹೆಸರು. ಈ ಷಾಹೀರಾಜ್ಯಗಳು ಒಂದಾದಮೇಲೆ ಒಂದರಂತೆ ಎಲ್ಲವೂ ಮೊಗಲರ ಕೈ ಸೇರಿದುವು.

ಈ ಬಹಮನೀ ದೊರೆಗಳು ಹಿಂದೂಗಳನ್ನು ಬಹಳವಾಗಿ ಹಿಂಸಿಸುತ್ತಿದ್ದರು. ಹಿಂದೂಗಳ ಹೆಸರೇ ಇಲ್ಲದಂತೆ ಮಾಡಬೇಕೆಂಬುದೇ ಇವರ ಆಸೆಯಾಗಿದ್ದಿತು. ಆದರೆ ಇವರ ರಾಜ್ಯಗಳಲ್ಲಿ ಹಿಂದೂ ಜನಸಂಖ್ಯೆಯೇ ಹೆಚ್ಚಾಗಿದ್ದುದರಿಂದ ಇವರ ಕೋರಿಕೆಯು ನೆರವೇರಲಿಲ್ಲ. ಬಹಮನೀ ದೊರೆಗಳು ಕೋಟೆಗಳನ್ನು ಕಟ್ಟುವುದರಲ್ಲಿ ಬಹು ಸಮರ್ಥರು.

ವಿಜಯನಗರ

ಕ್ರಿ. ಶ. 11–12ನೆಯ ಶತಮಾನದಲ್ಲಿ ಕರ್ಣಾಟಕ ರಾಷ್ಟ್ರವು ಬಹು ಉನ್ನತಸ್ಥಿತಿಯಲ್ಲಿದ್ದು 13ನೆಯ ಶತಮಾನದಿಂದ ಇಳಿಮುಖವಾಯಿತು, ಸಮಾಜದ ಬಿಕ್ಕಟ್ಟು ತಪ್ಪಿತು, ನೀತಿಗೆ ಲೋಪಬಂದಿತು. ಇದಕ್ಕೆ ಮಹಮದೀಯರ ಕಾಟವೇ ಮುಖ್ಯಕಾರಣವಾದರೂ, ಜನಗಳಲ್ಲಿಯೇ ಒಂದು ಬಗೆಯ ಸೋಮಾರಿತನವು ಉಂಟಾಗಿತ್ತೆಂದು ಹೇಳಬಹುದು. ಸನಾತನ ಧರ್ಮಕ್ಕೆ ಮೂಲಸ್ಥಾನವಾಗಿದ್ದ ಯಾದವ, ಹೊಯ್ಸಳ, ಗಣಪತಿ ಮೊದಲಾದವರ ವಂಶಗಳ ಹೆಸರೇ ಇಲ್ಲದಂತಾಯಿತು.

ಮಲ್ಲಿಕ್‌ಕಾಪೂರನು ದಕ್ಷಿಣದೇಶದಲ್ಲಿದ್ದ ಬಲ್ಲಾಳರಾಜರನ್ನು ಸೋಲಿಸಿ ಹೊರಟುಹೋದಮೇಲೆ, ಆ ರಾಜನ ಅಧೀನದಲ್ಲಿದ್ದ ಪಾಳೆಯಗಾರರು ಕೃಷ್ಣ, ತುಂಗಭದ್ರಾ ನದಿಗಳ ದಕ್ಷಿಣಭಾಗದಲ್ಲಿ ವಿಜಯನಗರ ಸಂಸ್ಥಾನವೆಂಬ ಹೆಸರಿನಿಂದ 1336ರಲ್ಲಿ ಒಂದು ಹಿಂದೂ ರಾಜ್ಯವನ್ನು ಕಟ್ಟಿದರು. ಇಲ್ಲಿಂದ ಹಿಂದೂಗಳಲ್ಲಿ ರಾಜ್ಯಸ್ಥಾಪನೆಗೂ, ಸ್ವಧರ್ಮಪ್ರಚಾರಕ್ಕೂ ಮೊದಲಾಯಿತು. ವಿಜಯನಗರವು ಹಿಂದೂ ಸಂಪ್ರದಾಯಗಳ ಪುನರುಜ್ಜೀವನಕ್ಕಾಗಿ ಹುಟ್ಟಿತೆನ್ನಬಹುದು.

ಹರಿಹರನೆಂಬವನು ಈ ಸಂಸ್ಥಾನಕ್ಕೆ ಮೊದಲನೆಯ ದೊರೆಯು. ಇವನಾದಮೇಲೆ ಇವನ ತಮ್ಮ ಬುಕ್ಕರಾಯನು ದೊರೆಯಾದನು. ಇವರಿಬ್ಬರಿಗೂ ಮಾಧವಾಚಾರ್ಯರು ಮಂತ್ರಿಗಳಾಗಿದ್ದರು. ಇವರೇ

ಶೃಂಗೇರಿಮಠದ ಸನ್ಯಾಸವನ್ನು ಸ್ವೀಕರಿಸಿದ ಲೋಕವಿಖ್ಯಾತರಾದ ವಿದ್ಯಾರಣ್ಯರು. ಈ ಮಹಾನುಭಾವರೇ ಈ ನೂತನರಾಜ್ಯ ಕಟ್ಟಡಕ್ಕೆ ತಳಹದಿಯನ್ನು ಹಾಕಿದವರು. ಮಾಧವಾಚಾರ್ಯರೂ, ಅವರ ಒಡಹುಟ್ಟಿದವರಾದ ಸಾಯಣಾಚಾರ್ಯರೂ ವೇದಕ್ಕೆ ಭಾಷ್ಯಗಳನ್ನು ಬರೆದು ಆರ್ಯಮತವನ್ನು ಜೀರ್ಣೋದ್ಧಾರ ಮಾಡಿದರು.

ಎರಡನೆಯ ಹರಿಹರನು ಈ ಸಂಸ್ಥಾನದ ರಾಜಧಾನಿಯಾದ ವಿಜಯನಗರವನ್ನು ವಿಸ್ತರಿಸಿದನು. ಬುಕ್ಕನ ವಂಶದವರ ಆಳಿಕೆಯಾದಮೇಲೆ "ರಾಯರ" ಸಂತತಿಯವರು ವಿಜಯನಗರದ ಸಿಂಹಾಸನವನ್ನು ಏರಿದರು. ಈ ಸಂತತಿಯ ದೊರೆಗಳಲ್ಲಿ ಕೃಷ್ಣದೇವರಾಯನು ಬಹು ಪ್ರಸಿದ್ಧನು. ಪ್ರಸಿದ್ಧ ಹಾಸ್ಯಗಾರನಾದ ತೆನ್ನಾಲ ರಾಮಕೃಷ್ಣನು ಇದ್ದುದು ಈತನ ಆಸ್ಥಾನದಲ್ಲಿಯೇ. ಕೃಷ್ಣದೇವರಾಯನು ಬಿಜಾಪುರದ ದೊರೆಯನ್ನು ಸೋಲಿಸಿ, ಅವನಿಂದ ಬಹಳ ರಾಜ್ಯವನ್ನು ಕಸುಕೊಂಡನು. ಇವನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ಅತ್ಯುಚ್ಛ್ರಾಯಸ್ಥಿತಿಯಲ್ಲಿತ್ತು. ಸಾಮ್ರಾಜ್ಯವು ಕೃಷ್ಣಾನದಿಯ ದಕ್ಷಿಣಕ್ಕೆ ಕನ್ಯಾಕುಮಾರಿಯವರೆಗೆ ಹಬ್ಬಿತ್ತು. ಈ ಹೊಸ ಹಿಂದೂರಾಜ್ಯವು ಸುಮಾರು 200 ವರ್ಷಗಳವರೆಗೆ ಹಿಂದೂಸ್ಥಾನದ ಮುಸಲ್ಮಾನರನ್ನು ತುಂಗಭದ್ರೆಯ ಈಚೆಗೆ ಕಾಲಿಡಗೊಡಲಿಲ್ಲ. ವಿಜಯನಗರದ ಪ್ರಾಬಲ್ಯವನ್ನು ಸಹಿಸಲಾರದೆ ಷಾಹೀಸಂತತಿಯ ನವಾಬರೆಲ್ಲರೂ ಒಟ್ಟುಸೇರಿ ವಿಜಯನಗರದ ಮೇಲೆ ತಾಲಿಕೋಟೆಯಲ್ಲಿ ಯುದ್ಧ ಮಾಡಿ 1565ರಲ್ಲಿ ಹಿಂದೂಗಳನ್ನು ಸಂಪೂರ್ಣವಾಗಿ ಸೋಲಿಸಿದರು. ಮುಸಲ್ಮಾನರು ಆ ಸುಂದರವಾದ ಪಟ್ಟಣದಲ್ಲಿ ಮಾಡಿದ ಅನರ್ಥಗಳೂ, ಕೊಲೆ ಸುಲಿಗೆಗಳೂ ಹೇಳಲಶಕ್ಯವಾದವು. ಸೋತುಹೋದ ಹಿಂದೂ ಅರಸರ ವಂಶೀಯರು ಓಡಿಹೋಗಿ ಪೆನುಗೊಂಡೆ, ಚಂದ್ರಗಿರಿ, ಆನೆಗೊಂದಿ ಮೊದಲಾದ ಸ್ಥಳಗಳಲ್ಲಿ ನೆಲಸಿದರು. ಇವರ ವಂಶಸ್ಥರು ಈಗಲೂ ಪಾಳೆಯಗಾರರೆಂಬ ಹೆಸರಿನಿಂದ ಜಹಗೀರುಗಳನ್ನು ಅನುಭವಿಸುತ್ತಿರುವರು.

ವಿಜಯನಗರದ ವೈಭವವು ನಾಶವಾದನಂತರ, ಕರ್ಣಾಟಕ ಸಾಮ್ರಾಜ್ಯವೈಭವವು ಮಾಯವಾಯಿತು. ಸಾಮಂತರನೇಕರು ಸ್ವತಂತ್ರರಾದರು ; ರಾಜವಂಶೀಯರು ಸದಾ ಮಹಮದೀಯರ ಭಯದಲ್ಲೇ

ಇದ್ದರು. ದಕ್ಷಿಣದಲ್ಲಿ ಮೈಸೂರಿನ ಒಡೆಯರೂ, ಪಶ್ಚಿಮದಲ್ಲಿ ಕೆಳದಿಯ ನಾಯಕರೂ, ತಮಿಳು ದೇಶದಲ್ಲಿ ಮಧುರೆಯ ನಾಯಕರೂ ಸ್ವತಂತ್ರರಾದರು.

ವಿಜಯನಗರದ ರಾಜ್ಯಸ್ಥಿತಿ

ವಿಜಯನಗರದ ಸಂಸ್ಥಾನವು ಬಹು ಸಂಪತ್ತಿನಿಂದ ಕೂಡಿತ್ತು. ಅದರ ರಾಜಧಾನಿಯ ಸುತ್ತಲೂ ಏಳುಸುತ್ತಿನ ಕೋಟೆ ಇದ್ದಿತು. ಅಲ್ಲಿ ಅನೇಕ ಜನ ವಿದ್ಯಾವಂತರೂ, ಧನಿಕರೂ, ವಿದೇಶಗಳಿಂದ ಬಂದ ವ್ಯಾಪಾರಿಗಳೂ ಇದ್ದರು. ವಿಜಯನಗರದ ಸೈನ್ಯವು ಬಲು ದೊಡ್ಡದು. ವಿಜಯನಗರದ ಸಂಸ್ಥಾನವು ಇನ್ನೂರು ಭಾಗಗಳಾಗಿದ್ದು, ಒಂದೊಂದು ಪ್ರದೇಶಕ್ಕೆ ಒಬ್ಬೊಬ್ಬ ಅಧಿಕಾರಿಯಿದ್ದನು. ಭೂಮಿಯ ಹುಟ್ಟುವಳಿಯಲ್ಲಿ ಆರರಲ್ಲಿ ಒಂದುಪಾಲು ಕಂದಾಯವಾಗಿ ಸಲ್ಲುತ್ತಿತ್ತು. ತಪ್ಪುಮಾಡಿದವರಿಗೆ ಅತಿ ಕಠಿಣವಾದ ಶಿಕ್ಷೆಗಳಾಗುತಿದ್ದುವು. ಇದರಿಂದ ತಪ್ಪಿತಸ್ಥರ ಸಂಖ್ಯೆಯೇ ಕಡಿಮೆಯಾಯಿತು. ವಿಜಯನಗರದ ದೊರೆಗಳು ಕೆರೆ, ಕಟ್ಟೆ, ಕಾಲುವೆ, ಸತ್ರಗಳು ರಸ್ತೆಗಳು ಮೊದಲಾದುವುಗಳನ್ನು ಕಟ್ಟಿಸಿ ಜನಗಳಿಗೆ ಬಹಳ ಸಹಾಯಕರಾಗಿದ್ದರು. ವಿಜಯನಗರದ ಅರಸರು ಸ್ಮೃತಿಪುರಾಣಗಳಲ್ಲಿ ಹೇಳಿರುವ ರಾಜ್ಯ ಪರಿಪಾಲನಕ್ರಮವನ್ನೇ ಬಹುಮಟ್ಟಿಗೆ ಅನುಸರಿಸಿದ್ದರು. ಇವರ ಕಾಲದಲ್ಲಿ ಬೌದ್ಧಮತವೂ ಜೈನಮತವೂ ದಕ್ಷಿಣ ಹಿಂದೂಸ್ಥಾನದಲ್ಲಿ ಹಿಮ್ಮೆಟ್ಟಿ, ಹಿಂದೂ ಧರ್ಮವೇ ಬೇರೂರಿತು. ಇವರು ಅನೇಕ ವಿದ್ವಾಂಸರಿಗೆ ಆಶ್ರಯರಾಗಿದ್ದರು. ಇವರ ಪ್ರೋತ್ಸಾಹದಿಂದ ಅನೇಕ ಗ್ರಂಥಗಳು ಹುಟ್ಟಿದುವು. "ಮರೆತು ಹೋದ ಸಾಮ್ರಾಜ್ಯ" (Forgotten Empire) ಎಂದು ಹೆಸರು ಪಡೆದ ವಿಜಯನಗರವು ಈಗ ಸಂಪೂರ್ಣವಾಗಿ ಹಾಳುಬಿದ್ದಿದೆ. ಈಗಲೂ ಹಂಪೆಯ ಬಳಿಯಲ್ಲಿ ಅಲ್ಲಲ್ಲಿ ಕಾಣುವ ಹಾಳುಬಿದ್ದ ಗುಡಿಗಳೂ, ಅರಮನೆಗಳೂ, ಕೋಟೆಕೊತ್ತಲಗಳೂ ಆ ಸಾಮ್ರಾಜ್ಯದ ಅಂದಿನ ವೈಭವವನ್ನು ಜ್ಞಾಪಕಕ್ಕೆ ತರುತ್ತವೆ.

ಪಠಾಣರಕಾಲದಲ್ಲಿ ಹಿಂದೂದೇಶದ ಸ್ಥಿತಿ ಕ್ರಿ. ಶ. 1206–1526

ತುರುಕ ದೊರೆಗಳು ಸಾಮಾನ್ಯವಾಗಿ ನಿರಂಕುಶ ಪ್ರಭುಗಳು. ದೆಹಲಿಗೆ ದೂರವಾಗಿದ್ದ ಹಿಂದೂ ಜಮೀನುದಾರರು ತಮ್ಮ ದೇಶಗಳಲ್ಲಿ ದೊರೆಗಳಂತೆಯೇ ಸ್ವತಂತ್ರರಾಗಿದ್ದರು. ಆದರೆ ದೆಹಲಿಯ ಚಕ್ರವರ್ತಿಗೆ ಕಪ್ಪ ಕಾಣಿಕೆಗಳನ್ನು ಮಾತ್ರ ಕೊಡುತ್ತಿದ್ದರು. ತುರುಕರ ಆಳಿಕೆಯಲ್ಲಿ ಇವರಿಗೆ ಯಾವುದಾದರೂ ಒಂದು ಬಗೆಯ ಕೊರತೆಯು ಇದ್ದೇ ಇದ್ದಿತು. ದೇಶದಲ್ಲಿ ದಂಗೆಗಳೂ, ಮಂಗೋಲರ ಭಯವೂ, ರಾಜಪುತ್ರರ ಕಾಟವೂ ತಪ್ಪಲೇ ಇಲ್ಲ.

ಪಠಾಣರ ಕಾಲದಲ್ಲಿ ಮಹಮುದನ ಮತವು ಎಲ್ಲೆಲ್ಲೂ ಹರಡುತ್ತಾ ಬಂದಿತು. ಈ ಮತದವರು ಇತರ ಮತದವರನ್ನು ಬಲಾತ್ಕರಿಸಿ ತಮ್ಮ ಮತಕ್ಕೆ ಸೇರಿಸಿಕೊಳ್ಳುತ್ತಿದ್ದರು. ಹಾಗೆ ಸೇರದವರು ಹೆಚ್ಚಾದ ತಲೆ ಗಂದಾಯವನ್ನು ಕೊಡಬೇಕಾಗಿತ್ತು.

ಈ ರೀತಿಯಾಗಿ ಹಿಂದೂಗಳಿಗೆ ತೊಂದರೆಗಳಿದ್ದಾಗ್ಯೂ, ಮಹಮದೀಯರನ್ನೂ ಹಿಂದೂಗಳನ್ನೂ ಒಟ್ಟುಗೂಡಿಸುವ ಪ್ರಯತ್ನಗಳು ಆಗಾಗ್ಗೆ ನಡೆಯುತ್ತಲೇ ಇದ್ದುವು. ಈ ಬಗೆಯ ಪ್ರಯತ್ನವನ್ನು ಬಹು ದೂರ ಸಾಗಿಸಿದಾತನು ರಾಮಾನಂದನೆಂಬ ಮಹನೀಯನು. ಹಿಂದೂಗಳೂ ,ಮಹಮದೀಯರೂ ಪರಸ್ಪರ ಮೈತ್ರಿಯಿಂದಿರುವುದು ದೇಶದ ಏಳಿಗೆಗೆ ಕಾರಣವೆಂದು ಈತನು ಬೋಧಿಸುತ್ತಾ ಬಂದುದರಿಂದ ಮಹಮದೀಯ ರಾಜರುಗಳ ಕಿರುಕುಳವು ಕೊಂಚ ಕಡಿಮೆಯಾಗುತ್ತ ಬಂದಿತು.

ಮೊದಮೊದಲು ಬ್ರಾಹ್ಮಣರ ವಿದ್ಯೆಗೆ ಪ್ರೋತ್ಸಾಹವಿಲ್ಲದೆ ಜ್ಯೋತಿಷ, ಗಣಿತ, ರಸಾಯನಶಾಸ್ತ್ರ ಮೊದಲಾದುವು ಮೂಲೆಗೆ ಬಿದ್ದುವು. ಹಿಂದೂಸ್ಥಾನದಲ್ಲಿ ಎಲ್ಲೆಲ್ಲಿಯೂ ವಿದೇಶದ ಮಾದರಿಯ ಕಟ್ಟಡಗಳೇ ಕಂಡುಬಂದು ಹಿಂದೂ ಕಲಾಕೌಶಲ್ಯಕ್ಕೆ ಮಾರ್ಗವಿಲ್ಲದಂತಾಯಿತು.

ಆದರೆ 15ನೆಯ ಶತಮಾನದಲ್ಲಿ ಹಿಂದೂ–ಮುಸಲ್ಮಾನರ ಸ್ನೇಹ ಭಾವವು ಹೆಚ್ಚಿ, ಮಂತ್ರಿತ್ವಕ್ಕೆ ಹಿಂದೂಗಳೇ ನೇಮಿಸಲ್ಪಡುತ್ತಾ ಬಂದುದರಿಂದ, ಅವರು ದೇಶಭಾಷೆಗೆ ಉತ್ತೇಜನಕೊಟ್ಟರು. ಆದುದರಿಂದ ಅನೇಕ ಸಂಸ್ಕೃತ ಗ್ರಂಥಗಳು ಪರಿವರ್ತಿಸಲ್ಪಟ್ಟುವು. ಹಿಂದೂಗಳು ಪಾರ್ಸಿಭಾಷೆಯನ್ನು ಕಲಿಯಲಾರಂಭಿಸಿದರು. ಪಾರ್ಸಿ, ಅರಾಬಿಕ್ ಹಿಂದಿ ಇವುಗಳ ಬೆರಕೆಯಿಂದ "ಉರ್ದು" ಎಂಬ ಹೊಸಭಾಷೆಯು ಏರ್ಪಟ್ಟಿತು.

ಅಧ್ಯಾಯ ೪. _ ಮೊಗಲರ ಸಾಮ್ರಾಜ್ಯ

ಕ್ರಿ. ಶ. 1526-1803

ಮೊಗಲರ ಏಳಿಗೆ 1526-1556

ಪಠಾಣರಾಜರ ಆಳಿಕೆಯು ಮುಗಿದ ಮೇಲೆ ಮತ್ತೊಂದು ಮನೆತನದವರು ಪಟ್ಟಕ್ಕೆ ಬಂದರು. ಅವರೂ ಮಹಮದೀಯರೆ. ಅವರು ತುರ್ಕಿಸ್ಥಾನದಿಂದ ಬಂದರು. ಅವರು ಆ ಕಾಲದ ಹಿಂದೂಗಳು. ಅವರು ಮಂಗೋಲಿಯದಿಂದ ಬಂದವರೆಂದು ಭ್ರಾಂತಿಸಿ ಅವರನ್ನು ಮೊಗಲರೆಂದು ಕರೆದರು. ಈ ಹೆಸರೇ ಈಗಲೂ ವಾಡಿಕೆಯಲ್ಲಿದೆ. ನಿಜವಾಗಿಯೂ ಮೊಗಲ್ ವಂಶದ ದೊರೆಗಳನ್ನು "ತುರ್ಕಿ ವಂಶ" ದವರೆಂದು ಕರೆಯಬೇಕಾಗಿದ್ದಿತು.

ಧೀರನಾದ ಬಾಬರ್ (ಕ್ರಿ. ಶ. 1526-30)

ಮಂಗೋಲದ ಚಂಗೇಸ್ ಖಾನನೂ, ತೈಮೂರನೂ ಇವನ ಸಂಬಂಧಿಗಳು. ಆದರೂ ಇವನು ತುರ್ಕಿಯ ಬುಡಕಟ್ಟಿಗೆ ಸೇರಿದವನು. ಇವನು ಚಿಕ್ಕವಯಸ್ಸಿನಲ್ಲಿಯೇ ತಾಯಿಯ ಇಷ್ಟಾನುಸಾರ ಕಾಬೂಲ್ ಸೀಮೆಯನ್ನು ಸಂಪಾದಿಸಿಕೊಂಡು ಆಳುತ್ತಿದ್ದನು. ಹಿಂದೂ ಸ್ಥಾನದ ಸಂಪತ್ತನ್ನು ಕೇಳಿ ಈ ದೇಶದ ಮೇಲೆ ದಂಡೆತ್ತಿ ಬರಬೇಕೆಂಬ ಆಸೆಯು ಬಾಬರನಿಗೆ ವಿಶೇಷವಾಯಿತು. ಈ ಸಮಯಕ್ಕೆ ಸರಿಯಾಗಿ ದೌಲತ್ ಲೂದಿಯು ಇವನ ಸಹಾಯವನ್ನು ಅಪೇಕ್ಷಿಸಿದ್ದು ಇವನಿಗೆ ಸಂತೋಷಕರವಾದ ನೆವವಾಯಿತು. ಬಾಬರನು ಪಾಣಿಪಟ್ಟದ ಮೊದಲನೆಯ ಯುದ್ಧದಲ್ಲಿ ಇಬ್ರಾಹಿಮನನ್ನು ಸೋಲಿಸಿ ದೆಹಲಿಯ ಬಾದಷಹನಾದನು.

ಸಂಗರಾಯರೊಡನೆ ಯುದ್ಧ

'ಮೊಗಲರು ಕೊಳ್ಳೆ ಹೊಡೆಯುವರೇ ಹೊರತು ಇಂಡಿಯದಲ್ಲಿ ರಾಜ್ಯ ಕಟ್ಟುವವರಲ್ಲ' ಎಂದು ಹಿಂದೂ ರಾಜರು ಭಾವಿಸಿದ್ದರು. ಆದರೆ

ಪಾಣಿಪಟ್ಟದ ಯುದ್ಧವಾದ್ಮ ಮೇಲೆ ಬಾಬರನು ದೆಹಲಿಯಲ್ಲಿ ನೆಲೆಯಾಗಿ ನಿಂತನು. ಚಿತ್ತೋರಿನ ರಾಜಪುತ್ರ ದೊರೆಯಾದ ಸಂಗರಾಯನು ಇದನ್ನು ನೋಡಿ ಸಹಿಸಲಾರದೆ, 1527 ರಲ್ಲಿ ಸಿಕ್ರಿ ಎಂಬಲ್ಲಿ ಬಾಬರನ ಮೇಲೆ ಕದನವನ್ನು ಮಾಡಿ ಸೋತುಹೋದನು. ಇದರಿಂದ ಮೊಗಲರ ಅಧಿಕಾರವು ಹಿಂದೂಸ್ಥಾನದಲ್ಲಿ ಸ್ಥಿರಪಟ್ಟಿತು. ಇಲ್ಲಿಂದ ಮುಂದೆ ಬಾಬರನು ತನ್ನ ರಾಜ್ಯವನ್ನು ವಿಸ್ತರಿಸುವುವಕ್ಕೆ ಪ್ರಯತ್ನಪಟ್ಟನು.

ಬಂಗಾಳ, ಬಿಹಾರ ಮೊದಲಾದ ದೇಶಗಳು ಇವನ ವಶವಾದುವು. 1529ರಲ್ಲಿ ಇವನ ರಾಜ್ಯವು ಬಿಹಾರನಿಂದ ಪಾರ್ಶಿಸ್ಥಾನದವರೆಗೂ ವಿಸ್ತರಿಸಿತು. ಮಾರನೆಯ ವರುಷ ಇವನು ಕಾಲವಾದನು. ಇವನು ರಾಜ್ಯವಾಳಿದಷ್ಟು ದಿನಗಳೂ ಯುದ್ಧದಲ್ಲಿಯೇ ಕಳೆದು ಹೋದುವು; ಆದುದರಿಂದ ತನ್ನ ರಾಜ್ಯವನ್ನು ಬಲಪಡಿಸುವುದಕ್ಕೆ ಅವನಿಗೆ ಅವಕಾಶ ವಿಲ್ಲದಂತಾಯಿತು.

ಈತನು ಬಹು ಶೂರ; ಕಷ್ಟವನ್ನು ಸಹಿಸತಕ್ಕವನು; ರಸಿಕ ಮತ್ತು ವಿದ್ಯಾವಂತ; ಅನೇಕ ಕವಿಗಳಿಗೆ ಇವನು ಆಶ್ರಯನಾಗಿದ್ದನು. ಬಾಬರನು ತನ್ನ ಆತ್ಮ ಚರಿತ್ರೆಯನ್ನು ಬರೆದಿಟ್ಟಿರುತ್ತಾನೆ. ಶತ್ರುಗಳ ಕೈಗೆ ಸಿಕ್ಕುವುದೂ, ಅವುಗಳಿಂದ ಪಾರಾಗುವುದೂ ಇವನಿಗೆ ಅನುಭವವಾಗಿದ್ದುವು. ಮಾತೃ ಭಕ್ತಿಯೂ, ತಾಯಿಯ ಉಪದೇಶದಂತೆ ನಡೆಯುವುದೂ, ತನ್ನ ಭಟರನ್ನು ತನ್ನಜೀವಕ್ಕಿಂತಲೂ ಹೆಚ್ಚಾಗಿ ಕಾಪಾಡುವುದೂ, ಇವೆಲ್ಲವೂ ಇವನಿಗೆ ನಿಜವಾದ ಗುಣಗಳಾಗಿದ್ದುವು. ಈ ವಿಷಯದಲ್ಲಿ ಇವನಿಗೂ ಮುಂದೆ ಪ್ರಸಿದ್ಧಿಯನ್ನು ಪಡೆದ ಶಿವಾಜಿಗೂ ತುಂಬಾ ಹೋಲಿಕೆಯುಂಟು.

ದೆಸೆಗೆಟ್ಟ ಹುಮಾಯೂನ್ (ಕ್ರಿ. ಶ. 1536–40)

ತಂದೆಯು ಸತ್ತ ಮೇಲೆ ಹುಮಾಯೂನನು ಯಾರ ಅಡ್ಡಿಯೂ ಇಲ್ಲದೆ ಗಾದಿಗೆ ಬಂದನು. ಇವನು ಗಾದಿಯನ್ನು ಹತ್ತಿದೊಡನೆಯೇ ಗುಜರಾತಿನ ಬಹಾದುರ್ ಷಹನನ್ನು ಸೋಲಿಸಿ ಬೇಕಾದಷ್ಟು ಹಣವನ್ನೂ, ಗುಜರಾತ್, ಮಾಳವದೇಶಗಳನ್ನೂ ಸಂಪಾದಿಸಿದನು.

ಹುಮಾಯೂನನು ರಾಜ್ಯಭ್ರಷ್ಟನಾದುದು

ಷೇರ್ ಖಾನನೆಂಬ ಅಪ್ಘಾನನು ಬಿಹಾರ, ಬಂಗಾಳಗಳನ್ನು ತಾನೇ ತಾನಾಗಿ ಆಳುತ್ತಿದ್ದನು. ಇವನ ಸೊಕ್ಕನ್ನು ಮುರಿಯುವುದಕ್ಕಾಗಿ, ದೊರೆಯು ಇವನೊಡನೆ ಯುದ್ಧಮಾಡಿ ಚೂನಾರ್ ಕೋಟೆಯನ್ನು ಸ್ವಾಧೀನ ಮಾಡಿಕೊಂಡನು. ಆದರೆ ಷೇರ್‌ಖಾನನು 1539ರಲ್ಲಿ ಬಕ್ಸಾರ್ ಎಂಬ ಸ್ಥಳದಲ್ಲಿ ಹುಮಾಯೂನನ್ನು ಸೋಲಿಸಿದನು. ಮೊಗಲನು ತಲೆ ತಪ್ಪಿಸಿಕೊಳ್ಳುವುದೇ ಕಷ್ಟವಾಯಿತು. ಮಾರನೆಯ ವರ್ಷ ಷೇರನು ಮರಳಿ ಹುಮಾಯೂನನ್ನು ಸಂಪೂರ್ಣವಾಗಿ ಸೋಲಿಸಿದ್ದರಿಂದ ಹುಮಾಯೂನನು ದೇಶವನ್ನು ಬಿಟ್ಟು ಇರಾನ್‌ದೇಶಕ್ಕೆ ಓಡಿಹೋದನು.

ಹುಮಾಯೂನನ ಅಲೆದಾಟ:—ಇವನು ದೇಶವನ್ನು ಬಿಟ್ಟು ರಾಜಪುಟಾಣದ ಮರಳು ಕಾಡಿನ ಮಾರ್ಗವಾಗಿ ಪತ್ನಿಯೊಡನೆ ಪ್ರಯಾಣ ಮಾಡುವಾಗ ದಾರಿಯಲ್ಲಿ ಅಮರಕೋಟೆಯಲ್ಲಿ ಇವನಿಗೆ ಒಂದು ಮಗು ಹುಟ್ಟಿತು. ಮರುಭೂಮಿಯಲ್ಲಿ ಜನಿಸಿದ ಈ ಶಿಶುವೇ ಅಭಿವೃದ್ಧಿಗೆ ಬಂದು ಮೊಗಲ್ ಚಕ್ರವರ್ತಿಗಳಲ್ಲೆಲ್ಲಾ ಶ್ರೇಷ್ಠನೆನಿಸಿಕೊಂಡು. ವಿವೇಕವಾಗಿ ರಾಜ್ಯಭಾರಮಾಡಿ "ಅಕ್ಬರ್ ಮಹಾಶಯ" ಎಂಬ ಖ್ಯಾತಿಯನ್ನು ಪಡೆಯುವುದು.

ಷೇರ್‌ಷಾ.—ಸೂರ್ ಸಂತತಿ (ಕ್ರಿ. ಶ. 1540-1556)

ಹುಮಾಯೂನನನ್ನು ಸೋಲಿಸಿ ಪಟ್ಟಕ್ಕೆ ಬಂದ ಈತನು ಆಫ್ಘನ್ ದೇಶದ ಸೂರ್ ವಂಶದವನು. ಇವನು ಬಹು ಸಮರ್ಥ. ಇವನ ಕಾಲದಲ್ಲಿ ಕಳ್ಳಕಾಕರ ಭೀತಿಯೇ ಇರಲಿಲ್ಲ; ಅಪರಾಧಿಗಳಿಗೆ ಕಠಿಣವಾದ ಶಿಕ್ಷೆಗಳನ್ನು ಕೊಡುತ್ತಿದ್ದನು. ರಾಜ್ಯಭಾರಕ್ರಮದಲ್ಲಿ ಈತನು ಮಾಡಿದ ಶಿಸ್ತುಗಳನ್ನನುಸರಿಸಿ ಮುಂದಿನ ದೊರೆಗಳು ಅನುವರ್ತಿಸಿದರು. ಈತನು ದೊಡ್ಡದೊಡ್ಡ ರಸ್ತೆಗಳನ್ನು ಮಾಡಿಸಿ, ಸಾಲುಮರಗಳನ್ನು ಬೆಳೆಸಿ, ಕೊಳಗಳನ್ನು ತೋಡಿಸಿ, ಸತ್ರಗಳನ್ನು ಕಟ್ಟಿಸಿ, ಕಾಗದಗಳನ್ನು ಊರಿಂದೂರಿಗೆ ಕಳುಹಿಸುವುದಕ್ಕೆ ಕುದುರೆಯ ಟಪಾಲುಗಳನ್ನು ಇಡಿಸಿ, ಧರ್ಮಿಷ್ಠನಾದ ದೊರೆಯೆಂಬ ಖ್ಯಾತಿ ಪಡೆದನು. ಈತನು ಹಿಂದೂಗಳಿಗೂ ದೊಡ್ಡ ಅಧಿಕಾರಗಳನ್ನು ಕೊಡುತ್ತಿದ್ದನು. ಮುಲ್ಕೀ ವಿಚಾರದಲ್ಲಿ ಇವನು ಮಾಡಿದ ಏರ್ಪಾಡುಗಳು ಅಕ್ಬರನಿಗೆ ಮೇಲ್ಪಂಕ್ತಿಯಾದುವು.

ಇವನು 1545ರಲ್ಲಿ ಸತ್ತುಹೋದನು. ಇವನಾದಮೇಲೆ ಬಂದ ಪಠಾಣ ದೊರೆಗಳು ಅಸಮರ್ಥರಾದುದರಿಂದ ದೆಹಲಿಯ ರಾಜ್ಯವು ಅನಾಯಕವಾಯಿತು. ಈ ಮಧ್ಯೆ ಇರಾನಿನ ದೊರೆಯ ಸಹಾಯದಿಂದ ಕಾಬೂಲ್, ಕಾಂದಹಾರ್ ರಾಜ್ಯಗಳನ್ನು ಜಯಿಸಿಕೊಂಡಿದ್ದ ಹುಮಾಯೂನನು ಹಿಂದೂ ದೇಶದ ಸ್ಥಿತಿಯನ್ನು ನೋಡಿ 1556ರಲ್ಲಿ ದಂಡೆತ್ತಿಬಂದು ಜಯಶೀಲನಾಗಿ ಮರಳಿ ದೆಹಲಿಯ ಚಕ್ರವರ್ತಿಯಾದನು. ಆದರೆ ಅವನು ರಾಜ್ಯವನ್ನು ಬಹುದಿನ ಅನುಭವಿಸಲಿಲ್ಲ; ತನ್ನ ಮಹಡಿಯ ಹಂತವನ್ನು ಇಳಿಯುವಾಗ ಬಿದ್ದು ಸತ್ತುಹೋದನು.

ಪಾಣಿಪಟ್ಟದ ಎರಡನೆಯ ಯುದ್ಧ

ಹೇಮು, ಬೈರಾಮ್‌ಖಾ, ಅಕ್ಬರ್.—ಹುಮಾಯೂನನು ಸತ್ತ ನಂತರ ಸಿಂಹಾಸನಕ್ಕೆ ಸೂರ್ ವಂಶೀಯರಿಬ್ಬರೂ ಹೇಮೂ ಎಂಬ ಹಿಂದುವೂ ಪ್ರಯತ್ನಪಡುತ್ತಿದ್ದರು. ಹುಮಾಯೂನನ ಮಗನಾದ ಅಕ್ಬರನಾದರೋ ಪಂಜಾಬಿನಲ್ಲಿ ಸಿಕಂದರ್ ಸೂರ್‌ನೊಡನೆ ರಾಜ್ಯಕ್ಕಾಗಿ ಜಗಳವಾಡುತ್ತಿದ್ದನು. ಇಷ್ಟರಲ್ಲಿಯೇ ಹೇಮುವು ಸೇನೆಯೊಡನೆ ಬಂದು ದೆಹಲಿ, ಆಗ್ರಾ ಪಟ್ಟಣಗಳನ್ನು ವಶಮಾಡಿಕೊಂಡು ರಾಜಾ ವಿಕ್ರಮಾದಿತ್ಯನೆಂಬ ಬಿರುದನ್ನು ವಹಿಸಿಕೊಂಡು ತಾನೇ ದೆಹಲಿಯ ಚಕ್ರವರ್ತಿ ಎನಿಸಿಕೊಂಡನು. ಈ ವರ್ತಮಾನವನ್ನು ಕೇಳಿ, ಅಕ್ಬರನೂ ಅವನ ಮಾವನಾದ ಬೈರಾಮಖಾನನೂ ದೊಡ್ಡ ಸೈನ್ಯದೊಡನೆ ಪಂಜಾಬಿನಿಂದ ಬಂದು ಹೇಮುವನ್ನು ಪಾಣಿಪಟ್ಟದ ಮೈದಾನದಲ್ಲಿ ಎದುರಿಸಿದರು. 1556ರಲ್ಲಿ ನಡೆದ ಈ ಎರಡನೆಯ ಪಾಣಿಪಟ್ಟದ ಯುದ್ಧದಲ್ಲಿ ಮೊಗಲರಿಗೆ ಜಯವಾಯಿತು. ಹೇಮುವು ಹತನಾದನು. ತರುವಾಯ 14 ವರುಷದ ವಯಸ್ಸಿನ ಅಕ್ಬರನಿಗೆ ಪಟ್ಟವಾಯಿತು. ದೊರೆಯು ಪ್ರಾಪ್ತವಯಸ್ಕನಾಗುವವರೆಗೂ ಬೈರಾಮನೇ ರಾಜ್ಯವನ್ನು ಬಹು ದರ್ಪದಿಂದ ಆಳಿ ಮೊಗಲರ ಹೆಸರನ್ನು ಉಳಿಸಿದನು.

ಅಧ್ಯಾಯ ೫.—ಮೊಗಲರ ಔನ್ನತ್ಯ ಕ್ರಿ. ಶ. 1556–1707

(೧) ಅಕ್ಬರ್ ಮಹಾಶಯ (1556-1605)

ಬೈರಾಮನನ್ನು ಓಡಿಸಿದುದು—ಮೊಗಲ್ ಸಾಮ್ರಾಜ್ಯದ ನಿಜವಾದ ಅಭ್ಯುದಯವು ಅಕ್ಬರ್ ದೊರೆಯ ಕಾಲದಿಂದ ಪ್ರಾರಂಭವಾಯಿತು. ತಂದೆಯು ಸತ್ತಾಗ ಅಕ್ಬರನಿಗೆ ಇನ್ನೂ ಹದಿಮೂರು ವರ್ಷವಾಗಿತ್ತು. ಆದುದರಿಂದ ಬೈರಾಮನೇ ರಾಜ್ಯವನ್ನು ಆಳುತ್ತಿದ್ದನು. ಆದರೆ ಬೈರಾಮನು ಬಹಳ ಕ್ರೂರನು; ಇವನಿಂಡ ಪ್ರಜೆಗಳಿಗೆ ಬಹು ಹಿಂಸೆಯಾಗುತ್ತಿತ್ತು. ಆದುದರಿಂದ ಅಕ್ಬರನು ತನ್ನ ಹದಿನೆಂಟನೆಯ ವಯಸ್ಸಿನಲ್ಲಿ (1560) ರಾಜ್ಯಭಾರವನ್ನು ತಾನೇ ವಹಿಸಿದನು. ಇದಕ್ಕಾಗಿ ಬೈರಾಮನು ಅಸಮಾಧಾನಪಟ್ಟು ದಂಗೆ ಎದ್ದನು. ಅಕ್ಬರನು ಅವನನ್ನು ಸೋಲಿಸಿದ ಮೇಲೆ, ಬೈರಾಮನು ಮಕ್ಕಾಕ್ಕೆ ಯಾತ್ರೆಗೆ ಹೋಗುತ್ತಿದ್ದಾಗ ತನ್ನ ಶತ್ರುವಿನಿಂದ ಹತನಾದನು.

1560ರಲ್ಲಿ ಅಕ್ಬರನಿಗೆ ದೆಹಲಿ, ಪಂಜಾಬು, ಕಾಬೂಲ್ ಈ ಪ್ರಾಂತಗಳು ಮಾತ್ರ ಸೇರಿದ್ದುವು. ಇವುಗಳೂ ಅನಾಯಕವಾಗಿದ್ದುವು. ಅಕ್ಬರನು ಮೊಟ್ಟಮೊದಲು ತುಂಟರನ್ನು ಅಡಗಿಸಿ, ಮಾಳವ, ಬಿಹಾರ ದೇಶಗಳನ್ನು ತಹಬಂದಿಗೆ ತಂದನು. ಮಧ್ಯಹಿಂದೂಸ್ಥಾನದಲ್ಲಿ ಗೊಂಡ್ವಾನ ದೇಶದಲ್ಲಿ ದುರ್ಗಾವತಿ ಎಂಬ ರಾಣಿಯು ಬಹು ಸಮರ್ಥಳಾಗಿ ಆಳುತ್ತಿದ್ದಳು. ಅಕ್ಬರನು ಅವಳನ್ನು ಸೋಲಿಸಿ ಆ ಸಂಸ್ಥಾನವನ್ನು ತನ್ನ ವಶಮಾಡಿಕೊಂಡನು.

ಅಕ್ಬರನೂ-ರಾಜಪುತ್ರರೂ

ಹಿಂದೂರಾಜರ ಮೈತ್ರಿಯನ್ನೂ, ಪ್ರೀತಿಯನ್ನೂ ಸಂಪಾದಿಸಿದ ಹೊರತು ರಾಜ್ಯವು ನೆಲೆಯಾಗಿ ನಿಲ್ಲಲಾರದೆಂದು ತಿಳಿದು, ಅಕ್ಬರನು ರಾಜಪುತ್ರ ದೊರೆಗಳಮೇಲೆ ಹೊರಟು ಅವರುಗಳನ್ನು ಯುದ್ಧದಲ್ಲಿ ಸೋಲಿಸಿದರೂ, ಅವರ ರಾಜ್ಯಗಳನ್ನು ಅವರ ಸ್ವಾಧೀನದಲ್ಲಿಯೇ ಬಿಟ್ಟು ಅವರುಗಳೊಡನೆ ಬಂಧುತ್ವ ಬಳೆಯಿಸಿದನು. ಇದರಿಂದ ಜ್ಯೋತಿಪುರ,

ಜಯಪುರ ಈ ದೇಶದ ಬಲಿಷ್ಠರಾದ ಅರಸರು ಅಕ್ಬರನಿಗೆ ಸಾಮಂತರಾಜರಾಗಿ ರಾಜ್ಯಕ್ಕೆ ಬೆಂಬಲವಾದರು. ಅಕ್ಬರನು ಜಯಪುರದ ರಾಜನ ಮಗಳನ್ನು ತಾನೇ ಮದುವೆಯಾಗಿ, ಜ್ಯೋತಿಪುರದ ಅರಸನ ಮಗಳನ್ನು ತನ್ನ ಮಗನಿಗೆ ತಂದುಕೊಂಡನು.

ಆದರೆ ರಾಜಪುತ್ರರ ರಾಜಾಧಿರಾಜನಾದ **ಚಿತ್ತೋರಿನ** ಉದಯಸಿಂಹನು ಅಕ್ಬರನೊಡನೆ ರಕ್ತಸಂಬಂಧವನ್ನು ಬಳೆಯಿಸಲು ಒಪ್ಪಲಿಲ್ಲ. ಆದುದರಿಂದ ಅಕ್ಬರನು ಅವನಮೇಲೆ ಹೊರಟು 1568ರಲ್ಲಿ ಚಿತ್ತೋರನ್ನು ಮುತ್ತಿದನು. ರಾಜಪುತ್ರರು ಧೀರತೆಯಿಂದ ಕಾದಿ "ಜೋಹರ್" ಪದ್ಧತಿಯನ್ನನುಸರಿಸಿದರು. ಉದಯಸಿಂಹನೂ ಅವನ ಕಡೆಯವರೂ ಆರಾವಳಿ ಬೆಟ್ಟಕ್ಕೆ ಓಡಿಹೋದರು. ಅವನ ಮಗನಾದ ಪ್ರತಾಪಸಿಂಹನು ಚಿತ್ತೋರನ್ನು ಹಿಂದಕ್ಕೆ ಪಡೆಯಬೇಕೆಂದು ಬಹು ಹೋರಾಡಿದನು. ಅದು ಸಾಧ್ಯವಾಗಲಿಲ್ಲ. ಆದುದರಿಂದ ತನ್ನ ತಂದೆಯ ಹೆಸರಾಗಿ, ಉದಯಪುರವೆಂಬ ಒಂದು ಹೊಸ ಪಟ್ಟಣವನ್ನೇ ಕಟ್ಟಿದನು. ಈ ರೀತಿಯಾಗಿ ಉದಯಪುರದ ರಾಜಪುತ್ರರು ಮಾತ್ರ ಮೊಗಲರಿಗೆ ಎಂದಿಗೂ ಅಧೀನರಾಗಲಿಲ್ಲ, ಅವರೊಡನೆ ಬಂಧುತ್ವವನ್ನೂ ಬಳೆಯಿಸಲಿಲ್ಲ.

ಉಳಿದ ರಾಜಪುತ್ರರೆಲ್ಲರೂ ಅಕ್ಬರನಿಗೆ ಶರಣಾಗತರಾದರು. ಆದರೂ ಅಕ್ಬರನು ಅವರನ್ನು ದೂರಮಾಡದೆ ಸ್ನೇಹಭಾವದಿಂದ ಕಂಡು, ರಾಜಪುತ್ರ ಕನ್ಯೆಯರನ್ನು ಲಗ್ನವಾಗಿ ರಾಜಪುತ್ರನಂಟರಿಗೆಲ್ಲ ದೊಡ್ಡ ದೊಡ್ಡ ಅಧಿಕಾರಗಳನ್ನು ಕೊಟ್ಟನು.

ಅಕ್ಬರನು ಜಯಿಸಿದ ರಾಜ್ಯಗಳು—ಈ ರೀತಿಯಾಗಿ ರಾಜಪುತ್ರರ ಬೆಂಬಲದಿಂದ ಅಕ್ಬರನು ಬಿಹಾರ, ಬಂಗಾಳ, ಒರಿಸ್ಸ, ಕಾಶ್ಮೀರ, ಸಿಂಧುದೇಶ, ಮಾಳವ, ಗುಜರಾತ್, ಖಾನ್ದೇಶ, ಕಾಬೂಲ್, ಕಾಂದಹಾರ್ ಇವೇ ಮೊದಲಾದ ದೇಶಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಅಕ್ಬರನು ಈ ಮೇರೆಗೆ ಉತ್ತರ ಹಿಂದೂಸ್ಥಾನವನ್ನೆಲ್ಲ ತನ್ನ ಸ್ವಾಧೀನಮಾಡಿಕೊಂಡು 1595ರಲ್ಲಿ ದಕ್ಷಿಣದ ಕಡೆಗೆ ದಂಡನ್ನು ಕಳುಹಿಸಿದನು.

ಇಲ್ಲಿಯ ರಾಜ್ಯಗಳಲ್ಲೆಲ್ಲ ಅಹಮದ್ ನಗರವು ಪ್ರಸಿದ್ಧವಾದುದು. ಈ ದೇಶದ ರಾಜಬಂಧುಗಳಲ್ಲಿ ಜಗಳಹುಟ್ಟಿ, ಅವರಲ್ಲೊಬ್ಬನು ಅಕ್ಬರನ ಸಹಾಯವನ್ನು ಕೇಳಿದನು. ಅದರಂತೆ ಮೊಗಲರ ದೊರೆಯು ಸೈನ್ಯ

ಸಮೇತನಾಗಿ ಬಂದು ಅಹಮದ್ ನಗರವನ್ನು 1595ರಲ್ಲಿ ಮುತ್ತಿಗೆಹಾಕಿದನು. ಈ ಮುತ್ತಿಗೆಯಲ್ಲಿ ಸುಲ್ತಾನರ ಕಡೆ ಚಾಂದ್‌ಬೀಬಿ ಎಂಬಾಕೆಯು ಕಲಿತನವನ್ನು ತೋರಿದಳು. ಕಡೆಗೆ ಇವಳ ಕಡೆಯುವರೇ ಇವಳಿಗೆ ಮೋಸಮಾಡಿದುದರಿಂದ ಅಹಮ್ಮದ್‌ನಗರವು ಸುಲಭವಾಗಿ ಅಕ್ಬರನ ಕೈಸೇರಿತು. ಹೀಗೆ 1601ರಲ್ಲಿ ಅಕ್ಬರನ ಚಕ್ರಾಧಿಪತ್ಯವು ಕಾಂದಹಾರ್ ದೇಶದಿಂದ ಬಂಗಾಳದವರೆಗೂ, ಹಿಮಾಚಲದಿಂದ ಅಹಮದ್‌ನಗರ, ಒರಿಸಾ ದೇಶಗಳವರಿಗೂ ವ್ಯಾಪಿಸಿತ್ತು. ಇಷ್ಟು ದೊಡ್ಡ ರಾಜ್ಯವನ್ನು ಸ್ಥಾಪಿಸಲು ಅಕ್ಬರನು ನಲವತ್ತು ವರ್ಷಗಳಕಾಲ ಹೋರಾಡಬೇಕಾಯಿತು.

ಅಕ್ಬರನ ಮರಣ—ಅಕ್ಬರನು ರಾಜತಂತ್ರ ವಿಷಯಗಳಲ್ಲಿ ಎಷ್ಟೋ ವಿವೇಕಿಯಾಗಿದ್ದರೂ ತನ್ನ ಮಕ್ಕಳನ್ನು ಮಾತ್ರ ಸರಿಯಾದ ಮಾರ್ಗದಲ್ಲಿ ಸಾಕಲಿಲ್ಲ. ಅವರು ಜೂಜು, ಕುಡಿತ ಮೊದಲಾದ ಕೆಟ್ಟ ನಡತೆಗಳಲ್ಲಿ ನಿರತರಾದರು. ಅವರು ತಂದೆಯಮೇಲೆಯೇ ದಂಗೆಯೆದ್ದರು. ಇವರ ದುರ್ಮಾರ್ಗತನವನ್ನು ನೋಡಿ ಅಕ್ಬರನಿಗೆ ಮನಸ್ಸಿನ ನೆಮ್ಮದಿಯು ಕಡಿಮೆಯಾಯಿತು. ಹಿರಿಯ ಮಗನಾದ ಸಲೀಮನು ಅಕ್ಬರನ ಪ್ರಾಣಸ್ನೇಹಿತನಾದ ಅಬುಲ್‌ಫಸಲ್‌ನನ್ನು ಕೊಲ್ಲಿಸಿದನು. ದೊರೆಯು ಈ ದುಃಖದಿಂದ ಕೃಶನಾಗಿ 1605ರಲ್ಲಿ ಸ್ವರ್ಗಸ್ಥನಾದನು.

ಅಕ್ಬರನ ಗುಣಗಳು—ಅಕ್ಬರನು ಸುಂದರನು, ದೃಢಕಾಯನು, ಪರಾಕ್ರಮಿ, ಹುಟ್ಟಿದಂದಿನಿಂದಲೂ ಕಷ್ಟವನ್ನನುಭವಿಸಿದವನಾದುದರಿಂದ ಅವನಿಗೆ ದಯೆಯು ಹೆಚ್ಚಾಗಿದ್ದಿತು. ಸಂಗೀತ ಮತ್ತು ಚಿತ್ರ ಕಲೆಗಳಲ್ಲಿ ಅಕ್ಬರನಿಗೆ ಬಹಳ ಪರಿಶ್ರಮವಿತ್ತು. ರಾಜಕೀಯ ಮತ್ತು ಸೈನ್ಯದ ಆಡಳಿತಗಳನ್ನು ಸ್ವತಃ ನಡೆಯಿಸುತ್ತಿದ್ದನು. ಅಕ್ಬರನಿಗೆ ಓದುಬರೆಹ ಬಾರದಿದ್ದರೂ, ಇವನ ಕಾಲದಲ್ಲಿ ವಿದ್ಯಾವಂತರಿಗೆ ತುಂಬ ಪ್ರಾಶಸ್ತ್ಯವಿದ್ದಿತು. ಇವನೂ ಸಾವಿರಾರು ಪುಸ್ತಕಗಳನ್ನು ಓದಿಸಿ ಕೇಳಿದ್ದನಂತೆ. ಇವನ ಸಭೆಯಲ್ಲಿ ಫೈಸಿಯೆಂಬ ಪ್ರಸಿದ್ಧನಾದ ಕವಿಯೂ, ಅಕ್ಬರ್‌ನಾಮಾ ಎಂಬ ಅಕ್ಬರನ ಚರಿತ್ರೆಯನ್ನು ಬರೆದ ಅಬುಲ್‌ಫಸಲ್ ಎಂಬ ಚರಿತ್ರಕಾರನೂ, ಬೀರ್‌ಬಲ್, ತೋದರ್‌ಮಲ್ ಎಂಬ ವಿವೇಕಿಗಳಾದ ಮಂತ್ರಿಗಳೂ ಇದ್ದರು.

ಅಕ್ಬರನ ರಾಜತಂತ್ರ—ಅಕ್ಬರನಿಗೆ ಬಹು ದೊಡ್ಡ ರಾಜ್ಯವನ್ನು

ಕಟ್ಟಬೇಕೆಂಬ ಆಸೆಯು ಚಿಕ್ಕಂದಿನಿಂದಲೂ ಇದ್ದಿತು. ಪ್ರಜಾಕ್ಷೇಮಕ್ಕಾಗಿ ಇವನು ಇಷ್ಟು ದೊಡ್ಡ ಕೆಲಸವನ್ನು ಕೈಗೊಂಡನೇ ಹೊರತು ಸ್ವಪ್ರಯೋಜನಕ್ಕಲ್ಲವೆಂದು ಹೇಳಬಹುದು. ಹಿಂದೂದೇಶವೆಲ್ಲ ಒಂದೇ ರಾಜ್ಯವಾಗಬೇಕೆಂಬುದೂ, ಇಲ್ಲಿಯ ಜನರು ಮತದ್ವೇಷಗಳನ್ನು ತೊರೆದು ಒಗ್ಗಟ್ಟಾಗಿರಬೇಕೆಂಬುದೂ ಇವನ ಬಯಕೆ.

ತನ್ನ ಇಷ್ಟಾರ್ಥವು ನೆರವೇರಬೇಕಾದರೆ ಹಿಂದೂಗಳ ಸಹಾಯವು ಅತ್ಯಾವಶ್ಯಕವೆಂಬುದನ್ನು ತಿಳಿದು, ಅವರಿಗೆ ಬಗೆಬಗೆಯಾದ ಆನುಕೂಲ್ಯಗಳನ್ನು ಉಂಟುಮಾಡಿದನು. "ಜೆಸಿಯಾ" ತಲೆಗಂದಾಯವನ್ನೂ, ಯಾತ್ರೆ ತೆರಿಗೆಯನ್ನೂ ಅಕ್ಬರನು ತೆಗೆದುಹಾಕಿದನು. ಇದರಿಂದ ಸರ್ಕಾರದ ಹುಟ್ಟುವಳಿಯು ಸ್ವಲ್ಪಮಟ್ಟಿಗೆ ಕಡಿಮೆಯಾದರೂ ಹಿಂದುಗಳಲ್ಲಿ ನಿಶ್ಚಲವಾದ ರಾಜಭಕ್ತಿಯುಂಟಾಗಿ ರಾಜ್ಯಭಾರಕ್ಕೆ ಸಂಪೂರ್ಣ ಸಹಾಯವೊದಗಿತು. ಹಿಂದೂಗಳಿಗೆ ಸಂತೋಷವಾಗಲೆಂದು ತನ್ನ ರಾಜ್ಯದಲ್ಲಿ ಗೋವಧೆಯನ್ನು ನಿಲ್ಲಿಸಿದನು. ಬಾಲ್ಯವಿವಾಹ, ಸಹಗಮನಪದ್ಧತಿ ಇವುಗಳನ್ನು ನಿಲ್ಲಿಸುವುದಕ್ಕೆ ಪ್ರಯತ್ನಪಟ್ಟವರಲ್ಲಿ ಅಕ್ಬರನೇ ಮೊದಲನೆಯವನು.

ಯುದ್ಧದಲ್ಲಿ ಸೋತ ದೊರೆಗಳ ರಾಜ್ಯಗಳನ್ನು ದೆಹಲಿಯ ಚಕ್ರಾಧಿಪತ್ಯಕ್ಕೆ ಸೇರಿಸಿಕೊಂಡರೂ, ಸಾಮ್ರಾಜನು ಆರಾಜರುಗಳಿಗೆ ತನ್ನ ಆಸ್ಥಾನದಲ್ಲಿ ಗೌರವವಾದ ಕೆಲಸಗಳನ್ನು ಕೊಟ್ಟು, ಕೆಲವುವೇಳೆ ಅವರುಗಳೊಂದಿಗೆ ಬಂಧುತ್ವವನ್ನು ಮಾಡಿ, ಅವರುಗಳನ್ನು ಮರ್ಯಾದೆಯಿಂದ ಕಾಣುತ್ತಿದ್ದನು. ಆದುದರಿಂದ ಅವರೆಲ್ಲರೂ ಇವನಲ್ಲಿ ಶತ್ರುತ್ವವನ್ನು ಬಗೆಯದೆ, ಇವನಿಗೆ ಸಹಾಯಕರಾಗಿರುತ್ತಿದ್ದರು. ಜಯಪುರದ ರಾಜನಾದ ಮಾನಸಿಂಹ, ರಾಜಾ ಭಗವಾನ್‌ದಾಸ್, ಬೀರ್ಬಲ್ ಇವರೇ ಮೊದಲಾದ ಹಿಂದೂಗಳು ಅಕ್ಬರನ ಬೆಂಬಲವಾಗಿದ್ದರು.

ಅಕ್ಬರನಿಗೆ ಅನ್ಯಮತದ್ವೇಷವಿರಲಿಲ್ಲ. ಇವನ ಸಭೆಯಲ್ಲಿ ಎಲ್ಲಾ ಮತದವರೂ ವಾಗ್ವಾದ ಮಾಡಬಹುದಾಗಿತ್ತು. ಕೊನೆಕೊನೆಗೆ ಇವನಿಗೆ ಮಹಮ್ಮದೀಯ ಮತದಲ್ಲಿ ಅಭಿಮಾನ ಕಡಿಮೆಯಾಗಿ, ಸೂರ್ಯಾರಾಧನೆಯೇ ಸರಿಯಾದುದೆಂದು ಸಿದ್ಧಾಂತಪಡಿಸಿ ಅದರ ಆಧಾರದಮೇಲೆ ಹಿಂದೂ ಮುಸಲ್ಮಾನರನ್ನು ಒಟ್ಟುಗೂಡಿಸುವ ಬೇರೊಂದು ಮತವನ್ನು ಸ್ಥಾಪಿಸಿದನು. ತನ್ನ ಮನಸ್ಸಿನಲ್ಲಿ ದೊರೆಯು ಹಿಂದೂಗಳಂತೆಯೇ ನಡೆ

ಯುತ್ತಿದ್ದನು. ಆಗಿನ ಕಾಲವು ಪರಧರ್ಮವನ್ನು ಪೀಡಿಸುವ ಕಾಲವಾಗಿತ್ತು. ಯುರೋಪಿನಲ್ಲಿಯೂ, ಜನರು ಅನ್ಯಮತವನ್ನು ದೂರಮಾಡುವುದು ಧರ್ಮವೆಂದು ತಿಳಿದಿದ್ದರು. ಕ್ರಿಶ್ಚಿಯನ್ ಕ್ಯಾಥಲಿಕರೂ, ಪ್ರಾಟಿಸ್ಟೆಂಟರೂ ಕಡಿದಾಡುತ್ತಿದ್ದರು. ಮಹಮ್ಮದೀಯರಲ್ಲಿ ಸುನ್ನಿಗಳೂ, ಷಿಯ್ಯಾಗಳೂ ಹೊಡೆದಾಡುತ್ತಿದ್ದರು. ಆದರೆ ಅಕ್ಬರನು ಮಾತ್ರ ತನ್ನ ರಾಜ್ಯದಲ್ಲಿ ಪರಧರ್ಮಗಳನ್ನು ಬಹಳ ಸಹನೆಯಿಂದ ನೋಡುತ್ತಿದ್ದನು.

ಅಕ್ಬರನ ರಾಜ್ಯಭಾರಕ್ರಮ—ಅಕ್ಬರನು ತನ್ನ ರಾಜ್ಯವನ್ನು 15 ಸಭೆಗಳನ್ನಾಗಿ ವಿಭಾಗಿಸಿ, ಪ್ರತಿ ಸಭೆಗೂ ಸುಭೇದಾರ, ದಿವಾನ, ಫೌಜುದಾರ, ಖಾಸಿ ಇವರೇ ಮೊದಲಾದ ಅಧಿಕಾರಿಗಳನ್ನು ಗೊತ್ತುಮಾಡಿದನು. ಹಳ್ಳಿಗಳ ಆಡಳಿತವನ್ನು ಗ್ರಾಮಪಂಚಾಯತರು ನೋಡುತ್ತಿದ್ದರು. ಎಲ್ಲಾ ಜಾತಿಯ ಮುಖ್ಯಸ್ಥರೂ ತನಗೆ ವಿಧೇಯರಾಗಿರುವುದಕ್ಕಾಗಿ ಅವರಿಗೆ "ಮನ್ಸಬ್‌ದಾರ್ ಎಂಬ ಗೌರವವಾದ ಹೆಸರಿಟ್ಟು ಅವರು ಚಕ್ರವರ್ತಿಗೆ ಬೇಕಾದಾಗ ತಮ್ಮ ಸೈನ್ಯವನ್ನು ಕಳುಹಿಸಬೇಕೆಂದು ಗೊತ್ತುಮಾಡಿದ್ದರು. ರಾಜಾದಾಯದ ಹೆಚ್ಚುಭಾಗವು ಭೂಮಿಯ ಕಂದಾಯವಾಗಿತ್ತು. ಅಕ್ಬರನ ಪ್ರಸಿದ್ಧಮಂತ್ರಿಯಾದ ರಾಜತೋದರಮಲ್ಲನು ಭೂಮಿಯನ್ನೆಲ್ಲ ಅಳೆಯಿಸಿ, ಹುಟ್ಟುವಳಿಯನ್ನನುಸರಿಸಿ ಅದನ್ನು ಮೂರು ವಿಧವಾಗಿ ವಿಂಗಡಿಸಿ, ಆಯಾ ಬಗೆಯ ಹುಟ್ಟುವಳಿಯಲ್ಲಿ ಮೂರರಲ್ಲಿ ಒಂದುಪಾಲು ಸರ್ಕಾರಕ್ಕೆ ಸೆಲ್ಲಬೇಕೆಂದು ಗೊತ್ತುಮಾಡಿದನು.

ಅಕ್ಬರನ ಕಾಲದಲ್ಲಿ ವ್ಯವಸಾಯವೂ, ಕೈಗಾರಿಕೆಯೂ ವೃದ್ಧಿಹೊಂದಿ ದೇಶವು ಸುಭಿಕ್ಷವಾಗಿತ್ತು. ಇವನ ಆಳಿಕೆಯು ಸರ್ವಸಮ್ಮತವಾಗಿದ್ದಿತೆಂದು ಹೇಳಬಹುದು. ಮುಸಲ್ಮಾನ ದೊರೆಗಳಲ್ಲೆಲ್ಲ ಇವನೇ ಉತ್ತಮನೆಂದು ಎಲ್ಲರೂ ಹೇಳುವರು. ಇಂಥ ಉತ್ತಮ ಗುಣಗಳಿಂದ ಕೂಡಿದ ಇವನನ್ನು, ಹಿಂದೂ ದೊರೆಗಳಲ್ಲಿ ಅಶೋಕನಿಗೂ, ವಿದೇಶದ ದೊರೆಗಳಲ್ಲಿ ಇವನ ಸಮಕಾಲೀನಳಾದ ಇಂಗ್ಲೆಂಡಿನ ಎಲಿಜಬೆತ್ ರಾಣಿ, ಫ್ರಾನ್ಸ್ ದೇಶದ ನಾಲ್ಕನೆಯ ಹೆನ್ರಿ ಇವರುಗಳೊಂದಿಗೂ ಹೋಲಿಸಬಹುದು.

ಜಹಂಘೀರ್ (ಕ್ರಿ. ಶ. 1605–27)

ಅಕ್ಬರನ ತರುವಾಯ ಸಲೀಮನು ಜಹಾಂಘೀರ್ ಎಂಬ ಹೆಸರಿನಿಂದ 1605ರಲ್ಲಿ ಚಕ್ರವರ್ತಿಯಾದನು. ತಂದೆಯು ಜೀವಿತನಾಗಿದ್ದಾಗ

ಇವನ ನಡತೆಯು ಚೆನ್ನಾಗಿರಲಿಲ್ಲ. ಇವನು ಕುಡುಕ, ವಿಷಯಾಸಕ್ತ, ದಂಗೆಕೋರ ; ಆದುದರಿಂದ ಇವನಿಗೆ ರಾಜ್ಯವನ್ನು ತಪ್ಪಿಸಿ, ಇವನ ಮಗನಾದ ಖುಸ್ರುವಿಗೆ ಪಟ್ಟಕಟ್ಟಬೇಕೆಂದು ಅಕ್ಬರನು ಆಲೋಚಿಸುತ್ತಿದ್ದನು. ಆದರೆ ಇವನು ಸಿಂಹಾಸನಕ್ಕೆ ಬಂದಮೇಲೆ ಎಷ್ಟೋ ಬುದ್ಧಿವಂತನಾದನು. ಅದರಲ್ಲಿಯೂ, ನೂರ್ಜಹಾನಳನ್ನು ಮದುವೆಯಾದಮೇಲೆ ಇವನ ನಡೆವಳಿಕೆಗಳಲ್ಲಿ ಅನೇಕ ಉತ್ತಮ ಬದಲಾವಣೆಗಳುಂಟಾದುವು. ಜಹಾಂಘೀರನು ದೊರೆಯಾದಕೂಡಲೆ ಇವನ ಮಗ ಖುಸ್ರುವು ದಂಗೆಯೆದ್ದನು. ದೊರೆಯು ಅದನ್ನು ಅಡಗಿಸಿ ತನ್ನ ಮಗನನ್ನು ಸಾಯುವವರೆಗೂ ಸೆರೆಯಲ್ಲಿಡಿಸಿದನು. ಅಹಮ್ಮದ್ ನಗರದಲ್ಲಿ ಮಂತ್ರಿಯಾಗಿದ್ದ ಮಲ್ಲಿಕ್ ಆಂಬರನು ಮೊಗಲರನ್ನು ಸೋಲಿಸಿ, ಆ ರಾಜ್ಯಕ್ಕೆ ತಾನೇ ಒಡೆಯನಾದನು. ಚಕ್ರವರ್ತಿಯ ಮಗನಾದ ಷಹಜಹಾನನು ಅವನ ಮೇಲೆ ದಂಡೆತ್ತಿಹೋಗಿ, ಅವನನ್ನು ಸೋಲಿಸಿ ಅಹಮ್ಮದ್ ನಗರವನ್ನು ಪುನಃ ದೆಹಲಿಯ ರಾಜ್ಯಕ್ಕೆ ಸೇರಿಸಿದನು.

ಜಹಾಂಘೀರನು ಬುದ್ಧಿಶಾಲಿಯೂ, ಧೈರ್ಯಶಾಲಿಯೂ ಆಗಿದ್ದನು. ಸ್ವಸಾಮರ್ಥ್ಯದಿಂದ ಜಹಾಂಘೀರನು ಮೊಗಲ್ ಸಾಮ್ರಾಜ್ಯವನ್ನು ದರ್ಪದಿಂದ ಆಳದಿದ್ದರೂ, ತನ್ನ ತಂದೆಯ ರಾಜ ತಂತ್ರವನ್ನೇ ಅನುಸರಿಸಿದುದರಿಂದ ಹಿಂದೂಗಳೂ ತಮ್ಮ ರಾಜಭಕ್ತಿಯನ್ನು ಸಮರ್ಪಿಸುತ್ತಿದ್ದರು. ಇವನು ಸ್ವಭಾವವಾಗಿಯೂ ಪರಧರ್ಮಗಳಲ್ಲಿ ಪ್ರೀತಿಯಿಲ್ಲದವನಾದರೂ, ಅಲಕ್ಷ್ಯದಿಂದ ಇತರ ಮತಗಳನ್ನು ಸಹಿಸುತ್ತಿದ್ದನು. ಇವನ ಕಾಲದಲ್ಲಿ ಹಿಂದೂಗಳಿಗೆ ದೊಡ ದೊಡ್ಡ ಉದ್ಯೋಗಗಳು ದೊರೆಯುತ್ತಿದ್ದುವು.

ಜಹಾಂಘೀರನಿಗೆ ಶ್ರೇಷ್ಠರಾದ ಮಂತ್ರಿ, ಸೇನಾಪತಿಗಳೂ, ಬುದ್ಧಿಶಾಲಿನಿಯಾದ ಹೆಂಡತಿಯೂ ದೊರಕಿದುದು ಇವನ ಪುಣ್ಯವೆಂದೇ ಹೇಳಬೇಕು.

ನೂರ್‌ಜಹಾನ್

ಜಹಾಂಘೀರನು ತನ್ನ ಆಳಿಕೆಯ ಆರನೆಯ ವರ್ಷದಲ್ಲಿ ಬಂಗಾಳದ ಪಾರ್ಸಿ ಶ್ರೀಮಂತನೊಬ್ಬನನ್ನು ಕೊಲ್ಲಿಸಿ ಅವನ ಹೆಂಡತಿ ಜಗತ್‌ಸುಂದರಿಯಾದ ನೂರ್ಜಹಾನಳನ್ನು ಮದುವೆಯಾದನು. ಚತುರೆಯಾದ ಅವಳಲ್ಲಿ ಬಹಳ ವ್ಯಾಮೋಹವಿಟ್ಟು ಅವಳಿಗೆ ತನ್ನ ಅಧಿಕಾರವನ್ನೇ ಒಪ್ಪಿಸಿದನು.

ಈಕೆಯು ರಾಜ್ಯಯಂತ್ರದ ಬಿಗಿಯು ಸಡಿಲವಾಗದಂತೆ ಆಡಳಿತವನ್ನು ಕೈಗೊಂಡು ಆ ಸ್ಥಾನದ ವೈಭವವನ್ನು ಹೆಚ್ಚಿಸಿದಳು. ಯುದ್ಧವೊದಗಿದಾಗ ವೀರರಮಣಿಯಂತೆ ಯುದ್ಧಮಾಡುತಿದ್ದಳು. ಇವಳ ವಿಚಕ್ಷಣತೆಯಿಂದ ರಾಜ್ಯದ ವರಮಾನವೂ ಹೆಚ್ಚಿತು.

ಆದರೆ ಇವಳ ಆಡಳಿತದ ಕಡೆಯ ಭಾಗದಲ್ಲಿ ರಾಜ್ಯದ ಬಿಗಿಯು ತಪ್ಪಿಹೋಯಿತು. ಇವಳು ತನ್ನ ಬಳಗದವರಿಗೆಲ್ಲ ದೊಡ್ಡ ದೊಡ್ಡ ಅಧಿಕಾರಗಳನ್ನು ಕೊಟ್ಟಳು ಇಷ್ಟೇ ಅಲ್ಲ. ತನ್ನ ಅಳಿಯನೊಬ್ಬನನ್ನು ರಾಜ್ಯಾಧಿಕಾರಕ್ಕೆ ತರಬೇಕೆಂದು ತುಂಬ ಪ್ರಯತ್ನ ಮಾಡಿದಳು. ಆದರೆ ಇದು ಸಾಗಲಿಲ್ಲ. ಚಕ್ರವರ್ತಿಯ ಮಗನಾದ ಖುರಮನು ದಂಗೆಯೆದ್ದನು. ಅನೇಕ ಸಣ್ಣಸಣ್ಣ ರಾಜ್ಯಗಳು ಸ್ವತಂತ್ರವಾದುವು ; ರಾಜ್ಯದಲ್ಲಿ ಕಳ್ಳತನ, ದರೋಡೆ ಮೊದಲಾದುವು ಹೆಚ್ಚಿದುವು. ಇಷ್ಟರಲ್ಲಿಯೇ ದೊರೆಯು ಅಕಸ್ಮಾತ್ತಾಗಿ ಸ್ವರ್ಗಸ್ಥನಾದನು. ಕೂಡಲೆ ಅವನ ಮುಮ್ಮಗನಾದ ಬುಲಾಕಿ ಎಂಬುವನು ಸಿಂಹಾಸನವನ್ನೇರಿದನು. ಆದರೆ ಕೆಲವು ದಿನಗಳೊಳಗಾಗಿ ದಕ್ಷಿಣದೇಶದ ಕಡೆಯಿಂದ ಜಹಾಂಘೀರನ ಮಗನಾದ ಖುರುಮನು ಹಿಂದಿರುಗಿಬಂದು ಬುಲಾಕಿಯನ್ನು ಕೊಂದು 1628ರಲ್ಲಿ ಷಹಜಿಹಾನ್ ಎಂಬ ಹೆಸರಿನಿಂದ ಚಕ್ರಾಧೀಶ್ವರನಾದನು.

ಸರ್ ಥಾಮಸ್‌ರೋ

ಈ ಕಾಲದಲ್ಲಿ ಯೂರೋಪಿನ ವರ್ತಕರು ಹಿಂದೂದೇಶದ ಸಮುದ್ರ ವ್ಯಾಪಾರಕ್ಕಾಗಿ ಹೋರಾಡುತ್ತಿದ್ದರು. ಹೀಗೆ ಹೋರಾಡುತ್ತಿದ್ದವರಲ್ಲಿ ಪೋರ್ಚುಗೀಸರೂ, ಫ್ರೆಂಚರೂ, ಇಂಗ್ಲಿಷರೂ ಇವರೇ ಮುಂದಾಳುಗಳಾಗಿದ್ದರು. ಜಹಾಂಘೀರನು ಆಳುತ್ತಿರುವಾಗ ಕ್ಯಾಪ್ಟನ್ ಹಾಕ್ಸ್ ಎಂಬ ನೌಕಾಧಿಪತಿಯೂ, ಸರ್ ಥಾಮಸ್ ರೋ ಎಂಬ ರಾಯಭಾರಿಯೂ, ಮೊಗಲರ ಆಸ್ಥಾನಕ್ಕೆ ಬಂದು, ಈ ದೇಶದೊಡನೆ ಇಂಗ್ಲಿಷ್ ಕಂಪನಿಯವರು ಮಾಡುತ್ತಿದ್ದ ವ್ಯಾಪಾರಕ್ಕೆ ಹೆಚ್ಚು ಸೌಕರ್ಯಗಳನ್ನು ಪಡೆದುಕೊಂಡರು. ಇವರಿಬ್ಬರೂ ಕೆಲವು ವರ್ಷಗಳಕಾಲ ಜಹಾಂಘೀರನ ಆಸ್ಥಾನದಲ್ಲಿದ್ದು, ಅಲ್ಲಿಯ ಸಂಪತ್ತು, ನೂರ್‌ಜಿಹಾನಳ ಚತುರತೆ, ದೇಶದಲ್ಲಿ ಕಳ್ಳಕಾಕರ ಕಾಟ, ಮೊಗಲ್ ಅಧಿಕಾರಿಗಳ ಲಂಚಕೋರತನ ಇವುಗಳನ್ನು ಕುರಿತು ಬರೆದಿರುತ್ತಾರೆ.

ಷಹಜಿಹಾ‍ಃ (ಕ್ರಿ. ಶ. 1627–58)

ತಂದೆಯು ಸತ್ತಕೂಡಲೆ ಷಹಜಿಹಾನನು ಸಿಂಹಾಸನವನ್ನೇರಿ, ರಾಜವಂಶದಲ್ಲಿ ತನ್ನ ಹಗೆಗಳಾಗಿದ್ದವರೆಲ್ಲರನ್ನೂ ಕೊಲ್ಲಿಸಿ, ನೂರ್ಜಹಾನಳಿಗೆ ಜೀವನಾಂಶವನ್ನು ಕೊಟ್ಟನು. "ಮೊಗಲರ ಸಾಮ್ರಾಜ್ಯವು ಷಹಜಿಹಾನನ ಕಾಲದಲ್ಲಿ ಅತ್ಯುನ್ನತ ಸ್ಥಿತಿಯನ್ನು ಪಡೆಯಿತೆಂಬ" ಮಾತಿಗೆ ಆಧಾರವಿಲ್ಲದಿದ್ದರೂ ಮೊಗಲ್ ಬಾದಷಹರಲ್ಲೆಲ್ಲ ಷಹಜಿಹಾನನೇ ಕೇವಲ ವೈಭವದಿಂದ ಆಳಿದನೆಂಬುದು ನಿಜ.

ಷಹಜಿಹಾನನು ರಾಜಪುತ್ರ ತಾಯಿಯ ಗರ್ಭದಲ್ಲಿ ಹುಟ್ಟಿದವನಾದರೂ ಇವನಿಗೆ ಮಹಮ್ಮದೀಯರಲ್ಲೇ ಪಕ್ಷಪಾತವಿತ್ತು. ಆದರೂ, ಇವನು ಹಿಂದೂಗಳಿಗೆ ದೊಡ್ಡ ಉದ್ಯೋಗಗಳನ್ನು ಕೊಡುತ್ತಿದ್ದನು. ಇವನ ಆಳಿಕೆಯಲ್ಲಿ ನಡೆದ ಯುದ್ಧಗಳು ಅಷ್ಟೇನೂ ಪ್ರಸಿದ್ಧವಾದವುಗಳಲ್ಲ. ಅಹಮದ್ ನಗರವು ಮೊಗಲ್ ರಾಜ್ಯಕ್ಕೆ ಸೇರಿಹೋಯಿತು. ಬಿಜಾಪುರ, ಗೋಲಕೊಂಡದವರು ಚಕ್ರಾಧೀಶ್ವರನಿಗೆ ಪಗುದಿಯನ್ನು ಕೊಡಲೊಪ್ಪಿದರು.

ಷಹಜಿಹಾನನು ತನ್ನ ತಂದೆಯ ಮೇಲೆ ದಂಗೆಯೆದ್ದಾಗ ತನಗೆ ಸಹಾಯ ಮಾಡದಿದ್ದ ಪೋರ್ಚುಗೀಸರನ್ನು ಸೋಲಿಸಿ, ಅವರನ್ನು ಹುಗ್ಲೀ ನದಿಯ ದಡದಿಂದ ಓಡಿಸಿಬಿಟ್ಟನು. ಪರ್ಸಿಯಾದವರಿಂದ ಕಾಂದಹಾರವನ್ನು ಹಿಂದಕ್ಕೆ ಪಡೆಯಲು ಮಾಡಿದ ಪ್ರಯತ್ನಗಳು ನಿಷ್ಫಲವಾದುವು. ಉತ್ತಮರೀತಿಯ ಫಿರಂಗಿಗಳನ್ನು ತಯಾರಿಸಿಟ್ಟುಕೊಳ್ಳದೆ ಅಲಕ್ಷ್ಯಮಾಡಿದುದೇ ಈ ಸೋಲಿಗೆ ಕಾರಣವಾಯಿತು.

ಷಹಜಿಹಾನನ ಐಶ್ವರ್ಯ.—ಷಹಜಿಹಾನನ ಆಳಿಕೆಯಲ್ಲಿ ದೇಶವು ಶಾಂತವಾಗಿಯೂ, ವೈಭವದಿಂದ ಕೂಡಿಯೂ ಇದ್ದಿತು. ಇದಕ್ಕೆ ಸಮರ್ಥರಾದ ಇವನ ಮಂತ್ರಿಗಳೇ ಕಾರಣವೆನ್ನಬಹುದು. ಇವರು ಮುಲ್ಕೀ ವಿಚಾರಕ್ಕೆ ಹೆಚ್ಚುಗಮನಕೊಟ್ಟು ರೈತರ ತೊಂದರೆಗಳನ್ನು ನಿವಾರಿಸಿದರು. ಇದರಿಂದ ದೊರೆಯ ಬೊಕ್ಕಸದಲ್ಲಿ ಕೋಟ್ಯಂತರ ದ್ರವ್ಯ ಸೇರಲು ಅವಕಾಶವಾಯಿತು. ಈ ಹಣದ ಹೆಚ್ಚುಭಾಗವನ್ನು ದೊರೆಯು ಕುಶಲವಿದ್ಯೆಗಳಿಗಾಗಿ ಉಪಯೋಗಿಸಿದನು. ತನ್ನ ಹೆಂಡತಿಯ ಹೆಸರಿನಲ್ಲಿ ಕಟ್ಟಿಸಿದ ಲೋಕೋತ್ತರವಾದ ಟಾಜ್‌ಮಹಲ್ ಕಟ್ಟಡವೂ, ಮೋತಿ

ಮಸೀದಿ, ಜುಮ್ಮಾ ಮಸೀದಿ ಇವೇ ಮೊದಲಾದ ಕಟ್ಟಡಗಳೂ, ಆರು ಕೋಟಿ ರೂಪಾಯಿ ವೆಚ್ಚಮಾಡಿ ಕಟ್ಟಿಸಿದ ಮಯೂರಾಸನವೂ ಇವನ ವೈಭವವನ್ನು ಈಗಲೂ ಎತ್ತಾಡುತ್ತವೆ.

ರಾಜ್ಯಕ್ಕಾಗಿ ಹೋರಾಟ

ಚಿಕ್ಕಂದಿನಲ್ಲಿ ಶೂರನಾಗಿಯೂ, ವಿವೇಕಿಯಾಗಿಯೂ ಇದ್ದ ಷಹಜಿ ಹಾನನು ವಾರ್ಧಿಕದಲ್ಲಿ ಸ್ತ್ರೀಲೋಲನಾಗಿ ಕಾಲ ಕಳೆಯಲಾರಂಭಿಸಿದನು. ರಾಜ್ಯಭಾರದ ಕೆಲಸವು ತನ್ನ ಸುಖಕ್ಕೆ ಕುಂದನ್ನು ಉಂಟುಮಾಡುವುದೆಂದು, ತನ್ನ ರಾಜ್ಯವನ್ನು ನಾಲ್ಕು ಭಾಗವಾಗಿ ವಿಂಗಡಿಸಿ, ತನ್ನ ನಾಲ್ಕುಜನ ಮಕ್ಕಳಿಗೂ ಹಂಚಿಕೊಟ್ಟನು. ಅವರನ್ನು ದೂರವಾಗಿಟ್ಟು ಒಬ್ಬರೊಡನೊಬ್ಬರು ಕಾದಾಡದಿರಲೆಂದು ದೊರೆಯು ಮಾಡಿದ ಈ ಉಪಾಯವು ಇವನಿಗೆ ಕೇಡನ್ನುಂಟುಮಾಡಿತು. ಇದರಿಂದ ರಾಜ್ಯದ ಐಕಮತ್ಯವು ನಾಶವಾಗಿ ಈ ನಾಲ್ಕು ಜನರೂ ಬಲವಾದ ಸೈನ್ಯಗಳನ್ನು ಕಟ್ಟಿಕೊಂಡು ದೊರೆಯಮೇಲೆ ಬೀಳಲು ಅವಕಾಶವಾಯಿತು. ಹೀಗಿರುವಲ್ಲಿ ದೊರೆಯು ಕಾಯಿಲೆ ಬಿದ್ದನು. "ತಂದೆಯು ಸಾಯುವಾಗ ಮಗನು ತನ್ನ ಮೇಲೆ ದಂಗೆ ಎದ್ದಿರುವುದನ್ನು ನೋಡಬೇಕು" ಎಂಬ ಐತಿಹ್ಯವು ಮೊಗಲರಲ್ಲಿದ್ದಿತು. ಅಕ್ಬರನು ಸಾಯುವುದಕ್ಕೆ ಮೊದಲು ಜಹಾಂಘೀರನು ಪಿತೂರಿ ನಡೆಯಿಸುತ್ತಿದ್ದನು. ಜಹಾಂಘೀರನು ಇನ್ನೂ ಜೀವಿಸಿರುವಾಗಲೇ ಷಹಜಿಹಾನನು ದಂಗೆಯದ್ದೇ ಇದ್ದನು. ಈಗ ತನ್ನ ಮಕ್ಕಳು ತನ್ನನ್ನು ಇದಿರಿಸುವುದನ್ನು ನೋಡುವುದು ಷಹಜಿಹಾನನ ಸರದಿಯಾಗಿತ್ತು. ತಂದೆಯು ಸಾಯುವನೆಂದು ಭಾವಿಸಿ, ಚಕ್ರವರ್ತಿ ಪದವಿಯನ್ನು ಅಪಹರಿಸಬೇಕೆಂದು ಮಕ್ಕಳೆಲ್ಲರೂ ಪಿತೂರಿ ನಡೆಯಿಸಲಾರಂಭಿಸಿದರು. ಕಡೆಗೆ ತಂತ್ರದಲ್ಲಿ ನಿಸ್ಸೀಮನಾದ ಔರಂಗಜೇಬನು ತನ್ನ ಸಹೋದರರನ್ನು ವಂಚಿಸಿ ಷಹಜಿಹಾನನನ್ನು ಸೆರೆಯಲ್ಲಿಟ್ಟು ತಾನೇ ದೊರೆಯಾದನು.

ಔರಂಗ್‌ಜೇಬ್ (ಕ್ರಿ. ಶ. 1658-1707)

ಈತನು ತನ್ನ ಸಹೋದರರನ್ನು ಮೋಸಪಡಿಸಿ ತಾನೇ ದೊರೆಯಾದಮೇಲೆ ಅವರೆಲ್ಲರೂ ಇವನಮೇಲೆ ದಂಡೆತ್ತಿ ಬಂದರು. ಆದರೂ

ಹೆದರದೆ ಅವರೆಲ್ಲರನ್ನೂ ಸೋಲಿಸಿ ನಿರಾತಂಕವಾಗಿ ರಾಜ್ಯವಾಳಲು ಮೊದಲು ಮಾಡಿದನು. ಇವನೂ ಅಕ್ಬರನಂತೆ 50 ವರುಷಗಳ ಕಾಲ ರಾಜ್ಯವಾಳಿದನು. ಅವನಂತೆಯೇ ಶೂರನೂ, ಶಕ್ತನೂ, ದೃಢಚಿತ್ತನೂ ಆಗಿದ್ದನು. ಆದರೆ ಅಕ್ಬರನು ಮೊಗಲರ ಸಾಮ್ರಾಜ್ಯವನ್ನು ಸ್ಥಾಪಿಸಿದನು ; ಔರಂಗಜೇಬನು ಅದನ್ನು ಸಡಲಿಸಿಬಿಟ್ಟನು. ಇದಕ್ಕೆ ಬಲು ಮಟ್ಟಿಗೆ ಇವನ ಪರಮತದ್ವೇಷವೇ ಮೂಲಕಾರಣವೆನ್ನಬಹುದು.

ಔರಂಗಜೇಬನ ಅನ್ಯಮತದ್ವೇಷ

ಆ ಕಾಲದ ಸುನ್ನೀಮತದ ಮುಸಲ್ಮಾನರಲ್ಲಿ ಔರಂಗಜೇಬನೇ ಅಗ್ರಗಣ್ಯನಾಗಿದ್ದನು. ಭರತಖಂಡವನ್ನೆಲ್ಲ ಮುಸಲ್ಮಾನರ ಮತಕ್ಕೆ ಸೇರಿಸಬೇಕೆಂಬುದೇ ಇವನ ಚಿಂತೆಯಾಗಿದ್ದಿತು. ಈ ಪ್ರಯತ್ನ ಒಂದರಿಂದಲೇ ಇವನಿಗೆ ಅಷ್ಟು ಕೇಡಾಗುತ್ತಿರಲಿಲ್ಲ. ಆದರೆ ಈತನು ಸುನ್ನೀಮತದ ಆಚರಣೆಗಳನ್ನೇ ರೂಢಿಗೆ ತರಲು ಪ್ರಯತ್ನಿಸಿದುದರಿಂದ, ಹಿಂದೂಗಳ ಜತೆಗೆ ಷಿಯಾಪಂಗಡದ ಮುಸಲ್ಮಾನರೂ ಇವನಿಗೆ ವಿರೋಧಿಗಳಾದರು. ಆದರೂ ಇವನು ಹೆದರಲಿಲ್ಲ. ತನ್ನ ಇಷ್ಟಾರ್ಥಪ್ರಾಪ್ತಿಗಾಗಿ ತನ್ನ ಸರ್ವಸ್ವವನ್ನೂ ಕಳೆದನು. ಅಕ್ಬರನು ರಾಜ್ಯಸಾಧನೆಗಾಗಿ ಕೂಡಿಟ್ಟ ಸೈನ್ಯವನ್ನು ಔರಂಗಜೇಬನು ತನ್ನ ಮತ ಪ್ರಸಾರಣೆಗಾಗಿ ಉಪಯೋಗಿಸಿದನು. ಇದರಿಂದ ದೇಶದಲ್ಲಿ ಶಾಂತಿ ಎಂಬುದು ಇಲ್ಲವಾಯಿತು. ಅಕ್ಬರನ ಕಾಲದ ಐಕಮತ್ಯದ ಹೆಸರಿಲ್ಲದಂತಾಯಿತು. ಚಕ್ರವರ್ತಿಗೂ ಕಿರುಕುಳಗಳುಂಟಾದುವು.

ತನ್ನ ಕಾರ್ಯಸಾಧನೆಗೆ ಅನುಕೂಲಿಸುವ ದೊಡ್ಡಮಾರ್ಗಗಳನ್ನು ಹಿಡಿಯದೆ ಔರಂಗಜೇಬನು ಹಿಂದೂ ದೇವಾಲಯಗಳನ್ನು ಒಡೆಯುವುದೂ, ಅಕ್ಬರನು ತೆಗೆದು ಹಾಕಿದ್ದ ಜೆಸಿಯಾ ಎಂಬ ತಲೆ ತೆರಿಗೆಯನ್ನು ಹೊರಿಸುವುದೂ ಇವೇ ಮೊದಲಾದ ಸಣ್ಣ ಹಾದಿಗಳಲ್ಲಿ ಪ್ರವೇಶಿಸಿದನು. ಇವೆಲ್ಲ ಖುರಾನಿಗೆ ವಿರುದ್ಧವಾಗಿದ್ದರೂ ಸ್ವಮತದಲ್ಲಿ ಇವನಿಗಿದ್ದ ದುರಭಿಮಾನಕ್ಕಾಗಿ ಇವನು ಸಣ್ಣ ಮಾರ್ಗಗಳಿಗೆ ಕೈಹಾಕಿದನು. ಬ್ರಾಹ್ಮಣರು ವೇದಗಳನ್ನು ಹೇಳಕೂಡದೆಂದು ನಿರ್ಬಂಧಿಸಿದನು. ಆಸ್ಥಾನದ ಸಂಗೀತಗಾರರನ್ನೂ, ಚಿತ್ರಗಾರರನ್ನೂ, ಈತನು ದೂರಮಾಡಿದನು. ಇದರಿಂದ

ದೇಶದ ಏಳಿಗೆಗೆ ಸಾಧನಗಳಾದ ಕುಶಲವಿದ್ಯೆಗಳೆಲ್ಲ ಮೂಲೆಗೆ ಬಿದ್ದುವು. ನೂರಾರು ಹಿಂದೂ ದೇವಾಲಯಗಳನ್ನು ನೆಲಸಮಮಾಡಿ, ಎಲ್ಲೋ ಕೆಲವು ಮಸೀದಿಗಳನ್ನು ಕಟ್ಟಿಸುವುದೂ, ಅನೇಕ ಹಿಂದೂಗಳ ವಿದ್ಯಾಶಾಲೆಗಳನ್ನು ಹಾಳುಮಾಡಿ ಸುನ್ನೀಮುಸಲ್ಮಾನರಿಗಾಗಿ ಕೆಲವು ಶಾಲೆಗಳನ್ನು ಸ್ಥಾಪಿಸುವುದೂ, ತನ್ನ ಪಂಗಡದ ಬಡವರಿಗೆ ಮಾತ್ರ ಧರ್ಮಮಾಡುವುದೂ ಇವೇ ಮೊದಲಾದ ಒಂದೆರಡು ಒಳ್ಳೆಯ ಕೆಲಸಗಳು ಪ್ರಮಾದವಾದ ಇವನ ತಪ್ಪುಗಳನ್ನು ಮುಚ್ಚಲಾರವು. ಔರಂಗಜೇಬನು ತನ್ನ ಸಮಕಾಲೀನನೂ, ಪ್ರಬಲ ಶತ್ರುವೂ ಆದ ಶಿವಾಜಿಯ ಸರಳಹೃದಯತೆ, ಅನ್ಯಮತಸಹನೆ, ಪರೋಪಕಾರ ಬುದ್ಧಿ ಮೊದಲಾದ ದೊಡ್ಡ ಗುಣಗಳನ್ನು ಪಡೆದಿದ್ದರೆ ಇವನ ಕೀರ್ತಿಯು ಶಾಶ್ವತವಾಗಿರುತ್ತಿತ್ತು. ಇವನ ನಡತೆಯು ಹೀಗಿದ್ದರೂ, ಆ ಕಾಲದ ದೃಷ್ಟಿಯಿಂದ ನೋಡಿದರೆ ಔರಂಗಜೇಬನನ್ನು ಈಗ ಜನರು ಸಾಮಾನ್ಯವಾಗಿ ತಿಳಿದಿರುವಷ್ಟು ಕ್ರೂರನೆಂದು ಹೇಳಲಾಗುವುದಿಲ್ಲ. ಎತ್ತೆತ್ತಲೂ "ಪರಮತದ ಅಸಹನೆಯೇ" ತುಂಬಿದ್ದ ಆ ಕಾಲದಲ್ಲಿ ಔರಂಗಜೇಬನ ಹೃದಯಕ್ಕೆ ಅದು ಪ್ರವೇಶಿಸಿದುದು ಅಷ್ಟೇನೂ ಆಶ್ಚರ್ಯವಲ್ಲ. ಅದೇ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಪರಮತದ ಅಸಹನೆಯು ಹತ್ತಿ ಬೇಯುತ್ತಿತ್ತು. ಪ್ರಾಟಿಸ್ಟೆಂಟ್ ಮತದ ರಾಜರು ರೋಮನ್ ಕ್ಯಾಥಲಿಕ್ ಪ್ರಜೆಗಳನ್ನು ಜೀವಸಹಿತ ಸುಡಿಸುತ್ತಿದ್ದರು ; ರೋಮನ್ ಕ್ಯಾಥಲಿಕರು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳದೆ ಬಿಡುತ್ತಿರಲಿಲ್ಲ. ಎಷ್ಟೋ ಪ್ರಜೆಗಳು ಗಡೀಪಾರಾದರು. ಬಂಧು ಬಳಗಗಳನ್ನೂ, ಇಷ್ಟಮಿತ್ರರನ್ನೂ, ಹುಟ್ಟಿ ಬೆಳೆದ ನೆಲವನ್ನೂ ಬಿಟ್ಟು ಕಂಡು ಕಾಣದ ದೂರದೇಶಗಳಿಗೆ ಹೋಗಿ ಒದ್ದಾಡುವಂತಾಯಿತು. ಇದಕ್ಕೆಲ್ಲ ರಾಜರ ಪರಮತಾಸಹಿಷ್ಣುತೆಯ ಹುಚ್ಚೇ ಕಾರಣವಾಗಿದ್ದಿತು. ಔರಂಗಜೇಬನಿಗೆ "ಖುರಾನವು" ಪ್ರಮಾಣವಾಗಿದ್ದಂತೆ ಇಂಗ್ಲೆಂಡಿನ ಮುಖ್ಯಾಧಿಕಾರಿಯಾಗಿದ್ದ ಕ್ರಾಮ್‍ವೆಲ್ಲನಿಗೆ ಬೈಬಲ್ ಎಂಬ ಕ್ರೈಸ್ತಮತ ಗ್ರಂಥವೇ ಆಧಾರವಾಗಿದ್ದಿತು. ಚೆನ್ನಾಗಿ ವಿಚಾರಮಾಡಿದರೆ ಔರಂಗಜೇಬನ ಕ್ರೂರತ್ವವು ಪರದೇಶದವರ ಕ್ರೂರತ್ವದಷ್ಟು ಹೆಚ್ಚಿರಲಿಲ್ಲವೆನ್ನಬಹುದು.

ಔರಂಗಜೇಬನ ಗುಣಗಳು

ಔರಂಗಜೇಬನಲ್ಲಿ ಸುಗುಣಗಳಿರಲಿಲ್ಲವೆಂದು ಹೇಳಲಾಗುವುದಿಲ್ಲ. ಇವನಿಗೆ ತನ್ನ ಮತದಲ್ಲಿ ನಿಜವಾದ ನಂಬುಗೆ ಇದ್ದಿತು. ಇವನು ಸ್ವಲ್ಪವೂ ತಪ್ಪದೆ ತನ್ನ ಮತಧರ್ಮದಂತೆಯೇ ನಡೆಯುತ್ತಿದ್ದನು. ಆ ಮತದ ಮುಖ್ಯ ತತ್ವಗಳಾದ "ದೇವರ ಪ್ರಾರ್ಥನೆ" ಉಪವಾಸ ವಿಧಿಗಳನ್ನು ಕ್ರಮವಾಗಿ ಅಚರಿಸುತ್ತಿದ್ದನು. ಮಾದಕದ್ರವ್ಯಗಳ ಸೇವನೆಯನ್ನು ಎಂದಿಗೂ ಮಾಡಿದವನಲ್ಲ; ತನ್ನ ಮತಗ್ರಂಥವಾದ ಖುರಾನನ್ನು ಬಾಯಿಗೆ ಗಟ್ಟಿಮಾಡಿದನು. ಅದನ್ನು ಎರಡು ಸಾರಿ ನಕಲುಮಾಡಿದನು. ಪ್ರತಿದಿನವೂ ರಾಜಕಾರ್ಯಗಳ ಗಡಿಬಿಡಿಯು ಮುಗಿದೊಡನೆಯೇ ಕಸೂತಿ ಮೊದಲಾದ ಕೆಲಸಗಳನ್ನು ಮಾಡಿ, ಅದರಿಂದ ಬಂದ ಹಣದಿಂದ ಜೀವಿಸುತ್ತಿದ್ದನಂತೆ. ಎಂತಹ ಕಠಿನ ಪ್ರಸಂಗಗಳಲ್ಲಿಯೂ ದೇವರ ಪ್ರಾರ್ಥನೆಯನ್ನು ಈತನು ಮರೆತವನಲ್ಲ. ರಣರಂಗದಲ್ಲಿ ಯುದ್ಧಾಸಕ್ತನಾಗಿದ್ದಾಗಲೂ, ಸೂರ್ಯಾಸ್ತಮಯವನ್ನು ಕಂಡೊಡನೆಯೇ ಕುದುರೆಯಿಂದಿಳಿದು ದೇವತಾ ಪ್ರಾರ್ಥನೆಯನ್ನು ಸಲಿಸುತ್ತಿದ್ದನು. ಈ ಕರ್ತವ್ಯಾಚರಣೆಯು ಔರಂಗಜೇಬನ ಶತ್ರುಗಳಿಗೂ ವಿಸ್ಮಯವನ್ನುಂಟುಮಾಡಿದುದಲ್ಲದೆ ಆತನ ವಿಷಯದಲ್ಲಿ ಪೂಜ್ಯಬುದ್ಧಿಯನ್ನುಂಟುಮಾಡುತ್ತಿತ್ತು.

ಆದರೇನು! ಹಿಂದೂಗಳಲ್ಲಿ ಇವನಿಗಿದ್ದ ತಿರಸ್ಕಾರ ಬುದ್ಧಿಯು ಇವನ ಶತ್ರುಗಳ ಸಂಖ್ಯೆಯನ್ನು ಹೆಚ್ಚಿಸಿತು. ಸಾತ್ ನಾರಾಯಣ ಹಿಂದೂಗಳೂ, ರಾಜಪುತ್ರರೂ, ಜಾಟರೂ, ಸಿಕ್ಕರೂ, ಮರಾಟೆಯವರೂ ಇವರೆಲ್ಲರೂ ಸ್ವತಂತ್ರರಾಗಿ ಇವನಿಗೆ ತುಂಬಾ ತೊಂದರೆಯನ್ನು ಕೊಟ್ಟರು. ಅಕ್ಬರನು ಅನೇಕ ಹಿಂದೂಗಳಿಗೆ ತನ್ನ ರಾಜ್ಯದಲ್ಲಿ ದೊಡ್ಡ ಅಧಿಕಾರಗಳನ್ನು ಕೊಟ್ಟು, ಅವರ ಪ್ರೀತಿಯನ್ನು ಸಂಪಾದಿಸಿ, ತನ್ನ ಸಾಮ್ರಾಜ್ಯವನ್ನು ಸ್ಥಿರಪಡಿಸಿಕೊಂಡನು. ಅದೇ ಹಿಂದೂಗಳು ಈಗ ಔರಂಗಜೇಬನ ಶತ್ರುಪಕ್ಷವನ್ನು ವಹಿಸಿದರು.

ದಕ್ಷಿಣದಲ್ಲಿ ಯುದ್ಧಗಳು—ಮರಾಟೆಯವರ ಹೆಸರನ್ನೇ ನಾಶಮಾಡಬೇಕೆಂಬ ಬಯಕೆಯು ಔರಂಗಜೇಬನಿಗೆ ಬಹಳವಾಗಿತ್ತು. ಆದರೆ ಆಗತಾನೇ ಪ್ರಸಿದ್ಧಿಗೆ ಬರುತ್ತಿದ್ದ ಶಿವಾಜಿಯ ಮೇಲೆ ಇವನ ಕೈ ಸಾಗಲಿಲ್ಲ. ದಕ್ಷಿಣ ದೇಶವನ್ನು ಜಯಿಸಬೇಕೆಂಬ ಅಸೆಯು ಔರಂಗಜೇಬನಿಗೆ ಯಾವಾ

ಗಲೂ ಇದ್ದೇ ಇದ್ದಿತು. ಇದಕ್ಕಾಗಿ ಬಾದಷಹನು ದಕ್ಷಿಣ ದೇಶಕ್ಕೆ ದಂಡೆತ್ತಿ ಹೋಗಿ ಬಿಜಾಪುರ, ಗೋಲಕೊಂಡ ಮೊದಲಾದ ರಾಜ್ಯಗಳನ್ನು ಹಿಡಿದನು. ಕರ್ಣಾಟಕ, ತೆಲುಗಾಣ್ಯ ಸೀಮೆಗಳೂ ದೊರೆಯ ವಶವಾದುವು. ಹೀಗೆ 1688ರಲ್ಲಿ ಮೊಗಲರ ರಾಜ್ಯವು ವಿಶೇಷವಾಗಿ ಪ್ರಾಬಲ್ಯಕ್ಕೆ ಬಂದಿತು. ಆದರೇನು! ಮರಾಟೆಯವರ ಮೇಲೆ ತಾನು ಯುದ್ಧ ಮಾಡುವಾಗ ಒದಗಬಹುದಾಗಿದ್ದ ಷಾಹೀರಾಜ್ಯದ ಸಮರ್ಥ ತುರುಕರ ಸಹಾಯವು ಈಗ ತಪ್ಪಿ ಹೋಯಿತು. ಚಕ್ರವರ್ತಿಯೊಬ್ಬನೇ ಅವರ ಎದುರಿಗೆ ನಿಲ್ಲಬೇಕಾಯಿತು. ಈ ಸಂದರ್ಭಗಳಲ್ಲಿ ದಕ್ಷಿಣ ದೇಶವನ್ನು ಗೆಲ್ಲುವುದಕ್ಕೆ ಚಕ್ರವರ್ತಿಯು ಪ್ರಯತ್ನಪಟ್ಟುದು ದೊಡ್ಡ ತಪ್ಪೆಂದೇ ಹೇಳಬೇಕು.

ಶಿವಾಜಿಯ ಮರಣಾನಂತರ ಅವನ ಮಗ ಸಾಂಬಾಜಿಯು ಪಟ್ಟಕ್ಕೆ ಬಂದನು. ಇವನಿಗೆ ಮೊಗಲರ ನೆಳಲು ಕಂಡರೂ ಆಗುತ್ತಿರಲಿಲ್ಲ. ಔರಂಗಜೇಬನು ಇವನ ಮೇಲೆ ದಂಡೆತ್ತಿ ಬಂದು ಇವನನ್ನು ಸೆರೆಹಿಡಿದು ಕ್ರೂರರೀತಿಯಲ್ಲಿ ಕೊಲ್ಲಿಸಿದನು.

ಆದರೆ ಮರಾಟೆಯವರು ಇಷ್ಟಕ್ಕೆ ಹೆದರದೆ ಶಿವಾಜಿಯ ಇನ್ನೊಬ್ಬ ಮಗನಾದ 'ರಾಜಾರಾಮ್' ಎಂಬವನನ್ನು ತಮ್ಮ ಪ್ರಭುವಾಗಿ ಮಾಡಿಕೊಂಡು ಮೊಗಲಾಯರನ್ನು ಎದುರಿಸಿದರು. ರಾಜಾರಾಮನು ಮೊಗಲ್ ಸೇನಾಪತಿ 'ಸೂಲ್ ಫಿರತ್‌ಖಾ' ಎಂಬವನಿಂದ 'ಜಿಂಜಿ' ಕೋಟೆಯಲ್ಲಿ ಮುತ್ತಲ್ಪಟ್ಟನು. ಮರಾಟೆಯವರು ಲಂಚ ಕೊಟ್ಟು ಮೊಗಲ್ ಸೇನಾಪತಿಯನ್ನು ಕಳುಹಿಸಿಬಿಟ್ಟರು.

ತರುವಾಯ ಔರಂಗಜೇಬನು ತಾನೇ ಹತ್ತು ಲಕ್ಷ ಬಲದೊಡನೆ ಮರಾಟೆಯವರ ಮೇಲೆ ಹೊರಟು ಸತಾರವೇ ಮೊದಲಾದ ಅನೇಕ ಸ್ಥಳಗಳನ್ನು ಹಿಡಿದುಕೊಂಡನು. ಆದರೂ ಮೊಗಲರಿಗೆ ಆ ಬೆಟ್ಟ ಗುಡ್ಡಗಳ ಸೀಮೆಯಲ್ಲಿ ದೀರ್ಘಕಾಲ ನಿಂತು ಯುದ್ಧಮಾಡುವುದು ಕಷ್ಟವಾಯಿತು. ಹಣ ಕಾಸಿನ ಮುಗ್ಗಟ್ಟೂ ಬಂದಿತು. ಮರಾಟೆಯವರು ಹಿಂಜರಿಯದೆ ಮೊಗಲರ ಮೇಲೆ ಬಿದ್ದು ತಾವು ಕಳೆದುಕೊಂಡಿದ್ದ ಸ್ಥಳಗಳನ್ನೆಲ್ಲಾ ಹಿಂದಕ್ಕೆ ತೆಗೆದುಕೊಂಡು ಮೊಗಲಾಯ್ ರಾಜ್ಯಗಳಲ್ಲೆಲ್ಲಾ ಚೌತಾಯವನ್ನು ಎತ್ತಿದರು.

ಮೊಗಲ್ ಸಾಮ್ರಾಜ್ಯವು ಈಗಾಗಲೇ ಒಬ್ಬ ದೊರೆಯು ಆಳುವಷ್ಟಕ್ಕಿಂತಲೂ ದೊಡ್ಡದಾಗಿತ್ತು. ಅಷ್ಟಕ್ಕೆ ತೃಪ್ತನಾಗದೆ ಮತ್ತಷ್ಟು ಹೆಚ್ಚಿಸಬೇಕೆಂದು ಔರಂಗಜೇಬನು ದುರಾಶೆಪಟ್ಟನು. ಈ ಅಭಿಪ್ರಾಯದಿಂದ ಅಸ್ಸಾಂಪ್ರಾಂತವನ್ನು ಜಯಿಸುವುದಕ್ಕಾಗಿ ಚಕ್ರವರ್ತಿಯು ತನ್ನ ದಳವಾಯಿಯೊಬ್ಬನನ್ನು ಒಂದು ದೊಡ್ಡ ಸೇನೆಯೊಡನೆ ಆ ದೇಶದ ಮೇಲೆ ಕಳುಹಿಸಿದನು. ಆದರೆ ಸಾವಿರಾರು ಮಂದಿ ಸಮರ್ಥರಾದ ಯೋಧರು ಸತ್ತು ಹೋದರೇ ಹೊರತು ಈ ಯುದ್ಧದಿಂದ ಯಾವ ಫಲವೂ ಲಭಿಸಲಿಲ್ಲ.

ಕೊನೆಗೆ ದೇಶದಲ್ಲಿ ಎಲ್ಲೆಲ್ಲಿಯೂ ಗಲಭೆಯುಂಟಾಯಿತು. ತನ್ನ ಮಕ್ಕಳೇ ತನ್ನ ಮೇಲೆ ತಿರುಗಿಬಿದ್ದರು. ಆದುದರಿಂದ ಚಕ್ರವರ್ತಿಯು ಮನಶ್ಶಾಂತಿಯಿಲ್ಲದೆ 1707ರಲ್ಲಿ ಕಾಲವಾದನು. ಮೊಗಲರ ರಾಜ್ಯದ ಕ್ಷೀಣತೆಗೆ ಇವನ ದಿವಸದಲ್ಲಿಯೇ ಮೊದಲಾಯಿತು.

ಮರಾಟೆಯವರ ಯುದ್ಧದಲ್ಲಿ ಮೊಗಲರ ಅಪಜಯಕ್ಕೆ ಕಾರಣಗಳು—ಮೊಗಲರಿಗೆ ಆಹಾರ ಸಾಮಗ್ರಿಗಳು ಒದಗದಂತೆ ಮರಾಟೆಯವರು ದಾರಿಯಲ್ಲಿದ್ದ ಊರುಗಳನ್ನು ಹಾಳುಮಾಡುತ್ತಿದ್ದುದು ; ಮರಾಟೆಯವರು ಎದುರಿಗೆ ನಿಂತು ಯುದ್ಧಮಾಡದೆ ಬೆಟ್ಟ ಗುಡ್ಡಗಳಲ್ಲಿ ಸೇರಿಕೊಂಡು ಮೋಸದಿಂದ ಬಂದು ಮೊಗಲರ ಮೇಲೆ ಬಿದ್ದು ಕಿರುಕುಳವನ್ನು ಕೊಡುತ್ತಿದ್ದುದು ; ಬಹು ದೊಡ್ಡ ಸೈನ್ಯವನ್ನು ಬೇಕಾದ ಕಡೆಗೆ ವೇಗವಾಗಿ ಸಾಗಿಸುವುದು ಮೊಗಲರಿಗೆ ಅಸಾಧ್ಯವಾಗಿದ್ದುದು ; ಮರಾಟೆಯವರು ತಮ್ಮ ಕುದುರೆಗಳ ಮೇಲೆ ಆಹಾರವನ್ನು ಇಟ್ಟುಕೊಂಡು ತಮಗೆ ಬಳಕೆಯಾದ ಬೆಟ್ಟ ಗುಡ್ಡಗಳಲ್ಲಿ ಬಹು ವೇಗವಾಗಿ ಸಂಚರಿಸುತ್ತಿದ್ದುದು ; ಷಾಹೀ ರಾಜ್ಯದ ಮುಸಲ್ಮಾನ್ ದೊರೆಗಳೊಡನೆ ಔರಂಗಜೇಬನು ದ್ವೇಷ ಕಟ್ಟಿಕೊಂಡುದು ; ಔರಂಗಜೇಬನಿಗೆ ತನ್ನ ಅಧಿಕಾರಿಗಳಲ್ಲಿ ನಂಬಿಕೆಯಿಲ್ಲದುದು ಮತ್ತು ಇವನ ಮಕ್ಕಳ ಪಿತೂರಿ, ಇವುಗಳೆಲ್ಲವೂ ಮೊಗಲರ ಅಪಜಯಕ್ಕೆ ಕಾರಣಗಳೆನ್ನಬಹುದು.

ಅಧ್ಯಾಯ ೬.—ಮೊಗಲರ ರಾಜ್ಯದ ದುರ್ದೆಶೆಯೂ, ಕ್ಷೀಣತೆಯೂ (ಕ್ರಿ. ಶ. 1707–1803)

೧ನೆಯ ಬಹದ್ದೂರ್-ಷಾ (1707–12)

ಔರಂಗಜ್ಹೇಬನು ಕಾಲವಾದ ಮೇಲೆ ಅವನ ಮಕ್ಕಳು ರಾಜ್ಯಕ್ಕಾಗಿ ಜಗಳವಾಡಲಾರಂಭಿಸಿದರು. ಕಡೆಗೆ ಹಿರಿಯವನಾದ ಷಹಾಲಂ ಎಂಬವನು ತನ್ನ ತಮ್ಮಂದಿರನ್ನು ಸೋಲಿಸಿ ತನ್ನ 64ನೆಯ ವಯಸ್ಸಿನಲ್ಲಿ ಬಹದ್ದೂರ್ ಷಾ ಎಂಬ ಹೆಸರಿನಿಂದ ಸಿಂಹಾಸನವನ್ನೇರಿದನು. ಇವನು ದೊರೆತನಕ್ಕೆ ಬಂದ ಕೂಡಲೆ, ಸೆರೆಯಲ್ಲಿದ್ದ ಸಾಹುವನ್ನು ಬಿಡುಗಡೆಮಾಡಿ ಸದ್ಯಕ್ಕೆ ಮರಾಟೆಯವರ ತೊಂದರೆಯನ್ನು ತಪ್ಪಿಸಿಕೊಂಡನು. ರಾಜಪುತ್ರರು ತಲೆಗಂದಾಯವನ್ನು ಕೊಡಬೇಕಾದುದಿಲ್ಲವೆಂದು ಒಪ್ಪಿಕೊಂಡುದರಿಂದ ಅವರ ಕಾಟವೂ ತಪ್ಪಿತು.

ಆದರೆ ಪಂಜಾಬಿನಲ್ಲಿದ್ದ ಸಿಕ್ಕರ ಗುರುವನ್ನೂ, ಅವನ ಶಿಷ್ಯರನ್ನೂ ಮುಸಲ್ಮಾನರು ಕೊಂದುಹಾಕಿದುದರಿಂದ ಸಿಕ್ಕರೆಲ್ಲರೂ ದಂಗೆಯೆದ್ದರು. ಅವರನ್ನು ಹತೋಟಿಗೆ ತರುವುದು ಬಹು ಕಷ್ಟವಾಯಿತು. ಇಷ್ಟರಲ್ಲಿಯೇ ಬಹದೂರನು ಸತ್ತುಹೋದನು. ಎಂದಿನಂತೆ ರಾಜ್ಯಕ್ಕಾಗಿ ಜಗಳ ಹುಟ್ಟಿತು. ಕಡೆಗೆ ಬಹದೂರನ ಮಗ ಜಹಂದರನು ಪಟ್ಟಕ್ಕೆ ಬಂದನು.

ಜಹಂದರ್‌ಷಾ, ಫರುಕ್‌ಸಿಯರ್ ಮೊದಲಾದವರು (1713–19)

ಅಯೋಗ್ಯನೂ, ಸ್ತ್ರೀಲೋಲನೂ ಆದ ಜಹಂದರಿನಲ್ಲಿ ಜನರಿಗೆ ಲಕ್ಷ್ಯವಿರಲಿಲ್ಲ. ರಾಜ್ಯದ ಆಡಳಿತವು ಬಹು ಶೀಘ್ರವಾಗಿ ಸಯ್ಯದ್ ಹುಸೇನಲ್ಲಿ, ಸಯ್ಯದ್ ಅಬ್ದುಲ್ಲಾ ಎಂಬ ಸಹೋದರರ ಕೈಸೇರಿತು. ಇವರು ಜಹಂದರನನ್ನು ಮೂಲೆಗೆ ತಳ್ಳಿ ಬಹದೂರ್‌ಷಹನ ಮುಮ್ಮಗನಾದ ಫರುಕ್‌ಸಿಯರನಿಗೆ ಪಟ್ಟಗಟ್ಟಿ ತಾವೇ ಮಂತ್ರಿಗಳಾದರು. ಇವರ ಪ್ರಾಬಲ್ಯವನ್ನು ಸಹಿಸದೆ, ದೊರೆಯು ಇವರ ಮೇಲೆ ಪಿತೂರಿ ನಡೆಯಿಸಿದುದರಿಂದ, ಅವರು ಇವನನ್ನು ಕೊಂದು ಬೇರೆ ರಾಜಕುಮಾರಿರಬ್ಬರನ್ನು ಕ್ರಮವಾಗಿ ದೊರೆತನಕ್ಕೆ ತಂದರು. ಅವರೂ ತಮ್ಮ ಇಷ್ಟದಂತೆ ನಡಿಯ

ದಿರಲು, ಮಹಮದ್ ಷಾ ಎಂಬವನನ್ನು ದೊರೆಯಾಗಿ ಮಾಡಿದರು. ಹೀಗೆ ದೊರೆತನ ಕೊಡುವುದು, ಕಸಿದುಕೊಳ್ಳುವುದು ಈ ಸಹೋದರರ ಕೈಯಲ್ಲಿ ನಿಂತಿತು. ಇದರಿಂದ ಇವರಿಗೆ "ರಾಜ ನಿರ್ಮಾಣಕರೆಂಬ" ಹೆಸರಾಯಿತು.

ಮಹಮದ್ ಷಾ. (ಕ್ರಿ. ಶ. 1719–48)

ಇವನು ಸಿಂಹಾಸನವನ್ನು ಹತ್ತಿದ ಕೂಡಲೆ ಸಯ್ಯದ್ ಸಹೋದರರಲ್ಲಿ ಒಬ್ಬನನ್ನು ಕೊಲ್ಲಿಸಿ, ಮತ್ತೊಬ್ಬನನ್ನು ಸೆರೆಯಲ್ಲಿಟ್ಟನು ; ಅಲ್ಲಲ್ಲಿ ಗಲಭೆಮಾಡುತ್ತಿದ್ದ ರಾಜಪುತ್ರರಿಗೆ ರಾಜ್ಯಗಳನ್ನು ಕೊಟ್ಟು ಸಮಾಧಾನ ಪಡಿಸಿದನು. ಇವನ ಆಡಳಿತದಲ್ಲಿ ಬಿಗಿಯಿಲ್ಲದುದರಿಂದ, ಮೊಗಲ್ ಸಾಮ್ರಾಜ್ಯವು ಒಡೆದುಹೋಗಿ, ಚಕ್ರವರ್ತಿಗೆ ಹೆಸರಿಗೆ ಮಾತ್ರ ಸಾಮಂತರಾಗಿದ್ದ ಅಧಿಪತಿಗಳು ಸ್ವತಂತ್ರರಾದರು. ಹೇಗೆಂದರೆ, ಆಸ್ಥಾನದಲ್ಲಿ ಸರದಾರನಾಗಿದ್ದ ಅಸಪ್‌ಷಹನು ಹೈದರಾಬಾದಿಗೆ ಹೋಗಿ ನಿಜಾಮನೆನಿಸಿಕೊಂಡನು ; ಅಯೋಧ್ಯೆಯ ಮುಖ್ಯಾಧಿಕಾರಿಯು ತಾನೇ ನವಾಬನೆಂದು ಕರೆದುಕೊಂಡನು ; ಬಂಗಾಳ ಬೀಹಾರದೇಶಗಳ ಅಧಿಕಾರಿಯು ಸ್ವತಂತ್ರನಾದನು ; ರೋಹಿಲ್‌ಖಂಡದ ರೋಹಿಲೆಯವರು ಸ್ವಾತಂತ್ರ್ಯವನ್ನು ವಹಿಸಿದರು ; ಮರಾಠೆಯವರು ಪ್ರಬಲರಾಗಿ ದೆಹಲಿಯ ಚಕ್ರವರ್ತಿಗೆ ಸೇರಿದ ರಾಜ್ಯಗಳಲ್ಲಿ ಚೌತಾಯವನ್ನು ಎತ್ತಿದರು ; ಸಿಕ್ಕರು ಪ್ರಬಲರಾದರು. ಚಕ್ರವರ್ತಿಗೆ "ಬಾದ್‌ಷಾ" ಎಂಬ ಹೆಸರು, ದೆಹಲಿಯ ಸುತ್ತಲೂ ಸ್ವಲ್ಪ ರಾಜ್ಯ, ಇವುಗಳು ಮಾತ್ರ ಉಳಿದುವು.

ನಾದಿರ್‌ಷಹನು—ಈ ಗಲಭೆಗಳ ಜತೆಗೆ ಹೊರಗಣ ಶತ್ರುಗಳಿಂದಲೂ ಬಾಧೆಯುಂಟಾಯಿತು. ಪಾರ್ಸೀಸ್ಥಾನದ ದೊರೆಯಾದ ನಾದಿರ್ ಷಾ ಎಂಬವನು ಹಣದಾಸೆಯಿಂದ 1739ರಲ್ಲಿ ಹಿಂದೂದೇಶದಮೇಲೆ ದಂಡೆತ್ತಿ ಬಂದನು. ಮೊಗಲರ ರಾಜ್ಯದಲ್ಲಿ ಬಿಗಿತಪ್ಪಿಹೋಗಿದ್ದುದು ಇವನಿಗೆ ತುಂಬ ಅನುಕೂಲವಾಯಿತು. ಕರ್ನಲ್ ಬಳಿಯಲ್ಲಿ ತನ್ನನ್ನು ಎದುರಿಸಿದ ಮೊಗಲರ ಸೈನ್ಯವನ್ನು ಸೋಲಿಸಿ, ಇರಾನಿನ ದೊರೆಯು ದೆಹಲಿಯನ್ನು ಪ್ರವೇಶಿಸಿದನು. ಚಕ್ರವರ್ತಿಯು ಅವನಿಗೆ ಬೇಕಾದಷ್ಟು ಹಣವನ್ನು ಕೊಡುವುದಾಗಿ ಹೇಳಿ ಅವನನ್ನು ಸಮಾಧಾನ ಪಡಿಸಿದನು.

ಇಷ್ಟರಲ್ಲಿಯೇ ನಾದಿರನು ಸತ್ತನೆಂಬ ಸುಳ್ಳುಸುದ್ಧಿಯು ಹರಡಿ, ಮೊಗಲರು ಇರಾನೀ ಜನರಮೇಲೆ ಬಿದ್ದರು. ನಾದಿರನು ಇದಕ್ಕೆ ಕೋಪಗೊಂಡು, ದೆಹಲಿಯನ್ನೇ ನಾಶಮಾಡುವಂತೆ ತನ್ನ ಕಡೆಯವರಿಗೆ ಅಪ್ಪಣೆ ಮಾಡಿದನು. ಅದರಂತೆ ದೆಹಲಿಯಲ್ಲಿ ಭಯಂಕರವಾದ ಕೊಲೆಯು ನಡೆಯಿತು. ಇದನ್ನು ನೋಡಿ ಸಹಿಸಲಾರದೆ, ಚಕ್ರರ್ತಿಯು ನಾದರಿನ ಕ್ಷಮಾಪಣೆಯನ್ನು ಬೇಡಿದದ್ದೇಲೆ ಕೊಲೆಯು ನಿಂತಿತು. ಅರಮನೆಯಲ್ಲಿದ್ದ ಮಯೂರಾಸನವೂ, ಚಕ್ರವರ್ತಿಯ ಕಿರೀಟದಲ್ಲಿದ್ದ ಕೋಹಿನೂರ್ ಎಂಬ ರತ್ನವೂ, ಅನೇಕ ಕೋಟಿ ದ್ರವ್ಯವೂ ನಾದಿರನ ಪಾಲಾದುವು. ಕೋಹಿನೂರ್ ರತ್ನವು ಈಗ ನಮ್ಮ ಬ್ರಿಟಿಷ್ ಸಾರ್ವಭೌಮರ ಕಿರೀಟವನ್ನಲಂಕರಿಸಿದೆ. ನಾದಿರನು ಅಹಮ್ಮದ್‌ಷಾ-ಅಬ್ದಾಲಿ ಎಂಬವನನ್ನು ತನ್ನ ಕಡೆಯ ದಳವಾಯಿಯಾಗಿ ಬಿಟ್ಟು ಇರಾನಿಗೆ ಹೊರಟುಹೋದನು.

ಅಹಮುದ್‌ಷಾ— ಮಹಮುದ್‌ಷಹನು 1784ರಲ್ಲಿ ಕಾಲವಾದನು. ಇವನ ಮಗ ಅಹಮುದ್‌ಷಹನು ದೆಹಲಿಯಲ್ಲಿ ದೊರೆಯಾಗಿದ್ದಾಗ, ನಾದಿರನ ದಳವಾಯಿಯಾದ ಅಹಮ್ಮದ್‌ಷಾ ಅಬ್ದಾಲಿಯು ದೆಹಲಿಯಮೇಲೆ ದಂಡೆತ್ತಿಬಂದು, ಪಂಜಾಬ್ ದೇಶವನ್ನು ತನ್ನ ವಶಮಾಡಿಕೊಂಡನು. ಚಕ್ರವರ್ತಿಯು 1754ರಲ್ಲಿ ಕಾಲವಾದಮೇಲೆ, ಎರಡನೆಯ ಅಲಂಘೀರನಿಗೆ ಪಟ್ಟವಾಯಿತು.

ಇತರ ಚಕ್ರವರ್ತಿಗಳು—ಅಲಂಘೀರನನ್ನು ಮೊಗಲರ ಕೊನೆಯ ಚಕ್ರವರ್ತಿಯೆಂದು ಹೇಳಬಹುದು. ಇವನಾದಮೇಲೆ ಹೆಸರಿಗೆ ಮಾತ್ರ ದೊರೆಯಾದ ಷಹಾಲಮನು ತನ್ನ ಅಧಿಕಾರವನ್ನೆಲ್ಲ ಪ್ರಬಲರಾಗುತ್ತಿದ್ದ ಇಂಗ್ಲಿಷರಿಗೆ ವಹಿಸಿ, ತಾನು ಅವರಿಂದ ಜಿವನಾಂಶವನ್ನು ಪಡೆಯುತ್ತಿದ್ದನು. ಕೆಲವು ಕಾಲದನಂತರ ಇಂಗ್ಲಿಷರ ಅಧೀನವನ್ನು ಬಿಟ್ಟು ಮರಾಟೆಯವರ ಆಶ್ರಿತನಾಗಿ, ಕಡೆಗೆ ಪುನಃ ಇಂಗ್ಲಿಷರ ಪೋಷಣೆಗೆ ಬಂದನು. ಅವರು ಕೊಡುತ್ತಿದ್ದ ಜೀವನಾಂಶವು ಇವನ ಮುಮ್ಮಗನಾದ 2ನೆಯ ಬಹದೂರನಿಗೂ ಸಲ್ಲುತಿತ್ತು. ಬಹದೂರನು 1857ರಲ್ಲಿ ನಡೆದ ದೊಡ್ಡ ದಂಗೆಯಲ್ಲಿ ಸೇರಿದ್ದನೆಂದು, ಇಂಗ್ಲಿಷರು ಅವನಿಗಿದ್ದ ಜೀವನಾಂಶವನ್ನೂ ಹೆಸರಿಗಿದ್ದ ಚಕ್ರವರ್ತಿ ಎಂಬ ಬಿರುದನ್ನೂ ಕಿತ್ತುಕೊಂಡು ಅವನನ್ನು ರಂಗೂನಿಗೆ ಗಡೀಪಾರು ಮಾಡಿದರು. ಮೊಗಲ್ ಚಕ್ರವರ್ತಿಗಳ ಹೆಸರು ಇಲ್ಲಿಗೆ ಸಂಪೂರ್ಣವಾಗಿ ಮುಗಿದುಹೋಯಿತು.

ಮೊಗಲರ ನಾಶಕ್ಕೆ ಕಾರಣಗಳು—ಸುಮಾರು 200 ವರ್ಷಗಳ ವರೆಗೂ ಹೆಸರು ಪಡೆದು ನಡೆದುಬಂದ ಮೊಗಲರ ಸಾಮ್ರಾಜ್ಯವು ಕೊನೆಗಂಡಿತು. ಮೊಗಲರಲ್ಲಿ ಶೂರರೂ, ಸಮರ್ಥರೂ ಆಗಿದ್ದ ದೊರೆಗಳಿದ್ದರು. ಇಂತಹ ದೊರೆಗಳಿರುವವರೆಗೂ ರಾಜ್ಯಲಕ್ಷ್ಮಿಯು ಅತಿ ವೈಭವದಲ್ಲಿದ್ದಳು. ಅಕ್ಬರನ ರಾಜತಂತ್ರದಲ್ಲಿ ಕೇವಲ ಅತ್ಯಲ್ಪವಾದ ಕುಂದುಕೊರತೆಗಳಿದ್ದುವು. ಔರಂಗಜೇಬನಲ್ಲಿ ಅನೇಕ ರಾಜಲಕ್ಷಣಗಳಿದ್ದರೂ, ಅವನ ಪರಮತದ್ವೇಷವು ಅವನ ನಾಶಕ್ಕೂ, ಮೊಗಲರ ಕ್ಷಯಕ್ಕೂ ಮೂಲಕಾರಣವಾಯಿತು. ಔರಂಗಜೇಬ ಮತ್ತು ಅವನಾದಮೇಲೆ ಬಂದ ದೊರೆಗಳಲ್ಲಿ ಪ್ರಜಾವಾತ್ಸಲ್ಯವೂ, ದೇಶಾಭಿಮಾನವೂ ಕಡಿಮೆಯಾಗಿದ್ದುವು. ಔರಂಗಜೇಬನ ಈಚಿನ ದೊರೆಗಳಿಗೆ ರಾಜ್ಯವಾಳುವಷ್ಟು ಸಾಮರ್ಥ್ಯವೂ ಇರಲಿಲ್ಲ. ಇದರಿಂದ ಜನಗಳಿಗೆ ದೊರೆಗಳಲ್ಲಿದ್ದ ಪ್ರೀತಿಯೂ, ಭಕ್ತಿಯೂ ಕಡಿಮೆಯಾಗಿ ರಾಜ್ಯದ ಬಿಗಿ ತಪ್ಪಿತು. ಕೊನೆಕೊನೆಗೆ ಬಂದ ಪ್ರಭುಗಳಂತೂ ಕೇವಲ ಅಸಮರ್ಥರಾಗಿಯೂ, ಅಯೋಗ್ಯರಾಗಿಯೂ ಇದ್ದುದರಿಂದ ದೇಶದಲ್ಲಿ ಒಳಛಿದ್ರಗಳು ಹೆಚ್ಚಿದುವು; ರಾಜತ್ವದ ಬಿಗಿಯು ತಪ್ಪಿ ಧನಬಲವೂ, ಸೈನ್ಯದ ಶಕ್ತಿಯೂ ಕಡಿಮೆಯಾದುವು; ಹೊರಗಿನವರು ಬಂದು ಬೇಕಾದಹಾಗೆ ಹಣವನ್ನೂ ದೇಶವನ್ನೂ ಕಸಿದುಕೊಂಡರು. ಮೊಗಲರು ತಮ್ಮ ದೇಶವನ್ನು ಬಿಟ್ಟು ಬಂದಾಗ ಶೂರರಾದ ಯೋಧರಾಗಿದ್ದರು. ಇಲ್ಲಿ ನೆಲಸಿದ ಕೆಲವು ವರ್ಷಗಳಲ್ಲಿಯೇ ಅವರ ಶೌರ್ಯವು ಭೋಗದಲ್ಲಿ ಕೊನೆಮುಟ್ಟಿತು.

ರಾಜಪುತ್ರರೂ ಸಿಕ್ಕರೂ, ಪ್ರಾಂತಾಧಿಕಾರಿಗಳೂ ಸ್ವತಂತ್ರರಾದರು. ಎಲ್ಲಕ್ಕಿಂತಲೂ ಮೊಗಲರ ನಾಶಕ್ಕೆ ಮರಾಟೆಯವರ ಏಳಿಗೆಯೇ ಮುಖ್ಯ ಕಾರಣವಾಯಿತು.

ಮೊಗಲರ ಕಾಲದಲ್ಲಿ ಜನರ ಸ್ಥಿತಿ

ಮೊಗಲರ ಕಾಲದ ಜನರ ಸ್ಥಿತಿಯು ಬಹುಮಟ್ಟಿಗೆ ಪಠಾಣರ ಕಾಲದಲ್ಲಿದ್ದಂತೆಯೇ ಇದ್ದಿತು. ಔರಂಗಜೇಬನಂತಹ ಪರಮತದ್ವೇಷಿಗಳಾದ ದೊರೆಗಳ ಕಾಲಗಳಲ್ಲಿ ವಿನಾ ಉಳಿದ ಕಾಲಗಳಲ್ಲಿ ಮತವೈರವು ಅಷ್ಟೇನೂ ಹೆಚ್ಚಿರಲಿಲ್ಲ. ಹಿಂದೂಗಳೇ ಅವರ ಆಸ್ಥಾನದ ಮಂತ್ರಿಗಳೂ ಸೇನಾಪತಿ

ಗಳೂ ಆಗಿದ್ದರು. ದೇಶಭಾಷೆಗಳು ವೃದ್ಧಿಯಾಗುತ್ತಿದ್ದುವು. ಪಾರ್ಶೀ ಭಾಷೆಯು ರಾಜಭಾಷೆಯಾಯಿತು.

ಮೊಗಲರ ಚಿತ್ರಕಲೆಯು ಅಕ್ಬರನ ಕಾಲದಲ್ಲಿ ಊರ್ಜಿತವಾಗಿ, ಜಹಾಂಘೀರನ ಕಾಲದಲ್ಲಿ ಪ್ರಾಬಲ್ಯಕ್ಕೆ ಬಂದು, ಷಹಜಿಹಾನನ ಕಾಲದಲ್ಲಿ ಕ್ಷಯವಾಗಿ ಔರಂಗಜೇಬನ ಕಾಲದಲ್ಲಿ ಕೊನೆಗೊಂಡಿತು. ಷಹಜಿಹಾನನ ಕಾಲದಲ್ಲಿ ಶಿಲ್ಪಕಲೆಯು ಉಚ್ಚಸ್ಥಿತಿಗೆ ಏರಿತು. ಮೊಗಲ್ ಚಕ್ರವರ್ತಿಗಳು ಫಿರಂಗಿಗಳ ತಯಾರಿಗೂ, ಯುದ್ಧದಲ್ಲಿ ಮದ್ದುಗುಂಡುಗಳ ಉಪಯೋಗಕ್ಕೂ ಗಮನಕೊಡಲಿಲ್ಲ. ಯೂರೋಪ್‌ಖಂಡದಲ್ಲಿ ಇವು ಆಚರಣೆಗೆ ಬಂದಿದ್ದರೂ ಇಲ್ಲಿ ಮಾತ್ರ ಹಿಂದಿನ ಬಿಲ್ಲು ಬಾಣಗಳೇ ಉಪಯೋಗದಲ್ಲಿದ್ದುವು. ವೈದ್ಯಶಾಸ್ತ್ರ, ಯಂತ್ರಗಳ ಉಪಯೋಗ ಇವುಗಳ ವಿಷಯದಲ್ಲಿ ವಿದೇಶಿಯರು ಮುಂದುವರಿದಿದ್ದರೂ, ಇಂಡಿಯಾದೇಶದಲ್ಲಿ ಮಾತ್ರ ಶಾಸ್ತ್ರಗಳ ಅಭಿವೃದ್ಧಿಗೆ ಯಾವ ಪ್ರಯತ್ನವೂ ಸಾಗಲಿಲ್ಲ. ಈ ಕಾರಣಗಳಿಂದ ಯೂರೋಪ್‌ದೇಶದವರು ಈ ದೇಶದಲ್ಲಿ ಜಯಶಾಲಿಗಳಾಗುವುದಕ್ಕೆ ಅವಕಾಶವಾಯಿತು.

ಮೊಗಲರ ರಾಜ್ಯಭಾರಕ್ರಮವು ಅಕ್ಬರನು ಹಾಕಿಕೊಟ್ಟ ಮೇಲ್ಪಙ್ಕ್ತಿಯನ್ನೇ ಅನುಸರಿಸಿತ್ತು. ಮೊಗಲರ ದೊರೆಗಳನೇಕರು ವ್ಯವಸಾಯಕ್ಕೆ ಅನುಕೂಲವಾದ ಕಾಲುವೆಗಳನ್ನೂ ಕೆರೆಕಟ್ಟೆಗಳನ್ನೂ ಮಾಡಿಸಿದರು. ಕೈಗಾರಿಕೆಗಳು ಮುಂದುವರಿದಿದ್ದುವು. ಹಿಂದೂದೇಶದಲ್ಲಿ ತಯಾರಾದ ಹತ್ತಿಯ ಬಟ್ಟೆಗಳೂ, ಮಲ್‌ಮಲ್ ಬಟ್ಟೆಗಳೂ ದೂರದೇಶಕ್ಕೆ ಸಾಗಿ ಹೋಗುತ್ತಿದ್ದುವು. ಹೊರದೇಶದ ವ್ಯಾಪಾರವು ಅಭಿವೃದ್ಧಿಸ್ಥಿತಿಯಲ್ಲಿದ್ದಿತು.

ಅಧ್ಯಾಯ ೭.—ಹಿಂದೂಗಳ ಪ್ರಾಬಲ್ಯ

(೧) ಮರಾಟೆಯವರು—ಶಿವಾಜಿ

ಈಗಿನ ಬೊಂಬಾಯಿ ಆಧಿಪತ್ಯದಲ್ಲಿ ಸಿಂಧುದೇಶ, ಗುಜರಾತ್ ಸೀಮೆ ಇವುಗಳನ್ನು ಬಿಟ್ಟು ಉಳಿದ ಪ್ರಾಂತ, ಈಗಿನ ಹೈದರಾಬಾದ್ ದೇಶದ ಪಶ್ಚಿಮದಿಕ್ಕಿನ ಸೀಮೆಗಳು— ಇವಷ್ಟೂ ಸೇರಿ ಮಹಾರಾಷ್ಟ್ರವೆನಿಸುವುದು. ಇಲ್ಲಿಯ ಹಿಂದೂ ನಿವಾಸಿಗಳಿಗೆ ಮರಾಟೆಯವರೆಂದು ಹೆಸರು. ಬೆಟ್ಟದ ಸೀಮೆಯಲ್ಲಿ ವಾಸಮಾಡುತ್ತಿರುವ ಮರಾಟರು ದೃಢಕಾಯರಾಗಿಯೂ, ಶೂರರಾಗಿಯೂ ಇರುವರು. ಪೂರ್ವದಿಂದಲೂ ಹಿಂದೂ ದೊರೆಗಳೇ ಈ ದೇಶವನ್ನು ಆಳುತ್ತಿದ್ದರು. ನೂರಾರು ವರ್ಷಗಳವರೆಗೂ ಇವರು ಉತ್ತರಹಿಂದೂಸ್ಥಾನದ ದೊರೆಗಳಿಗೆ ಅಧೀನರಾಗಲಿಲ್ಲ.

ಕ್ರಿ. ಶ. 7ನೆಯ ಶತಮಾನದಲ್ಲಿ ಚಾಲುಕ್ಯರು ಈ ಸೀಮೆಯನ್ನು ಆಳುತ್ತಿದ್ದಾಗ, ಇದನ್ನು ಗೆಲ್ಲಬೇಕೆಂದು ಎರಡನೆಯ ಶಿಲಾದಿತ್ಯನು ಮಾಡಿದ ಪ್ರಯತ್ನಗಳು ಸಫಲವಾದುವು. 13ನೆಯ ಶತಮಾನದಲ್ಲಿ ಮಹಾರಾಷ್ಟ್ರಕ್ಕೆ ಸೇರಿದ ದೇವಗಿರಿಯನ್ನು ಜಯಿಸುವುದಕ್ಕೆ ಅಲ್ಲಾವುದೀನನು ಮಾಡಿದ ಪ್ರಯತ್ನವು ಅಷ್ಟು ಕಾರ್ಯಕಾರಿಯಾಗಲಿಲ್ಲ. ಬಹಮನೀ ರಾಜ್ಯವು ಪ್ರಾಬಲ್ಯಕ್ಕೆ ಬಂದಾಗ ಮಾತ್ರ ಮಹಾರಾಷ್ಟ್ರದ ಏಳಿಗೆಯು ಸ್ವಲ್ಪ ಕುಗ್ಗಿ, ಅದು ದಖನೀ ತುರುಕರಿಗೆ ಸೇರಿತು. ಅಹಮ್ಮದ್‌ನಗರದ ಸಂಸ್ಥಾನವು ಹಾಳಾದ ಮೇಲೆ ಪುನಃ ಮರಾಟೆಯವರು ಪ್ರಬಲರಾಗುವುದಕ್ಕೆ ಅವಕಾಶವುಂಟಾಯಿತು.

ಮರಾಟೆಯವರಲ್ಲಿ ಭೌಂಸ್ಲೆ ವಂಶವೇ ಹೆಸರಾದುದು. ಈ ವಂಶಕ್ಕೆ ಸೇರಿದ ಷಾಜಿ ಎಂಬ ಮರಾಟೆ ಸರದಾರನು ಬಿಜಾಪುರದಲ್ಲಿ ದಳಪತಿಯಾಗಿದ್ದಾಗ, ಆ ರಾಜ್ಯದ ಅಭ್ಯುದಯಕ್ಕೆ ಬಹಳ ಸಾಹಸಪಟ್ಟನು. ಇದಕ್ಕಾಗಿ ಇವನಿಗೆ ಪುಣೆ, ಕೋಲಾರ, ಬೆಂಗಳೂರು ಈ ಪಟ್ಟಣಗಳು ಜಹಗೀರುಗಳಾಗಿ ದೊರೆತುವು. ಇವನ ಎರಡನೆಯ ಮಗನೇ ವೀರನಾದ ಶಿವಾಜಿಯು.

ಶಿವಾಜಿಯು 1627ರಲ್ಲಿ ಹುಟ್ಟಿದನು. ಇವನು ಕ್ಷತ್ರಿಯಜಾತಿಗೆ ಸೇರಿದವನು. ಇವನಿಗೆ ವಿಶೇಷವಾಗಿ ಓದುಬರೆಹ ಬಾರದಿದ್ದರೂ, ಇವನ ಗುರುವಾದ ದಾದಾಜಿ ಎಂಬ ಬ್ರಾಹ್ಮಣನು ಕ್ಷತ್ರಿಯರಿಗೆ ಯೋಗ್ಯವಾದ ಕುದುರೆಯ ಸವಾರಿ, ಧನುರ್ವಿದ್ಯೆ ಮೊದಲಾದುವುಗಳನ್ನು ಇವನಿಗೆ ಅಭ್ಯಾಸ ಮಾಡಿಸಿದ್ದನು. ಚಿಕ್ಕಂದಿನಿಂದಲೂ ರಾಮಾಯಣ, ಭಾರತ ಮೊದಲಾದ ಪುಣ್ಯಕಥೆಗಳನ್ನು ತನ್ನ ತಾಯಿಯಿಂದ ಕೇಳುತ್ತಿದ್ದುದರಿಂದಲೂ ಸಮರ್ಥ ರಾದ ರಾಮದಾಸ್, ತುಕಾರಾಮ್ ಮೊದಲಾದ ಮಹಾತ್ಮರ ಸದ್ಬೋಧನೆಯಿಂದಲೂ, ಶಿವಾಜಿಗೆ ತನ್ನ ದೇಶ ಮತ್ತು ಜನಗಳ ಮೇಲೆ ಹೆಚ್ಚಾದ ಪ್ರೀತಿಯೂ, ಹಿಂದೂಧರ್ಮದ ಮೇಲೆ ಅಭಿಮಾನವೂ ಹುಟ್ಟಿದುವು. ಆಗಿನ ಕಾಲದ ತುರುಕದೊರೆಗಳು ಹಿಂದೂಗಳನ್ನು ಹಿಂಸಿಸುತ್ತಿದ್ದರು. ಶಿವಾಜಿಯು ಇದನ್ನು ಕಂಡು ಸಂತಾಪಪಟ್ಟು ಹಿಂದೂಧರ್ಮವನ್ನುದ್ಧರಿಸಿ, ಹಿಂದೂರಾಜ್ಯವನ್ನು ಪುನರುಜ್ಜೀವನಗೊಳಿಸುವುದಾಗಿ ಶಪಥಮಾಡಿದನು.

ಔರಂಗಜೇಬನು ಮಹಮ್ಮದನ ಧರ್ಮವನ್ನು ಹಬ್ಬಿಸುವುದೇ ಸರಿಯೆಂದು ಭಾವಿಸಿದ್ದಂತೆ, ಶಿವಾಜಿಯು ಆರ್ಯಧರ್ಮವನ್ನುಳಿಸುವುದು ತನ್ನ ಶ್ರೇಷ್ಠಕಾರ್ಯವೆಂದು ತಿಳಿದಿದ್ದನು. ಇದಕ್ಕಾಗಿ ಒಂದು ದೊಡ್ಡ ಸೈನ್ಯವನ್ನು ಕಟ್ಟಬೇಕಾಯಿತು. ಸಮೀಪದ ಬೆಟ್ಟಗುಟ್ಟಗಳಲ್ಲಿ ವಾಸವಾಗಿದ್ದ ಶೂರರಾದ ಮಾವಳಿಗಳೆಂಬ ಮರಾಟೆಯವರು ಇವನ ದಂಡಿಗೆ ಸೇರಿದುದು ಶಿವಾಜಿಯ ಪುಣ್ಯವೇ ಸರಿ. ಇವರ ಸಹಾಯದಿಂದ 1646ರಲ್ಲಿ ತನ್ನ 19ನೆಯ ವಯಸ್ಸಿನಲ್ಲಿಯೇ ಶಿವಾಜಿಯು ತಾರಣವೆಂಬ ಕೋಟೆಯನ್ನು ವಶಮಾಡಿಕೊಂಡನು. ಆಗ ಇವನಿಗೆ ನೆಲದಲ್ಲಿ ದೊಡ್ಡ ನಿಧಿಯು ಸಿಕ್ಕಿತು. ಅದರ ಸಹಾಯದಿಂದ ಯುದ್ಧದ ಸಾಮಗ್ರಿಗಳನ್ನು ಒದಗಿಸಿಕೊಂಡು, ರಾಯಘಡ, ಪುರಂದರ, ಕಲ್ಯಾಣ, ಪ್ರತಾಪಘಡ ಮೊದಲಾದ ಕೋಟೆಗಳನ್ನು ಕಟ್ಟಿ, ಸುತ್ತಮುತ್ತಿನಲ್ಲಿರುವ ಕೆಲವು ಸೀಮೆಗಳನ್ನು ವಶಮಾಡಿಕೊಂಡನು.

(೨) ಅಫ್‌ಸಲ್‌ಖಾ–ಶಿವಾಜಿ

ಬಿಜಾಪುರದ ಸುಲ್ತಾನನು ಶಿವಾಜಿಯ ಏಳಿಗೆಯನ್ನು ಸಹಿಸಲಾರದೆ ಮರಾಟೆಯವರನ್ನು ನಾಶಮಾಡುವ ಉದ್ದೇಶದಿಂದ ತನ್ನ ದಳಪತಿಯಾದ ಆಫ್‌ಸಲ್‌ಖಾನನನ್ನು ಕಳುಹಿಸಿದನು. ಬೆಟ್ಟಗುಡ್ಡಗಳ ಯುದ್ಧದಲ್ಲಿ ತುರುಕರ

ಕ್ಕೆ ಮರಾಟರಮೇಲೆ ನಡೆಯಲಿಲ್ಲ. ಶಿವಾಜಿಯನ್ನು ಮೋಸದಿಂದಲೇ ಹಿಡಿಯಬೇಕೆಂದು ನಿರ್ಧರಿಸಿ ಅಫ್‌ಸಲನು ಶಿವಾಜಿಯೊಬ್ಬನನ್ನೇ ಕಾಣ ಬೇಕೆಂತಲೂ ಆಗ ಇಬ್ಬರೂ ಸೇರಿ ಕೌಲುಮಾಡಿಕೊಳ್ಳುವುದೆಂತಲೂ, ಹೇಳಿಕಳುಹಿಸಿದನು. ಇದರ ಮೋಸವನ್ನು ತಿಳಿದ ಶಿವಾಜಿಯು ತನ್ನ ದಂಡನ್ನು ಯುದ್ಧಕ್ಕೆ ಸಿದ್ಧಪಡಿಸಿ, ತಾನೂ ಆತ್ಮರಕ್ಷಣೆಗೆ ತಕ್ಕ ಏರ್ಪಾಡು ಮಾಡಿಕೊಂಡು ಅಫ್‌ಸಲನನ್ನು ನೋಡುವುದಕ್ಕೆ ಹೊರಟನು. ಇಬ್ಬರೂ ಕಲೆತು ಕುಶಲಪ್ರಶ್ನೆಗಳನ್ನು ಮಾಡುತ್ತಿದ್ದಾಗ, ದೃಢಕಾಯನಾದ ಖಾನನು ಆಲಿಂಗನೆಮಾಡುವ ನೆವದಲ್ಲಿ ಶಿವಾಜಿಯನ್ನು ತನ್ನ ಕಂಕುಳದಲ್ಲಿ ಇರಿಕಿಸಿ ಅಮುಕಿದನು; ಶಿವಾಜಿಯು ತಪ್ಪಿಸಿಕೊಂಡು ತನ್ನ ಬಾಕಿನಿಂದಲೂ, ವ್ಯಾಘ್ರನಖವೆಂಬ ಆಯುಧದಿಂದಲೂ ಅಫ್‌ಸಲನನ್ನು ತಿವಿದು ಕೊಂದನು. ಯುದ್ಧಸನ್ನದ್ಧರಾಗಿದ್ದ ಮರಾಟರು ತುರುಕರ ದಂಡಿನಮೇಲೆ ಬಿದ್ದು ಅವರನ್ನು ಓಡಿಸಿದರು. ಇದಾದಮೇಲೆ ಶಿವಾಜಿಯ ಪ್ರಾಬಲ್ಯವು ಇನ್ನೂ ಹೆಚ್ಚಿತು.

(೩) ಷೈಸ್ತಾಖಾನ್–ಶಿವಾಜಿ

ಇಷ್ಟಕ್ಕೆ ಸುಮ್ಮನಿರದೆ ಶಿವಾಜಿಯು ಮೊಗಲರ ಸೀಮೆಯನ್ನು ಲೂಟಿಮಾಡಲಾರಂಭಿಸಿದನು. ಇವನನ್ನು ಅಡಗಿಸುವುದಕ್ಕಾಗಿ ಔರಂಗ ಜೇಬನು ಷೈಸ್ತಾಖಾನನೊಡನೆ ಒಂದು ದೊಡ್ಡಸೈನ್ಯವನ್ನು ಕಳುಹಿಸಿ ದನು. ಈ ಸೇನೆಯು ಪುಣೆಯನ್ನು ಹಿಡಿಯಿತು. ಇದನ್ನು ಕೇಳಿ ಶಿವಾ ಜಿಯು ಉಪಾಯದಿಂದ ಷೈಸ್ತಾಖಾನನ ಮನೆಗೆ ನುಗ್ಗಿ ಅವನ ಮೇಲೆ ಬೀಳಲು, ಮೊಗಲರ ದಳಪತಿಯು ಪೆಟ್ಟುತಿಂದು ತಲೆತಪ್ಪಿಸಿಕೊಂಡು ದೆಹಲಿಗೆ ಓಡಿಹೋದನು.

ಮೊಗಲರೊಡನೆ ಯುದ್ಧ

ಶತ್ರುಗಳಾರೂ ಸಮುದ್ರಮಾರ್ಗವಾಗಿ ತನ್ನ ರಾಜ್ಯವನ್ನು ಹಿಡಿಯ ದಿರುವುದಕ್ಕಾಗಿ ಶಿವಾಜಿಯು ಒಂದು ನೌಕಾಸೈನ್ಯವನ್ನು ಅಣಿಪಡಿಸಿ ದ್ದನು. ಅದರ ಬೆಂಬಲದ ಮೇಲೆ ಮರಾಟನು ಸೂರ್ತರೇವೆಯನ್ನು ಸೂರೆಮಾಡಿದನಲ್ಲದೆ, ಅಲ್ಲಿಂದ ಮಕ್ಕಾಪಟ್ಟಣಕ್ಕೆ ಹೋಗುತ್ತಿದ್ದ ಮೊಗಲರ ಯಾತ್ರಿಕರ ಹಡಗನ್ನು ಹಿಡಿದು ನಾಶಮಾಡಿದನು. ಇದರಿಂದ ಮೊಗಲ ರಿಗೆ ಬಹಳ ಕಿರುಕುಳವಾಯಿತು

ಇವನ ಸೊಕ್ಕನ್ನು ಮುರಿಯದಿದ್ದರೆ ಕೇಡಾಗುವುದೆಂದು ತಿಳಿದು ಬಾದಷಹನು ರಾಜಪುತ್ರರರಲ್ಲಿ ಶ್ರೇಷ್ಠನಾದ ರಾಜಾಜಯಸಿಂಹನ ಕೈಕೆಳಗೆ ಒಂದು ದೊಡ್ಡ ಸೈನ್ಯವನ್ನು ಮರಾಟರ ಮೇಲೆ ಕಳುಹಿಸಿದನು. ಜಯ ಸಿಂಹನಿಗೆ ಬೆಟ್ಟದ ಪ್ರದೇಶಗಳೂ ಅಲ್ಲಿ ಯುದ್ಧಮಾಡುವ ಬಗೆಯೂ ಚೆನ್ನಾಗಿ ಪರಿಚಯವಿದ್ದುದರಿಂದ ಅವನಮೇಲೆ ಮರಾಟರ ಕೈನಡೆಯದೆ, ಶಿವಾ ಜಿಯು ಅವನೊಂದಿಗೆ ಸಂಧಿಮಾಡಿಕೊಂಡನು. ಶಿವಾಜಿಯು ಹಿಡಿದಿದ್ದ ಮೊಗಲರ ರಾಜ್ಯಗಳನ್ನು ಬಿಟ್ಟುಬಿಡಬೇಕೆಂತಲೂ, ಬೀಜಾಪುರದ ಕೆಲವೆಡೆ ಗಳಲ್ಲಿ ಶಿವಾಜಿಯು ಚೌತಾಯವನ್ನು ಎತ್ತುವುದಕ್ಕೆ ಮೊಗಲರು ಒಪ್ಪಬೇ ಕೆಂತಲೂ, ಮೊಗಲರೂ ಮರಾಟರೂ ಒಟ್ಟುಗೂಡಿ ಬಿಜಾಪುರದಮೇಲೆ ಯುದ್ಧಮಾಡಬೇಕೆಂತಲೂ ನಿಷ್ಕರ್ಷೆಯಾಯಿತು

ಮಾರನೆಯ ವರುಷ ಚಕ್ರವರ್ತಿಯು ಶಿವಾಜಿಯನ್ನು ಕಾಣಬೇ ಕೆಂದು ಅವನನ್ನು ದೆಹಲಿಗೆ ಕರೆಯಿಸಿದನು. ಶಿವಾಜಿಯು ರಾಜಸಭೆಗೆ ಬಂದಾಗ, ಚಕ್ರವರ್ತಿಯು ಅವನಿಗೆ ಅವಮಾನಪಡಿಸಿ ಅವನನ್ನು ನಿರ್ಬಂ ಧದಲ್ಲಿಡಿಸಿದನು. ಇದರಿಂದ ಶಿವಾಜಿಗೆ ಮೊಗಲಾಯರ ಮೇಲೆ ತುಂಬ ದ್ವೇಷವುಂಟಾಯಿತು. ಔರಂಗಜೇಬನು ಶಿವಾಜಿಯೊಡನೆ ಸ್ನೇಹವನ್ನು ಬಳೆಯಿಸಿದ್ದರೆ, ಮರಾಟೆಯವರು ಮೊಗಲರಿಗೆ ಬೆಂಬಲವಾಗಿರುತ್ತಿದ್ದರು. ಈಗಲಾದರೋ ಮರಾಟರು ಪ್ರಬಲರಾದ ಶತ್ರುಗಳಾಗಿ ನಿಂತರು.

ಕೆಲವು ದಿನಗಳ ಮೇಲೆ ಉಪಾಯಗಾರನಾದ ಶಿವಾಜಿಯು ತಾನಿದ್ದ ಸೆರೆಮನೆಯಿಂದ ತಪ್ಪಿಸಿಕೊಂಡು ತನ್ನ ದೇಶಕ್ಕೆ ಓಡಿಹೋದನು. ಈ ರೀತಿ ಯಾಗಿ ಶಿವಾಜಿಯನ್ನು ಅಡಗಿಸಲು ಮೊಗಲರು ಮಾಡಿದ ಪ್ರಯತ್ನಗಳೆ ಲ್ಲವೂ ವಿಫಲವಾದುದರಿಂದ, ಔರಂಗಜೇಬನು ಅವನೊಡನೆ ಸ್ನೇಹವನ್ನೇ ಬೆಳಸಿ, ಅವನನ್ನು ಮಹಾರಾಷ್ಟ್ರದ ರಾಜನೆಂದು ಒಪ್ಪಿ, ತನ್ನ ಸೀಮೆಯಲ್ಲಿ ಅವನಿಗೆ ಒಂದು ಜಹಗೀರನ್ನೂ ಕೊಟ್ಟನು. ಬಿಜಾಪುರ ಮತ್ತು ಗೋಲ್ಕೊಂಡದ ಸುಲ್ತಾನರು ಶಿವಾಜಿಯು ತಮ್ಮ ರಾಜ್ಯದ ತಂಟೆಗೆ ಬಾರ ದಿರಲೆಂದು, ಶಿವಾಜಿಗೆ ಚೌತಾಯವನ್ನು ಕೊಡುವುದಕ್ಕೆ ಒಪ್ಪಿದರು.

ಆ ಮೇಲೆ ಶಿವಾಜಿಯು ದೊರೆಯೆಂದು ಹೊಗಳಿಸಿಕೊಂಡು ತುಲಾ ಭಾರವನ್ನು ತೂಗಿಸಿಕೊಂಡನು. ಇವನ ಪಟ್ಟಾಭಿಷೇಕವು ಬಹುವೈಭವ ದಿಂದ ರಾಯಘಡದಲ್ಲಿ ನಡೆಯಿತು. ಆ ಸಭೆಯಲ್ಲಿ ಇಂಗ್ಲಿಷ್ ಕಂಪನಿಯ

ಗವರ್ನರೂ ಬಂದಿದ್ದನು. ಶಿವಾಜಿಯು ಇದಕ್ಕೆ ಮೆಚ್ಚಿ ತನ್ನ ಸೀಮೆಯಲ್ಲಿ ನಾಲ್ಕು ವ್ಯಾಪಾರದ ಕೋಠಿಗಳನ್ನು ಕಟ್ಟುವುದಕ್ಕೆ ಇಂಗ್ಲಿಷ್ ಕಂಪೆನಿಯವರಿಗೆ ಅಪ್ಪಣೆ ಕೊಟ್ಟನು. ಶಿವಾಜಿಯು ಸಾಯುವುದಕ್ಕೆ ಸ್ವಲ್ಪ ಮುಂಚೆ ದಕ್ಷಿಣ ಹಿಂದೂದೇಶದಮೇಲೂ ದಂಡೆತ್ತಿಬಂದು ಬಳ್ಳಾರಿ, ಬೆಂಗಳೂರು, ವೆಲ್ಲೂರು, ಜಿಂಜೀಕೋಟೆ ಇವುಗಳನ್ನು ಹಿಡಿದನು.

ಶಿವಾಜಿಯು 1680ರಲ್ಲಿ ಸ್ವರ್ಗಸ್ಥನಾದನು. ಈತನು ಮಹಾವೀರನು. ಇವನಿಗೆ ಓದು ಬರೆಹ ಬಾರದಿದ್ದರೂ ರಾಜತಂತ್ರದಲ್ಲಿಯೂ, ರಾಜ್ಯದ ಆಡಳಿತದಲ್ಲಿಯೂ ಇವನು ನಿಪುಣನು. ವಿಜಯನಗರದ ಸಾಮ್ರಾಜ್ಯವು ನಾಶವಾಗಿದ್ದರೂ ಶಿವಾಜಿಯು ಆ ಸಾಮ್ರಾಜ್ಯದ ವ್ಯವಸ್ಥಾಕ್ರಮಗಳನ್ನೂ, ಕಾಯಿದೆ ಕಟ್ಟುಗಳನ್ನೂ ತನ್ನ ರಾಜ್ಯಭಾರದಲ್ಲಿ ಅವಲಂಬಿಸಿರಬಹುದೆಂದು ಕಾಣುತ್ತದೆ. ಮರಾಟೆಯ ಸರದಾರರು ವರುಷದಲ್ಲಿ ಆರು ತಿಂಗಳವರೆಗೆ ಸುತ್ತುಮುತ್ತಿನ ರಾಜ್ಯಗಳ ಕೊಳ್ಳೆಯಿಂದ ಜೀವಿಸುತ್ತಿದ್ದರು. ಶಿವಾಜಿಯು ಇದನ್ನು ತಪ್ಪಿಸಿ, ಅವರಿಗೆ ಮನೆ ಮಠಗಳನ್ನು ಕಟ್ಟಿಸಿಕೊಟ್ಟು ತಿಂಗಳುಗಟ್ಟಲೆಯ ಸಂಬಳವನ್ನು ಗೊತ್ತುಮಾಡಿದನು.

ಚೌತಾಯ ಶತದಶಮುಖಿ:—ಶಿವಾಜಿಯು ತನ್ನ ರಾಜ್ಯವನ್ನು "ಸ್ವರಾಜ್ಯ", "ಮೊಗ್ಲಾಯ್" ಎಂಬ ಎರಡು ಬಗೆಯಾಗಿ ವಿಂಗಡಿಸಿದ್ದನು. ಎಂದಿನಿಂದಲೂ ಮರಾಟೆಯವರಿಗೆ ಸೇರಿ, ಶಿವಾಜಿಯು ತಾನೇ ಆಳುತ್ತಿದ್ದ ಸೀಮೆಗೆ "ಸ್ವರಾಜ್ಯ" ಎಂದು ಹೆಸರು. ಇದರ ಕಂದಾಯವನ್ನು ದೊರೆಯಕಡೆಯ ಅಧಿಕಾರಿಗಳೇ ಎತ್ತಿ ನೇರವಾಗಿ ಬೊಕ್ಕಸಕ್ಕೆ ಕಟ್ಟುತ್ತಿದ್ದರು. ಹೆಸರಿಗೆ ಮೊಗಲರಿಗೆ ಸೇರಿದ್ದರೂ, ಶಿವಾಜಿಗೆ ಹೆದರಿ ಇವನ ಅಧಿಕಾರವನ್ನು ಅಂಗೀಕರಿಸಿ ಇವನಿಗೆ ಕಪ್ಪಕಾಣಿಕೆಗಳನ್ನು ಸಲಿಸುತ್ತಿದ್ದ ರಾಜ್ಯಗಳಿಗೆ "ಮೊಗ್ಲಾಯ್" ಎಂದು ಹೆಸರು.

ಈ ಸೀಮೆಗಳ ಆಡಳಿತವನ್ನು ಹಿಂದಿದ್ದ ಅಧಿಕಾರಿಗಳೇ ನಡೆಯಿಸಿ, ತಾವು ಎತ್ತಿದ ಕಂದಾಯದ ನಾಲ್ಕರಲ್ಲಿ ಒಂದುಪಾಲನ್ನು ಶಿವಾಜಿಗೆ ಕೊಡಬೇಕಾಗಿತ್ತು. ಇದಕ್ಕೆ ಚೌತಾಯವೆಂದು ಹೆಸರು. ಈ ಅಧಿಕಾರಿಗಳಿಂದ ಬರಬೇಕಾದ ಚೌತಾಯವನ್ನು ಪಡೆಯಲು ಗೊತ್ತಾಗಿದ್ದ ಮರಾಟೆ ಸರದಾರರು ಆಯಾ ಪ್ರಾಂತಗಳ ಕಂದಾಯದ ಹತ್ತರಲ್ಲಿ ಒಂದು ಪಾಲನ್ನು ತಮ್ಮ ಸ್ವಂತ ವೆಚ್ಚಕ್ಕಾಗಿ ತೆಗೆದುಕೊಳ್ಳುತ್ತಿದ್ದರು. ಇದಕ್ಕೆ "ಶತದಶ

ಮುಖಿ '' ಎಂದು ಹೆಸರು. ಅಂತೂ '' ಮೊಗ್ಲಾಯ್ '' ರಾಜ್ಯದಲ್ಲಿರ ತಕ್ಕವರು ಬಗೆಬಗೆಯಾದ ತೆರಿಗೆಗಳಿಗೆ ಗುರಿಯಾಗಿದ್ದರು.

ಶಿವಾಜಿಯು ತನ್ನ ಸ್ವರಾಜ್ಯವನ್ನು ಪ್ರಾಂತಗಳಾಗಿ ವಿಂಗಡಿಸಿ, ಪ್ರತಿಪ್ರಾಂತದ ಅಡಳಿತಕ್ಕೂ ಸಾಕಾದಷ್ಟು ಶಿಬ್ಬಂದಿಯನ್ನಿಟ್ಟನು. ಹಳ್ಳಿಗಳಲ್ಲಿ ಪಟೇಲರೂ, ಅವರಮೇಲೆ ರಾಜಕೀಯ ವಿಭಾಗವನ್ನನುಸರಿಸಿ, ದೇಶಾಧಿಕಾರಿ, ತಾಲ್ಲೋಕ್‌ದಾರ ಮತ್ತು ಸುಭೇದಾರ ಎಂಬ ಅಧಿಕಾರಿಗಳೂ ಇದ್ದರು. ವ್ಯವಹಾರಗಳನ್ನು ಸಾಮಾನ್ಯವಾಗಿ ಪಂಚಾಯತರೇ ಧರ್ಮಶಾಸ್ತ್ರ ರೀತಿಯಾಗಿ ವ್ಯವಸ್ಥೆಮಾಡುತ್ತಿದ್ದರು. ದೊರೆಗೆ '' ಅಷ್ಟ ಪ್ರಧಾನ '' ರೆಂಬ ಎಂಟುಮಂದಿ ಮಂತ್ರಿಗಳಿದ್ದರು. ಅವರ ಸಭಾಧ್ಯಕ್ಷನಿಗೆ '' ಪೇಷ್ವೆ'' ಎಂದೂ, ಸೈನ್ಯದ ಇಲಾಖೆಯ ಮಂತ್ರಿಗೆ ''ಸೇನಾಧಿಪತಿ'' ಎಂದೂ, ಮತಕ್ಕೆ ಸಂಬಂಧಪಟ್ಟ ಇಲಾಖೆಯ ಮಂತ್ರಿಗೆ '' ಪಂಡಿತರಾವ್'' ಎಂದೂ, ನ್ಯಾಯದ ಇಲಾಖೆಯವನಿಗೆ '' ನ್ಯಾಯಾಧೀಶ'' ಎಂತಲೂ, ಪರರಾಷ್ಟ್ರದವರೊಡನೆ ವ್ಯವಹಾರ ನಡಿಸತಕ್ಕವನಿಗೆ '' ಸುಮಂತ '' ಎಂತಲೂ, ಈ ರೀತಿಯಾಗಿ ಎಂಟುಮಂದಿ ಪ್ರಧಾನರಿದ್ದರು.

ಶಿವಾಜಿಯು ಬಹು ಧರ್ಮಿಷ್ಠನು.ಇವನಿಗೆ ಆರ್ಯಧರ್ಮದಮೇಲೆ ವಿಶೇಷವಾದ ಪ್ರೀತಿ ಇದ್ದರೂ ಇವನು ಪರಮತದವರನ್ನು ದ್ವೇಷಿಸುತ್ತಿರಲಿಲ್ಲ. ಯುದ್ಧದಲ್ಲಿ ತನ್ನ ಕೈವಶರಾದ ಶತ್ರುಗಳನ್ನೂ, ಅವರ ಹೆಂಗಸರನ್ನೂ, ಅವರ ಮಸೀದಿಗಳನ್ನೂ, ಶಿವಾಜಿಯು ಅತಿಗೌರವದಿಂದ ಕಾಣುತ್ತಿದ್ದನು. ಇವನ ದಂಡಿನಲ್ಲಿ ಅನೇಕ ದಕ್ಷಿಣದೇಶದ ಮುಸಲ್ಮಾನರು (ದಾಕ್ಷಿಣಾತ್ಯರು) ಸೇರಿದ್ದರು. ಹಿಂದೂದೇಶದಲ್ಲಿ ಹೆಸರಿಲ್ಲದಂತಾಗಿದ್ದ ಹಿಂದೂ ಸಾಮ್ರಾಜ್ಯವು ಶಿವಾಜಿಯ ಸಾಹಸದಿಂದ ತಲೆಯೆತ್ತಿಕೊಂಡಿತು.

ಸಾಂಬಾಜಿ. (ಕ್ರಿ. ಶ. 1680–9)

ಶಿವಾಜಿಯ ತರುವಾಯ ಅವನ ಮಗ ಸಾಂಬಾಜಿಯು ಸಿಂಹಾಸನವನ್ನು ಹತ್ತಿದನು. ವಿಷಯಾಸಕ್ತನಾದ ಇವನಿಗೆ ರಾಜ್ಯವಾಳುವುದರಲ್ಲಿ ಆಸೆಯಿಲ್ಲದೆ, ರಾಜ್ಯದ ಆಡಳಿತವು ಬಿಗಿತಪ್ಪುತ್ತ ಬಂದಿತು. ಇವನ ಪ್ರಜೆಗಳಿಗೆ ಇವನಲ್ಲಿ ಅನುರಾಗವಿರಲಿಲ್ಲ.

ಔರಂಗಜೇಬನೊಡನೆ ಯುದ್ಧ, ಸಾಂಬಾಜಿಯ ಮರಣ.— ಇಷ್ಟರಲ್ಲಿಯೇ ಔರಂಗಜೇಬನು ಮರಾಠೆಯವರ ಹೆಸರನ್ನೇ ಅಳಿಸಬೇಕೆಂದು ಒಂದು ದೊಡ್ಡ ಸೈನ್ಯವನ್ನು ಕಳುಹಿಸಿದನು. ಮರಾಠೆಯವರು ಒಂದೇಕಡೆ ನಿಲ್ಲದೆ ಒಂದುಬಗೆಯ "ಕಿರುಕುಳ" ಯುದ್ಧವನ್ನು ಮಾಡುತ್ತಿದ್ದುದರಿಂದ ಅವರನ್ನು ಸೋಲಿಸುವುದು ಕಷ್ಟವೇ ಆಗಿತ್ತು. ಆದುದರಿಂದ ಚಕ್ರವರ್ತಿಯು ತಾನೇ ದಂಡುಕಟ್ಟಿ ಹೊರಟು ಸಾಂಬಾಜಿಯನ್ನು ಕೈಸೆರೆ ಹಿಡಿದನು. ಆದರೆ ಸಾಂಬಾಜಿಯು ಚಕ್ರವರ್ತಿಯನ್ನು ಧಿಕ್ಕರಿಸಿ, ಅಪಮಾನಕರವಾದ ಮಾತುಗಳನ್ನಾಡಿದುದರಿಂದ ದೊರೆಯು ಕೋಪಗೊಂಡು ಅವನ ಕಣ್ಣನ್ನು ಕೀಳಿಸಿ, ನಾಲಗೆಯನ್ನು ಸೀಳಿಸಿ, ಅವನನ್ನು ಕೊಲ್ಲಿಸಿದನು. ಸಾಂಬಾಜಿಯ ಮಗನಾದ ಸಾಹುವನ್ನು ಸೆರೆಹಿಡಿದು ಅವನನ್ನು ತನ್ನ ಅರಮನೆಯಲ್ಲಿ ನಿರ್ಬಂಧದಲ್ಲಿಟ್ಟು ತಾನೇ ಸಾಕುತ್ತಿದ್ದನು.

ರಾಜಾರಾಮ್-ತಾರಾಬಾಯಿ

ಆದರೆ ಮರಾಠೆಯವರು ಧೈರ್ಯಗೆಡದೆ, ತಮ್ಮ ಸ್ವಾತಂತ್ರ್ಯವನ್ನು ಳಿಸಿಕೊಂಡರು. ಸಾಂಬಾಜಿಯ ತಮ್ಮನಾದ ರಾಜಾರಾಮನು ಸಾತಾರೆಯಲ್ಲಿ ರಾಜ್ಯವಾಳುತ್ತ ನಿಂತು, ಮೊಗಲರಮೇಲೆ ಯುದ್ಧಮಾಡಿದನು. ಸ್ವಲ್ಪ ದಿನಗಳಲ್ಲಿಯೇ ರಾಜಾರಾಮನು ಸತ್ತುಹೋದಮೇಲೆ ಅವನ ಹೆಂಡತಿ ಸಮರ್ಥಳಾದ ತಾರಾಬಾಯಿಯು ರಾಜ್ಯದ ಆಡಳಿತವನ್ನು ಕೈಕೊಂಡು ಮೊಗಲರನ್ನು ಎಂದಿನಂತೆ ಬಹು ಸಾಮರ್ಥ್ಯದಿಂದ ಎದುರಿಸಿ, ಮೊಗಲರ ರಾಜ್ಯದಮೇಲೆ ಬಿದ್ದು ಚೌತಾಯವನ್ನು ಎತ್ತಿದಳು. ಅತಿ ಸಮರ್ಥನಾದ ಔರಂಗಜೇಬನ ಸಾಹಸವು ಇವಳ ಮುಂದೆ ನಡೆಯಲಿಲ್ಲ. ಔರಂಗಜೇಬನು ಸತ್ತಮೇಲೆ ಸಾಹುವಿಗೆ ಬಿಡುಗಡೆಯಾಯಿತು. ಆಗ ರಾಜ್ಯಕ್ಕಾಗಿ ಜಗಳಹುಟ್ಟಿ ಕಡೆಗೆ ರಾಜಾರಾಮನ ವಂಶದವರು ಕೊಲ್ಹಾಪುರದಲ್ಲಿಯೂ, ಸಾಹುವು ಸತಾರೆಯಲ್ಲಿಯೂ ಆಳಬೇಕೆಂದು ವ್ಯವಸ್ಥೆ ಆಯಿತು.

ಅಧ್ಯಾಯ ೮.—ಪೇಷ್ವೆಗಳು, ಮರಾಟೆ ಬಾರಾಭಾಯಿಗಳು

ಸಾಹು ಕ್ರಿ. ಶ. 1708–48.

ಮೊಗಲರ ರಾಣಿವಾಸದಲ್ಲಿ ಬೆಳೆದ ಸಾಹುವಿಗೆ ರಾಜ್ಯವಾಳುವಷ್ಟು ಶಕ್ತಿಯಿರಲಿಲ್ಲ. ಆಗ ಸಿಂಧ್ಯ, ಹೋಳಕರ, ಗಾಯಕವಾಡ ಮೊದಲಾದ ಮರಾಟೆ ಸರದಾರರು ಇವನಿಗೆ ಸಹಾಯಕರಾದರು. ಇವರೆಲ್ಲರಿಗೂ ಪ್ರಮುಖನಾದ ಬಾಲಾಜೀ ವಿಶ್ವನಾಥನೆಂಬ ಮುಖ್ಯಮಂತ್ರಿಯು "ಪೇಷ್ವೆ" ಎಂಬ ಹೆಸರಿನಿಂದ ಪುಣೆಪಟ್ಟಣದಲ್ಲಿ ರಾಜ್ಯಭಾರವನ್ನು ನಡೆಯಿಸುತ್ತಿದ್ದನು. ದೊರೆಯು ವಿನೋದಗಳಲ್ಲಿ ಕಾಲಕಳೆಯುತ್ತಿದ್ದುದರಿಂದ, ರಾಜ್ಯದ ಎಲ್ಲಾ ಆಡಳಿತವೂ ಸಮರ್ಥನಾದ ಈ ಬ್ರಾಹ್ಮಣ ಪೇಷ್ವೆಯ ಕೈಯಲ್ಲಿಯೇ ನಿಂತಿತು.

ಬಾಲಾಜಿ ವಿಶ್ವನಾಥ

ಬಾಲಾಜಿ ವಿಶ್ವನಾಥನು ಬಹು ಸಮರ್ಥನು. ಈತನು ಮರಾಟೆಯವರೆಲ್ಲರೂ ಐಕಮತ್ಯದಿಂದ ಇರುವಂತೆ ಮಾಡಿದನು. ದೆಹಲಿಯ ರಾಜನಿರ್ಮಾಣಕರಾದ ಸಯ್ಯದ್ ಸಹೋದರರಿಗೆ ವಿಶ್ವನಾಥನು ಮಾಡಿದ ಸಹಾಯಕ್ಕಾಗಿ, ದಕ್ಷಿಣ ಹಿಂದೂಸ್ಥಾನದಲ್ಲಿ ಎಂದರೆ ಖಾನ್ದೇಶ, ಔರಂಗಾಬಾದ್, ಬೀರಾರ್, ಬಿದರೆ, ಬಿಜಾಪುರ, ಹೈದರಾಬಾದ್ ಈ ಸೀಮೆಗಳಿಂದ ಚೌತಾಯ, ಶತದಶಮುಖಿ ಎಂಬುವುಗಳನ್ನು ಎತ್ತುವ ಹಕ್ಕನ್ನೂ, ಶಿವಾಜಿಯಕಾಲದಿಂದೀಚೆಗೆ ಕೈಬಿಟ್ಟು ಹೋಗಿದ್ದ ಪುಣೆ ಮತ್ತು 15 ಡಿಸ್ಟ್ರಿಕ್ಟುಗಳ ಸ್ವರಾಜ್ಯಾಧಿಕಾರವನ್ನೂ ಮೊಗಲರು ಮರಾಟೆಯವರಿಗೆ ವಹಿಸಿದರು. ಇದರಿಂದ ತಮ್ಮ ಸೀಮೆಗಳ ಮೇಲೆ ಮರಾಟೆಯವರ ಅಧಿಕಾರವನ್ನು ಮೊಗಲರು ಅಂಗೀಕರಿಸಿದಂತಾಯಿತು.

ಮರಾಟೆಯ ಸರದಾರರೆಲ್ಲರೂ ಒಕ್ಕಟ್ಟಾಗಿರುವಂತೆ ಮಾಡುವುದಕ್ಕಾಗಿ ಪೇಷ್ವೆಯು ರಾಜ್ಯದ ಆದಾಯವನ್ನು ಎಲ್ಲರೂ ಹಂಚಿಕೊಳ್ಳುವ ಪದ್ಧತಿಯನ್ನು ಆಚರಣೆಗೆ ತಂದನು. ಪೇಷ್ವೆಯು 1720ರಲ್ಲಿ ಸಾಯಲು ಈ ಅಧಿಕಾರವು ಇವನ ಮಗ ಪ್ರಸಿದ್ಧನಾದ ಬಾಜೀರಾಯನಿಗೆ ದೊರೆಯಿತು.

ಒಂದನೆಯ ಬಾಜೀರಾಯ, (ಕ್ರಿ. ಶ. 1720–40)

ಈತನು ತಂದೆಗಿಂತಲೂ ಸಮರ್ಥನು; ಬಹಳ ಬುದ್ಧಿವಂತ, ಪರಾಕ್ರಮಿ; ಪೇಷ್ವೆಗಳಲ್ಲೆಲ್ಲ ಹೆಸರಾದವನು. ದಕ್ಷಿಣ ಹಿಂದೂಸ್ಥಾನದಲ್ಲಿ ಮರಾಟೆಯವರು ಚೌತಾಯವನ್ನು ಎತ್ತುತ್ತಿದ್ದಂತೆಯೇ, ಉತ್ತರ ಹಿಂದೂಸ್ಥಾನದಲ್ಲಿಯೂ ಆ ತೆರಿಗೆಯನ್ನೆತ್ತುವ ಹಕ್ಕನ್ನು ಪಡೆದು, ಹಿಂದೂ ಚಕ್ರಾಧಿಪತ್ಯವನ್ನು ಸ್ಥಾಪಿಸಬೇಕೆಂಬುದೇ ಇವನ ಆಸೆ. ಇದಕ್ಕಾಗಿ ಶೂರ ಬಾಜೀರಾಯನು ದೆಹಲಿಯಮೇಲೆ ದಂಡೆತ್ತಿಹೋಗಿ ತಾನು ಹೇಳಿದಂತೆ ಚಕ್ರವರ್ತಿಯು ಕೇಳುವಹಾಗೆ ಮಾಡಿದನು. ಚಕ್ರವರ್ತಿಯ ಸಹಾಯಕ್ಕಾಗಿ ಬಂದಿದ್ದ ಹೈದರಾಬಾದಿನ ನಿಜಾಮುಲ್ ಮುಲ್ಕನನ್ನು ಭೂಪಾಲದ ಯುದ್ಧದಲ್ಲಿ ಸೋಲಿಸಿ ಅವನಿಂದ ಮಾಳವ, ಗುಜರಾತು ರಾಜ್ಯಗಳನ್ನೂ ಯುದ್ಧದ ವೆಚ್ಚಕ್ಕಾಗಿ 50 ಲಕ್ಷ ರೂಪಾಯಿಗಳನ್ನೂ ಸಂಪಾದಿಸಿದನು. ಮರಾಟೆಯವರು ಪೋರ್ಚುಗೀಸರಿಂದ ಸಾಲ್ಸತಿ, ಬೇಸಿನ್ ಪ್ರಾಂತಗಳನ್ನು ವಶಮಾಡಿಕೊಂಡರು.

ಬಾರಾಭಾಯಿಗಳು

ಈ ರೀತಿಯಲ್ಲಿ ವಿಸ್ತರಿಸಿದ ಮಹಾರಾಷ್ಟ್ರ ರಾಜ್ಯವನ್ನು ಸರಿಯಾಗಿ ಆಳಿ, ಚೌತಾಯವನ್ನು ಕ್ರಮವಾಗಿ ಎತ್ತುವುದಕ್ಕಾಗಿ ಬಾಜೀರಾಯನು ಬೇರೆ ಬೇರೆ ಪ್ರಾಂತಗಳಿಗೆ ಹನ್ನೆರಡು ಜನ ಅಧಿಕಾರಿಗಳನ್ನು ನೇಮಿಸಿದನು. ಇವರಿಗೆ ಮಹಾರಾಷ್ಟ್ರದಲ್ಲಿ "ಬಾರಾಭಾಯಿ" ಗಳೆಂದು ಹೆಸರು. ಗುಜರಾತಿನನಲ್ಲಿ ಪೀಲಾಜಿ ಗಾಯಕವಾಡನೂ, ಉತ್ತರ ಮಾಳವದಲ್ಲಿ ರಾಣೋಜಿ ಸಿಂಧ್ಯನೂ, ದಕ್ಷಿಣಮಾಳವದಲ್ಲಿ ಮಲ್ಹಾರ್ಜಿ ಹೋಳ್ಕರನೂ, ನಾಗಪುರದಲ್ಲಿ ರಘೋಜಿ ಭೋನ್ಸ್ಲೆಯೂ ಇವರೇ ಬಾರಾಭಾಯಿಗಳಲ್ಲಿ ಪ್ರಮುಖರಾದವರು. ಈ ಬಾರಾಭಾಯಿಗಳ ಕೆಲಸವು ವಂಶಪರಂಪರೆಯಾಗಿ ನಡೆದುಕೊಂಡು ಬಂದಿತು.

ಮಹಾರಾಷ್ಟ್ರಕ್ಕೆ ರಾಜನೇ ಅಧಿಪತಿಯು. ಈತನು ಸತಾರೆಯಲ್ಲಿರುತ್ತಿದ್ದನು. ಆದರೆ ಶಿವಾಜಿಯ ದೊರೆತನವಾದ ಮೇಲೆ ನಿಜವಾದ ಅಧಿಕಾರವು ಪೇಷ್ವೆಗಳ ಕೈಯಲ್ಲಿ ನಿಂತಿತು. ಇವರು ಪುಣೆಯಲ್ಲಿ ಕಾರುಬಾರು ನಡೆಯಿಸುತ್ತ, ರಾಜರ ಶಕ್ತಿಕುಂದಿದಹಾಗೆಲ್ಲ

ತಮ್ಮ ಅಧಿಕಾರವನ್ನು ಬಲಪಡಿಸಿಕೊಳ್ಳುತ್ತ ಬಂದರು. ಈ ಪೇಷ್ವೆಗಳ ಪ್ರಾಬಲ್ಯವು ಕಡಿಮೆಯಾದಹಾಗೆಲ್ಲ ಮೇಲೆಹೇಳಿದ ಬಾರಾಭಾಯಿಗಳು ತಮ್ಮ ರಾಜ್ಯಗಳಲ್ಲಿ ಸ್ವತಂತ್ರವಾಗಿ ಆಳಲಾರಂಭಿಸಿದರು. ಇಂದೂರು ಗ್ವಾಲಿಯರ್, ಬರೋಡ ಈ ಸಂಸ್ಥಾನಗಳಲ್ಲಿ ಬಾರಾಭಾಯಿಗಳ ಸಂತತಿಯವರೇ ಈಗಲೂ ದೊರೆತನವನ್ನು ಮಾಡುತ್ತಿರುವರು.

ಕ್ರಿ.ಶ. 1740ರಲ್ಲಿ ಸಮರ್ಥನಾದ ಪೇಷ್ವೆ ಬಾಜೀರಾಯನು ಅಕಾಲ ಮರಣವನ್ನು ಹೊಂದಲಾಗಿ ಅವನ ಮಗ ಬಾಲಾಜೀ ಬಾಜೀರಾಯನನ್ನು ಸಾಹುರಾಜನು ಪೇಷ್ವೆಯಾಗಿ ನಿಯಮಿಸಿದನು.

ಬಾಲಾಜೀ ಬಾಜೀರಾಯ, (ಕ್ರಿ. ಶ. 1740–61).

ಬಾಲಾಜೀಬಾಜೀ ರಾಯನು ಕೇವಲ ವಿಷಯಾಸಕ್ತನಾದರೂ ರಾಜ್ಯದ ಆಳಿಕೆಯಲ್ಲಿ ತುಂಬ ಸಮರ್ಥನು. ಇನ್ನುಮೇಲೆ ಪೇಷ್ವೆಯ ಅಧಿಕಾರವು ಬಾಲಾಜೀ ಬಾಜೀರಾಯನ ವಂಶಪಾರಂಪರ್ಯವಾಗಿ ನಡೆದು ಬರತಕ್ಕುದೆಂದು ಸಾಹುಮಹಾರಾಜನು ಒಪ್ಪಿಕೊಂಡನು. ಇಲ್ಲಿಂದ ಮುಂದಕ್ಕೆ ಸತಾರೆಯ ದೊರೆಗಳು ಹೆಸರಿಗೆಮಾತ್ರ ದೊರೆಗಳೇ ಹೊರತು, ಪೇಷ್ವೆಗಳೇ ನಿಜವಾದ ದೊರೆಗಳಾದರು. ಸತಾರೆಯ ದೊರೆಗಳಿಗೆ "ದೊರೆತನದ ಹೆಸರು, ಅಲ್ಪವಾದ ವರ್ಷಾಶನ, ಸತಾರೆಯ ಜಹಗೀರು" ಇವುಗಳು ಮಾತ್ರ ಸೇರಿದ್ದುವು. 1748ರಲ್ಲಿ ಸಾಹುಮಹಾರಾಜನು ಸತ್ತುಹೋದ ಮೇಲೆ ರಾಜ್ಯಕ್ಕಾಗಿ ಜಗಳಹುಟ್ಟಿತು.

ಪೇಷ್ವೆಯು ತಾರಾಬಾಯಿಯ ಮುಮ್ಮಗನಾದ ಎರಡನೆಯ ರಾಜಾರಾಮನಿಗೆ ಸತಾರೆಯಲ್ಲಿ ಪಟ್ಟಗಟ್ಟಿ, ಅವನ ಹೆಸರಿನಲ್ಲಿ ತಾನೇ ಪುಣೆ ಪಟ್ಟಣದಲ್ಲಿ ರಾಜ್ಯಾಧಿಕಾರವನ್ನು ನಡೆಯಿಸುತ್ತಿದ್ದನು. ಇವನ ಕಾಲದಲ್ಲಿ ಮರಾಟೆಯವರ ರಾಜ್ಯವು ಬಹಳ ವಿಸ್ತರಿಸಿ, ಪುನಃ ಹಿಂದೂ ಚಕ್ರಾಧಿಪತ್ಯವು ಜೀರ್ಣೋದ್ಧಾರವಾಯಿತು.

ನಾಗಪುರದ ರಘೋಜೀ ಭೋಂಸ್ಲೆಯು ಬಂಗಾಳದ ನವಾಬನನ್ನು ಸೋಲಿಸಿ ಒರಿಸ್ಸಾ ಪ್ರಾಂತವನ್ನು ಅವನಿಂದ ಕಿತ್ತುಕೊಂಡು, ಬಂಗಾಳ, ಬಿಹಾರ ದೇಶಗಳಮೇಲೆ ಚೌತಾಯವನ್ನು ಹಾಕಿದನು. ಪೇಷ್ವೆಯು ತಾನೇ ಮೈಸೂರು, ಆರ್ಕಾಟು ರಾಜ್ಯಗಳನ್ನು ಜಯಿಸಿ ಆ ಸೀಮೆಗಳಿಂದ

ಚೌತಾಯವನ್ನೆತ್ತಿದನು. ಹೈದರಾಬಾದಿನ ನಿಜಾಮನು ಮರಾಟೆಯವರಿಗೆ ಸೋತುಹೋಗಿ, ದೌಲತಾಬಾದ್, ಬಿಜಾಪುರ ಮೊದಲಾದ ರಾಜ್ಯಗಳನ್ನು ಅವರಿಗೆ ಅರ್ಪಿಸಿದನು. ಪೇಷ್ವೆಯ ತಮ್ಮನಾದ ರಘೋಬನು, ಆಫ್ಘನ್ ದೊರೆಯಾದ ಅಹಮ್ಮದ್‌ಷಾ ಅಬ್ದಾಲಿಗೆ ಸೇರಿದ್ದ ಪಂಜಾಬ್ ದೇಶವನ್ನು ಆಫ್ಘನರಿಂದ ಕಿತ್ತುಕೊಂಡನು.

ಈ ರೀತಿಯಾಗಿ ಮರಾಟೆ ರಾಜ್ಯವು ಉತ್ತರದಲ್ಲಿ ಲಾಹೋರಿನಿಂದ ದಕ್ಷಿಣದಲ್ಲಿ ಕೃಷ್ಣಾನದಿಯವರೆಗೂ ವಿಸ್ತರಿಸಿತು. 1759ರಲ್ಲಿ ಹಿಂದೂಸ್ಥಾನದಲ್ಲಿ ಹಿಂದೂಸಾಮ್ರಾಜ್ಯವು ಮರಳಿ ನೆಲೆಗೊಂಡಿತೆಂದು ಹೇಳುವಂತಿತ್ತು. ಆದರೆ ಆ ಸಂಪತ್ತು ಶೀಘ್ರವಾಗಿ ಅವರ ಕೈಕಳಚಿ ಹೋಯಿತು.

ಮೂರನೆಯ ಪಾಣಿಪಟ್ ಯುದ್ಧ

ಮರಾಟೆಯವರು ಪಂಜಾಬಿನಿಂದ ತಮ್ಮ ಪಕ್ಷದವರನ್ನು ಅಟ್ಟಿಬಿಟ್ಟರೆಂಬ ಸುದ್ಧಿಯನ್ನು ಕೇಳಿದೊಡನೆಯೇ ಆಫ್ಘಾನಿಸ್ಥಾನದ ದೊರೆಯಾದ ಅಹಮ್ಮದ್‌ಷಾ ಅಬ್ದಾಲಿಯು ದೊಡ್ಡ ಸೈನ್ಯದೊಡನೆ ಯುದ್ಧಕ್ಕೆ ಸಿದ್ಧನಾದನು. ಮರಾಟೆಯವರ ಸೊಕ್ಕನ್ನು ಮುರಿಯದಿದ್ದರೆ ತುರುಕರ ಹೆಸರಿಗೇ ಲೋಪ ಬರಬಹುದೆಂದು ಶಂಕಿಸುತ್ತಿದ್ದ ಅಯೋಧ್ಯೆಯ ನವಾಬನೂ, ರೋಹಿಲೆಯವರೂ, ದೆಹಲಿಯ ಮುಸಲ್ಮಾನರೂ ಇವರೆಲ್ಲರೂ ಅಬ್ದಾಲಿಯ ಪಕ್ಷವನ್ನು ವಹಿಸಿದರು. ಮರಾಟೆ ಭಾರಾಬಾಯಿಗಳೆಲ್ಲರೂ ತಮ್ಮ ತಮ್ಮ ಸೈನ್ಯಗಳೊಡನೆ ಹೊರಟರು. ರಾಜಪುತ್ರರೂ, ಜಾಟರೂ, ಪಿಂಡಾರೆಯವರೂ ಹಿಂದುಗಳ ಕಡೆಗೆ ಸೇರಿದರು. ಉಭಯಪಕ್ಷದವರೂ ಪ್ರಸಿದ್ಧಿಯಾದ ಪಾಣಿಪಟ್ಟದ ಯುದ್ಧರಂಗದಲ್ಲಿ ಸೇರಿದರು. (1761) ಮರಾಟೆಯವರ ಕಡೆ ಇಷ್ಟು ದೊಡ್ಡ ಸೈನ್ಯವು ಹಿಂದೆ ಯಾವಾಗಲೂ ನೆರೆದಿರಲಿಲ್ಲ.

ಆದರೇನು ! ಸೇನಾಪತಿಯು ಮಾತ್ರ ಸಮರ್ಥನಾಗಿರಲಿಲ್ಲ. ಹೈದರಾಬಾದಿನ ನಿಜಾಮನನ್ನು ಉದಯಘಡದಲ್ಲಿ ಜಯಿಸಿದೆನೆಂಬ ಹೆಮ್ಮೆಯಿಂದ ಇಷ್ಟು ದೊಡ್ಡ ಕೆಲಸಕ್ಕೆ ಕೈಹಾಕಿದುದು ಸೇನಾಪತಿಯಾದ ಸದಾಶಿವರಾಯನ ದೊಡ್ಡ ತಪ್ಪಾಯಿತು. ಇವನೇನೋ ವೀರನೇ ಹೌದು, ಆದರೆ ವಿವೇಕಿಯಲ್ಲ. ಯುದ್ಧವನ್ನಾರಂಭಿಸಲು ಒದಗಿದ ಸುಸಮಯಗ

ಳನ್ನು ಬಿಟ್ಟು ಕಾಲಹರಣ ಮಾಡುತ್ತ ಬಂದನು; ಸೈನಿಕರ ಉಪಯೋಗಕ್ಕಾಗಿ ತಂದಿದ್ದ ದವಸ ಧಾನ್ಯಗಳೂ, ಯುದ್ಧ ಸಾಮಗ್ರಿಗಳೂ ಮುಗಿದು ಹೋಗುತ್ತ ಬಂದುವು; ಸುತ್ತುಮುತ್ತಿನ ದೊರೆಗಳು ಶತ್ರುಗಳ ಕಡೆ ಸೇರಿದರು, ಮರಾಟೆಯವರು ಹೊಟ್ಟೆಗಿಲ್ಲದೆ ಸಾಯುವ ಹೊತ್ತು ಬಂದಿತು.

ಆಗ, ಯತ್ನವಿಲ್ಲದೆ ಮರಾಟೆಯವರು ಯುದ್ಧವನ್ನಾರಂಭಿಸಬೇಕಾಯಿತು. ಯುದ್ಧವು ಬಹು ಘೋರವಾಗಿ ನಡೆಯಿತು. ಮೊಟ್ಟಮೊದಲಿನಲ್ಲಿ ಜಯಲಕ್ಷ್ಮಿಯು ಮರಾಟರ ಕೈಯನ್ನು ಹಿಡಿದಂತೆ ಕಂಡಿತು. ಆದರೆ ಇವರ ಪಕ್ಷದಲ್ಲಿದ್ದ ಜಾಟರು ಶತ್ರುವಿನ ಕಡೆಗೆ ಹೋದುದರಿಂದಲೂ, ಹೋಳ್ಕರ್, ಸಿಂಧ್ಯ ಮೊದಲಾದ ಮರಾಟೆ ವೀರರು ಯುದ್ಧರಂಗದಿಂದ ಹಿಮ್ಮೆಟ್ಟಿದುದರಿಂದಲೂ, ತುರುಕರು ಅಳಿಸಿಹೋಗುವ ತಮ ಮರ್ಯಾದೆಯನ್ನು ಕಾಪಾಡಿಕೊಳ್ಳಬೇಕೆಂಬ ದೃಢಸಂಕಲ್ಪದಿಂದ ವೀರಾವೇಶಹೊಂದಿ ಯುದ್ಧಮಾಡಿದುದರಿಂದಲೂ, ಮರಾಟೆಯವರ ಕೈ ಕೆಳಗಾಯಿತು.

ಸಮಯ ನೋಡುತ್ತಿದ್ದ ಅಬ್ದಾಲಿಯು ಹಿಂದುಗಳಮೇಲೆ ನುಗ್ಗಿದನು. ಪೇಷ್ವೆಯ ಹಿರಿಯ ಮಗನೂ, ಸೇನಾಧ್ಯಕ್ಷನೂ ವೀರಸ್ವರ್ಗವನ್ನು ಸೇರಿದರು. ಸಾವಿರಾರುಮಂದಿ ಮರಾಟ ಯೋಧರು ಯುದ್ಧದಲ್ಲಿ ಮಡಿದರು. ಪಠಾಣರಿಗೆ ಜಯವಾಯಿತು. ಹಿಂದೂ ಸಾಮ್ರಾಜ್ಯವನ್ನು ಪುನರುತ್ಥಾಪನೆ ಮಾಡಬೇಕೆಂದಿದ್ದ ಮರಾಟರು ಹತರಾದರು. ಯುದ್ಧದಲ್ಲಾದ ಸೋಲನ್ನು ಕೇಳಿ ಪೇಷ್ವೆಯು ಸತ್ತುಹೋದನು.

ಮರಾಟೆಯವರು ತಮ್ಮ ಪದ್ಧತಿಯಂತೆ ಅಲ್ಲಲ್ಲಿ ಅವೇಳೆಗಳಲ್ಲಿ ಶತ್ರುಗಳಮೇಲೆ ಬಿದ್ದು ಕೊಳ್ಳೆಹೊಡೆದು, ಸಣ್ಣ ಸಣ್ಣ ಗುಂಪುಕಟ್ಟಿಕೊಂಡು ಕಿರುಕುಳಯುದ್ಧ (Guerilla warfare) ಮಾಡದೆ, ತಮಗೆ ಅಭ್ಯಾಸವಿಲ್ಲದೆ ಒಂದೇ ಕಡೆ ನಿಂತು ಸ್ಥಿರಯುದ್ಧವನ್ನು ಮಾಡಿದುದು ಬಹಳ ತಪ್ಪಾಯಿತು. ಮರಾಟೆಯವರ ಸೋಲಿಗೆ ಇದೇ ಪ್ರಬಲವಾದ ಕಾರಣ. ಶಿವಾಜಿಯ ಕಾಲದಲ್ಲಿದ್ದಂತೆ ಮರಾಟೆಯವರೆಲ್ಲರೂ ಒಕ್ಕಟ್ಟಾಗಿದ್ದಿದ್ದರೆ, ಈ ಯುದ್ಧದಲ್ಲಿ ಮರಾಟೆಯವರಿಗೆ ಸೋಲಾಗುತ್ತಿರಲಿಲ್ಲ.

ಮರಾಟೆಯವರು ಸೋತುಹೋದಮೇಲೆ ಪಠಾಣ ಸಾಮ್ರಾಜ್ಯವನ್ನು ಸ್ಥಾಪಿಸಲು ಅಬ್ದಾಲಿಗೆ ಇದು ಸಕಾಲವಾಗಿತ್ತು. ಆದರೆ ಬಹುಕಾಲ ಹೊರದೇಶದಲ್ಲಿದ್ದು ಬೇಸತ್ತಿದ್ದ ಅವನ ಸೈನಿಕರು ತಮ್ಮ ನೆಲೆಮನೆಗೆ

ಹೋಗಬೇಕೆಂದು ಮುಷ್ಕರ ಹಿಡಿದುದರಿಂದ ಅವನು ಅವರೊಡನೆ ತನ್ನ ದೇಶಕ್ಕೆ ಹಿಂದಿರುಗಬೇಕಾಯಿತು.

ಈ ಅನಾಯಕತ್ವವನ್ನು ನೋಡಿ ಪಂಜಾಬಿನಲ್ಲಿ ಸಿಕ್ಕರು ಮುಂದಾಳುಗಳಾಗಿ ಬಂದು ತಮ್ಮ ರಾಜ್ಯವನ್ನು ಬಲಪಡಿಸಲು ಪ್ರಯತ್ನಪಟ್ಟರು. ಆದರೆ ಇದಕ್ಕೆ ನಾಲ್ಕು ವರ್ಷಗಳ ಮುಂಚೆಯೇ ಪ್ಲಾಸಿಯ ಕದನದಲ್ಲಿ ಜಯಶಾಲಿಗಳಾದ ಇಂಗ್ಲಿಷ್ ಕಂಪೆನಿಯವರು ಬಂಗಾಳಾ ದೇಶವನ್ನು ತಮ್ಮ ವಶಪಡಿಸಿಕೊಂಡು ಹಿಂದೂಸ್ಥಾನವನ್ನೆಲ್ಲ ಆಕ್ರಮಿಸುವ ಚಿಹ್ನೆಗಳು ಕಾಣುತ್ತಿದ್ದುವು.

ಮಾಧವರಾಯ (ಕ್ರಿ. ಶ. 1761–72)

ಬಾಲಾಜೀ ಬಾಜೀರಾಯನು ಮಡಿದುಹೋದಮೇಲೆ ಅವನ ಎರಡನೆಯ ಮಗನಾದ ಮಾಧವರಾಯನಿಗೆ ಪಟ್ಟವಾಯಿತು. ಇವನು ಪಟ್ಟಕ್ಕೆ ಬಂದಾಗ 17 ವಯಸ್ಸಿನ ಹುಡುಗನಾಗಿದ್ದರೂ, ಇವನು ಬಹಳ ವಿತರಣೆಯಿಂದ ರಾಜ್ಯವಾಳಿದನು. ಇವನ ಕಾಲದಲ್ಲಿ ಮರಾಟೆಯವರು ಪುನಃ ಗರಿಗಟ್ಟಿಕೊಂಡರು.

ಪೇಷ್ವೆಯು ಮೈಸೂರಿನ ಹೈದರಲ್ಲಿಯನ್ನು ಸೋಲಿಸಿ ಅವನಿಂದ ಹಣವನ್ನೂ, ರಾಜ್ಯವನ್ನೂ ಕಸುಕೊಂಡನು ; ರಾಜಪುತ್ರರೂ, ಜಾಟರೂ ಇವನಿಗೆ ಕಪ್ಪವನ್ನು ಕೊಡುವುದಕ್ಕೆ ಒಡಂಬಟ್ಟರು ; ಮಾರಾಟೆಯವರು ರೋಹಿಲ್ ಖಂಡವನ್ನು ಲೂಟಿ ಮಾಡಿದರು ; ದೆಹಲಿಯ ಚಕ್ರವರ್ತಿಯಾದ ಷಾ ಆಲಮನು ಮರಾಟೆಯವರ ಆಶ್ರಿತನಾದನು. ಈ ರೀತಿಯಾಗಿ ಮರಾಟೆಯವರ ಕೀರ್ತಿಯು ಎಲ್ಲೆಲ್ಲಿಯೂ ಹರಡಿತು.

ಆದರೆ 1772ರಲ್ಲಿ ಮಾಧವರಾಯನು ಚಿಕ್ಕವಯಸ್ಸಿನಲ್ಲಿಯೇ ಕ್ಷಯರೋಗದಿಂದ ಸತ್ತುಹೋಗಲು ಮರಾಟೆಯವರ ಪ್ರಾಬಲ್ಯವು ಮರಳಿ ಕೆಳೆಗುಂದಿತು.

ಮಾಳವ ರಾಜ್ಯದಲ್ಲಿ ಆಳುತ್ತಿದ್ದ ಮಲ್ಲಾರಿರಾವ್ ಹೋಳ್ಕರನು 1767ರಲ್ಲಿ ಕಾಲವಾದಮೇಲೆ ಆತನ ಸೊಸೆಯಾದ ಅಹಲ್ಯಾಬಾಯಿಯು ವಿಧವೆಯಾಗಿದ್ದರೂ ತಾನೇ ರಾಜ್ಯವನ್ನಾಳಲಾರಂಭಿಸಿದಳು. ಈಕೆಯು ತನ್ನ ಸಾಮರ್ಥ್ಯದಿಂದ ಇಂದೂರ್ ಸಂಸ್ಥಾನವನ್ನು ಬಹು ಅಭಿವೃದ್ಧಿಗೆ

ತಂದಳು. ಇವಳ ಧಾರ್ಮಿಕಬುದ್ಧಿ, ಔದಾರ್ಯ ಇವುಗಳಿಗಾಗಿ ಅಲ್ಲಿಯ ಜನರು ಇವಳನ್ನು ಕೊಂಡಾಡುತ್ತಿದ್ದರು. ಅಲ್ಲಿ ಈಕೆಯನ್ನು ಈಗಲೂ ದೇವರೆಂದು ಪೂಜಿಸುತ್ತಾರೆ.

ನಾನಾಫಡ್ನವೀಸನ ಮಂತ್ರಿತ್ವ—ಮಾಧವರಾಯನ ತರುವಾಯ ಅವನ ತಮ್ಮ ನಾರಾಯಣರಾಯನು ಪೇಷ್ವೆಯಾದನು. ಆದರೆ ಬಾಲಾಜೀ ಬಾಜೀರಾಯನ ತಮ್ಮನಾದ ರಘೋಬನು ತನಗೆ ಅಧಿಕಾರವಾಗಬೇಕೆಂಬ ದುರಾಶೆಯಿಂದ ನಾರಾಯಣರಾಯನನ್ನು ಕೊಲ್ಲಿಸಿದನು. ಕೂಡಲೆ ಶಕ್ತನಾದ ನಾನಾಫಡ್ನವೀಸನೆಂಬ ಮಂತ್ರಿಯು ನಾರಾಯಣರಾಯನ ಮಗುವಿನ ಹೆಸರಿಗೆ ಪಟ್ಟಗಟ್ಟಿ, ರಾಜ್ಯವನ್ನು ತಾನೇ ದರ್ಪದಿಂದ ಆಳಲು ಮೊದಲುಮಾಡಿ, ರಾಜ್ಯಕ್ಕಾಗಿ ಪಿತೂರಿ ನಡೆಯಿಸುತ್ತಿದ್ದ ರಘೋಬನನ್ನು ಸೆರ್ಬಂಧದಲ್ಲಿಡಿಸಿದನು. ಕೂಡಲೆ ರಘೋಬನು ಸೆರೆಯಿಂದ ತಪ್ಪಿಸಿಕೊಂಡುಹೋಗಿ ಇಂಗ್ಲಿಷರ ಸಹಾಯವನ್ನು ಬೇಡಿದನು. ಇಂಥ ಸಮಯವನ್ನೇ ನಿರೀಕ್ಷಿಸುತ್ತಿದ್ದ ಇಂಗ್ಲಿಷ್ ಕಂಪೆನಿಯವರು ಆತನೊಡನೆ ಕರಾರು ಮಾಡಿಕೊಂಡು ಮರಾಟೆಯವರಮೇಲೆ ಯುದ್ಧಕ್ಕೆ ನಿಂತರು. ಇದೇ 1ನೆಯ ಮರಾಟೆಯ ಯುದ್ಧವು. ಇದರಿಂದ ಮರಾಟೆಯವರ ಸ್ವಾಧೀನದಲ್ಲಿದ್ದ ಕೆಲವು ಸೀಮೆಗಳು ಮಾತ್ರ ಇಂಗ್ಲಿಷರಿಗೆ ಸಿಕ್ಕಿದುವು. ತಾನೇ ಅಧಿಕಾರಮಾಡಬೇಕೆಂಬ ರಘೋಬನ ಇಷ್ಟಾರ್ಥವು ನೆರವೇರಲಿಲ್ಲ.

ನಾನಾಫಡ್ನವೀಸನ ಮಂತ್ರಿತ್ವದಿಂದ ನಾರಾಯಣರಾಯನ ಮಗನಾದ ಸವಾಯಿ ಮಾಧವರಾವ್ ನಾರಾಯಣನೇ ಪೇಷ್ವೆಯಾದನು. ಈತನು ಹೆಸರಿಗೆ ಮಾತ್ರ ಪೇಷ್ವೆಯೇ ಹೊರತು ಆಡಳಿತವೆಲ್ಲವೂ ನಾನಾಫಡ್ನವೀಸನ ಕೈಯಲ್ಲಿತ್ತು. ಸಮರ್ಥನಾದ ಮಂತ್ರಿಯು 1795ರಲ್ಲಿ ಹೈದರಾಬಾದಿನ ನಿಜಾಮನನ್ನು ಕರ್ಡ್ಲದ ಕದನದಲ್ಲಿ ಸೋಲಿಸಿ ಮೂರು ಕೋಟಿ ರೂಪಾಯಿಗಳನ್ನೂ, ಕೆಲವು ಸೀಮೆಗಳನ್ನೂ ಕಿತ್ತುಕೊಂಡನು. ಎಲ್ಲೆಲ್ಲಿಯೂ ನಾನಾಫಡ್ನವೀಸನ ಹೆಸರೇ ಮುಂದಕ್ಕೆ ಬಂದಿತು. ಆಗ ಪೇಷ್ವೆಯು ಈ ರೀತಿಯಾಗಿ ಅಡಿಯಾಳಾಗಿರುವುದು ಅಪಮಾನಕರವೆಂದು ತಿಳಿದು ಆತ್ಮಹತ್ಯೆಮಾಡಿಕೊಂಡನು. ಆಗ ಫಡ್ನವೀಸನು ರಘೋಬನ ಮಗ ಎರಡನೆಯ ಬಾಜೀರಾಯನಿಗೆ ಪಟ್ಟಗಟ್ಟಿದನು.

ಇದಾದ ಕೆಲವು ದಿನಗಳಮೇಲೆ ನಾನಾಫಡ್ನವೀಸನು 1799ರಲ್ಲಿ ಕಾಲವಾದನು. ಇವನು ತನ್ನ ಸಾಮರ್ಥ್ಯದಿಂದ ಮರಾಟೆಯ ಸರದಾರರನ್ನು ಒಟ್ಟುಗೂಡಿಸಿ, ಮರಾಟೆಯ ರಾಜ್ಯವನ್ನು ಬಲಪಡಿಸಿದನು. ಇವನೊಡನೆಯೇ ಮಹಾರಾಷ್ಟ್ರ ರಾಜ್ಯದ ಬಿಗಿಯು ಸಡಲಿಹೋಯಿತು. ನಾನಾಫಡ್ನವೀಸನು ರಾಜತಂತ್ರ ನಿಪುಣನು; ಇವನು ಸತ್ಯವಾದಿಯೂ, ದಯಾಳುವೂ ಉದಾರನೂ ಆಗಿದ್ದನು.

ಮಹದಾಜಿಸಿಂಧ್ಯ—ಇವನು ಗ್ವಾಲಿಯರ್ ಸಂಸ್ಥಾನದ ಸರದಾರನು. ಇವನು ಮಹಾರಾಷ್ಟ್ರ ರಾಜ್ಯವನ್ನು ಒಟ್ಟುಗೂಡಿಸಬೇಕೆಂದಿದ್ದ ನಾನಾಫಡ್ನವೀಸನ ಪ್ರಯತ್ನಕ್ಕೆ ವಿರೋಧವಾಗಿ ತಾನೇ ಸ್ವತಂತ್ರನಾಗಿ ಪೇಷ್ವೆಯ ಮನೆತನವನ್ನೇ ಹಾಳುಮಾಡಬೇಕೆಂಬ ಉದ್ದೇಶದಿಂದ ಕಾರುಬಾರುಗಳನ್ನು ನಡೆಸುತ್ತಿದ್ದನು. ಒಂದನೆಯ ಮರಾಟೆ ಯುದ್ಧದಲ್ಲಿ ಇಂಗ್ಲಿಷರಿಗೂ ನಾನಾಫಡ್ನವೀಸನಿಗೂ ಸಂಧಿಮಾಡಿಸಿ ತಾನು ಬ್ರೋಚ ಪ್ರಾಂತವನ್ನು ಸಂಪಾದಿಸಿಕೊಂಡನು. ಇದಾದಮೇಲೆ ಬಂದಲ್ ಖಂಡದ ಮೇಲೆ ದಂಡೆತ್ತಿಹೋಗಿ ಚೌತಾಯವನ್ನು ಎತ್ತಿದನು. ಸಿಂಧ್ಯನು ಈ ರೀತಿಯಾಗಿ ತನ್ನ ರಾಜ್ಯವನ್ನು ಎಲ್ಲಾ ಕಡೆಯಲ್ಲಿಯೂ ವಿಸ್ತರಿಸಿದುದಲ್ಲದೆ ದೆಹಲಿಯ ಚಕ್ರವರ್ತಿಗೆ ಮಂತ್ರಿಯಾಗಿಯೂ ಇದ್ದನು. ಫಡ್ನವೀಸನ ಮರಣಾನಂತರ ಸಿಂಧ್ಯನೇ ಮರಾಟರಿಗೆ ಮುಖಂಡನಾದನು.

ಎರಡನೆಯ ಬಾಜೀರಾಯ (ಕ್ರಿ. ಶ. 1795–1818)

ಫಡ್ನವೀಸನು ಸತ್ತಮೇಲೆ ಮರಾಟೆ ಸರದಾರರಲ್ಲಿ ಪರಸ್ಪರ ಕಲಹಗಳು ಹುಟ್ಟಿದುವು. ಅವರಲ್ಲಿ ಅನೇಕರು ಪೇಷ್ವೆಯ ಅಧಿಕಾರವನ್ನು ಅಂಗೀಕರಿಸಲಿಲ್ಲ. ಇಂದೂರಿನ ಹೋಳ್ಕರನು ಪೇಷ್ವೆಯಮೇಲೆ ಯುದ್ಧಕ್ಕೆ ಹೊರಟು ಪುಣೆಯನ್ನು ಮುತ್ತಿದನು. ಇಷ್ಟಕ್ಕೇ ಹೆದರಿ, ಬಾಜೀರಾಯನು ಓಡಿಹೋಗಿ ಇಂಗ್ಲಿಷರ ಮರೆಹೊಕ್ಕನು. ಇಂತಹ ಸಮಯವನ್ನೇ ನಿರೀಕ್ಷಿಸುತ್ತಿದ್ದ ಇಂಗ್ಲೀಷರು ಪೇಷ್ವೆಯೊಡನೆ ಬೇಸೀನ್ ಕರಾರನ್ನು ಮಾಡಿಕೊಂಡರು. ಇದರಿಂದ ಪೇಷ್ವೆಯು ಇಂಗ್ಲೀಷರ ಅಧೀನನಾದುದಲ್ಲದೆ, ಮರಾಟೆಯುವರ ಸ್ವಾತಂತ್ರ್ಯಕ್ಕೇ ಕುಂದುಂಟಾಯಿತು.

ಇಂತಹ ಒಪ್ಪಂದಕ್ಕೆ ತಾವು ಸಮ್ಮತಿಸುವುದಿಲ್ಲವೆಂದು ಸಿಂಧ್ಯನೂ ಭೋನ್ಸ್ಲೆಯೂ ಇಂಗ್ಲಿಷರೊಡನೆ ಯುದ್ಧಮಾಡಿದರು. ಈ ಎರಡನೆಯ

ಮರಾಟೆ ಯುದ್ಧದಲ್ಲಿ ಮರಾಟೆಯವರಿಗೆ ಸೋಲಾದುದಲ್ಲದೆ, ಸಿಂಧ್ಯನೂ ಭೋಸ್ಲೆಯೂ ಇಂಗ್ಲಿಷರ ಆಶ್ರಿತರಾದರು. ಮರಾಟೆಯವರ ಪೈಕಿ ಇಂಗ್ಲಿಷರಿಗೆ ಇನ್ನೂ ಅಧೀನನಾಗದಿದ್ದವನು ಯಶವಂತರಾವ್ ಹೋಳ್ಕರ ನೊಬ್ಬನೇ. ಬೇರೊಂದು ನೆಪದಿಂದ ಇಂಗ್ಲಿಷರು ಹೋಳ್ಕರನ ಸಂಗಡಲೂ ಮೂರು ನಾಲ್ಕನೆಯ ಮರಾಟೆಯುದ್ಧಗಳನ್ನು ಮಾಡಿ ಸಂಪೂರ್ಣವಾಗಿ ಸೋಲಿಸಿ, ಅವನನ್ನೂ ತಮ್ಮ ಆಶ್ರಿತನನ್ನಾಗಿ ಮಾಡಿಕೊಂಡರು.

ಕಡೆಗೆ ಪೇಷ್ವೆಯ ರಾಜ್ಯವೆಲ್ಲವೂ ಇಂಗ್ಲಿಷರ ಸ್ವಾಧೀನವಾಯಿತು. ಬಾಜೀರಾಯನಿಗೆ ಜೀವನಾಂಶವನ್ನು ಕೊಟ್ಟು ಅವನನ್ನು ಕರ್ಣಪುರದ ಬಳಿಯಲ್ಲಿ ನಿರ್ಬಂಧದಲ್ಲಿಟ್ಟರು. ಇಲ್ಲಿಗೆ ಮಹಾರಾಷ್ಟ್ರರ ಪ್ರಾಬಲ್ಯವು ಸಮಾಪ್ತಿಯಾಯಿತು. ಗಾಯಕವಾಡ, ಸಿಂಧ್ಯ, ಹೋಳ್ಕರ ಇವರ ವಂಶಸ್ಥರು ಮಾತ್ರ ಅವರವರ ರಾಜ್ಯಗಳಲ್ಲಿ ಸಾಮಂತರಾಜರಾಗಿ ಆಳುತ್ತ ಈಗಲೂ ಇಂಗ್ಲಿಷರಿಗೆ ಆಶ್ರಿತರಾಗಿರುವರು.

ಮರಾಟೆಯವರ ನಾಶಕ್ಕೆ ಕಾರಣಗಳು

ಮರಾಟೆಯ ಸರದಾರರು ಶಿವಾಜಿಯ ಕಾಲದಿಂದ ನಡೆದು ಬಂದ ಒಕ್ಕಟ್ಟನ್ನು ಬಿಟ್ಟು, ತಾವೇ ಸ್ವತಂತ್ರವಾಗಿ ರಾಜ್ಯವನ್ನಾಳಬೇಕೆಂಬ ಆಸೆ ಯಿಂದ ಒಬ್ಬರಮೇಲೊಬ್ಬರು ಕಾದಾಡಲಾರಂಭಿಸಿದರು ; ಸಿಂಧ್ಯನು ಪೇಷ್ವೆಯನ್ನು ನಿರಾಕರಿಸಿದನು ; ರಘೋಬನು ರಾಜ್ಯದಾಸೆಗಾಗಿ ಪಿತೂರಿ ನಡೆಸಿ ಇಂಗ್ಲಿಷರನ್ನು ತಾನಾಗಿಯೇ ಕರೆದು ಮರಾಟೆಯವರ ಮೇಲೆ ಕೆಡವಿದನು. ಮರಾಟೆ ಸರದಾರರು ಯುದ್ಧಕಾಲದಲ್ಲಿ ಒಬ್ಬರಿ ಗೊಬ್ಬರು ಸಹಾಯಮಾಡದೆ ಇದ್ದುದರಿಂದಲೂ, ಸರಿಯಾಗಿ ತಿದ್ದಿದ ಸೈನ್ಯದ ಬೆಂಬಲವಿಲ್ಲದೆ ಯುದ್ಧನಿಪುಣರಾದ ಇಂಗ್ಲಿಷರ ಮೇಲೆ ಪದೇ ಪದೇ ಬೀಳುತಿದ್ದುದರಿಂದಲೂ, ಮರಾಟೆಯವರ ಆಶ್ರಯದಲ್ಲಿದ್ದ ದೆಹ ಲಿಯ ಚಕ್ರವರ್ತಿಯು 1803ರಲ್ಲಿ ಇಂಗ್ಲಿಷರ ಆಶ್ರಯವನ್ನು ಸೇರಿದು ದರಿಂದಲೂ ಹಿಂದೂಸ್ಥಾನದ ಜನಗಳಿಗೆ ಮರಾಟೆಯವರಲ್ಲಿದ್ದ ಗೌರವವೇ ಕಡಿಮೆಯಾಗುತ್ತ ಬಂದಿತು. ಇವುಗಳ ಜತೆಗೆ ಕೊನೆಯ ಪೇಷ್ವೆಯ ಅವಿ ವೇಕವೂ ಮರಾಟೆರಾಜ್ಯದ ಹೆಸರನ್ನೇ ಅಳಿಸಿಬಿಟ್ಟಿತು.

ಅಧ್ಯಾಯ ೯.—ಸಿಕ್ಕರ ಚರಿತ್ರೆ

ಸಿಕ್ ಮತಸ್ಥಾಪಕನಾದ ನಾನಕ್ ಎಂಬ ಮಹಾತ್ಮನು ಕ್ರಿ.ಶ.1469 ರಲ್ಲಿ ಪಂಜಾಬಿನಲ್ಲಿ ಹುಟ್ಟಿದನು. ಇವನು ಕ್ಷತ್ರಿಯಜಾತಿಯ ಒಬ್ಬ ವ್ಯಾಪಾರಿಯ ಮಗನು. ಚಿಕ್ಕಂದಿನಿಂದಲೂ ಇವನಿಗೆ ಸನ್ಯಾಸಿಗಳಲ್ಲಿಯೂ ಫಕೀರರಲ್ಲಿಯೂ ವಿಶೇಷ ಭಕ್ತಿ ಇತ್ತು. ಇವನು ದೊಡ್ಡವನಾದಮೇಲೆ ಕಬೀರದಾಸ್ ಎಂಬ ಮಹಾತ್ಮನ ತತ್ವಗಳನ್ನು ಅನುಸರಿಸಿ "ದೇವರು ಒಬ್ಬನೇ, ಅವನನ್ನು ಭಕ್ತಿಯಿಂದ ಪೂಜಿಸುವುದೇ ಮುಖ್ಯ ; ಮತವೈಷಮ್ಯಗಳಿಗಾಗಿ ಯಾರೂ ಜಗಳವಾಡಬಾರದು." ಇವೇ ಮೊದಲಾದ ತತ್ವಗಳನ್ನು ನಾನಕನು ಬೋಧಿಸಿದನು. ಈ ಬೋಧೆಯು ಬಹುಜನರಿಗೆ ಸಾಧುವಾಗಿ ತೋರಿದುದರಿಂದ ಅನೇಕ ಹಿಂದೂಗಳೂ ಮುಸಲ್ಮಾನರೂ, ಜಾಟರೂ ಸಿಕ್ಕರೆಂಬ ಹೆಸರಿನಿಂದ ಇವನ ಶಿಷ್ಯರಾದರು. ಇವರು ಅನೇಕ ವರ್ಷಗಳವರೆಗೂ ಯಾರಗೋಜಿಗೂ ಹೋಗದೆ ಸಾತ್ವಿಕರಾಗಿದ್ದರು. ಆದರೆ ಪರಮತದ್ವೇಷಿಗಳಾದ ಮೊಗಲರು ಇವರನ್ನು ಬಹುವಾಗಿ ಹಿಂಸೆ ಮಾಡಿದುದರಿಂದ ಸಿಕ್ಕರ ಹತ್ತನೆಯ ಗುರುವಾದ ಗುರುಗೋವಿಂದನು ತಮ್ಮ ಮತವನ್ನೂ ತಮ್ಮ ಪ್ರಾಣವನ್ನೂ ಕಾಪಾಡಿಕೊಳ್ಳುವುದಕ್ಕಾಗಿ ಸಿಕ್ಕರೆಲ್ಲರೂ ಒಟ್ಟುಗೂಡಿ ಯುದ್ಧಮಾಡುವುದೇ ಧರ್ಮವೆಂದು ಬೋಧಿಸಿದನು.

ಇದುವರೆಗೂ ಸಾತ್ವಿಕವೃತ್ತಿಯಲ್ಲಿದ್ದ ಸಿಕ್ಕರು ಕ್ಷಾತ್ರಧರ್ಮವನ್ನು ವಹಿಸಲು ಇದೇ ಮೊದಲು. ಗುರುಗೋವಿಂದನು ಪಂಜಾಬಿನಲ್ಲಿ ಅಲ್ಲಲ್ಲಿ ಕೋಟೆಗಳನ್ನು ಕಟ್ಟಿದನು. ಮೊಗಲರು ಇವನನ್ನು ಕೊಂದುಹಾಕಿದುದರಿಂದ ಸಿಕ್ಕರೆಲ್ಲರೂ ಪಂಜಾಬಿನ ಪೂರ್ವಭಾಗಕ್ಕೆ ನುಗ್ಗಿ ಅನೇಕ ಮುಸಲ್ಮಾನರನ್ನು ಕೊಂದು ಯಮುನಾನದಿಯವರೆಗೂ ಹರಡಿಕೊಂಡರು. ಆಗ ದೆಹಲಿಯ ಚಕ್ರವರ್ತಿಯು ಇವರ ಗುರುವಾದ ಬಾಂಡನನ್ನೂ ಕೊಲ್ಲಿಸಿದನು.

ರಣಜಿತ್‌ಸಿಂಗ್

ಇದಕ್ಕಾಗಿ ಸಿಕ್ಕರು ಬಹು ಆಗ್ರಹಗೊಂಡು ತಮ್ಮಲ್ಲಿ ಹನ್ನೆರಡು ಮಿಸ್ಲು (ಗುಂಪು) ಗಳಾಗಿ ವಿಂಗಡಿಸಿಕೊಂಡು ಯುದ್ಧಕ್ಕೆ ನಿಂತರು.

ಒಂದೊಂದು ಗುಂಪಿನಲ್ಲಿ ಹನ್ನೆರಡುಸಾವಿರ ಸೈನಿಕರಿದ್ದರು. ಒಂದೊಂದು ಗುಂಪಿಗೂ ಸಮರ್ಥನಾದ ಸರದಾರನೆಂಬೊಬ್ಬ ಅಧಿಕಾರಿಯಿದ್ದನು. ಈಗ ಝುಂಡ್, ಪಾಟಿಯಾಲ, ಕಪೂರ್ತಲ ಈ ರಾಜ್ಯಗಳಲ್ಲಿರುವ ದೊರೆಗಳು ಸಿಕ್ ಸರದಾರರ ವಂಶಕ್ಕೆ ಸೇರಿದವರು. ಈ ಬಗೆಯಾದ ಒಂದು ಗುಂಪಿಗೆ ರಣಜಿತ್ಸಿಂಗನು ಸರದಾರನಾಗಿದ್ದು 1801ರಲ್ಲಿ ಲಾಹೋರನ್ನು ಹಿಡಿದು ಮಹಾರಾಜನೆಂಬ ಬಿರುದನ್ನು ವಹಿಸಿ ಸಿಕ್ ಸರದಾರರೆಲ್ಲರಿಗೂ ತಾನೇ ಮುಖಂಡನಾಗಿ ಬಹಳ ದರ್ಪದಿಂದ ಆಳಿದನು.

ಈತನು ತುಂಬ ಸಮರ್ಥನು. ಇವನು ಬಲಪಡಿಸಿದ್ದ ಖಾಲ್ಸ ಎಂಬ ಸೈನ್ಯವು ಆಗಿನಕಾಲದ ಯೋಧರೆಲ್ಲರನ್ನೂ ಎದೆ ನಡುಗಿಸುತ್ತಿತ್ತು. ರಣಜಿತ್ ಸಿಂಗನು ಆಫ್ಘನರನ್ನು ತನ್ನ ದೇಶದಿಂದ ಓಡಿಸಿ ಕಾಶ್ಮೀರ ಮುಲ್ತಾ಼ನ್, ಈ ಸೀಮೆಗಳನ್ನು ಸ್ವಾಧೀನಪಡಿಸಿಕೊಂಡು "ಪಂಜಾಬಿನ ಸಿಂಹ" ಎಂಬ ಹೆಸರನ್ನು ಪಡೆದನು.

ರಣಜಿತ್ಸಿಂಗನು 1839ರಲ್ಲಿ ಸ್ವರ್ಗಸ್ಥನಾದನು. ಆಗ ಇವನ ಸೈನ್ಯವು ಹತೋಟಿ ತಪ್ಪಿ ಪಕ್ಕದಲ್ಲಿದ್ದ ಇಂಗ್ಲಿಷರಮೇಲೆ ಬಿದ್ದಿತು. ಆಗ ಇಂಗ್ಲಿಷರಿಗೂ ಸಿಕ್ಕರಿಗೂ ಎರಡುವೇಳೆ ದೊಡ್ಡ ಯುದ್ಧಗಳಾಗಿ ಇವೆರಡರಲ್ಲಿಯೂ ಸಿಕ್ಕರೇ ಪರಾಜಿತರಾದರು. ಕೊನೆಗೆ 1849 ರಲ್ಲಿ ಪಂಜಾಬ್ ಸೀಮೆಯು ಇಂಗ್ಲಿಷ್ ರಾಜ್ಯಕ್ಕೆ ಸೇರಿಹೋಯಿತು. ಇಂಗ್ಲಿಷರು ರಣಜಿತ್ಸಿಂಗನ ಮಗನಾದ ದುಲೀಪಸಿಂಗನಿಗೆ ಜೀವನಾಂಶ ಕೊಟ್ಟು, ಕಾಶ್ಮೀರವನ್ನು ಅಲ್ಲಿ ಮಾಂಡಲಿಕನಾಗಿದ್ದ ಗುಲಾಬ್‌ಸಿಂಗನಿಗೆ ಮಾರಿದರು. ಗುಲಾಬನ ಮನೆತನದವರು ಈಗಲೂ ಕಾಶ್ಮೀರದಲ್ಲಿ ರಾಜ್ಯವಾಳುತ್ತಿರುವರು. ಬ್ರಿಟಿಷ್ ಸೈನ್ಯದಲ್ಲೆಲ್ಲ ಸಿಕ್ ಯೋಧರು ಅತಿ ಸಮರ್ಥರೆನಿಸಿಕೊಂಡಿರುವರು.

ಅಧ್ಯಾಯ ೧೦.—ಮೈಸೂರು ಚರಿತ್ರೆ

ಈಗಿನ ಕನ್ನಡ ನಾಡುಗಳಲ್ಲಿ ಮೈಸೂರು ದೇಶವು ಪ್ರಸಿದ್ಧವಾದುದು. ಶ್ರೀರಾಮನು ಈ ಸೀಮೆಯ ಮಾರ್ಗವಾಗಿ ಲಂಕಾದ್ವೀಪಕ್ಕೆ ಹೋದನಂತೆ. ಆಗ ಈ ದೇಶದ ಹೆಚ್ಚಿನ ಭಾಗವು ದಂಡಕಾರಣ್ಯವೆನಿಸಿಕೊಂ

ದಿತ್ತು. ಈ ದೇಶದ ಉತ್ತರಭಾಗವು ಅಶೋಕನ ಆಳಿಕೆಗೂ ಒಳಪಟ್ಟಿದ್ದಿತು. ಕದಂಬರೂ, ಪಲ್ಲವರೂ, ಗಂಗರಸರೂ, ಚಾಲುಕ್ಯರೂ ಈ ದೇಶದ ಕೆಲಕೆಲವು ಭಾಗಗಳಲ್ಲಿ ಆಳುತ್ತಿದ್ದರೆಂಬುದಕ್ಕೆ ನಿದರ್ಶನಗಳಿವೆ. ಆಮೇಲೆ ಕ್ರಿ.ಶ. 11ನೆಯ ಶತಮಾನದಿಂದ 14ನೆಯ ಶತಮಾನದವರೆಗೆ ರಾಜ್ಯವಾಳುತ್ತಿದ್ದ ಹೊಯಿಸಳ ಬಲ್ಲಾಳ ಕುಲದ ಅರಸುಗಳಿಗೆ ಈ ಸೀಮೆಯಲ್ಲಿರುವ ದ್ವಾರಸಮುದ್ರವು (ಹಳೆಯಬೀಡು) ರಾಜಧಾನಿಯಾಗಿತ್ತು. 1310ರಲ್ಲಿ ದೆಹಲಿಯ ಸುಲ್ತಾನನಾದ ಅಲ್ಲಾವುದೀನನ ಸೇನಾಪತಿ ಮಲ್ಲಿಕ್ ಕಾಫರನು ದ್ವಾರಸಮುದ್ರ (ಹಳೆಯಬೀಡು) ಕ್ಕೆ ಮುತ್ತಿಗೆ ಹಾಕಿದನು. ಮುಸಲ್ಮಾನರು ಮೈಸೂರು ದೇಶಕ್ಕೆ ಬರುವುದಕ್ಕೆ ಇದೇ ಮೊದಲು. 1326ರಲ್ಲಿ ಮುಸಲ್ಮಾನರು ಪುನಃ ಬಂದು ದ್ವಾರಸಮುದ್ರವನ್ನು ಹಾಳು ಮಾಡಿದುದರಿಂದ ಹೊಯಿಸಳರು ತಮ್ಮ ರಾಜಧಾನಿಯನ್ನು ಬಿಟ್ಟು ಶ್ರೀರಂಗಪಟ್ಟಣದ ಹತ್ತಿರ ಇರುವ ತೊಣ್ಣೂರಿಗೆ ಬಂದು ನೆಲಸಿದರು.

ಈ ಹೊಯಿಸಲ ಬಲ್ಲಾಳ ರಾಜ್ಯವು ನಾಶವಾದಮೇಲೆ ಈ ದೇಶವು ಅನೇಕ ಪಾಳೆಯಗಾರರ ವಶದಲ್ಲಿತ್ತು. ಈ ಪಾಳೆಯಗಾರರೆಲ್ಲರೂ ಆಗ ಪ್ರಬಲವಾಗಿದ್ದ ವಿಜಯನಗರ ಸಂಸ್ಥಾನಕ್ಕೆ ಕಪ್ಪವನ್ನು ಕೊಡುತ್ತಿದ್ದರು. ವಿಜಯನಗರದ ರಾಜ್ಯವು ಹಾಳಾದಮೇಲೆ ಅದಕ್ಕೆ ಆಶ್ರಿತರಾಗಿದ್ದ ಪಾಳೆಯಗಾರರೆಲ್ಲರೂ ಸ್ವತಂತ್ರರಾದರು. ಇವರಲ್ಲಿ ಮೈಸೂರಿನವರೂ ಒಬ್ಬರು.

ಹೀಗಿರುವಲ್ಲಿ 1399ನೆಯ ಇಸವಿಯಲ್ಲಿ ಯದುರಾಯರು, ಕೃಷ್ಣರಾಯರು ಎಂಬ ಕ್ಷತ್ರಿಯಸಹೋದರರು ಕಾರಣಾಂತರದಿಂದ ದ್ವಾರಕೆಯಿಂದ ಹೊರಟು ಮೈಸೂರು ಪಟ್ಟಣದ ಸಮಿಾಪಕ್ಕೆ ಬಂದರು. ಆ ವೇಳೆಗೆ ಹದಿನಾಡಿನಲ್ಲಿ ಆಳುತ್ತಿದ್ದ ಚಾಮರಾಜರೆಂಬವರು ಮೃತಿಯನ್ನು ಹೊಂದಿ ಅವರ ಹೆಂಡತಿಯೂ, ಮದುವೆಯಾಗದ ಮಗಳೊಬ್ಬಳೂ, ದುಷ್ಟನಾದ ಕಾರುಹಳ್ಳಿ ಪಾಳೆಯಗಾರನ ಕಿರುಕುಳಕ್ಕೆ ಒಳಗಾಗಿದ್ದರು. ತೊರೆಯ ಜಾತಿಯವನಾದ ಅವನು ಚಾಮರಾಜರ ಮಗಳನ್ನು ಮದುವೆಯಾಗಬೇಕೆಂಬ ಆಸೆಯಿಂದಿದ್ದನು. ಇದು ಆ ಹೆಂಗಸರಿಗೆ ಇಷ್ಟವಿರಲಿಲ್ಲ. ಈ ಸಮಯದಲ್ಲಿ ಚತುರರಾದ ಯದುರಾಯರು ಒಳಹೊಕ್ಕು ಉಪಾಯಾಂತರದಿಂದ ಆ ದುಷ್ಟನನ್ನು ಕೊಂದು ಆ ರಾಜಪುತ್ರಿಯನ್ನು ಮದುವೆಯಾಗಿ ರಾಜ್ಯಕ್ಕೂ ಒಡೆಯರಾದರು.

ತಾಲೀಕೋಟೆಯ ಯುದ್ಧದಲ್ಲಿ ವಿಜಯನಗರ ಸಂಸ್ಥಾನದ ಬಲವು ಕುಗ್ಗಿಹೋದ ಬಳಿಕ ಮೈಸೂರಿನ ರಾಜರು ರಾಜಒಡೆಯರ ಕಾಲದಿಂದ ಪ್ರಬಲರಾಗಿ ರಾಜ್ಯವನ್ನು ವಿಸ್ತರಿಸಿದರು. ಈ ರಾಜಒಡೆಯರು (ಕ್ರಿ. ಶ. 1578–1610) ತಮ್ಮ ಪ್ರಜೆಗಳನ್ನು ಧರ್ಮದಿಂದಲೂ ಪ್ರೀತಿಯಿಂದಲೂ ಸಂರಕ್ಷಣೆ ಮಾಡಿದರು. ಇವರಾದಬಳಿಕ ಆಳಿದವರಲ್ಲಿ ಕಂಠೀರವ ನರಸ ರಾಜ ಒಡೆಯರು, ದೊಡ್ಡದೇವರಾಜ ಒಡೆಯರು, ಚಿಕ್ಕದೇವರಾಜ ಒಡೆಯರು ಇವರು ಬಹಳ ಪ್ರಸಿದ್ಧರಾಗಿ ರಾಜ್ಯವನ್ನು ವಿಸ್ತರಿಸಿದರು. ಕಂಠೀರವ ನರಸರಾಜ ಒಡೆಯರು ಬಹಳ ಬಲಿಷ್ಠರು. ಇವರು ಬಿಜಾಪುರದ ಮುಸಲ್ಮಾನರೊಂದಿಗೆ ಯುದ್ಧಮಾಡಿ ಜಯಶೀಲರಾಗಿ ಕಾವೇರೀನದಿಗೆ ದಕ್ಷಿಣದಲ್ಲಿರುವ ಸೀಮೆಯನ್ನೆಲ್ಲ ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡರು. ಇವರ ದತ್ತು ಮಗನಾದ ದೊಡ್ಡ ದೇವರಾಜರ ಕಾಲದಲ್ಲಿ ಮೈಸೂರು ರಾಜ್ಯವು ಪೂರ್ವದಕಡೆ ಸೇಲಂವರೆಗೂ, ದಕ್ಷಿಣದಕಡೆ ಧಾರಾಪುರದವರೆಗೂ ವಿಸ್ತರಿಸಿತು. ಇವರು ಅನೇಕ ಧರ್ಮಕಾರ್ಯಗಳನ್ನು ಮಾಡಿದರು. ಇವರ ಮಕ್ಕಳು ಚಿಕ್ಕದೇವರಾಜ ಒಡೆಯರ ಕಾಲದಲ್ಲಿ (ಕ್ರಿ. ಶ. 1672–1704) ಇವರ ಮಂತ್ರಿಯಾದ ತಿರುಮಲೈಯಂಗಾರ್ಯರ ಸಹಾಯದಿಂದ ಮೈಸೂರು ರಾಜ್ಯವು ತುಂಬ ಬಲಪಟ್ಟಿತು. ಇವರು ತಮ್ಮ ಬೊಕ್ಕಸದಲ್ಲಿ ಬೇಕಾದಷ್ಟು ಹಣವನ್ನು ಕೂಡಿಟ್ಟುದರಿಂದ ಇವರನ್ನು 'ನವಕೋಟಿ ನಾರಾಯಣ'' ಎಂದು ಜನರು ಕರೆಯುತ್ತಿದ್ದರು.

ಇವರು ಮೊಗಲ್ ಚಕ್ರವರ್ತಿ ಔರಂಗಜೇಬನೊಡನೆ ಸ್ನೇಹವನ್ನು ಬಳೆಯಿಸಿದ್ದರು. ಔರಂಗಜೇಬನು ಇವರಿಗೆ ''ರಾಜಾಜಗದೇಕ್'' ಎಂಬ ಬಿರುದನ್ನೂ, ನಗಾರಿ ನೌಪತ್ತುಗಳ ಮರ್ಯದೆಯನ್ನೂ ಕೊಟ್ಟುದಲ್ಲದೆ ಒಂದು ದಂತದ ಸಿಂಹಾಸನವನ್ನೂ ಕಳುಹಿಸಿಕೊಟ್ಟನು. ಹಿಂದೂಗಳ ತಲೆಯನ್ನು ಕಂಡರೆ ಆಗದಿದ್ದ ಔರಂಗ್‌ಜೇಬನ ಇಂಥ ಸನ್ಮಾನಕ್ಕೆ ಪಾತ್ರರಾದ ಇವರ ಜಾಣ್ಮೆಯನ್ನು ಎಷ್ಟು ವರ್ಣಿಸಿದರೂ ಸಾಲದು. ಇವರು ರಾಜಕಾರ್ಯದಲ್ಲಿ ಬಹಳ ವಿಚಕ್ಷಣತೆಯನ್ನು ತೋರಿಸಿ ಅನೇಕ ಕವಿಗಳಿಗೆ ಆಶ್ರಯರಾಗಿದ್ದರು. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ''ಅಠಾರಾ ಕಚೇರಿ'' ಗಳೆಂಬ ಸರ್ಕಾರದ 18 ಖಾತೆ (Department)ಗಳೂ ಅಂಚೆಯಬಾಬೂ ಏರ್ಪಟ್ಟುವು. ಇವರ ರಾಜ್ಯವು ಈಗಿನ ಮೈಸೂರು ರಾಜ್ಯದಷ್ಟು ದೊಡ್ಡದಾಗಿತ್ತು.

ಇವರಾದಮೇಲೆ ಪಟ್ಟಕ್ಕೆ ಬಂದ ಅರಸರು ಅಷ್ಟು ಸಮರ್ಥರಲ್ಲ ದುದರಿಂದ ಪ್ರಧಾನಿಗಳಾಗಿಯೂ, ಸೈನ್ಯಾಧಿಪತಿಗಳಾಗಿಯೂ ಇದ್ದ "ದಳ ವಾಯಿಗಳು" ಅಧಿಕಾರಕ್ಕೆ ಕೈಹಾಕಿದರು. ಹೀಗೆ ದಳವಾಯಿಗಳಾಗಿದ್ದ ವರಲ್ಲಿ ದೇವರಾಜಯ್ಯ ಮತ್ತು ಕರಾಚೂರಿ ನಂಜರಾಯ್ಯ ಎಂಬವರು ಕೇವಲ ಸಮರ್ಥರು.

ಈ ಕಾಲದಲ್ಲಿ ಆರ್ಕಾಟಿನ ಚಂದಾಸಾಹೇಬನು ಮಹಮ್ಮದಲ್ಲಿಯನ್ನು ತಿರುಚನಾಪಲ್ಲಿಯಲ್ಲಿ ಮುತ್ತಿಗೆಹಾಕಿದ್ದನು. ನಂಜರಾಜಯ್ಯನು ಮಹಮ್ಮ ದಲ್ಲಿಯ ಕೋರಿಕೆಯಂತೆ ಸೈನ್ಯಸಮೇತನಾಗಿ ಹೋಗಿ ಮಹಮ್ಮದಲ್ಲಿಗೆ ಸಹಾಯಮಾಡಿದ್ದನು. ಆದರೆ ಜಯವಾದಮೇಲೆ ಮಹಮ್ಮದಲ್ಲಿಯು ತನ್ನ ವಾಗ್ದಾನದಂತೆ ತಿರುಚನಾಪಲ್ಲಿಯನ್ನು ನಂಜರಾಯ್ಯನಿಗೆ ಕೊಡಲಿಲ್ಲ. ಮುಂದೆ ಪ್ರಸಿದ್ಧಿಗೆ ಬಂದ ಹೈದರನು ಬಹಳ ಪರಾಕ್ರಮವನ್ನು ತೋರಿ ಸಿದದು ಈ ಮುತ್ತಿಗೆಯಲ್ಲಿಯೇ. ಇದಕ್ಕಾಗಿಯೂ ಇವನು ಇನ್ನೂ ಅನೇಕ ವೇಳೆ ತೋರಿಸಿದ ಸಾಮರ್ಥ್ಯಕ್ಕಾಗಿಯೂ ನಂಜರಾಯ್ಯನು ಮೆಚ್ಚಿ ಹೈದರ ನಿಗೆ ಜಹಗೀರುಗಳನ್ನೂ ಬಿರುದುಗಳನ್ನೂ ಕೊಟ್ಟನು.

ಹೈದರ್ ಅಲಿ

ಕೊನೆಗೆ 1761ರಲ್ಲಿ ಮೈಸೂರುರಾಜ್ಯದ ಅಡಳಿತವೆಲ್ಲವೂ ಹೈದರನ ವಶವಾಯಿತು. ಆದರೂ ಈತನು ದೊರೆತನವನ್ನು ಮಾತ್ರ ವಹಿಸಲಿಲ್ಲ. ಸಿಂಹಾಸನವು ಎಂದಿನಂತೆ ಮೈಸೂರಿನ ಒಡೆಯರಿಗೆ ಸೇರಿತ್ತು. ಆದರೆ ರಾಜಕಾರ್ಯಗಳೆಲ್ಲವನ್ನೂ ಹೈದರನೇ ನೋಡಿಕೊಳ್ಳುತ್ತಿದ್ದನು. ಇವನು ಇಂಗ್ಲಿಷರೊಡನೆ ಯುದ್ಧಮಾಡಿ ಸೀರ್ಯ, ಬಿದನೂರು, ಕಲ್ಲೀಕೋಟೆ ಈ ಪ್ರಾಂತ್ಯಗಳನ್ನು ಗೆದ್ದನು. ಮರಾಟೆಯವರೊಡನೆ ಮಾಡಿದ ಯದ್ಧದಲ್ಲಿ ಜಯಶೀಲನಾದುದರಿಂದ ಮೈಸೂರು ರಾಜ್ಯವು ಕೃಷ್ಣಾನದಿಯವರೆಗೂ ವಿಸ್ತರಿ ಸಿತು. ಹೈದರನು ಇಂಗ್ಲಿಷರೊಡನೆ ಪುನಃ ಎರಡನೆಯ ಮೈಸೂರು ಯುದ್ಧ ವನ್ನು ಮಾಡುವಾಗ ಬೆನ್ನುಫಣಿ ಎದ್ದು 1782ರಲ್ಲಿ ಸತ್ತುಹೋದನು.

ಹೈದರನು ಓದುಬರೆಹ ಬಾರದಿದ್ದರೂ ಬಹು ಸಮರ್ಥನಾಗಿದ್ದನು. ಇವನು ತನ್ನ ಹೆಸರಿನ ಮೊದಲನೆಯ ಅಕ್ಷರವನ್ನು ತಲೆಕೆಳಗಾಗಿ ಬರೆದು ರುಜುಮಾಡುತ್ತಿದ್ದನಂತೆ. ಆದರೂ ಐದು ಭಾಷೆಗಳಲ್ಲಿ ಚೆನ್ನಾಗಿ ಮಾತ

ನಾಡುತ್ತಿದ್ದನು. ಇವನಲ್ಲಿ ಅದ್ಭುತವಾದ ಜ್ಞಾಪಕಶಕ್ತಿಯೂ, ಕಾರ್ಯವಿಚಕ್ಷಣತೆಯೂ ಇದ್ದುವು. ಈತನು ವಿರಾಮವೇ ಇಲ್ಲದೆ ಆಯಾದಿನದ ಸರ್ಕಾರಿಯ ಕೆಲಸವನ್ನು ಅಯಾದಿನವೇ ಮಾಡಿ ಮುಗಿಸುತ್ತಿದ್ದನು. ಹೈದರನಿಗೆ ಮತವೈರವಿರಲಿಲ್ಲ. ಆದರೆ ಹಣದಮೇಲೆ ಆಸೆಯು ಹೆಚ್ಚಾಗಿದ್ದಿತು.

ಟಿಪ್ಪೂಸುಲ್ತಾನ್

ಹೈದರನು ಸತ್ತಮೇಲೆ ಅವನ ಮಗ ಟೀಪುವು ಅಧಿಕಾರಕ್ಕೆ ಬಂದನು. ಇವನು ಪಟ್ಟಕ್ಕೆ ಬಂದಕೂಡಲೆ 2ನೆಯ ಮೈಸೂರು ಯುದ್ಧವನ್ನು ಪೂರೈಸಿದನು. ಈ ಯುದ್ಧದಲ್ಲಿ ಇವನಿಗೆ ಜಯವಾಯಿತೆನ್ನಬಹುದು. ಮತ್ತೆ 3ನೆಯ ಯದ್ಧಮಾಡಿ ಅರ್ಧರಾಜ್ಯವನ್ನು ಕಳೆದುಕೊಂಡನು. ಹೆಸರಿಗಿದ್ದ ಮೈಸೂರು ದೊರೆಗಳ ಅಧಿಕಾರವನ್ನು ತಪ್ಪಿಸಿ ತಾನೇ "ಬಾದಷಹ" ಎಂಬ ಬಿರುದನ್ನು ವಹಿಸಿದನು. ಇವನು ಇಂಗ್ಲಿಷರನ್ನು ಇಂಡಿಯಾದಿಂದಲೇ ಓಡಿಸಬೇಕೆಂಬ ಪ್ರಯತ್ನದಿಂದ ಫ್ರೆಂಚರೊಂದಿಗೆ ಸದಾಕಾಲದಲ್ಲಿಯೂ ಒಳಸಂಚನ್ನು ನಡೆಯಿಸುತ್ತಿದ್ದನು.

ಗೌರ್ನರ್ ಜನರಲ್ ಆದ ಲಾರ್ಡ್ ವೆಲ್ಲೆಸ್ಲಿಯು ಇಂಥ ಪ್ರಬಲ ವೈರಿಯ ಹೆಸರೇ ಇಲ್ಲದಂತೆ ಮಾಡಬೇಕೆಂದು ತೀರ್ಮಾನಿಸಿ, ಮರಾಟೆಯವರನ್ನೂ ಹೈದರಾಬಾದಿನ ನೈಜಾಮನನ್ನೂ, ತನ್ನಕಡೆಗೆ ಸೇರಿಸಿಕೊಂಡು ಒಂದು ದೊಡ್ಡ ಸೈನ್ಯವನ್ನು ಕಟ್ಟಿ ಶ್ರೀರಂಗಪಟ್ಟಣಕ್ಕೆ ಮುತ್ತಿಗೆಹಾಕಿದನು. ಟೀಪುವು ಯುದ್ಧದಲ್ಲಿ ಸತ್ತನು.

ಟೀಪುವು ಧೈರ್ಯಶಾಲಿ. ಆದರೆ ಅವನಲ್ಲಿ ಅಹಂಕಾರವೂ, ಅನ್ಯಮತವೈರವೂ ಹೆಚ್ಚಾಗಿದ್ದುವು. ಇಂಗ್ಲಿಷರು, ನಿಜಾಮನು, ಮರಾಟೆಯವರು ಅವನ ರಾಜ್ಯದ ಹೆಚ್ಚುಭಾಗವನ್ನು ಹಂಚಿಕೊಂಡರು.

ಉಳಿದುದನ್ನು ರಾಜ್ಯದಿಂದ ಓಡಿಸಲ್ಪಟ್ಟು ಹಳ್ಳಿಯಲ್ಲಿ ಸೇರಿಕೊಂಡಿದ್ದ ಹಿಂದಿನ ರಾಜಸಂತತಿಯ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ 1799ರಲ್ಲಿ ಕೊಟ್ಟರು; ಇವರು ಚಿಕ್ಕವಯಸ್ಸಿನವರಾದುದರಿಂದ ಪೂರ್ಣಯ್ಯನವರನ್ನು ರೀಜಂಟರಾಗಿ ನೇಮಿಸಿದ್ದರು. ಇಂಗ್ಲಿಷರ ಪರವಾಗಿ ಒಬ್ಬ ಬ್ರಿಟಿಷ್ ರೆಸಿಡೆಂಟರನ್ನೂ ನೇಮಕಮಾಡಿದರು. ಇಲ್ಲಿಂದ ಮುಂದಕ್ಕೆ ಮೈಸೂರು ಸಂಸ್ಥಾನವು ಬ್ರಿಟಿಷರ ಅಧಿಕಾರಕ್ಕೆ ಒಳಪಟ್ಟು ಒಂದು ಆಶ್ರಿತ ಸಂಸ್ಥಾನವಾಯಿತು. ಪುನಃ ಮೈಸೂರೇ ರಾಜಧಾನಿಯಾಯಿತು.

ಮುಮ್ಮಡಿ ಕೃಷ್ಣರಾಜ ಒಡೆಯರು

1812ರಲ್ಲಿ ಕೃಷ್ಣರಾಜ ಒಡೆಯರು ಪ್ರಾಪ್ತವಯಸ್ಕರಾಗಲು, ಅವರೇ ರಾಜ್ಯದ ಆಡಳಿತವನ್ನು ವಹಿಸಿ 1831ರವರೆಗೂ ಸರಿಯಾಗಿ ಆಳಿಕೊಂಡು ಬಂದರು. ಆದರೆ ಸ್ವಾರ್ಥಪರರಾದ ಕೆಲವು ಅಧಿಕಾರಿಗಳ ದೆಸೆಯಿಂದ ರಾಜ್ಯಭಾರಕ್ರಮದಲ್ಲಿ ಕೆಲವು ಅಕ್ರಮಗಳು ಕಂಡುಬಂದುದರಿಂದ, ಕೆಲವು ಕಾಲದವರೆಗೆ ರಾಜ್ಯವನ್ನು ದೊರೆಯ ಕೈತಪ್ಪಿಸಿ ತಮ್ಮ ಅಡಳಿತದಲ್ಲಿಟ್ಟು ಕೊಳ್ಳುವುದು ಒಳ್ಳೆಯದೆಂದು ತಿಳಿದು ಇಂಗ್ಲಿಷರು ಇಲ್ಲಿ "ಕಮಿಷರ್" ರಾಜ್ಯಭಾರವನ್ನು ಉಪಕ್ರಮಿಸಿದರು. ಕೃಷ್ಣರಾಜ ಒಡೆಯರು 1868ರಲ್ಲಿ ಕಾಲವಾದರು. 1881ರವರೆಗೂ ಕಮಿಷನರುಗಳೆಂಬ ಬ್ರಿಟಿಷ್ ಅಧಿಕಾರಿಗಳೇ ರಾಜ್ಯದ ಆಡಳಿತವನ್ನು ನಡೆಯಿಸುತ್ತಿದ್ದರು. ಆ ವರುಷ ಇಂಗ್ಲಿಷರು ಕೃಷ್ಣರಾಜ ಒಡೆಯರ ಸ್ವೀಕೃತಪುತ್ರರಾದ ಶ್ರೀ ಚಾಮರಾಜ ಒಡೆಯರವರಿಗೆ ಪುನಃ ರಾಜ್ಯವನ್ನು ಕೊಟ್ಟರು.

ಗುಣಶಾಲಿಗಳಾದ ಚಾಮರಾಜ ಒಡೆಯರವರು ಪ್ರಜೆಗಳ ಹಿತಚಿಂತನೆಯು ಸರ್ಕಾರದ ಕರ್ತವ್ಯವೆಂಬುದನ್ನು ಮನಸ್ಸಿನಲ್ಲಿಟ್ಟು ರಾಜ್ಯವಾಳಿ ವಿಶೇಷವಾದ ಕೀರ್ತಿಯನ್ನು ಪಡೆದು 1894ರಲ್ಲಿ ತಮ್ಮ 32ನೆಯ ವಯಸ್ಸಿನಲ್ಲ ಕಲ್ಕತ್ತೆಯಲ್ಲಿ ಸ್ವರ್ಗಸ್ಥರಾದರು. ಅನಂತರ ಅವರ ಹಿರಿಯ ಕುಮಾರರಾದ ಶ್ರೀ ಕೃಷ್ಣರಾಜ ಒಡೆಯರವರಿಗೆ 1895ನೆಯ ಫೆಬ್ರವರಿ ತಿಂಗಳಲ್ಲಿ ಪಟ್ಟಾಭಿಷೇಕವಾಯಿತು. ಆಗ ಇವರು ಇನ್ನೂ ಚಿಕ್ಕವರಾಗಿದ್ದುದರಿಂದ ಇವರ ತಾಯಿಯವರಾದ ಮಹಾಮಾತೃಶ್ರೀ ವಾಣೀವಿಲಾಸದ ಸನ್ನಿಧಾನದವರು ಪ್ರತಿನಿಧಿ ಪಾಲಕರಾಗಿ (ರೀಜಂಟ್) ರಾಜ್ಯಭಾರ ಕಾರ್ಯವನ್ನು ಬಹು ವಿತರಣೆಯಿಂದ ನಿರ್ವಹಿಸಿದರು.

ಈಗಿನ ನಮ್ಮ ಶ್ರೀಮನ್ಮಹಾರಾಜರವರು

1902ರಲ್ಲಿ ನಮ್ಮ ಮಹಾರಾಜರವರು ಪ್ರಾಪ್ತವಯಸ್ಕರಾಗಲು ಲಾರ್ಡ್ ಕರ್ಜನ್ ವೈಸರಾಯಿಯವರು ಮೈಸೂರಿಗೆ ಬಂದು ಪಟ್ಟಾಭಿಷೇಕ ಮಹೋತ್ಸವವನ್ನು ತುಂಬ ವೈಭವದಿಂದ ನೆರವೇರಿಸಿದರು. ಅಂದಿನಿಂದ ನಮ್ಮನ್ನಾಳುತ್ತಿರುವ ಮಹಾಸ್ವಾಮಿಯವರು ಪ್ರಜಾಹಿತಕ್ಕಾಗಿ ಮಾಡುತ್ತಿರುವ ಕಾರ್ಯಗಳು ಚಿರಸ್ಮರಣೀಯವಾಗಿವೆ. ಇವರು

ವಿನಯಶಾಲಿಗಳು, ಧರ್ಮಪರರು, ಕರುಣಾದ್ರ್ರಹೃದಯರು. ಈ ಮಹನೀಯರ ರಾಜ್ಯಭಾರದಲ್ಲಿ ದೇಶವು ಅನೇಕವಿಧದ ಸುಧಾರಣಾಕ್ರಮಗಳನ್ನೊಳಗೊಂಡು ವಿಶೇಷವಾಗಿ ಪುರೋಭಿವೃದ್ಧಿಯನ್ನು ಹೊಂದುತ್ತಿದೆ.

———

೩. ಬ್ರಿಟಿಷರ ಸಾಮ್ರಾಜ್ಯ

ಅಧ್ಯಾಯ ೧.—ಯೂರೋಪಿಯನರ ಆಗಮನ

ಕಂಪೆನಿಯ ಆದಿಭಾಗದ ಚರಿತ್ರೆ, ಕ್ರಿ. ಶ. 1498–1773

(೧) ಪೂರ್ವದ ವ್ಯಾಪಾರ

ನಮ್ಮ ಹಿಂದೂಸ್ಥಾನದ ಸಂಪತ್ತಿನ ವಿಷಯವನ್ನು ಕೇಳಿ ಈ ದೇಶದೊಡನೆ ವ್ಯಾಪಾರಮಾಡುವುದಕ್ಕೆ ಯೂರೋಪಿಯನ್ ಜನಾಂಗದವರಲ್ಲಿ ಕೆಲವರು ಆಗಾಗ ಬರುತ್ತಲೇ ಇದ್ದರು. ಮೊಟ್ಟಮೊದಲು ಬಂದವರು ಇಟಲೀ ದೇಶದ ರೋಮನರು ; ಇವರಾದ ಮೇಲೆ ಅಲೆಗ್ಸಾಂಡರನ ಕಾಲದ ಗ್ರೀಕರು. ಆದರೆ ಇವರು ನಮ್ಮ ದೇಶದಲ್ಲಿ ಬಹಳ ಕಾಲವಿರಲಿಲ್ಲ.

ನಮ್ಮ ದೇಶದ ರೇಷ್ಮೆಯ ಬಟ್ಟೆಗಳು, ತೆಳುವಾದ ನಾರಿನ ಬಟ್ಟೆಗಳು ಮಸ್ಲಿನ್) ನೀಲಿ, ಶುಂಠಿ, ಸಂಬಾರದ ಪದಾರ್ಥಗಳು ಇವುಗಳಿಗಾಗಿ ಎಲ್ಲಾ ದೇಶದವರೂ ಆಸೆಪಡುತ್ತಿದ್ದರು. ಆದುದರಿಂದ ಅರಬ್ ದೇಶದ ವರ್ತಕರು ಈ ಸರಕುಗಳನ್ನು ತೆಗೆದುಕೊಂಡು ಭೂಮಾರ್ಗದಲ್ಲಿ ಅಫ್ಘಾನಿಸ್ಥಾನ್, ಪರ್ಷಿಯಾ ದೇಶಗಳ ಮುಂಬಾಂತರವಾಗಿ, ಅಥವಾ ಜಲಮಾರ್ಗದಲ್ಲಿ ಕೆಂಪುಕಡಲಿನ ಮೂಲಕವಾಗಿ ಈಜಿಪ್ಟಿನ ತೀರಪಟ್ಟಣವಾದ ಅಲೆಗ್ಸಾಂಡ್ರಿಯಕ್ಕೆ ಸಾಗಿಸಿಕೊಂಡು ಮೆಡಿಟೆರೇನಿಯನ್ ಸಮುದ್ರವನ್ನು ದಾಟಿ ವೆನಿಸ್, ಜಿನೋವ ಮುಂತಾದ ಪಟ್ಟಣಗಳಿಗೆ ಹೋಗಿ ವ್ಯಾಪಾರ ಮಾಡುತ್ತಿದ್ದರು.

ಈ ಕಾರಣದಿಂದ ಅಲೆಗ್ಸಾಂಡ್ರಿಯ ಪಟ್ಟಣವು ವ್ಯಾಪಾರದ ಅತಿ ಮುಖ್ಯಸ್ಥಾನವಾಗಿತ್ತು. ಈಜಿಪ್ಟಿನ ಸುಲ್ತಾನನು ಈ ಮಾರ್ಗವಾಗಿ ಬರುವ ಸಮಾನುಗಳ ಮೇಲೆ "ಸುಂಕ" ಹಾಕಿದ್ದುದರಿಂದ ಈಜಿಪ್ಟ ಸರ್ಕಾರಕ್ಕೂ ಒಳ್ಳೆಯ ಲಾಭವಿದ್ದಿತು. ಈ ರೀತಿಯಾಗಿ ಹಿಂದೂಸ್ಥಾನದ

ವ್ಯಾಪಾರವು ಅರಬ್ಬೀ ಮೃಹಮದೀಯರ ಕೈಯಲ್ಲಿತ್ತು. ಇಟಲೀ ದೇಶದ ವರ್ತಕರು ಈ ಸರಕುಗಳನ್ನು ಇತರ ಯೂರೋಪಿಯನ್ ಜನರಿಗೆ ವಿಕ್ರಯಿಸಿ ಅವರಿಂದ ಲಾಭವನ್ನು ಪಡೆಯುತ್ತಿದ್ದರು. ಹೀಗೆ ಅರಬ್ಬರು, ಇಟಲಿಯವರು, ಇವರಿಬ್ಬರಿಗೂ ಲಾಭ ಬರಬೇಕಾದರೆ, ಯೂರೋಪಿಯನ್ನರು ಕೊಡಬೇಕಾಗಿದ್ದ ಬೆಲೆಯು ತುಂಬ ಹೆಚ್ಚಾಗಿಯೇ ಇರಬೇಕಾಗಿದ್ದಿತು. ಈ ರೀತಿಯಾಗಿ ದಳ್ಳಾಳಿಯ ಲಾಭ ಕೊಡುವುದಕ್ಕಿಂತಲೂ ತಾವೇ ನೇರವಾಗಿ ಇಂಡಿಯಾ ದೇಶದೊಡನೆ ವ್ಯಾಪಾರ ಮಾಡಬೆಕೆಂಬ ಆಸೆಯು ಯೂರೋಪಿಯನ್ ವರ್ತಕರಿಗೆ ಉಂಟಾಯಿತು. ಆದರೆ ತಮ್ಮ ದೇಶದ ಮಾರ್ಗವಾಗಿ ಯೂರೋಪಿಯನ್ ಜನಾಂಗದವರಾದರೂ ವ್ಯಾಪಾರ ಮಾಡಕೂಡದೆಂದು ಅರಬ್ಬಿಯವರು ಅಡ್ಡಿಮಾಡಿದುದರಿಂದ ಈ ದೇಶಕ್ಕೆ ಸರಾಗವಾಗಿ ಬರಬಹುದಾದ ಬೇರೊಂದು ದಾರಿಯನ್ನು ಯೂರೋಪಿನವರು ಕಂಡುಹಿಡಿಯಬೇಕಾಯಿತು.

ಹಿಂದೂದೇಶಕ್ಕೆ ಬರಬೇಕಾದರೆ ವಾಯವ್ಯ, ಈಶಾನ್ಯದ ಕಣಿವೆಯ ಮಾರ್ಗಗಳನ್ನು ಬಿಟ್ಟರೆ, ದಕ್ಷಿಣದ ಕಡೆಯಿಂದ ಸಮುದ್ರಮಾರ್ಗವಾಗಿ ಬರಬೇಕು. ಭೂಮಿಯ ಮೇಲೆ ಮತ್ತಾವ ದಾರಿಯೂ ಇಲ್ಲ. ಆದುದರಿಂದ ಯೂರೋಪಿಯನ್ನರು ಸಮುದ್ರದ ಮೇಲೆ ಹಿಂದೂದೇಶಕ್ಕೆ ಒಂದು ದಾರಿಯನ್ನು ಕಂಡುಹಿಡಿಯಲು ಯತ್ನಿಸಿದರು. ಅದುವರೆಗೂ ಯೂರೋಪಿನಲ್ಲಿ ಎಲ್ಲೆಲ್ಲೂ ನಡೆಯುತ್ತಿದ್ದ ಘೋರವಾದ ಯುದ್ಧಗಳು ನಿಂತು ಹೋದುದು ವ್ಯಾಪಾರ ಮಾರ್ಗವನ್ನು ಕಂಡುಹಿಡಿಯುವ ಕಾರ್ಯಕ್ಕೆ ಸಹಕಾರಿಯಾಯಿತು.

(೨) ಪೋರ್ಚುಗೀಸರು

ಈ ಪ್ರಯತ್ನಕ್ಕೆ ಮೊದಲು ಕೈಹಾಕಿದವನು ಸ್ಪೈಯಿನ್ ದೇಶದ ನಾವಿಕನಾದ ಕೊಲಂಬಸ್ ಎಂಬುವನು. ಇವನು ತನ್ನ ರಾಜ್ಯದಿಂದ ಇಂಡಿಯಾವನ್ನು ಕಂಡುಹಿಡಿಯಬೇಕೆಂಬ ಉದ್ದೇಶದಿಂದ ಹೊರಟು ದಾರಿಯಲ್ಲಿ ಸಿಕ್ಕಿದ ಅಮೆರಿಕಾ ಖಂಡವನ್ನು ಕಂಡುಹಿಡಿದು ತನ್ನ ದೇಶಕ್ಕೆ ಹಿಂದಿರುಗಿದನು. ಆದರೆ ಇದಕ್ಕೆ ಮುಂಚೆಯೇ ಬಾರ್ತಾಲೋಮ್ಯುಡೈಯಸ್ ಎಂಬ ಪೋರ್ಚುಗೀಸರ ನಾವಿಕನು 1487ರಲ್ಲಿ ಆಫ್ರಿಕಾ ಖಂಡದ ದಕ್ಷಿಣದಲ್ಲಿರುವ ಗುಡ್ ಹೋಪ್ ಭೂಶಿರದವರೆಗೂ ಬಂದು ಹಿಂದಿರುಗಿದನು.

ವ್ಯಾಸ್ಕೋಡಿಗಾಮ

ಕಡೆಗೆ ವ್ಯಾಸ್ಕೋಡಿಗಾಮನೆಂಬ ಪೋರ್ಚುಗೀಸನು 1497ರಲ್ಲಿ ಹೊರಟು ಗುಡ್‌ಹೋಪ್ ಭೂಶಿರದ ಮಾರ್ಗವಾಗಿ ಪ್ರಯಾಣಮಾಡಿ ಮಾರನೆಯ ವರ್ಷ ಮಳೆಯಾಳದಲ್ಲಿರುವ ಕಲ್ಲೀಕೋಟೆಯನ್ನು ಸೇರಿದನು. ಯೂರೋಪಿನ ಹಡಗು ಅಲ್ಲಿಂದ ಹೊರಟು ನೇರವಾಗಿ ಇಂಡಿಯಾ ದೇಶವನ್ನು ಮುಟ್ಟಿದುದಕ್ಕೆ ಇದೇ ಮೊದಲು. ಈ ಮಾರ್ಗವನ್ನು ಕಂಡುಹಿಡಿದುದರಿಂದ ಮರಳು ಕಾಡುಗಳ ಮಾರ್ಗವಾಗಿ ಅಲ್ಪ ಸ್ವಲ್ಪ ಸರಕುಗಳನ್ನು ಸಾಗಿಸುವುದಕ್ಕೆ ಬದಲಾಗಿ, ಸ್ವಲ್ಪ ವೆಚ್ಚದಿಂದ ವಿಶೇಷ ಸಾಮಾನುಗಳನ್ನು ಹಡುಗುಗಳಲ್ಲಿ ಸಾಗಿಸುವುದಕ್ಕೆ ಸಹಾಯವಾಯಿತು. ಇದುವರೆಗೂ ಹಿಂದೂ ದೇಶಕ್ಕೆ ಬಂದವರು ಭೂಮಿಯ ಮಾರ್ಗವಾಗಿ ಉತ್ತರ ದಿಕ್ಕಿನಿಂದ ಬರುತ್ತಿದ್ದರು. ಇಲ್ಲಿಂದ ಮುಂದೆ ದಂಡಯಾತ್ರೆ ಬಂದವರೆಲ್ಲರೂ ಸಮುದ್ರ ಮಾರ್ಗವಾಗಿ ದಕ್ಷಿಣ ಹಿಂದೂಸ್ಥಾನಕ್ಕೆ ಬಂದು ಅಲ್ಲಿಂದ ಉತ್ತರ ಹಿಂದೂಸ್ಥಾನದ ಕಡೆಗೆ ಹೊರಟರು.

ವ್ಯಾಸ್ಕೋಡಿಗಾಮನು ವ್ಯಾಪಾರಕ್ಕಾಗಿ ಬಂದನೆಂಬ ಹೊಟ್ಟೆಯ ಕಿಚ್ಚಿನಿಂದ ಕಲ್ಲೀಕೋಟೆಯಲ್ಲಿದ್ದ ಅರಬ್ಬಿಯವರು ತಮ್ಮ ದೊರೆಯಾದ ಜಾಮೊರಿನ್ ಎಂಬವನನ್ನು ಇವನ ಮೇಲೆ ತಿರುಗ ಹಾಕಿದರು. ಇದರಿಂದ ರಾಜನು ಪೋರ್ಚ್‌ಗೀಸರನ್ನು ಸೆರೆ ಹಿಡಿಯುವಂತೆ ತನ್ನ ಸೈನಿಕರಿಗೆ ಅಪ್ಪಣೆ ಮಾಡಿದನು. ವ್ಯಾಸ್ಕೋಡಿಗಾಮನು ಇವರಿಗೆ ಸಿಕ್ಕದೆ ಅಲ್ಲಿಯ ಕೆಲವು ದೇಶಿಯರನ್ನೇ ಸೆರೆಹಿಡಿದು ಹಡಗಿನಲ್ಲಿ ತನ್ನ ಸೀಮೆಗೆ ಸಾಗಿಸಿಕೊಂಡು ಹೋದನು (1499). ಐದುವರ್ಷಗಳ ನಂತರ ಇವನು ಪುನಃ ಹಿಂದೂಸ್ಥಾನಕ್ಕೆ ಬಂದು ಅನೇಕ ಕ್ರೂರಕೃತ್ಯಗಳನ್ನು ನಡೆಯಿಸಿ ತನಗೆ ಬಂದಿದ್ದ ಖ್ಯಾತಿಯನ್ನು ಕಳೆದುಕೊಂಡನು.

ಪುನಃ ಇವನು 1524ರಲ್ಲಿ ಪೋರ್ಚುಗೀಸರ ಕಡೆ ವೈಸ್‌ರಾಯಿಯಾಗಿ ಇಲ್ಲಿಗೆ ಬಂದು 1525ರಲ್ಲಿ ಕೊಚ್ಚಿಯಲ್ಲಿ ಕಾಲವಾದನು.

ಕೆಬ್ರಾಲ್

ಇವನು 1500 ರಲ್ಲಿ ಕಲ್ಲೀಕೋಟೆಯನ್ನು ತಲಪಿದನು. ಇವನನ್ನು ಜಾಮೊರಿನ್ನನು ಮರ್ಯಾದೆಯಿಂದ ಕಂಡು ತನ್ನ ಬಳಿಗೆ ಬರಮಾಡಿಕೊಂ

ಡನು. ಅರಬ್ಬಿಯವರ ಕ್ಷುದ್ರದಿಂದ ಮತ್ತೆ ಮನಸ್ತಾಪವುಂಟಾಯಿತು. ಆಗ ಕೆಬ್ರಾಲನು ಅರಬ್ಬೀ ವರ್ತಕರ, ಬೆಲೆಯುಳ್ಳ ಸಾಮಾನುಗಳಿಂದ ತುಂಬಿದ ಹಡಗೊಂದನ್ನು ಕೊಳ್ಳೆಹೊಡೆದನು. ಜ಼ಾಮೊರ್ರಿ ದೊರೆಯು ಸಿಟ್ಟುಗೊಂಡು ಪೋರ್ಚುಗೀಸರ ಪಾಳೆಯವನ್ನು ಲೂಟಿ ಮಾಡಿಸಲು ಕೆಬ್ರಾಲನು ಅರಬ್ಬಿಯವರ ಇನ್ನೂ ಕೆಲವು ಹಡಗುಗಳನ್ನು ಕೊಳ್ಳೆಹೊಡೆದು ಕಲ್ಲಿಕೋಟೆಗೆ ಬೆಂಕಿಹಾಕಿ ಹಡಗಿನಲ್ಲಿ ಕೊಚ್ಚಿಗೆ ಹೊರಟು ಹೋದನು.

ಜ಼ಾಮೊರಿನ್ನನ ಪೂರ್ವ ದ್ವೇಷಿಯಾದ ಕೊಚ್ಚಿಯ ರಾಜನು ಇವನಿಗೆ ಆಶ್ರಯ ಕೊಟ್ಟು ತನ್ನ ಪಟ್ಟಣದಲ್ಲಿ ಕೋಠಿಯನ್ನು ಕಟ್ಟಿಕೊಳ್ಳುವುದಕ್ಕೂ ವ್ಯಾಪಾರ ಮಾಡುವುದಕ್ಕೂ ಅನುಮತಿಯಿತ್ತನು. ಕೆಬ್ರಾಲನು 1501ರಲ್ಲಿ ತನ್ನ ದೇಶಕ್ಕೆ ಹಿಂದಿರುಗಿದನು.

ಆಲ್‌ಬುಕರ್ಕ್

ಇವನ ತರುವಾಯ 1509ರಲ್ಲಿ ವೈಸ್‌ರಾಯಿಯಾಗಿ ಬಂದ ಇವನೇ ಪೂರ್ವದಿಕ್ಕಿನ ರಾಜ್ಯಗಳಲ್ಲಿ ಪೋರ್ಚುಗೀಸರ ಅಧಿಕಾರವನ್ನು ಸ್ಥಿರಪಡಿಸಿದವನು. ಇವನು ಹಡಗು ನಿಲ್ಲುವುದಕ್ಕೆ ಅನುಕೂಲವಾದ ಒಂದು ಬಂದರನ್ನು ಸಂಪಾದಿಸಬೇಕೆಂದು ಆಲೋಚಿಸಿ ಕಲ್ಲೀಕೋಟೆಯನ್ನು ಮುತ್ತಿ ಸಂಪೂರ್ಣವಾಗಿ ಸೋತು ಹೋದನು. ತರುವಾಯ ಒಬ್ಬ ಮಹಮ್ಮದೀಯ ಸರದಾರನಿಗೆ ಸೇರಿದ ಗೋವಾ ಪಟ್ಟಣವನ್ನು ಮುತ್ತಿ ವಶಪಡಿಸಿಕೊಂಡನು (1510). ಇದೇ ಪೋರ್ಚುಗೀಸರ ಅತ್ಯಂತ ಏಳಿಗೆಯ ಕಾಲ. ಈ ಸ್ಥಳವು ವ್ಯಾಪಾರದ ಮುಖ್ಯ ಸ್ಥಾನವೂ ಅಲ್ಲದೆ ಪೋರ್ಚುಗೀಸ್ ಸ್ವಾಸ್ಥ್ಯಗಳ ಮುಖ್ಯಪಟ್ಟಣವೂ ಆಯಿತು.

ಅನಂತರ ಆಲ್ಬುಕರ್ಕನು ಅರ್ಮುಸ್, ಮಲಕ್ಕಾ ಇವುಗಳನ್ನು ಗೆದ್ದುಕೊಂಡನು. ಮಲಕ್ಕಾದ್ವೀಪವು ವಶವಾದುದರಿಂದ ಚೀನಾ, ಜಪಾನ್ ದೇಶಗಳೊಡನೆ ವ್ಯಾಪಾರಕ್ಕೆ ಅನುಕೂಲವಾದುದಲ್ಲದೆ ಸಂಬಾರದ ಪದಾರ್ಥಗಳ ವ್ಯಾಪಾರವು ಪೋರ್ಚುಗೀಸರ ಅಧೀನವಾಯಿತು.

ಇವನು ಕೆಂಪು ಸಮುದ್ರದ ಮಾರ್ಗವಾಗಿ ನಡೆಯುತ್ತಿದ್ದ ಅಲ್ಪ ವ್ಯಾಪಾರವನ್ನು ತಪ್ಪಿಸಬೇಕೆಂದು ಉದ್ದೇಶವಿಟ್ಟು ಏಡನ್ ಪಟ್ಟಣವನ್ನು ಹಿಡಿದುಕೊಳ್ಳುವುದಕ್ಕೆ ಯತ್ನಿಸಿ ಅದು ಸಾಗದೆ ಹಿಂದಿರುಗಿದನು. ಇವನು

ಅನುಕೂಲವಾದ ಕೆಲವು ಸ್ಥಳಗಳನ್ನು ಸಂಪಾದಿಸಿ, ಅವುಗಳನ್ನೆಲ್ಲ ಸೇರಿಸಿ ಒಂದು ಕಾಲೊನಿಯನ್ನು ಏರ್ಪಡಿಸಿ ಕ್ರಮೇಣ ಹಿಂದೂಸ್ಥಾನದಲ್ಲಿ ಪೋರ್ಚುಗೀಸ್ ಚಕ್ರಾಧಿಪತ್ಯವನ್ನು ಕಟ್ಟಬೇಕೆಂಬ ಅಭಿಲಾಷೆಯುಳ್ಳವನಾಗಿದ್ದನು. ಇವನು ಮಾಡಿದ ಪ್ರಯತ್ನದಿಂದ ಕೆಲವು ಸಣ್ಣಸಣ್ಣ ಹಿಂದೂ ರಾಜರು ಪೋರ್ಚುಗಲ್ ರಾಜನಿಗೆ ಅಧೀನರಾಗಿ ಕಪ್ಪವನ್ನೂ ಕೊಡುತ್ತಿದ್ದರು.

ಇಷ್ಟಾದರೂ ಪೋರ್ಚುಗಲ್ ಸರ್ಕಾರದವರು ಸಮರ್ಥನಾದ ಇವನ ಯೋಗ್ಯತೆಯನ್ನು ತಿಳಿಯದೆ ಇವನನ್ನು 1515ರಲ್ಲಿ ಕೆಲಸದಿಂದ ತೆಗೆದರು. ಇವನು ಹೋದ ಮೇಲೆ ಸೂರತಿ, ಬೊಂಬಾಯಿ, ಡಯೂ, ಡಾಮನ್, ಬೇಸಿನ್, ಮಂಗಳೂರು, ಹುಗ್ಲಿ ಮೊದಲಾದ ಸ್ಥಳಗಳಲ್ಲಿ ಪೋರ್ಚುಗೀಸರು ತಮ್ಮ ಸ್ವಾಸ್ಥ್ಯಗಳನ್ನಿಟ್ಟು ತಮ್ಮ ವ್ಯಾಪಾರವನ್ನು ವಿಶೇಷವಾಗಿ ಅಭಿವೃದ್ಧಿಗೆ ತಂದರು. ಇದಾದ ಮೇಲೆ ಬಂದ ಅಧಿಕಾರಿಗಳು ರಾಜ್ಯವನ್ನು ಸರಿಯಾಗಿ ಆಳದಿದ್ದುದರಿಂದಲೂ, ಕ್ರೈಸ್ತ ಮತದಲ್ಲಿಯೇ ವಿಶೇಷ ಅನುರಾಗವಿಟ್ಟ ಪರಮತದ್ವೇಷಿಗಳಾದ ಪೋರ್ಚುಗೀಸರು ಹಿಂದೂಗಳನ್ನು ಹಿಂಸೆಮಾಡಿದುದರಿಂದಲೂ, ಇವರ ಅಧಿಕಾರಿಗಳು ಇಲ್ಲಿಯ ಅರಸರೊಡನೆ ಜಗಳವಾಡುತ್ತ ಬಂದುದರಿಂದಲೂ, ಪೋರ್ಚುಗೀಸರ ವ್ಯಾಪಾರವು ಕಡಿಮೆಯಾಯಿತು.

ಈ ವೇಳೆಗೆ ಇತರ ಯೂರೋಪಿಯನ್ ಜನಾಂಗದವರೂ ಇಂಡಿಯಾ ದೇಶದ ವ್ಯಾಪಾರಕ್ಕೆ ಕೈಹಾಕಿದುದರಿಂದ, ಪೋರ್ಚುಗೀಸರ ಪ್ರಾಶಸ್ತ್ಯವು ಕಡಿಮೆಯಾಯಿತು. ಇದೂ ಅಲ್ಲದೆ, ಸಣ್ಣದಾದ ಪೋರ್ಚುಗಲ್ ರಾಜ್ಯವು ಬಲವಾದ ಸ್ಪೇನ್ ದೇಶದೊಡನೆ ಸೇರಿಹೋಯಿತು. ಸ್ಪೇನಿನವರಿಗೆ ಇಂಡಿಯಾ ದೇಶದ ವ್ಯಾಪಾರದ ಮೇಲೆ ಸ್ವಲ್ಪವೂ ಅಕ್ಕರೆ ಇರಲಿಲ್ಲ. ಅದುದರಿಂದ ಪೋರ್ಚುಗೀಸರು ಇಂಡಿಯಾದಲ್ಲಿ ರಾಜ್ಯ ಕಟ್ಟುವ ಪ್ರಯತ್ನವನ್ನು ಬಿಡಬೇಕಾಗಿಬಂದಿತು. ಕ್ರಮೇಣ ಪೋರ್ಚುಗೀಸರ ರಾಜ್ಯಗಳು ಕೈಬಿಟ್ಟು ಹೋಗಿ ಗೋವ, ಡಯೂ, ಡಾಮನ್ ಈ ಮೂರು ಸ್ಥಳಗಳು ಮಾತ್ರ ಈಗಲೂ ಪೋರ್ಚುಗೀಸರ ಅಧೀನದಲ್ಲಿವೆ.

(೩) ಇಂಗ್ಲಿಷರು

ಇಂಗ್ಲಿಷರು—ಕ್ರಿ. ಶ. 833ನೆಯ ಇಸವಿಯಿಂದಲೂ ಇಂಗ್ಲಿಷ್ ವರ್ತಕರು ಭೂಮಾರ್ಗವಾಗಿ ಆಗಾಗ್ಗೆ ಇಂಡಿಯಾ ದೇಶಕ್ಕೆ ಬರುತ್ತಲೇ ಇದ್ದರು. ಇಲ್ಲಿಯ ಸಂಪತ್ತನ್ನು ತಮ್ಮ ವರ್ತಕರ ಬಾಯಿಂದ ಕೇಳಿದು ದರಿಂದಲೂ, ಸಮುದ್ರ ಮಾರ್ಗನನ್ನು ಕಂಡುಹಿಡಿದ ಮೇಲೆ ಪೋರ್ಚು ಗೀಸರು ಈ ದೇಶದೊಡನೆ ವ್ಯಾಪಾರ ಮಾಡಿ ವಿಶೇಷ ಲಾಭಪಡೆದ ಸಂಗತಿ ಯನ್ನು ನೋಡಿದುದರಿಂದಲೂ, ವ್ಯಾಪಾರದಲ್ಲಿ ವಿಶೇಷಾಸಕ್ತರಾದ ಇಂಗ್ಲಿಷ್ ಜನಾಂಗದವರಲ್ಲಿ ಕೆಲವರು ತಾವೂ ಈ ದೇಶದೊಡನೆ ವ್ಯಾಪಾರ ಮಾಡಲು ಕೈಹಾಕಿದರು.

ಇಷ್ಟು ದೂರದೇಶದೊಡನೆ ವ್ಯಾಪಾರಮಾಡಬೇಕಾದರೆ ಒಬ್ಬೊಬ್ಬ ವರ್ತಕನೇ ಸಾಕಾದಷ್ಟು ಹಣವನ್ನು ಒದಗಿಸಿಕೊಳ್ಳುವುದು ಸಾಧ್ಯವಲ್ಲ ವೆಂದು ತಿಳಿದು ಕೆಲವು ಜನ ಇಂಗ್ಲಿಷ್ ವರ್ತಕರು ಬಂಡವಾಳವನ್ನು ಹಾಕಿ ಒಂದು ಜಾಯಿಂಟ್ ಸ್ಟಾಕ್ ಕಂಪೆನಿಯನ್ನು ಮಾಡಿಕೊಂಡು ಇಂಡಿಯಾ ದೇಶದೊಡನೆ ವ್ಯಾಪಾರಮಾಡುವುದಕ್ಕೆ ತಮ್ಮ ರಾಣಿಯಾದ ಎಲಿಜಿಬೆತ್ ಎಂಬಾಕೆಯಿಂದ 1599ರಲ್ಲಿ ಮೊಗಲ್ ಚಕ್ರವರ್ತಿಯಾದ ಅಕ್ಬರನಿಗೆ ಒಂದು ಶಿಫಾರ್ಸು ಕಾಗದವನ್ನು ತಂದರು. ಈ ಸಂಘಕ್ಕೆ "ಈಸ್ಟ್ ಇಂಡಿಯಾ ಕಂಪೆನಿ" ಯೆಂದೂ "ಜಾನ್ ಕಂಪನಿ" ಯೆಂದೂ ಹೆಸರು.

ಈ ರೀತಿ ವ್ಯಾಪಾರಕ್ಕೆ ಬಂದ ಕಂಪೆನಿಯವರು ತಮ್ಮ ದೇಶದಿಂದ ತಂದ ಸರಕುಗಳನ್ನು ಕೂಡಿಡುವುದಕ್ಕೂ, ಈ ದೇಶದಲ್ಲಿ ಕೊಂಡುಕೊಂಡ ಸರಕುಗಳನ್ನು ತಮ್ಮ ದೇಶಕ್ಕೆ ಸಾಗಿಸುವವರೆಗೆ ಶೇಖರಿಸುವುದಕ್ಕೂ ಸರಿ ಯಾದ ಉಗ್ರಾಣ (ಕೋಠಿ) ಗಳನ್ನು ಕಟ್ಟಬೇಕಾಯಿತು. ಇದಕ್ಕೆ ಇಲ್ಲಿಯ ಚಕ್ರವರ್ತಿಗಳ ಅಪ್ಪಣೆಯು ಆವಶ್ಯಕವಾಗಿದ್ದಿತು. ಅದನ್ನು ಪಡೆದು 1608ರಲ್ಲಿ ಸೂರತಿಯಲ್ಲಿಯೂ 1611ರಲ್ಲಿ ಮಚ್ಚಲಿಬಂದರಿನಲ್ಲಿಯೂ ಕೋಠಿಗಳನ್ನು ಕಟ್ಟಿದರು.

1615ರಲ್ಲಿ ಸರ್ ಥಾಮಸ್ ರೋ ಎಂಬ ಇಂಗ್ಲಿಷ್ ರಾಯ ಭಾರಿಯು ಜಹಾಂಘೀರನ ಆಸ್ಥಾನಕ್ಕೆ ಬಂದು, ಚಕ್ರವರ್ತಿಯಿಂದ ಕಂಪೆ ನಿಯ ವ್ಯಾಪಾರಕ್ಕೆ ಕೆಲವು ಸೌಕರ್ಯಗಳನ್ನು ಪಡೆದುಕೊಂಡನು. ಇದ

ಕ್ಕಾಗಿ ಪೋರ್ಚುಗೀಸ್ ಮತ್ತು ಡಚ್ ಕಂಪೆನಿಯವರು ಅಸೂಯೆಗೊಂಡು ಇಂಗ್ಲಿಷರ ವ್ಯಾಪಾರಕ್ಕೆ ಅನೇಕ ಅಡಚಣೆಗಳನ್ನುಂಟುಮಾಡಿದರು. ಕಾರ್ಯ ಪಾಸಿಗಳಾದ ಇಂಗ್ಲಿಷ್ ಕಂಪೆನಿಯವರು ಇವುಗಳನ್ನೆಲ್ಲ ನಿವಾರಣೆಮಾಡಿ ಕೊಂಡು ತಮ್ಮ ವ್ಯಾಪಾರಕಾರ್ಯಗಳು ಸರಾಗವಾಗಿ ನಡೆಯುವಂತೆ ಅಣಿ ಪಡಿಸಿಕೊಂಡರು.

ಆ ರೀತಿಯಾಗಿ ತಮ್ಮ ವ್ಯಾಪಾರವು ಹೆಚ್ಚುತ್ತ ಬಂದ ಮೇಲೆ ಇಂಗ್ಲಿಷ್ ಕಂಪೆನಿಯವರು ತಮ್ಮ ಕೋಠಿಗಳನ್ನು ಹೆಚ್ಚಿಸಬೇಕಾಯಿತು. ಇದಕ್ಕಾಗಿ 1639ರಲ್ಲಿ ಚಂದ್ರಗಿರಿಯ ದೊರೆಯಿಂದ ಮದರಾಸ್ ಪಟ್ಟಣ ವನ್ನು ಬೆಲೆಗೆ ತೆಗೆದುಕೊಂಡು ಅಲ್ಲಿ ಒಂದು ಕೋಠಿಯನ್ನಿಟ್ಟು ಅದರ ಕಾವಲಿಗಾಗಿ ಫೋರ್ಟ್ ಸೆಂಟ್ ಜಾರ್ಜ್ ಎಂಬ ಕೋಟೆಯನ್ನು ಕಟ್ಟಿ ದರು.

ಕಲ್ಕತ್ತಾ

1656ರಲ್ಲಿ ದೆಹಲಿಯ ಚಕ್ರವರ್ತಿಯಾದ ಷಹಜಿಹಾನನ ಮಗಳಿಗೆ ಬಂದಿದ್ದ ರೋಗವನ್ನು ಕಂಪೆನಿಯ ಕಡೆ ವೈದ್ಯನೊಬ್ಬನು ಗುಣಮಾಡಿದು ದಕ್ಕಾಗಿ, ಕಂಪೆನಿಯ ವರ್ತಕರು ಬಂಗಾಳದಲ್ಲಿಯೂ ವ್ಯಾಪಾರಮಾಡ ಬಹುದೆಂದು ಚಕ್ರವರ್ತಿಯು ಅಪ್ಪಣೆಯನ್ನಿತ್ತನು. ಆ ದೇಶದ ವ್ಯಾಪಾರ ವನ್ನು ಬಲಪಡಿಸಿಕೊಳ್ಳಬೇಕೆಂದು ಕಂಪೆನಿಯವರು ಬಂಗಾಳದ ನವಾಬ ನಿಂದ ಮೂರು ಸಣ್ಣಸಣ್ಣ ಗ್ರಾಮಗಳನ್ನು ಖರೀದಿಗೆ ತೆಗೆದುಕೊಂಡು ಅಲ್ಲಿ ಒಂದು ಕೋಠಿಯನ್ನು ಕಟ್ಟಿದರು. ಇದೇ ಈಗ ಸುಪ್ರಸಿದ್ಧವಾಗಿ ರುವ ಕಲ್ಕತ್ತಾ ನಗರ. ಇದಾದ ಕೆಲವು ದಿನಗಳ ಮೇಲೆ ಕಂಪೆನಿಯ ವರು ಪಾಟ್ನಾ, ಕಾಸಿಂಬಸಾರ್ ಎಂಬ ಪ್ರಸಿದ್ಧವಾದ ವ್ಯಾಪಾರಸ್ಥಳ ಗಳಲ್ಲಿಯೇ ಕೋಠಿಗಳನ್ನು ಕಟ್ಟಿದರು.

ಬೊಂಬಾಯಿ

ಇಷ್ಟರಲ್ಲಿಯೇ ಇಂಗ್ಲೆಂಡ್ ದೇಶದ ದೊರೆಯು ಪೋರ್ಚುಗಲ್ಲಿನ ಯುವರಾಣಿಯನ್ನು ಮದುವೆಯಾಗಿ, ಇಂಡಿಯಾ ದೇಶದಲ್ಲಿ ಆ ಜನರಿಗೆ ಸೇರಿದ ಬೊಂಬಾಯಿ ನಗರವನ್ನು ಬಳುವಳಿಯಾಗಿ ಪಡೆದನು. ಇದರಿಂದ ತನಗೆ ಯಾವ ಪ್ರಯೋಜನವೂ ಇಲ್ಲವೆಂದು ಇಂಗ್ಲಿಷ್ ದೊರೆಯು

1668ರಲ್ಲಿ ಆ ಪಟ್ಟಣವನ್ನು ತನ್ನ ದೇಶದ ಕಂಪೆನಿಯವರಿಗೆ ಕೊಟ್ಟು ಬಿಟ್ಟನು. ಕಂಪೆನಿಯವರು ಅಲ್ಲಿಯೂ ಒಂದು ಕೋಠಿಯನ್ನು ಕಟ್ಟಿದರು.

ಈ ರೀತಿಯಾಗಿ ಇಂಗ್ಲಿಷ್ ಕಂಪೆನಿಯವರು ಇಂಡಿಯಾದೇಶದ ಮುಖ್ಯಪ್ರದೇಶಗಳಲ್ಲೆಲ್ಲ ಕೋಠಿಗಳನ್ನು ಕಟ್ಟಿಕೊಂಡು ಅಲ್ಲಿ ವ್ಯಾಪಾರದ ಸರಕುಗಳನ್ನು ಶೇಖರಿಸಿ ಕಾಪಾಡಿಕೊಳ್ಳುತ್ತಿದ್ದರು. ಈ ವೇಳೆಗೆ ಔರಂಗ ಜೇಬನ ಕಾಲದ ಗಲಭೆಗಳು ಅಲ್ಲಲ್ಲಿ ತಲೆದೋರಿ ಅವುಗಳ ದುಷ್ಟಪರಿಣಾಮವು ಕಂಪೆನಿಯವರ ವ್ಯಾಪಾರಕ್ಕೂ ತಗುಲಿತು.

ಈ ಸಂದರ್ಭಗಳಲ್ಲಿ ತಮ್ಮ ಕೋಠಿಗಳಿಗೆ ಎಂದಿದ್ದರೂ ಕ್ಷೇಮವಿಲ್ಲ ವೆಂದು ತಿಳಿದು ಕಂಪೆನಿಯವರು ಅವುಗಳನ್ನು ಶತ್ರುಗಳಿಂದ ಕಾಪಾಡಿ ಕೊಳ್ಳುವುದಕ್ಕಾಗಿ ಅಲ್ಲಲ್ಲಿ ಬಲವಾದ ಕೋಟೆಗಳನ್ನು ಕಟ್ಟಿ, ಅವುಗಳಲ್ಲಿ ಸೈನ್ಯಗಳನ್ನಿಡಲು ಆರಂಭಿಸಿದರು. ಹೀಗೆ ಕಟ್ಟಿದ ಕೋಟೆಗಳಲ್ಲಿ ಕಲ್ಕತ್ತೆ ಯಲ್ಲಿರುವ ಫೋರ್ಟ್‌ವಿಲಿಯಂ ಕೋಟೆಯೂ, ಮದರಾಸಿನಲ್ಲಿರುವ ಫೋರ್ಟ್ ಸೆಂಟ್ ಜಾರ್ಜ್‌ಕೋಟೆಯೂ, ಮದ್ರಾಸಿಗೆ ಸಮೀಪದಲ್ಲಿರುವ ಫೋರ್ಟ್ ಸೆಂಟ್ ಡೇವಿಡ್ ಎಂಬ ಕೋಟೆಯೂ ಮುಖ್ಯವಾದುವುಗಳು.

ಈ ರೀತಿಯಾಗಿ ಜರ್ಮ ಕಂಪೆನಿಯವರು ತಮ್ಮ ವ್ಯಾಪಾರವನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಿರುವುದನ್ನು ನೋಡಿ, ಇವರಮೇಲಿನ ಹೋರಾಟ ದಿಂದ ಇಂಗ್ಲೆಂಡಿನ ಮತ್ತೊಂದು ಕಂಪೆನಿಯವರೂ ತಮ್ಮ ದೊರೆ ಯಿಂದ ಸನ್ನದನ್ನು ಪಡೆದು ವ್ಯಾಪಾರಕ್ಕೆ ನಿಂತರು. ಇದರಿಂದ ಎರಡು ಕಂಪೆನಿಯವರಿಗೂ ನಷ್ಟವಾಯಿತು. ಆಗ ಎರಡು ಕಂಪೆನಿಯವರೂ "ಯುನೈಟೆಡ್ ಈಸ್ಟ್ ಇಂಡಿಯಾ" ಕಂಪೆನಿಯೆಂಬ ಹೆಸರಿನಿಂದ 1708 ರಲ್ಲಿ ಒಟ್ಟುಗೂಡಿ, ಅಲ್ಲಿಂದ ಮುಂದಕ್ಕೆ ತಮ್ಮ ವ್ಯಾಪಾರವನ್ನು ಮತ್ತಷ್ಟು ಅಭಿವೃದ್ಧಿಗೆ ತಂದರು.

ಮೇಲೆ ಹೇಳಿದ ಕೋಟೆಗಳ ರಕ್ಷಣೆಗಾಗಿಯೂ, ಅಲ್ಲಿದ್ದ ಸೈನ್ಯಗಳ ವೆಚ್ಚಕ್ಕಾಗಿಯೂ ಹಣವು ಬೇಕಾದುದರಿಂದ, ಕಂಪೆನಿಯವರು ಯಾವುದಾ ದರೂ ಒಂದು ನೆವದಿಂದ ತಮ್ಮ ಕೋಟೆಗಳ ಸಮೀಪದಲ್ಲಿದ್ದ ಪ್ರದೇಶ ಗಳನ್ನು ವಶಪಡಿಸಿಕೊಂಡು ಅವುಗಳಿಂದ ತೆರಿಗೆ ಮೊದಲಾದವುಗಳನ್ನು ಎತ್ತಲಾರಂಭಿಸಿದರು.

ಇದೇ ಸಮಯದಲ್ಲಿಯೇ ಸುತ್ತುಮುತ್ತಲಿದ್ದ ರಾಜರುಗಳಲ್ಲಿ

ಐಕಮತ್ಯವಿಲ್ಲದಿದ್ದುದರಿಂದ, ಕಂಪೆನಿಯವರು ಯಾವುದಾದರೂ ಒಂದು ಪಕ್ಷವನ್ನು ವಹಿಸಿ ಯುದ್ಧದಲ್ಲಿ ಪ್ರವರ್ತಿಸಿ ಆದಾಯ ಪಡೆಯುವುದಕ್ಕೆ ಮೊದಲುಮಾಡಿದರು ; ಅನಂತರ ತಮಗೂ ಇತರ ದೊರೆಗಳಿಗೂ ಮನಸ್ತಾಪವುಂಟಾದಾಗ ಅವರಮೇಲೆ ತಾವೇ ಯುದ್ಧಮಾಡುವುದಕ್ಕೂ ಕೈಹಾಕಿದರು. ಈ ರೀತಿಯಾಗಿ ಕಂಪೆನಿಯವರಿಗೆ ಕ್ರಮವಾಗಿ ಭೂಪ್ರದೇಶಗಳು ತಾವಾಗಿಯೇ ವಶವಾಗುತ್ತ ಬಂದುವು. ಮೊದಲು ವ್ಯಾಪಾರಕ್ಕಾಗಿ ಬಂದ ಈಸ್ಟಿಂಡಿಯಾ ಕಂಪೆನಿಯವರು ಕೊನೆಗೆ ರಾಜ್ಯಾಧಿಪತಿಗಳಾದುದು ಈ ಕ್ರಮದಲ್ಲಿಯೇ.

ಇಷ್ಟು ಕೆಲಸವನ್ನೂ ನಡೆಯಿಸಿದುದು ಈಸ್ಟಿಂಡಿಯಾ ಕಂಪೆನಿಯೇ ಹೊರತು ಇಂಗ್ಲೆಂಡಿನ ದೊರೆಯೂ ಅಲ್ಲ, ಪಾರ್ಲಿಮೆಂಟ್ ಸಭೆಯೂ ಅಲ್ಲ. ಆದರೆ ಕಂಪೆನಿಗೆ ಅವರ ಬೆಂಬಲವೇ ಇರಲಿಲ್ಲವೆಂದು ಹೇಳಲಾಗುವುದಿಲ್ಲ. ಮೊಟ್ಟಮೊದಲು ಕಂಪೆನಿಯವರ ಆಡಳಿತಕ್ಕೆ ಇಂಗ್ಲಿಷ್ ಪಾರ್ಲಿಮೆಂಟಿನವರು ಕೈಹಾಕಿದುದು 1773ರಲ್ಲಿ. 1858ನೆಯ ವರ್ಷದವರೆಗೂ ಕಂಪೆನಿಯವರ ಆಡಳಿತವೇ ಈ ದೇಶದಲ್ಲಿ ಪ್ರಬಲವಾಗಿದ್ದಿತು. ಆಗ ಅವರ ಅಧಿಕಾರವು ಸಂಪೂರ್ಣವಾಗಿ ನಿಂತುಹೋಗಿ ಇಂಗ್ಲೆಂಡಿನ ರಾಣಿಯವರ ಅಧಿಕಾರಕ್ಕೆ ಮೊದಲಾಯಿತು.

೪. **ಡಚ್ಚರು:**—ಪೋರ್ಚುಗೀಸರೂ, ಇಂಗ್ಲಿಷರೂ ಹಿಂದೂದೇಶದ ವ್ಯಾಪಾರದಿಂದ ಐಶ್ವರ್ಯವಂತರಾದುದನ್ನು ನೋಡಿ ಕೆಲವು ಜನ ಡಚ್ ವರ್ತಕರು ಈ ದೇಶದಲ್ಲಿ ವ್ಯಾಪಾರಮಾಡುವುದಕ್ಕಾಗಿ ಬಹಳ ಬಂಡವಾಳವನ್ನು ಹಾಕಿಕೊಂಡು, 1602ರಲ್ಲಿ ತಮ್ಮದೂ ಒಂದು ಕಂಪೆನಿಯನ್ನು ಪ್ರಾರಂಭಿಸಿದರು. ಡಚ್ಚರ ಈ ಕಂಪೆನಿಯವರಿಗೆ ಅವರ ಸರ್ಕಾರದವರು ಎಷ್ಟೊ ಸಹಾಯವನ್ನು ಮಾಡುತ್ತ ಬಂದರು ; ಇದೂ ಅಲ್ಲದೆ ಆಗಿನ ಕಾಲದಲ್ಲಿ ಯೂರೋಪಿನಲ್ಲೆಲ್ಲ ಡಚ್ಚರ ನಾವೆಯೇ ಬಹಳ ಪ್ರಬಲವಾಗಿದ್ದುದರಿಂದ ಇವರನ್ನು ಸರಿಗಟ್ಟುವವರೇ ಇಲ್ಲವೆನ್ನುವಂತೆ ಕಾಣುತ್ತಿತ್ತು.

ಇವರು ಇಂಡಿಯಾದಲ್ಲಿ ಸೂರತ್, ಕೊಚ್ಚಿ, ಪುಲಿಕಾಟ್, ಚಿನ್ಸೂರ, ನಾಗಪಟ್ಟಣ ಎಂಬಸ್ಥಳಗಳಲ್ಲಿ ವ್ಯಾಪಾರದ ಕೋಠಿಗಳನ್ನು ಕಟ್ಟಿ ಅಭಿವೃದ್ಧಿಗೆ ಬರುತ್ತಲಿದ್ದುದು ಮಾತ್ರವಲ್ಲದೆ ಜಾವಾ, ಸುಮಾತ್ರ ಮೊದಲಾದ ದ್ವೀಪಗಳಲ್ಲಿ ದೊರೆಯುವ ಸಂಬಾರದ ವಸ್ತುಗಳ ವ್ಯಾಪಾರವನ್ನೆಲ್ಲ

ತಮ್ಮ ವಶಪಡಿಸಿಕೊಂಡಿದ್ದರು. ಈ ವ್ಯಾಪಾರಕ್ಕೆ ಇಂಗ್ಲಿಷ್ ಈಸ್ಟಿಂಡಿಯಾ ಕಂಪೆನಿಯವರು ಕೈಹಾಕಲು ಯತ್ನಿಸಿದುದರಿಂದ, ಈ ಎರಡು ಕಂಪೆನಿಯವರಿಗೂ ದ್ವೇಷಹುಟ್ಟಿ, ಡಚ್ಚರು ಅನೇಕ ಇಂಗ್ಲಿಷರನ್ನು 1623ರಲ್ಲಿ ಅಂಬಾಯ್ನದ್ವೀಪದಲ್ಲಿ ಕೊಲೆಮಾಡಿದರು.

ಕಡೆಗೆ ಡಚ್ ಕಂಪೆನಿಯವರು ಒಪ್ಪಂದಮಾಡಿಕೊಂಡು ಇಂಡಿಯಾ ದೇಶದ ವ್ಯಾಪಾರದ ಗೊಡವೆಯನ್ನು ಬಿಟ್ಟು ಜಾವಾ, ಸುಮಾತ್ರ ಮೊದಲಾದ ದ್ವೀಪಗಳ ವ್ಯಾಪಾರದಲ್ಲಿ ಮಾತ್ರ ನಿಂತುದರಿಂದ ಇಂಗ್ಲಿಷ್ ಕಂಪೆನಿಯವರಿಗೆ ಇಂಡಿಯಾದೇಶದ ವ್ಯಾಪಾರವೆಲ್ಲ ಅಧೀನವಾಯಿತು. ಬರಬರುತ್ತ ಇಂಡಿಯಾದಲ್ಲಿದ್ದ ಅನೇಕ ಡಚ್ಚರ ಕೋಠಿಗಳು ಒಂದೊಂದಾಗಿ ಇಂಗ್ಲಿಷರ ಕೈಸೇರುತ್ತ ಬಂದು, ಕೊನೆಗೆ 1818ರಲ್ಲಿ ಜಾವಾ ಸುಮಾತ್ರಾ ದ್ವೀಪಗಳೂ ಇಂಗ್ಲಿಷರಿಗೆ ಸೇರಿಹೋದುವು.

೫. **ಫ್ರೆಂಚರು:**—ಇತರ ಯೂರೋಪಿಯನ್ ಜನಾಂಗಗಳವರು ಇಂಡಿಯಾದೇಶದೊಡನೆ ವ್ಯಾಪಾರಮಾಡಿ ವಿಶೇಷ ಲಾಭಪಡೆಯುತ್ತಿದ್ದುದನ್ನು ನೋಡಿ ಫ್ರೆಂಚರೂ ಆ ಕೆಲಸಕ್ಕೆ ಕೈಹಾಕಿದರು. ಫ್ರಾನ್ಸ್‌ದೇಶದ ಹಲವು ವರ್ತಕರು ಕ್ರಿ.ಶ 1624ರಲ್ಲಿ ಒಂದು ಕಂಪೆನಿಯನ್ನು ಸ್ಥಾಪಿಸಿ, ಇಂಡಿಯಾ ದೇಶಕ್ಕೆ ಬಂದು ವ್ಯಾಪಾರದ ಕೋಠಿಗಳನ್ನು ಕಟ್ಟಲಾರಂಭಿಸಿದರು. ಆದರೆ ಈ ಕಂಪೆನಿಯು ಬಹು ಶೀಘ್ರದಲ್ಲಿಯೇ ಕಡೆಗಂಡು 1642ರಲ್ಲಿ ಸರ್ಕಾರದ ಸಹಾಯವನ್ನು ಪಡೆದ ಫ್ರೆಂಚರ ಇನ್ನೊಂದು ಕಂಪೆನಿಯು ಹೊರಟಿತು.

ಇವರಿಗೂ ಡಚ್ ಮತ್ತು ಪೋರ್ಚುಗೀಸ್ ವ್ಯಾಪಾರಿಗಳಿಗೂ ಉಂಟಾದ ಕಲಹಗಳಲ್ಲಿ ಫ್ರೆಂಚರಿಗೇ ಅನುಕೂಲವಾಯಿತು. ಬಿಜಾಪುರದ ದೊರೆಗಳಿಂದ ಫ್ರೆಂಚರು ಕೊಂಡುಕೊಂಡ ಪುದುಚೇರಿಯು ಇವರ ಮುಖ್ಯ ಕೋಠಿಯಾಯಿತು. ಇವರು ಚಂದ್ರನಗರ, ಮಾಹಿ, ಕಾರೈಕಾಲ್ ಮೊದಲಾದ ಸ್ಥಳಗಳಲ್ಲಿಯೂ ಕೋಠಿಗಳನ್ನು ಕಟ್ಟಿದರು.

ತಮ್ಮ ದೇಶದ ವ್ಯಾಪಾರವನ್ನು ಬಲಪಡಿಸಬೇಕಾದರೆ, ಇಂಡಿಯಾ ದೇಶದ ದೊರೆಗಳೊಡನೆ ಸ್ನೇಹವಾಗಿರಬೇಕೆಂಬ ಸಿದ್ಧಾಂತವನ್ನು ಫ್ರೆಂಚರ ಅಧಿಕಾರಿಯಾದ ಮಾರ್ಟಿನ್ ಎಂಬಾತನು ದೃಢೀಕರಿಸುತ್ತಿದ್ದನು. ಆದರೆ ಇವನ ತರುವಾಯ ಗವರ್ನರ್ ಕೆಲಸಕ್ಕೆ ಬಂದ ಡ್ಯೂಮ ಎಂಬವನು

ಹಿಂದೂದೇಶದ ರಾಜರ ಒಳ ಆಡಳಿತದಲ್ಲಿ ತಲೆಹಾಕಿ ತನ್ನ ಪ್ರಶಸ್ತಿಯನ್ನು ಹರಡುತ್ತ ಬಂದನು. ಇದರಿಂದ ಒಳದೇಶದ ರಾಜಸ್ಥಾನಗಳಲ್ಲಿ ಫ್ರೆಂಚರ ಸೈನ್ಯವೂ ಸಹಾಯವೂ ಒದಗುವುದಕ್ಕೆ ಮೊದಲಾಯಿತು. ಈ ಕಾರಣಗಳಿಂದ ಇಂಗ್ಲಿಷ್ ಕಂಪೆನಿಯ ವ್ಯಾಪಾರವು ಸ್ವಲ್ಪಮಟ್ಟಿಗೆ ತಗ್ಗುತ್ತ ಬಂದಿತು. ಇದರಿಂದ ಇಂಡಿಯಾದಲ್ಲಿ ಇಂಗ್ಲಿಷ್ ಮತ್ತು ಫ್ರೆಂಚ್ ಕಂಪೆನಿಗಳಿಗೆ ದ್ವೇಷವುಂಟಾಯಿತು.

ಅಧ್ಯಾಯ ೨.--ಇಂಗ್ಲಿಷ್ ಕಂಪೆನಿಯ ರಾಜ್ಯಸ್ಥಾಪನೆ

ಇಂಗ್ಲಿಷರಿಗೂ ಫ್ರೆಂಚರಿಗೂ ಹೋರಾಟ (ಕ್ರಿ. ಶ 1741–69.)

ಔರಂಗಜೇಬನು ಸತ್ತುಹೋದಮೇಲೆ, ದಕ್ಷಿಣದೇಶವು ದೆಹಲಿಯ ಚಕ್ರವರ್ತಿಯ ಕೈಬಿಟ್ಟುಹೋಯಿತು. ಕರ್ಣಾಟಕ ರಾಜ್ಯದಲ್ಲಿ ಆರ್ಕಾಟಿನ ನವಾಬನೂ, ತಂಜಾವೂರಿನಲ್ಲಿ ಶಿವಾಜಿಯ ಮನೆತನದವರೂ, ಮೈಸೂರಿನಲ್ಲಿ ಹಿಂದೂ ಅರಸರೂ ಅಭಿವೃದ್ಧಿಗೆ ಬಂದರು. ಆದರೆ ಇವರುಗಳಲ್ಲಿ ಪರಸ್ಪರ ಕಲಹಗಳು ಇದ್ದೇ ಇದ್ದುವು. ವಿದೇಶಿಯರ ರಾಜ್ಯಸ್ಥಾಪನೆಗೆ ಇದು ತಕ್ಕ ಸಮಯವಾಗಿದ್ದಿತು. ಫ್ರೆಂಚರು ಈ ಕೆಲಸಕ್ಕೆ ಮೊದಲು ಕೈ ಹಾಕಿದರು. ಇಂಗ್ಲಿಷರು ಅವರ ಮೇಲ್ಪಂಕ್ತಿಯನ್ನೇ ಅನುಸರಿಸಿದರು.

ಸಮರ್ಥನಾದ ಔರಂಗೇಜೆಬನು ಚಕ್ರವರ್ತಿಯಾಗಿರುವವರೆಗೂ, ಯೂರೋಪಿಯನರು ಇಂಡಿಯಾದೇಶದ ವ್ಯಾಪಾರದಲ್ಲಿ ಮಾತ್ರ ಆಸಕ್ತರಾಗಿದ್ದರು. ಕ್ರಿ.ಶ. 1735ರಲ್ಲಿ ಫ್ರೆಂಚರ ಗವರ್ನರಾಗಿದ್ದ ಡ್ಯೂಮ ಎಂಬವನು ಮೊಗಲ್ ಸಾಮ್ರಾಜ್ಯವು ಖಿಲವಾದುದನ್ನೂ, ದಕ್ಷಿಣದೇಶದ ಅನಾಯಕತೆಯನ್ನೂ ನೋಡಿ ರಾಜ್ಯಸ್ಥಾಪನೆಗೆ ಇದು ಸುಸಮಯವೆಂದು ಹಿಂದೂದೇಶದ ರಾಜರ ಆಡಳಿತಗಳಲ್ಲಿ ಕೈಹಾಕಲು ಮೊದಲುಮಾಡಿದನು.

ಯುದ್ಧಮಾಡುವುದರಲ್ಲಿ ಸರಿಯೆನಿಸಿಕೊಂಡಿದ್ದ ಫ್ರೆಂಚರ ಸೈನ್ಯವು ರಾಜ್ಯಸ್ಥಾಪನೆಯ ಕಾರ್ಯದಲ್ಲಿ ಫ್ರೆಂಚರಿಗೆ ಬಹಳ ಸಹಕಾರಿಯಾಯಿತು. ದೇಶೀಯ ರಾಜರು ತಮ್ಮತಮ್ಮಲ್ಲಿ ಜಗಳಬಿದ್ದಾಗ ಫ್ರೆಂಚರ ಸೈನ್ಯ

ವನ್ನು ಸಂಬಳಕ್ಕೆ ಪಡೆಯುತ್ತಿದ್ದರು. ಹೀಗೆ ಕೆಲವು ವರ್ಷಗಳಲ್ಲಿಯೇ ಕರ್ಣಾಟಕ, ತಂಜಾವೂರು ಮೊದಲಾದ ರಾಜ್ಯಗಳಲ್ಲಿ ಫ್ರೆಂಚರ ಪ್ರಾಬಲ್ಯವು ಹೆಚ್ಚಿ ಅವರು ದೆಹಲಿಯ ಚಕ್ರವರ್ತಿಯಿಂದಲೂ ಸನ್ಮಾನಿತರಾದರು.

ಡ್ಯೂಮನು ಹೋದಮೇಲೆ ಗವರ್ನರಾಗಿ ಬಂದ ಡೂಪ್ಲೆಯು ಬಹಳ ಶಕ್ತನಾಗಿದ್ದನು. ವ್ಯಾಪಾರದಲ್ಲಿ ಫ್ರೆಂಚರೊಡನೆ ಹೋರಾಡುತ್ತಿದ್ದ ಇಂಗ್ಲಿಷರನ್ನು ಇಂಡಿಯಾದೇಶದಿಂದಲೇ ಓಡಿಸಿ, ಫ್ರೆಂಚರ ಸಾಮ್ರಾಜ್ಯವನ್ನು ಸ್ಥಾಪಿಸಬೇಕೆಂಬ ಆಸೆಯಿಂದ, ಡೂಪ್ಲೆಯು ಅತ್ಯಲ್ಪ ಸಂಬಳಕ್ಕೆ ಸಿಕ್ಕುತ್ತಿದ್ದ ದೇಶೀಯರನ್ನು ಸಿಪಾಯಿಗಳ ಕೆಲಸಕ್ಕೆ ಸೇರಿಸಿ, ದಂಡುಕಟ್ಟಿ, ಅವರನ್ನು ಯುದ್ಧಕಾರ್ಯದಲ್ಲಿ ತಿದ್ದಿ, ಪುದುಚೇರಿಯ ಕೋಟೆಯನ್ನು ಬಲಪಡಿಸಿ, ರಾಜ್ಯಸ್ಥಾಪನೆಗೆ ಸಮಯವನ್ನು ಹುಡುಕುತ್ತಿದ್ದನು.

ಫ್ರೆಂಚರ ೧ನೆಯ ಯುದ್ಧ—1744ರಲ್ಲಿ ಯೂರೋಪಿನಲ್ಲಿ ಫ್ರೆಂಚರಿಗೂ ಇಂಗ್ಲಿಷರಿಗೂ ಯುದ್ಧ ಮೊದಲಾದುದರಿಂದ, ಇಂಡಿಯಾದಲ್ಲಿದ್ದ ಫ್ರೆಂಚರು ಇದೇ ನೆವವಾಗಿ ಇಂಗ್ಲಿಷರ ಕೋಠಿಗಳನ್ನು ಹಿಡಿಯುತ್ತ ಬಂದರು. ಸ್ವಲ್ಪಕಾಲದಲ್ಲಿಯೇ ಇಂಗ್ಲಿಷರ ಮುಖ್ಯ ಕೋಠಿಯಾದ ಮದರಾಸು ಫ್ರೆಂಚರ ವಶವಾಯಿತು. ಇಷ್ಟರಲ್ಲಿಯೇ ಯೂರೋಪಿನಲ್ಲಿ ಯುದ್ಧ ನಿಂತು ಕರಾರು ಆದುದರಿಂದ, ಡೂಪ್ಲೆಯು ಮದರಾಸನ್ನು ಇಂಗ್ಲಿಷರಿಗೆ ಬಿಟ್ಟುಕೊಟ್ಟನು.

ಫ್ರೆಂಚರ ೨ನೆಯ ಯುದ್ಧ—ಇಂಗ್ಲಿಷರೂ, ಫ್ರೆಂಚರೂ ಇದಿರಿದಿರಿಗೆ ಕಾದದಿದ್ದರೂ, ಅವರವರಿಗೆ ಆಂತರ್ಯದ್ವೇಷ ತಪ್ಪಲಿಲ್ಲ. ಆದುದರಿಂದ ಅವರುಗಳು ಪರಸ್ಪರ ಕಾದಾಡುತ್ತಿದ್ದ ಸ್ವದೇಶದ ರಾಜರ ಪಕ್ಷಗಳನ್ನು ವಹಿಸಿ ಯುದ್ಧಮಾಡಲಾರಂಭಿಸಿದರು.

ಹೀಗಿರುವಲ್ಲಿ ಆರ್ಕಾಟಿನ ನವಾಬನು ಸತ್ತುಹೋದನು. ರಾಜ್ಯವು ನಿಜವಾದ ಹಕ್ಕುದಾರನಾದ ಚಂದಾಸಾಹೇಬನಿಗೆ ತಪ್ಪಿ ಹೈದರಾಬಾದಿನ ನಿಜಾಮನ ಸಹಾಯದಿಂದ ಅನ್ವರುದೀನನೆಂಬವನಿಗೆ ದೊರೆಯಿತು. ಚಂದಾಸಾಹೇಬನು ತನಗೆ ಸಹಾಯಮಾಡಬೇಕೆಂದು ಫ್ರೆಂಚರನ್ನು ಬೇಡಿದನು. ಇಷ್ಟರಲ್ಲಿಯೇ ಹೈದರಾಬಾದಿನ ನಿಜಾಮನು ಸತ್ತುಹೋಗಿ, ರಾಜ್ಯಕ್ಕಾಗಿ ಅವನ ಮಗ ನಾಸಿರ್‌ಜಂಗನಿಗೂ, ಮುಮ್ಮಗ ಮುಸಫರ್‌ಜಂಗನಿಗೂ ಜಗಳ ಹುಟ್ಟಿತು. ಮುಸಫರನು ಫ್ರೆಂಚರ ಸಹಾಯವನ್ನು ಕೇಳಿದನು.

ಫ್ರೆಂಚರ ರಾಜ್ಯಸ್ಥಾಪನೆಯ ಕೆಲಸ ಕೈಗೂಡಬೇಕಾದರೆ ದೇಶೀಯ ದೊರೆಗಳು ತಮ್ಮ ಅಧೀನದಲ್ಲಿರಬೇಕೆಂದು ಅಭಿಪ್ರಾಯಪಡುತ್ತಿದ್ದ ಡೂಪ್ಲೆಗೆ ಚಂದಾಸಾಹೇಬನೂ, ಮುಸಫರನೂ ಏಕಕಾಲದಲ್ಲಿ ತನ್ನ ಸಹಾಯವನ್ನು ಅಪೇಕ್ಷಿಸಿದುದು ಅನುಕೂಲವಾಗಿಯೇ ಪರಿಣಮಿಸಿತು. ಇಷ್ಟೇ ಅಲ್ಲದೆ ತನ್ನ ಸೈನ್ಯಕ್ಕೆ ಏನಾದರೂ ಒಂದು ಕೆಲಸವೂ ಅತ್ಯಾವಶ್ಯಕವಾಗಿದ್ದಿತು. ಆಗ ಅವನು ಅವರುಗಳೊಡನೆ ಒಪ್ಪಂದಮಾಡಿಕೊಂಡನು. ಇದರ ಪ್ರಕಾರ ಮೂರುಕಡೆಯ ಸೈನ್ಯವೂ ಅನ್ವರುದ್ದೀನನನ್ನು ಆಂಬೂರ್ ಕದನದಲ್ಲಿ 1749ರಲ್ಲಿ ಸೋಲಿಸಿದುವು. ಅನ್ವರುದ್ದೀನನು ಯುದ್ಧದಲ್ಲಿ ಮಡಿದನು. ಅವನ ಮಗ ಮಹಮದಲ್ಲಿಯು ತಿರುಚನಾಪಲ್ಲಿಗೆ ಓಡಿಹೋಗಿ ಅಲ್ಲಿಯ ಕೋಟೆಯಲ್ಲಿ ಔತುಕೊಂಡನು. ಫ್ರೆಂಚರು ಬಲವಾದ ಜಿಂಜೀ ಕೋಟೆಯನ್ನು ಹಿಡಿದು ಚಂದಾಸಾಹೇಬನನ್ನು ಆರ್ಕಾಟಿನ ನವಾಬನೆಂದು ಸಾರಿದರು. ಈ ರೀತಿಯಾಗಿ ಆರ್ಕಾಟು ರಾಜ್ಯದ ಮೇಲ್ವಿಚಾರಣೆಯು ಫ್ರೆಂಚರಿಗೆ ಸೇರಿತು.

ಇದಾದಮೇಲೆ ಚಂದಾಸಾಹೇಬನೂ, ಫ್ರೆಂಚರೂ, ಮುಸಫರನ ಸಹಾಯಕ್ಕೆ ಹೊರಟರು. ಇಲ್ಲಿಯೂ ಫ್ರೆಂಚರ ಪಕ್ಷದವರಿಗೇ ಅನುಕೂಲವಾಯಿತು. ಈ ರೀತಿಯಲ್ಲಿ ದಕ್ಷಿಣದೇಶದ ಎರಡು ದೊಡ್ಡ ರಾಜ್ಯಗಳಲ್ಲಿಯೂ ಫ್ರೆಂಚರೇ ಪ್ರಬಲರಾದರು. ಎಲ್ಲೆಲ್ಲಿಯೂ ಡೂಪ್ಲೆಯ ಖ್ಯಾತಿಯು ಹೆಚ್ಚಿತು. ಈ ಸಂದರ್ಭಗಳಲ್ಲಿ ತಾವು ಸುಮ್ಮನಿದ್ದರೆ ಕಡೆಗೆ ತಮಗೇ ಅಪಾಯವಾದೀತೆಂಬ ಭಯವು ಇಂಗ್ಲಿಷರಿಗೆ ಉಂಟಾಯಿತು. ಇಷ್ಟರಲ್ಲಿಯೇ ಪರಾಜಿತರಾದ ಹೈದರಾಬಾದಿನ ನಾಸಿರನೂ ಆರ್ಕಾಟಿನ ಮಹಮ್ಮದಲ್ಲಿಯೂ ಇಂಗ್ಲಿಷರ ಸಹಾಯವನ್ನು ಕೇಳಿದುದರಿಂದ, ಅವರೆಲ್ಲರೂ ಪರಸ್ಪರ ರಕ್ಷಣೆಗಾಗಿ ಒಟ್ಟುಗೂಡಿದರು. ಇಂಗ್ಲಿಷರ ಬೆಂಬಲವನ್ನು ಪಡೆದ ನಾಸಿರನು ದೊಡ್ಡ ಸೈನ್ಯದೊಡನೆ ಆರ್ಕಾಟಿಗೆ ಬಂದನು. ಮುಸಫರನ ಪಕ್ಷದವರು ಇವನನ್ನು ಪಿತೂರಿಯಿಂದ ಕೊಂದರು.

ಹೈದರಾಬಾದಿನಲ್ಲಿ ಬುಸ್ಸಿಯ ಅಧಿಕಾರ.—ತರುವಾಯ ಮುಸಫರನೂ ಫ್ರೆಂಚರ ದಳಪತಿಯಾದ ಬುಸ್ಸಿಯೂ ದಖನ್ನಿಗೆ ಹೊರಟರು. ಮುಸಫರನ ಶತ್ರುಗಳು ಅವನನ್ನು ಮೋಸದಿಂದ ದಾರಿಯಲ್ಲಿಯೇ ಕೊಂದರು. ಆದರೂ ಬುಸ್ಸಿಯು ಧೈರ್ಯಗೆಡದೆ, ಮುಸಫರನ ಚಿಕ್ಕಪ್ಪನಾದ

ಸಲಬತ್ ಜಂಗನಿಗೆ ಹೈದರಾಬಾದಿನ ಪಟ್ಟಕಟ್ಟಿ, ಮೊದಲಿನಿಂದಲೂ ನಿಜಾಮನಿಗೆ ಕಿರುಕುಳಮಾಡುತ್ತಿದ್ದ ಮರಾಟೆಯವರಿಗೆ ಸ್ವಲ್ಪ ರಾಜ್ಯವನ್ನು ಕೊಟ್ಟು ಸಮಾಧಾನಪಡಿಸಿ, ಸಲಬತ್ತನ ಹೆಸರಿನಲ್ಲಿ ತಾನೇ ರಾಜ್ಯವಾಳಲಾರಂಭಿಸಿದನು. ಇಷ್ಟೊಂದು ಸಹಾಯಮಾಡಿದುದಕ್ಕಾಗಿ ನಿಜಾಮನು ಉತ್ತರ ಸರ್ಕಾರವನ್ನು ಫ್ರೆಂಚರಿಗೆ ಕೊಟ್ಟನು.

ತಿರುಚನಾಪಳ್ಳಿಯ ಮುತ್ತಿಗೆ— ಇಂಗ್ಲಿಷರ ಕಷ್ಟಕಾಲ. — ಮೇಲೆ ಹೇಳಿದ ರೀತಿಯಾಗಿ ಹೈದರಾಬಾದು, ಆರ್ಕಾಟು ಈ ರಾಜ್ಯಗಳಲ್ಲಿ ಫ್ರೆಂಚರಿಗೇ ಜಯವಾಯಿತು. ಮಹಮ್ಮದಲ್ಲಿಯ ಸಹಾಯಕ್ಕಾಗಿ ಇಂಗ್ಲಿಷರೂ, ಮೈಸೂರಿನ ರಾಜರೂ, ಮರಾಟೆಯವರೂ, ಎಲ್ಲಿಯೋ ಸ್ವಲ್ಪ ಸೇನೆಯನ್ನು ತಿರುಚನಾಪಳ್ಳಿಗೆ ಕಳುಹಿಸಿದರು. ಆದರೂ ಚಂದಾಸಾಹೇಬನು ಫ್ರೆಂಚರ ಬೆಂಬಲದಿಂದ ಮಹಮ್ಮದಲ್ಲಿಯು ಔತುಕೊಂಡಿರುವ ತಿರುಚನಾಪಲ್ಲಿ ಕೋಟೆಗೆ ಬಲವಾಗಿ ಮುತ್ತಿಗೆ ಹಾಕಿದನು. ಮಹಮ್ಮದಲ್ಲಿಯನ್ನು ನಿರ್ಬಂಧದಿಂದ ಬಿಡಿಸುವ ಪ್ರಯತ್ನವು ಸಾಗಲಿಲ್ಲ. ಫ್ರೆಂಚರ ಪಕ್ಷದವರ ಕೈ ಮೇಲಾಗಿತ್ತು. ಇಂಗ್ಲಿಷರು ಅಪಮಾನಪಟ್ಟು ಈ ದೇಶದಿಂದಲೇ ಓಡಿಹೋಗುವ ಹೊತ್ತು ಬಂದಿತು.

ಆರ್ಕಾಟಿನ ಮುತ್ತಿಗೆ—ಇಂಗ್ಲಿಷರಿಗೆ ಕೀರ್ತಿ ಕ್ರಿ. ಶ. 1751

ಈ ಸಂದರ್ಭದಲ್ಲಿ ರಾಬರ್ಟ್‌ಕ್ಲೈವನ ಯುಕ್ತಿಯಿಂದ ಇಂಗ್ಲಿಷರ ಮಾನವೂ ಹೆಸರೂ ಉಳಿದುವು. ಇವನು ಮಹಮ್ಮದಲ್ಲಿಯನ್ನು ಬಿಡಿಸಲು ಮಾಡಿದ ಆಲೋಚನೆಯು ಸಾಧುವಾಗಿತ್ತು. "ಚಂದಾಸಾಹೇಬನು ಕರ್ಣಾಟಕದ ಸೈನ್ಯವನ್ನೆಲ್ಲ ತಿರುಚನಾಪಳ್ಳಿಗೆ ತಂದಿರುವನು; ಅವನ ರಾಜಧಾನಿಯಾದ ಆರ್ಕಾಟಿನಲ್ಲಿ ಎಲ್ಲೋ ಕೆಲವು ಸಿಪಾಯಿಗಳು ಮಾತ್ರ ಇರುವರು; ಈ ಸಮಯದಲ್ಲಿ ಇಂಗ್ಲಿಷರು ಅವನ ರಾಜಧಾನಿಯನ್ನು ಹಿಡಿದರೆ, ತನ್ನ ಪಟ್ಟಣವನ್ನು ಬಿಡಿಸಿಕೊಳ್ಳುವುದಕ್ಕಾಗಿ, ಚಂದಾಸಾಹೇಬನು ತಿರುಚನಾಪಳ್ಳಿಯನ್ನು ಮುತ್ತಿರುವ ಸೈನ್ಯವನ್ನು ಕಳುಹಿಸುವನು; ಇದರಿಂದ ತಿರುಚನಾಪಲ್ಲಿಯ ಮುತ್ತಿಗೆಯ ಬಲವು ಕಡಿಮೆಯಾಗುವುದು; ಆಗ ಇಂಗ್ಲಿಷರು ಸರಿಯಾದ ಪ್ರಯತ್ನಗಳನ್ನು ಮಾಡಿ ಮಹಮ್ಮದಲ್ಲಿಯನ್ನು ಬಿಡಿಸಿಕೊಳ್ಳಬಹುದು" ಎಂಬ ಕ್ಲೈವನ ಈ ಸಲಹೆಯು ಮದ

ರಾಸಿನ ಗವರ್ನರಿಗೆ ಒಪ್ಪಿತು. ಆತನು ಈ ಸಲಹೆಯನ್ನನುಸರಿಸಿ ಕೆಲಸ ನಡೆಯಿಸುವುದಕ್ಕೆ ಕ್ಲೈವನನ್ನೇ ನೇಮಿಸಿ ಅವನೊಡನೆ 500 ಜನ ಸೈನಿಕರನ್ನೂ ಕಳುಹಿಸಿದನು.

ಈ ಸೈನ್ಯವು 1751ರಲ್ಲಿ ಆರ್ಕಾಟನ್ನು ಮುತ್ತಿತು. ಈ ಸುದ್ದಿಯು ತಿಳಿದೊಡನೆಯೇ ಚಂದಾಸಾಹೇಬನು ತಿರುಚನಾಪಳ್ಳಿಯಿಂದ ಹತ್ತು ಸಾವಿರ ಸೇನೆಯನ್ನು ತನ್ನ ಮಗನಾದ ರಸಾಸಾಹೇಬನೊಡನೆ ಕಳುಹಿಸಿದನು. ರಸಾಸಾಹೇಬನು ಆರಣಿಯಲ್ಲಿ ಸೋತುಹೋದನು. ಇಷ್ಟರಲ್ಲಿ ತಿರುಚನಾಪಳ್ಳಿಯ ಮುತ್ತಿಗೆಯು ದುರ್ಬಲವಾದುದರಿಂದ ಇಂಗ್ಲಿಷರ ಸೈನ್ಯವೂ, ಮೈಸೂರು ಸೈನ್ಯವೂ, ಸಾಹಸದಿಂದ ಕಾದಿ ಮಹಮ್ಮದಲ್ಲಿಯನ್ನು ನಿರ್ಬಂಧದಿಂದ ಬಿಡಿಸಿ ಅವನನ್ನೇ ಕರ್ಣಾಟಕದ ನವಾಬನನ್ನಾಗಿ ಮಾಡಿದರು.

ತನ್ನನ್ನು ಬಿಡಿಸಿದರೆ ತಿರುಚನಾಪಳ್ಳಿಯನ್ನು ಮೈಸೂರಿನವರಿಗೂ, ಮರಾಟೆಯವರಿಗೂ ಹಂಚಿಕೊಡುವುದಾಗಿ ಮಹಮ್ಮದಲ್ಲಿಯು ಹೇಳಿದ್ದಂತೆ ನಡೆಯಲಿಲ್ಲ. ಪ್ರಬಲರಾಗಿದ್ದ ಇಂಗ್ಲೀಷರೇ ತಿರುಚನಾಪಲ್ಲಿಯನ್ನು ಆಕ್ರಮಿಸಿಕೊಂಡರು. ಆದುದರಿಂದ ಮೈಸೂರಿನವರೂ, ಮರಾಟೆಯವರೂ, ಶತ್ರುಪಕ್ಷವನ್ನು ಸೇರಿ ಪುನಃ ತಿರುಚನಾಪಳ್ಳಿಯನ್ನು ಮುತ್ತಿದರು. ಜಗಳವು ಮತ್ತೆ ಪ್ರಾರಂಭವಾಯಿತು. ಜಯಲಕ್ಷ್ಮಿಯು ಇಂಗ್ಲಿಷರ ಕೈಹಿಡಿದಳು. ಎಲ್ಲಾ ಕಡೆಯಲ್ಲಿಯೂ ಅವರೇ ಜಯಶೀಲರಾದರು. ಮಹಮ್ಮದಲ್ಲಿಯೇ ಆರ್ಕಾಟಿನ ನವಾಬನಾದನು. ಈಗ ಇಂಗ್ಲಿಷರ ಕೀರ್ತಿಯು ಎಲ್ಲೆಲ್ಲಿಯೂ ಹರಡಲಾರಂಭಿಸಿತು.

ಹಿಂದೂ ದೇಶದಲ್ಲಿ ಫ್ರೆಂಚರಿಗುಂಟಾದ ಪರಾಜಯದ ವರ್ತಮಾನವು ಅವರ ಸೀಮೆಗೆ ಮುಟ್ಟಿ ಅಲ್ಲಿಯ ಸರ್ಕಾರದವರು ಡೂಪ್ಲೆಯೇ ಇಷ್ಟಕ್ಕೆಲ್ಲ ಕಾರಣನೆಂದು ಅವನನ್ನು ಹಿಂದಕ್ಕೆ ಕರೆಯಿಸಿಕೊಂಡು ಅವಮಾನ ಮಾಡಿದರು. ಇವನ ತರುವಾಯ ಬಂದ ಫ್ರೆಂಚ್‌ಗೌರ್ನರು ಇಂಗ್ಲಿಷರೊಡನೆ 1755ರಲ್ಲಿ ಪುದುಚೇರಿಯ ಕೌಲನ್ನು ಮಾಡಿಕೊಂಡನು. ಇದರಿಂದ ಎರಡು ಪಕ್ಷದವರೂ ಇನ್ನು ಮುಂದೆ ದೇಶೀಯರಾಜರ ಗೊಡವೆಗೆ ಹೋಗಬಾರದೆಂತಲೂ, ಫ್ರೆಂಚರು ಹೊಸದಾಗಿ ಸಂಪಾದಿಸಿದ ಸೀಮೆಗಳನ್ನು ಬಿಟ್ಟುಬಿಡಬೇಕೆಂತಲೂ, ತೀರ್ಮಾನವಾಯಿತು. ಈ ಕರಾರಿ

ನಿಂದ ಫ್ರೆಂಚರ ರಾಜ್ಯಸ್ಥಾಪನೆಯ ಕೆಲಸವು ನಿರರ್ಥಕವಾಗಿ ಪರಿಣಮಿಸಿ ಫ್ರೆಂಚರ ಪ್ರಾಬಲ್ಯವು ಕಡಿಮೆಯಾಯಿತು.

ಆದರೆ ನಿಜವಾಗಿಯೂ ಈ ಕರಾರಿನಂತೆ ಯಾರೂ ನಡೆಯಲಿಲ್ಲ. ಇಂಗ್ಲಿಷರು ಮಹಮ್ಮದಲ್ಲಿಗೆ ಸಹಾಯಮಾಡುತ್ತಲೇ ಇದ್ದರು. ಫ್ರೆಂಚರು ಉತ್ತರ ಸರ್ಕಾರವನ್ನು ಬಿಡಲೇ ಇಲ್ಲ. ಹೀಗಿರಲು ಸೀಮೆಗೆಹೋಗಿದ್ದ ಕ್ಲೈವನು ಅಲ್ಲಿ ದೊರೆಯಿಂದಲೂ, ಜನಗಳಿಂದಲೂ ಸನ್ಮಾನಿತನಾಗಿ 1756ರಲ್ಲಿ ಫೋರ್ಟ್‌ಸೆಂಟ್ ಡೇವಿಡ್ ಕೋಟೆಗೆ ಅಧಿಕಾರಿಯಾಗಿ ಇಂಡಿಯಾಕ್ಕೆ ಬಂದನು.

ಫ್ರೆಂಚರ ೩ನೆಯ ಯುದ್ಧ

ಕ್ರಿ. ಶ. 1756ರಲ್ಲಿ ಯೂರೋಪಿನಲ್ಲಿ ಫ್ರೆಂಚರಿಗೂ ಇಂಗ್ಲಿಷರಿಗೂ ಪುನಃ ಯುದ್ಧವೊದಲಾಯಿತು. ಅದೇ ನೆವವಾಗಿ ಈ ದೇಶದಲ್ಲಿಯೂ ಇವರ ಕಂಪೆನಿಯವರು ಯುದ್ಧವನ್ನು ವೊದಲುಮಾಡಿದರು. ಆಗತಾನೇ ಬಂದಿದ್ದ ಫ್ರೆಂಚರ ಗವರ್ನರಾದ ಲಾಲಿಯು ಇಂಗ್ಲಿಷರನ್ನು ಹಿಂದೂ ದೇಶದಿಂದಲೇ ಓಡಿಸುವ ಪ್ರತಿಜ್ಞೆಯನ್ನು ಮಾಡಿಕೊಂಡು ಬಂದು, ಇಂಗ್ಲಿಷರ ಫೋರ್ಟ್‌ಸೆಂಟ್ ಡೇವಿಡ್ ಕೋಟೆಗೂ, ಮದರಾಸಿಗೂ, ಮುತ್ತಿಗೆ ಹಾಕಿ ಹೈದರಾಬಾದಿನಲ್ಲಿದ್ದ ಬುಸ್ಸಿಯನ್ನು ತನ್ನ ಸಹಾಯಕ್ಕೆ ಕರೆದನು. ಬುಸ್ಸಿಯು ಹೈದರಾಬಾದನ್ನು ಬಿಟ್ಟು ಹೊರಡುವುದನ್ನೇ ನಿರೀಕ್ಷಿಸಿಕೊಂಡಿದ್ದ ಇಂಗ್ಲಿಷರು ಬಂಗಾಳದಿಂದ ಹೊರಟುಬಂದು ಉತ್ತರ ಸರ್ಕಾರವನ್ನು ತಮ್ಮ ಅಧೀನ ಮಾಡಿಕೊಂಡರು. ಹೈದರಾಬಾದಿನ ನಿಜಾಮನು ಇಂಗ್ಲಿಷರ ಪಕ್ಷವನ್ನು ಸೇರಿಕೊಂಡನು.

ಈ ನಡುವೆ ಲಾಲಿ, ಬುಸ್ಸಿ ಇವರಿಬ್ಬರೂ ಸೇರಿ ಮದರಾಸಿಗೆ ಮುತ್ತಿಗೆ ಹಾಕಿ, ವಾಂದಿವಾಷ್ ಬಳಿಯಲ್ಲಿ ಪರಾಜಿತರಾದರು. ಬುಸ್ಸಿಯು ಸೆರೆಸಿಕ್ಕಿದನು. ಜಿಂಜೀಕೋಟೆಯು ಇಂಗ್ಲಿಷರ ವಶವಾಯಿತು. ಈ ಅಪಜಯಗಳಿಂದ ಫ್ರೆಂಚರ ಕೀರ್ತಿಯು ಸಂಪೂರ್ಣವಾಗಿ ಹಾಳಾಯಿತು. ಇಷ್ಟಕ್ಕೆಲ್ಲ ಲಾಲಿಯೇ ಕಾರಣನೆಂದು ಅವನನ್ನು ಪ್ರಾನ್ಸಿಗೆ ಬರಮಾಡಿಕೊಂಡು ಅಲ್ಲಿ ಅವನನ್ನು ಗಲ್ಲಿಗೆ ಹಾಕಿದರು.

ಕಡೆಗೆ 1763ರಲ್ಲಿ ಕರಾರು ನಡೆದು ಇಂಗ್ಲಿಷರು ಪುದುಚೇರಿ ಮೊದಲಾದ ಕೆಲವು ಸ್ವಾಸ್ಥ್ಯಗಳನ್ನು ಮಾತ್ರ ಫ್ರೆಂಚರಿಗೆ ಬಿಟ್ಟುಕೊಟ್ಟರು.

ಇಲ್ಲಿಗೆ ಫ್ರೆಂಚರ ಪ್ರಾಬಲ್ಯವು ಮುಗಿದಂತಾಯಿತು. 1764ರಲ್ಲಿ ಅವರ ಕಂಪೆನಿಯು ಕೊನೆಗಂಡಿತು. ಇನ್ನು ಮುಂದೆ ಯೂರೋಪಿನ ಉಳಿದ ಜನಾಂಗದವರಾರೂ ಇಂಡಿಯಾದಲ್ಲಿ ಇಂಗ್ಲಿಷರ ಗೋಜಿಗೆ ಬರಲಿಲ್ಲ.

ಈಗ ಪುದುಚೇರಿ, ಮಾಹಿ, ಕಾರ್ರೈಕಾಲ್, ಯಾನಾಂ, ಚಂದ್ರನಗರ ಇವುಗಳು ಮಾತ್ರ ಫ್ರೆಂಚರಿಗೆ ಉಳಿದುಕೊಂಡಿವೆ.

ಫ್ರೆಂಚರ ಕ್ಷೀಣತೆಗೆ ಕಾರಣಗಳು

ಈ ರೀತಿಯಾಗಿ ಫ್ರೆಂಚರ ಬಲವು ಕುಗ್ಗಿಹೋಯಿತು. ಫ್ರಾನ್ಸಿನ ಸರ್ಕಾರದವರು ತಮ್ಮ ಕಡೆ ಅಧಿಕಾರಿಗಳಿಗೆ ಸಕಾಲದಲ್ಲಿ ಸಹಾಯ ಮಾಡುತ್ತಿರಲಿಲ್ಲ. ಯುದ್ಧಕಾಲದಲ್ಲಿ ಹಣವೂ, ಸೈನ್ಯವೂ ಇಲ್ಲದೆ ಪೇಚಾಡಬೇಕಾಗುತ್ತಿತ್ತು. ಇದರ ಜತೆಗೆ ಸರ್ಕಾರದವರು ತಮ್ಮ ಅಧಿಕಾರಿಗಳಲ್ಲಿ ಹುಳುಕನ್ನೇ ಹುಡುಕುತ್ತ ಅವರ ಕೆಲಸವನ್ನು ಕೆಡಿಸುತ್ತ ಇದ್ದರು. ಡೂಪ್ಲೆಯ ತರುವಾಯ ಬಂದ ಅಧಿಕಾರಿಗಳು ಕೇವಲ ಅಸಮರ್ಥರು; ಅವರಲ್ಲಿ ಐಕಮತ್ಯವಿರಲಿಲ್ಲ. ಅವರ ಭೂಸೈನ್ಯವೂ, ನೌಕಾಸೈನ್ಯವೂ ಹೊಂದಿಕೊಂಡು ಕೆಲಸಮಾಡುತ್ತಿರಲಿಲ್ಲ. ಇದೂ ಅಲ್ಲದೆ ಫ್ರೆಂಚರ ನೌಕಾಸೈನ್ಯವು ಇಂಗ್ಲಿಷರ ಹಡಗಿನ ಸೈನ್ಯದಮುಂದೆ ನಿಲ್ಲಲಾರದೆ ಹೋಯಿತು. ಡೂಪ್ಲೆಯನ್ನು ಕೆಲಸದಿಂದ ನಿವೃತ್ತಿಮಾಡಿದುದೂ, ಬುಸ್ಸಿಯನ್ನು ಹೈದರಾಬಾದಿನಿಂದ ಹಿಂದಕ್ಕೆ ಬರಮಾಡಿಕೊಂಡುದೂ, ಫ್ರೆಂಚರ ಪರಾಜಯಕ್ಕೆ ಮೂಲಕಾರಣಗಳಾದುವು.

ಅಧ್ಯಾಯ ೩.—ಬಂಗಾಳವು ಇಂಗ್ಲಿಷರ ವಶವಾದುದು

ಸಿರಾಜುದ್ದೌಲ

ಔರಂಗಜೇಬನು ಸತ್ತಮೇಲೆ ಬಂಗಾಳವು ಸ್ವತಂತ್ರರಾಜ್ಯವಾಯಿತು. ಅಲ್ಲಿಯ ನವಾಬನಾದ ಅಲಿವರ್ದಿಖಾನನು ಇಂಗ್ಲಿಷರೊಡನೆ ಸ್ನೇಹದಲ್ಲಿದ್ದು ಅವರ ವ್ಯಾಪಾರ ಕಾರ್ಯಗಳಿಗೆ ಸಹಕಾರಿಯಾಗಿದ್ದನು.

1756ರಲ್ಲಿ ಅವನು ಸತ್ತುಹೋದಮೇಲೆ ಅವನ ಮುಮ್ಮಗನಾದ ಸಿರಾಜುದ್ದೌಲನು ಪದವಿಗೆ ಬಂದನು. ಅಂತಃಪುರದಲ್ಲಿ ಬಹಳ ಅಕ್ಕರೆಯಿಂದ ಬಳೆದ ಇವನಿಗೆ ಪ್ರಪಂಚಜ್ಞಾನವೇ ಸಾಲದಾಗಿತ್ತು. ಇವನು ದುರಹಂಕಾರಿಯಾಗಿ ಅವಿವೇಕದ ಕೆಲಸಗಳನ್ನೇ ಮಾಡುತ್ತಿದ್ದನು. ಇಂಗ್ಲಿಷರು ತುಂಬ ಹಣಗಾರರೆಂದು ಕೇಳಿ, ಹೇಗಾದರೂ ಮಾಡಿ ಅವರನ್ನು ಸುಲಿಗೆ ಮಾಡಬೇಕೆಂಬ ಉದ್ದೇಶದಿಂದ ಅವರನ್ನು ಕಾಲುಕೆರೆದು ಜಗಳಕ್ಕೆ ಕರೆಯುತಿದ್ದನು.

ಈ ವೇಳೆಗೆ ಇಂಗ್ಲಿಷರಿಗೂ ಫ್ರೆಂಚರಿಗೂ ಯುದ್ಧವಾಗುವ ಸಂಭವವಿದ್ದುದರಿಂದ, ಇಂಗ್ಲಿಷರು ಬಿದ್ದುಹೋಗಿದ್ದ ಕಲ್ಕತ್ತೆಯ ಕೋಟೆಯನ್ನು ಸರಿಪಡಿಸುತ್ತಿದ್ದರು; ಮತ್ತು ನವಾಬನ ಕಿರುಕುಳವನ್ನು ಸಹಿಸಲಾರದೆ ಅವರ ರಾಜ್ಯದಿಂದ ಓಡಿಬಂದ ಒಬ್ಬ ಬಂಗಾಳಿ ವರ್ತಕನಿಗೆ ಅವರು ಆಶ್ರಯಕೊಟ್ಟರು. ಇವುಗಳನ್ನು ಸಹಿಸಲಾರದೆ ನವಾಬನು ಫೋರ್ಟು ವಿಲಿಯಂ ಕೋಟೆಯನ್ನು ಕೆಡವಬೇಕೆಂದೂ, ತಮ್ಮ ಮರೆಹೊಕ್ಕಿದ್ದ ಸಾಹುಕಾರನನ್ನು ಬಿಟ್ಟುಕೊಡಬೇಕೆಂದೂ ಇಂಗ್ಲಿಷರನ್ನು ಪೀಡಿಸಿದನು. ಇಂಗ್ಲೀಷರು ಇವೆರಡಕ್ಕೂ ಸಮ್ಮತಿಸಲಿಲ್ಲ. ಇದೇ ನೆವವಾಗಿ ಉನ್ಮತ್ತನಾದ ನವಾಬನು ದೊಡ್ಡ ದಂಡಿನೊಡನೆ ಇಂಗ್ಲಿಷರ ಮೇಲೆ ಬಿದ್ದನು. ಕಲ್ಕತ್ತೆಯಲ್ಲಿದ್ದ ಇಂಗ್ಲಿಷರನ್ನು ಹೆಂಗಸರು ಮಕ್ಕಳೆಂಬ ಪರಿಜ್ಞಾನವೇ ಇಲ್ಲದೆ ಹಿಂಸಿಸಿ ಸೆರೆಮನೆಯಲ್ಲಿಟ್ಟನು.* ವಿಲಿಯಂ ಕೋಟೆಯು ನವಾಬನ ಕೈಸೇರಿತು.

ನವಾಬನಮೇಲೆ ದ್ವೇಷ

ಈ ಪರಾಭವದ ವರ್ತಮಾನವು ಇಂಗ್ಲಿಷರ ಮನಸ್ಸಿನಲ್ಲಿ ತುಂಬ ವ್ಯಾಕುಲವನ್ನುಂಟುಮಾಡಿತು. ಮದರಾಸಿನ ಅಧಿಕಾರಿಗಳು ನವಾಬನ ಮೇಲಿನ ದ್ವೇಷವನ್ನು ತೀರಿಸಿಕೊಳ್ಳುವುದಕ್ಕಾಗಿ ಆಗತಾನೆ ಸೀಮೆಯಿಂದ ಬಂದಿದ್ದ ಕ್ಲೈವನನ್ನೂ, ಅಡ್ಮಿರಲ್ ವಾಟ್ಸನ್ ಎಂಬ ನಾವಿಕನನ್ನೂ

* ನವಾಬನು ಇಂಗ್ಲಿಷರ 146 ಜನ ಸೋಲ್ಜರುಗಳನ್ನು ಸೆರೆಹಿಡಿದು 18′—18′ ವಿಸ್ತಾರವುಳ್ಳ ಕಿಟಕಿಗಳಿಲ್ಲದ ಒಂದು ಕೋಣೆಗೆ ಕೂಡಿಸಿದ್ದನೆಂದೂ, ಬೆಳಗಾಗುವುದರೊಳಗೆ 123 ಜನರು ಸತ್ತೇಹೋಗಿದ್ದರೆಂದೂ ಕೆಲವು ಚರಿತ್ರಕಾರರು ಬರೆದಿರುತ್ತಾರೆ. ಈಚಿನ ಶೋಧನೆಗಳಿಂದ ಈ ಕತ್ತಲೆ ಕೋಣೆಯ ಕೊಲೆಯ ವೃತ್ತಾಂತವು ಸುಳ್ಳೆಂದು ತಿಳಿಯಬಂದಿದೆ.

ದೊಡ್ಡ ಸೈನ್ಯಗಳೊಡನೆ ಕಳುಹಿಸಿದರು. ಕಲ್ಕತ್ತೆಯನ್ನು ಪುನಃ ಇಂಗ್ಲಿಷರು ವಶಮಾಡಿಕೊಳ್ಳುವುದು ಅಷ್ಟೇನೂ ಕಷ್ಟವಾಗಲಿಲ್ಲ. ನವಾಬನು ಕ್ಲೈವನ ಸಾಮರ್ಥ್ಯಕ್ಕೆ ಅಂಜಿ ಇಂಗ್ಲಿಷರೊಡನೆ ಸಮಾಧಾನ ಮಾಡಿಕೊಂಡನು. ಆದರೂ ಅವನಿಗಿದ್ದ ದ್ವೇಷವು ಮಾತ್ರ ಕಡಿಮೆಯಾಗಲಿಲ್ಲ. ಇವರನ್ನು ಹೇಗಾದರೂ ಮಾಡಿ ಈ ಸೀಮೆಯಿಂದಲೇ ಓಡಿಸುವುದಕ್ಕಾಗಿ ಫ್ರೆಂಚರೊಡನೆ ಅವನು ಒಳಸಂಚು ನಡೆಯಿಸುತ್ತಲೇ ಇದ್ದನು. ಈ ಒಳಗುಟ್ಟನ್ನು ತಿಳಿದ ಇಂಗ್ಲಿಷರು ಈ ದುಷ್ಟವೈರಿಯನ್ನು ಮುರಿಯುವುದಕ್ಕೆ ಸಮಯವನ್ನು ನೋಡುತ್ತಲೇ ಇದ್ದರು.

ಈ ನಡುವೆ ಸಿರಾಜನು ತನ್ನ ಕ್ರೂರತ್ವದಿಂದ ತನ್ನ ಜನಗಳನ್ನೇ ತನ್ನಮೇಲೆ ಕೆಡವಿಕೊಂಡಿದ್ದನು. ಇವನ ಕೆಟ್ಟ ನಡತೆಯಿಂದ ಎಲ್ಲರೂ ಬೇಸತ್ತಿದ್ದರು. ಆದುದರಿಂದ ಇವನನ್ನು ರಾಜ್ಯದಿಂದ ಓಡಿಸಿ ಇವನ ದಳಪತಿಯಾದ ಮೀರ್‌ಜಾಫರನಿಗೆ ಪಟ್ಟಕಟ್ಟುವುದಕ್ಕೆ ಒಳಸಂಚು ನಡೆಯಿಸುವುದು ಇಂಗ್ಲಿಷರಿಗೆ ಸುಲಭವಾಯಿತು. ಮೀರ್‌ಜಾಫರನು ತನ್ನ ದಂಡಿನೊಡನೆ ಯುದ್ಧಕ್ಕೆ ಬರಬೇಕೆಂದೂ ತನ್ನನ್ನು ನವಾಬ್‌ಗಿರಿಗೆ ತಂದರೆ ಮೀರ್‌ಜಾಫರನು ಇಂಗ್ಲಿಷರಿಗೆ ವಿಶೇಷ ಹಣ ಕೊಡಬೇಕೆಂದೂ ಒಪ್ಪಂದವಾಯಿತು.

ಪ್ಲಾಸೀಯುದ್ಧ (ಕ್ರಿ. ಶ. 1757).

ತರುವಾಯ ಕರ್ನಲ್ ಕ್ಲೈವನು ತನ್ನ ಸೈನ್ಯದೊಡನೆ ಹೊರಟು ಪ್ಲಾಸಿ ಎಂಬ ಹಳ್ಳಿಯ ಬಳಿಯಲ್ಲಿ ತನ್ನ ಪಾಳಯವನ್ನು ಬಿಟ್ಟನು. ಸಿರಾಜನೂ ಒಂದು ದೊಡ್ಡ ಸೈನ್ಯದೊಡನೆ ಫ್ರೆಂಚರಿಂದ ಸಹಾಯಪಡೆದು ಅಲ್ಲಿಗೆ ಬಂದು ಸೇರಿದನು. 1757ನೆಯ ಜೂನ್ 23ನೆಯ ದಿನ ಪ್ಲಾಸಿಯ ಯುದ್ಧವಾಯಿತು. ತನ್ನ ಮಾತಿನಂತೆ ಮೀರ್ ಜಾಫರನು ಇಂಗ್ಲಿಷರ ಕಡೆ ಯುದ್ಧಮಾಡಲಿಲ್ಲ. ಆದರೇನು. ದೈವವೇ ಅವರಿಗೆ ಸಹಾಯವಾಯಿತು. ಯುದ್ಧ ಪ್ರಾರಂಭವಾಗುವುದಕ್ಕೆ ಮೊದಲೇ ದೊಡ್ಡಮಳೆ ಬಂದಿತು. ಅದರಲ್ಲಿ ನವಾಬನ ಯುದ್ಧ ಸಾಮಾಗ್ರಿಗಳೆಲ್ಲವೂ ನೆನೆದು ಹೋದುವು. ಮಾವಿನ ತೋಪಿನ ಆಸರೆಯಲ್ಲಿದ್ದ ಇಂಗ್ಲಿಷರ ಮದ್ದುಗುಂಡುಗಳು ಮಳೆಯ ನೀರಿಗೆ ಸಿಕ್ಕಲಿಲ್ಲ. ಈ ಸುಳುವನ್ನು ತಿಳಿದ ಕ್ಲೈವನು ಮಳೆಯು ನಿಂತೊಡನೆಯೇ ತನ್ನ ಫಿರಂಗಿಗಳನ್ನು ಹಾರಿಸಲು

ಮೊದಲುಮಾಡಿ ಶತ್ರುವಿನಮೇಲೆ ಮದ್ದಿನ ಮಳೆಯನ್ನು ಕರೆದನು. ನವಾಬನ ಗುಂಡುಗಳು ಹಾರಲಿಲ್ಲ. ಈ ಕಾರಣದಿಂದ ನವಾಬನ ಯೋಧರು ಯುದ್ಧಸಾಮಗ್ರಿಗಳನ್ನು ಬಿಟ್ಟು ಓಡಿಹೋದರು. ಸಿರಾಜನು ಓಡಿಹೋಗುತ್ತಿರುವಾಗ ತನ್ನ ಚಿಕ್ಕಂದಿನ ಶತ್ರುವಿನ ಕೈಗೆ ಸಿಕ್ಕುಬಿದ್ದು ಅವನಿಂದ ಹತನಾದನು.

ಆಗ ಇಂಗ್ಲಿಷರು ಮೀರ್‌ಜಾಫರನನ್ನು ಬಂಗಾಳ, ಬಿಹಾರ, ಒರಿಸ್ಸ ಈ ರಾಜ್ಯಗಳ ನವಾಬನನ್ನಾಗಿ ಮಾಡಿದರು. ಆದರೇನು, ಯುದ್ಧದ ಖರ್ಚಿಗೂ, ಬೇರೆ ವೆಚ್ಚಕ್ಕೂ ಕೊಟ್ಟ ಹಣದಿಂದ ನವಾಬನ ಬೊಕ್ಕಸವೇ ಬರಿದಾಯಿತು. ಇದರ ಜತೆಗೆ ನವಾಬನು 24 ಪರಗಣಗಳೆಂಬ ಫಲವತ್ತಾದ ಜಹಗೀರನ್ನೂ ಇಂಗ್ಲಿಷರಿಗೆ ಕೊಟ್ಟನು. ಇದೇ ಬಂಗಾಳಾ ಆಧಿಪತ್ಯದ ತಳಹದಿಯೆನ್ನಬಹುದು. ಈ ಯುದ್ಧದಿಂದ ಇಂಗ್ಲಿಷರ ಕೀರ್ತಿಯು ಎಲ್ಲೆಲ್ಲಿಯೂ ಹರಡಿತು. ಉತ್ತರ ಹಿಂದೂಸ್ಥಾನದಲ್ಲಿ ಇಂಗ್ಲಿಷರಿಗೆ ಜಯವಾಗುವುದಕ್ಕೆ ಇದೇ ಮೊದಲು. ಅಲ್ಲಿಂದೀಚೆಗೆ ಕಂಪೆನಿಯವರು ಒಂದು ಯುದ್ಧವಾದಮೇಲೆ ಇನ್ನೊಂದರಂತೆ ಜಯಶೀಲರಾಗಿ, ಕೊನೆಗೆ ಆ ಸೀಮೆಯನ್ನೆಲ್ಲ ತಮ್ಮ ವಶಮಾಡಿಕೊಂಡು, ಅಲ್ಲಿಗೆ ತಾವೇ ದೊರೆಗಳಾದರು.

ಮೀರ್‌ಜಾಫರ್

ಇಂಗ್ಲಿಷರ ಸಹಾಯದಿಂದ ನವಾಬನಾದ ಮೀರ್‌ಜಾಫರನು ಅವಿವೇಕಿಯಾಗಿಯೂ, ರಾಜ್ಯವನ್ನಾಳುವುದಕ್ಕೆ ಅಸಮರ್ಥನಾಗಿಯೂ ಇದ್ದನು. ಇಂಗ್ಲಿಷರಿಗೆ ಕೊಟ್ಟ ಹಣದಿಂದಲೂ, ತನ್ನ ದುಂದು ಖರ್ಚಿನಿಂದಲೂ, ಬೊಕ್ಕಸವು ಬರಿದಾಗಲು ತನ್ನ ದೇಶದ ಧನಿಕರನ್ನು ಸುಲಿಗೆ ಮಾಡಲಾರಂಭಿಸಿದನು. ಇದು ಇಂಗ್ಲಿಷರಿಗೆ ಸಮ್ಮತಿಸಲಿಲ್ಲ. ಅವರು ತಮ್ಮ ಅಸಮಾಧಾನವನ್ನು ಸೂಚಿಸಿದುದರಿಂದ ಇವರ ಗೊಡವೆಯನ್ನೇ ಬಿಡಬೇಕೆಂದು ಡಚ್ಚರ ಸಹಾಯವನ್ನು ಕೇಳಿದನು. ಯೂರೋಪ್ ಖಂಡದಲ್ಲಿ ಇಂಗ್ಲಿಷರಿಗೂ ಡಚ್ಚರಿಗೂ ಸಮಾಧಾನವಾಗಿದ್ದರೂ ವ್ಯಾಪಾರದ ವಿಷಯವಾಗಿ ಇಂಗ್ಲಿಷರಮೇಲೆ ಅಸೂಯೆಯುಳ್ಳ ಡಚ್ಚರು ಮೀರ್‌ಜಾಫರನಪರವಾಗಿ ಯುದ್ಧಮಾಡಲು ಸಿದ್ಧರಾದರು. ಕ್ಲೈವನು ಅವರನ್ನು ಸಂಪೂರ್ಣವಾಗಿ ಸೋಲಿಸಿ ಅವರ ಮುಖ್ಯ ಕೋಠಿಯಾದ ಚಿನ್ಸೂರವನ್ನು ತನ್ನ ವಶಮಾಡಿಕೊಂಡನು.

ಈ ಜಯಗಳಿಂದ ಕ್ಲೈವನ ಹೆಸರು ಸೀಮೆಯುವರೆಗೂ ಮುಟ್ಟಿ, ಅವನು ಬಂಗಾಳಾ ದೇಶಕ್ಕೆಲ್ಲ ಕಂಪನಿಯ ಗವರ್ನರಾದನು. ಆದರೆ ಅವನು ಇಲ್ಲಿ ಬಹುಕಾಲ ನಿಲ್ಲಲಿಲ್ಲ. 1760ರಲ್ಲಿ ಆತನು ಸೀಮೆಗೆ ಹಿಂದಿರುಗಿದಾಗ ಅವನಿಗೆ ಲಾರ್ಡ್ ಎಂಬ ಪದವಿಯು ದೊರೆಯಿತು. ಕ್ಲೈವನು ಸೀಮೆಗೆ ಹೋದಮೇಲೆ ಬಂಗಾಳಾ ಆಧಿಪತ್ಯದ ಆಡಳಿತವು ಹದಗೆಟ್ಟಿತು. ಮೀರ್‌ಜಾಫರನ ಅವಿವೇಕದ ದರ್ಬಾರಿನಿಂದ ಆಡಳಿತದ ಬಿಗಿ ತಪ್ಪಿತು. ಇಂಗ್ಲಿಷ್ ಕಂಪೆನಿಯ ಚಾಕರರು ಸ್ವಫಲಾಪೇಕ್ಷೆಯಿಂದ ತಾವು ತಾವೇ ವ್ಯಾಪಾರಕ್ಕೆ ಕೈಹಾಕಿದರು. ಮೀರ್‌ಜಾಫರನನ್ನು ತಪ್ಪಿಸಿ ಬೇರೊಬ್ಬನನ್ನು ನವಾಬನನ್ನಾಗಿ ಮಾಡಿದರೆ ತಮಗೆ ಪ್ರತಿಫಲವಾದೀತೆಂದು ಇಂಗ್ಲಿಷರು ಅವನ ಅಳಿಯ ಮೀರ್‌ಕಾಸಿಮನನ್ನು ಅಧಿಕಾರಕ್ಕೆ ತಂದರು. ಅದಕ್ಕೆ ಪ್ರತಿಯಾಗಿ ಅವನು ಕಂಪೆನಿಗೆ ಬರ್ದವಾನ್, ಮಿಡ್ನಾಪುರ, ಚಿಟ್ಟಗಾಂಗ್ ಈ ಮೂರು ಪ್ರಾಂತಗಳನ್ನು ಕೊಟ್ಟನು.

ಮೀರ್‌ಕಾಸಿಂ

ಶಕ್ತನಾದ ಮೀರ್‌ಕಾಸಿಮನು ರಾಜ್ಯದಾಡಳಿತವನ್ನು ಬಲು ಬಿಗಿಯಿಂದ ನಡೆಯಿಸಿದನು. ತನ್ನ ಮಾವನು ಮಾಡಿದ್ದ ಸಾಲವನ್ನೆಲ್ಲ ತೀರಿಸಿ, ರಾಜ್ಯವನ್ನು ತಹಬಂದಿಗೆ ತಂದನು. ಮೀರ್‌ಜಾಫರನಂತೆ ಹೆಸರಿಗೆ ಮಾತ್ರ ನವಾಬನೆನಿಸಿಕೊಂಡು, ಇಂಗ್ಲಿಷರಿಗೆ ಅಡಿಯಾಳಾಗಿರಲು ಇವನ ಮನಸ್ಸು ಒಡಂಬಡಲಿಲ್ಲ. ಇಂಗ್ಲಿಷರು ಬಲಿಷ್ಠರಾಗುತ್ತಿರುವುದನ್ನು ನೋಡಿ, ಎಂದಿದ್ದರೂ ತನಗೆ ತೊಂದರೆಯಾದೀತೆಂಬ ಭಯದಿಂದ ನವಾಬನು ತನ್ನ ಕೋಟೆಯನ್ನು ಭದ್ರಪಡಿಸಿ ಆಯುಧಗಳನ್ನು ಶೇಖರಿಸಿ, ಫ್ರೆಂಚ್ ಸಿಪಾಯಿಗಳ ಸಹಾಯದಿಂದ ತನ್ನ ಸೈನ್ಯವನ್ನು ತರಪೇತು ಮಾಡಿಸಿದನು. ಇಂಗ್ಲಿಷರಿಗೆ ದೂರವಾಗಿರುವುದೇ ಲೇಸೆಂದು ಕಲ್ಕತ್ತೆಗೆ ಸಮೀಪವಾಗಿರುವ ಮುರ್ಷಿದಾಬಾದನ್ನು ಬಿಟ್ಟು ಅದಕ್ಕೆ ಮುನ್ನೂರು ಮೈಲಿ ದೂರದಲ್ಲಿರುವ ಮಾನಘಡವನ್ನು (ಮಾಂಘೀರ್) ತನ್ನ ರಾಜಧಾನಿಯಾಗಿ ಮಾಡಿಕೊಂಡನು.

ಕಾಸಿಮನಿಗೂ ಇಂಗ್ಲಿಷರಿಗೂ ಮನಸ್ತಾಪ

ಈ ವೇಳೆಗೆ ಸುಂಕದ ವಿಷಯದಲ್ಲಿ ಇಂಗ್ಲಿಷರಿಗೂ ಕಾಸಿಮನಿಗೂ ಜಗಳ ಹುಟ್ಟಿತು. ಪ್ಲಾಸೀಯುದ್ಧವಾದಮೇಲೆ ನವಾಬನು ತನ್ನ ಸೀಮೆಯಲ್ಲಿ ಕಂಪನಿಯ ಸರಕುಗಳಮೇಲೆ ಸುಂಕವನ್ನು ಎತ್ತುತ್ತಿರಲಿಲ್ಲ. ಕೆಲವು ದಿನಗಳಮೇಲೆ ಕಂಪೆನಿಯ ಚಾಕರರು ದೇಶೀಯ ವರ್ತಕರಿಂದ ಹಣವನ್ನು ತೆಗೆದುಕೊಂಡು, ಅವರ ಸಾಮಾನುಗಳನ್ನೂ ತಮ್ಮ ಹೆಸರಿನಮೇಲೆ ಸುಂಕವಿಲ್ಲದೆ ಊರಿಂದೂರಿಗೆ ಕಳುಹಿಸಲಾರಂಭಿಸಿದರು. ಇದರಿಂದ ನವಾಬನ ಸರ್ಕಾರಕ್ಕೆ ಬರುತ್ತಿದ್ದ ಲಾಭವು ಕಡಿಮೆಯಾಯಿತು. ಕಂಪನಿಯ ಸೇವಕರು ಮಾಡುತ್ತಿದ್ದ ಅನ್ಯಾಯವನ್ನು ನವಾಬನು ಕಂಪೆನಿಯ ಮುಖ್ಯಾಧಿಕಾರಿಗಳಿಗೆ ತಿಳಿಸಿದನು. ಅವರು ಅದಕ್ಕೆ ಮನಸ್ಸು ಕೊಡಲಿಲ್ಲ. ನವಾಬನು ಅಸಮಾಧಾನಗೊಂಡು ಎಲ್ಲಾ ವ್ಯಾಪಾರದಮೇಲೂ ಸುಂಕವನ್ನು ತೆಗೆದುಹಾಕಿದನು.

ಇದರಿಂದ ಕಂಪೆನಿಯವರಿಗೂ ನಷ್ಟವಾಯಿತು. ವ್ಯಾಪಾರದಲ್ಲಿ ಉಂಟಾಗುತ್ತಿದ್ದ ಲಾಭದಲ್ಲಿಯೇ ದೃಷ್ಟಿಯುಳ್ಳ ಕಂಪೆನಿಯವರು ನವಾಬನಮೇಲೆ ಯುದ್ಧಕ್ಕೆ ಸಿದ್ಧರಾದರು. ಅವರು ಪಾಟ್ನಾದಮೇಲೆ ನುಗ್ಗಿದರು. ನವಾಬನು ಕೋಪಗೊಂಡು ಅಲ್ಲಿ ಕೈಸೆರೆ ಸಿಕ್ಕಿದ ಇಂಗ್ಲಿಷರನ್ನು ಕೊಲ್ಲಿಸಿಬಿಟ್ಟುದಲ್ಲದೆ, ಅಯೋಧ್ಯೆಯ ನವಾಬ ಮತ್ತು ದೆಹಲಿಯ ಚಕ್ರವರ್ತಿ ಇವರುಗಳ ಸಹಾಯದಿಂದ ಯುದ್ಧಕ್ಕೆ ಬಂದನು. ಆದರೆ 1764ರಲ್ಲಿ ನಡೆದ ಬಕ್ಸಾರ್ ಯುದ್ಧದಲ್ಲಿ ನವಾಬನಿಗೆ ಸಂಪೂರ್ಣವಾಗಿ ಸೋಲಾಯಿತು. ಇಂಗ್ಲಿಷರು ಮೀರ್‌ಕಾಸಿಮನನ್ನು ಗಾದಿಯಿಂದ ತಳ್ಳಿ ಪುನಃ ಅಯೋಗ್ಯನಾದ ಮೀರ್‌ಜಾಫರನಿಗೇ ಪಟ್ಟಗಟ್ಟಿದರು.

ಪ್ಲಾಸಿಕದನವಾದನಂತರ ನಡೆದ ಬಕ್ಸಾರ್ ಕದನವು ಇಂಗ್ಲಿಷರ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸಿತು. ಮೊಗಲರಿಗೂ ಇಂಗ್ಲಿಷರಿಗೂ ಯುದ್ಧ ನಡೆದುದು ಇದೊಂದೇ ಸಲ. ಇದರಲ್ಲಿ ಮೊಗಲ್ ಚಕ್ರವರ್ತಿಯು ಸೋತು ಇಂಗ್ಲಿಷರಿಗೆ ಶರಣಾಗತನಾದನು. ಮೊಗಲರು ಪುನಃ ಅವರ ಗೊಡವೆಗೆ ಬರಲಿಲ್ಲ. ಅಯೋಧ್ಯೆಯ ನವಾಬನು ಮಾತ್ರ ಓಡಿಹೋಗಿ ಪುನಃ ದಂಡು ಕೂಡಿಸಿಕೊಂಡು ಬಂದು, ಯುದ್ಧಮಾಡಿ ಸೋತುಹೋಗಿ ತಾನೂ ಇಂಗ್ಲಿಷರ ಮರೆ ಹೊಕ್ಕನು. ಮೀರ್‌ಕಾಸಿಮನು ಸೋತು ಓಡಿಹೋದನು. ಅವನ ಮುಂದಿನ ಸಮಾಚಾರವೇ ಗೊತ್ತಾಗಲಿಲ್ಲ.

ಅಲಹಾಬಾದ್ ಒಪ್ಪಂದ

ಪಾಟ್ನಾ ಕೊಲೆಯ ಸುದ್ದಿಯೂ, ಕಂಪೆನಿಯ ವರ್ತಕರ ಅತ್ಯಾಚಾರಗಳೂ, ಸೀಮೆಯನ್ನು ಮುಟ್ಟಿ, ಕಂಪೆನಿಯ ಡೈರೆಕ್ಟರುಗಳು ಇಲ್ಲಿಯ ಸ್ಥಿತಿಯನ್ನು ಸರಿಪಡಿಸಲು ಲಾರ್ಡ್ ಕ್ಲೈವನನ್ನು ಬಂಗಾಳದ ಗವರ್ನರ್ ಮತ್ತು ಮುಖ್ಯ ಸೇನಾಧಿಪತಿಯಾಗಿ ನೇಮಿಸಿ ಹಿಂದೂಸ್ಥಾನಕ್ಕೆ ಕಳುಹಿಸಿದರು. ಅವನು ಬಂದೊಡನೆಯೇ ಅಯೋಧ್ಯೆಯ ನವಾಬನೊಡನೆಯೂ ಮೊಗಲ್ ಚಕ್ರವರ್ತಿಯೊಡನೆಯೂ ಅಲಹಾಬಾದ್ ಒಪ್ಪಂದವನ್ನು (1765) ಮಾಡಿಕೊಂಡನು.

ಇದರಿಂದ ಕ್ಲೈವನು ಅಯೋಧ್ಯೆಯ ನವಾಬನಿಗೆ ಅವನ ರಾಜ್ಯವಾದ ಅಯೋಧ್ಯೆಯನ್ನು ಹಿಂದಿರುಗಿ ಕೊಡಬೇಕೆಂತಲೂ, ಇದುವರೆಗೆ ನಡೆದ ಯುದ್ಧದ ಖರ್ಚಿಗಾಗಿ ನವಾಬನು ಕಂಪನಿಯವರಿಗೆ 50ಲಕ್ಷ ರೂಪಾಯಿಗಳನ್ನು ಕೊಡಬೇಕೆಂತಲೂ, ಮೊಗಲ್ ಚಕ್ರವರ್ತಿಗೆ ಗಂಗಾ, ಯುಮುನಾ ನದಿಗಳ ನಡುವೆ ಕೋರಾ, ಅಲಹಾಬಾದ್ ಪ್ರಾಂತಗಳನ್ನು ಕೊಡಬೇಕೆಂತಲೂ, ಅವನು ಅದಕ್ಕೆ ಪ್ರತಿಯಾಗಿ ಇದುವರೆಗೆ ಮೀರ್ ಕಾಸಿಮನ ಆಡಳಿತಕ್ಕೆ ಸೇರಿದ್ದ ಬಂಗಾಳ, ಬಿಹಾರ, ಒರಿಸ್ಸ ಈ ಪ್ರಾಂತಗಳ ಕಂದಾಯವನ್ನೆತ್ತುವ ಅಧಿಕಾರವನ್ನು ಕಂಪೆನಿಯವರಿಗೆ ಕೊಡಬೇಕೆಂತಲೂ, ಇದಕ್ಕೆ ಪ್ರತಿಫಲವಾಗಿ ಇಂಗ್ಲಿಷರು ಚಕ್ರವರ್ತಿಗೆ 26 ಲಕ್ಷ ರೂಪಾಯಿಗಳನ್ನು ಕೊಡಬೇಕೆಂತಲೂ ತೀರ್ಮಾನವಾಯಿತು. ಇದರಿಂದ ಕಂಪೆನಿಯವರಿಗೆ ಮೇಲೆ ಹೇಳಿದ ರಾಜ್ಯಗಳ ಮೇಲೂ ಅಧಿಕಾರವು ಬಂದಂತಾಯಿತು. ಬಂಗಾಳ ನವಾಬನಿಗೆ ಪೆನ್ಷನ್ ದೊರಿಯಿತು.

ಮೀರ್‌ಜಾಫರನು ಹೆಸರಿಗೆ ಮಾತ್ರ ಬಂಗಾಳ, ಬಿಹಾರ ಪ್ರಾಂತಗಳ ನವಾಬನಾಗಿದ್ದುಕೊಂಡು, ಅಲ್ಲಿ ಉತ್ಪತ್ತಿಯಾದ ಕಂದಾಯವೆಲ್ಲವನ್ನೂ ಇಂಗ್ಲಿಷರಿಗೆ ಕೊಡಬೇಕೆಂತಲೂ, ತೀರ್ಮಾನವಾಯಿತು. ಕಂಪೆನಿಯವರು ರಾಜ್ಯಭಾರಕಾರ್ಯದಲ್ಲಿ ಕೈಹಾಕದೆ, ದೇಶರಕ್ಷಣೆಗೆ ಮಾತ್ರ ಸೈನ್ಯವನ್ನಿಟ್ಟುಕೊಂಡು ಮೇಲ್ವಿಚಾರಣೆ ನಡೆಯಿಸುತ್ತಿದ್ದರು. ನವಾಬನ ಕಡೆಯ ಅಧಿಕಾರಿಗಳು ತೆರಿಗೆ ವಸೂಲಿಯನ್ನೂ, ನ್ಯಾಯವಿಮರ್ಶೆಯನ್ನೂ ಅವರೇ ನೋಡಿಕೊಳ್ಳುತ್ತಿದ್ದರು. ಈ ರೀತಿಯಾಗಿ ಬಂಗಾಳವನ್ನು ಆಳುವು

ದರಲ್ಲಿ ಕ್ಲೈವನು ಏರ್ಪಡಿಸಿದ ಪದ್ಧತಿಗೆ ಕ್ಲೈವನ (ಇಜ್ಜೋಡಿ ಅಧಿಕಾರ) ದುಹೇರಿ ಕಾರ್‌ಬಾರ್ ಎಂದು ಹೆಸರು.

ಕ್ಲೈವನ ತಿದ್ದುಪಾಟುಗಳು

ಕಂಪೆನಿಯ ಸೇವಕರು ಸ್ವಪ್ರಯೋಜನಕ್ಕಾಗಿ ವ್ಯಾಪಾರ ಮಾಡ ಕೂಡದೆಂದೂ, ಹಿಂದೂದೇಶದ ಜನಗಳಿಂದ ಲಂಚವನ್ನಾಗಲಿ, ಬಹು ಮಾನವನ್ನಾಗಲಿ ತೆಗೆದುಕೊಳ್ಳಕೂಡದೆಂದೂ ಕ್ಲೈವನು ವಿಧಿಸಿ ಅವರಿಗೆ ಸಂಬಳಗಳನ್ನು ಹೆಚ್ಚಿಸಿದನು. ಇದುವರೆಗೆ ಕಂಪನಿಯ ಸೈನಿಕರಿಗೆ ಎಲ್ಲಾ ಕಾಲದಲ್ಲೂ ಸಲ್ಲುತ್ತಿದ್ದ ದ್ವಿಗುಣ ಭತ್ಯವನ್ನು (Double Batta) ನಿಲ್ಲಿಸಿ ಯುದ್ಧಕಾಲದಲ್ಲಿ ಮಾತ್ರ ಅದು ಸಲ್ಲಬಹುದೆಂದು ನಿರ್ಬಂಧಿಸಿದನು ಆಗ ಅನೇಕ ಸೇನಾಧಿಕಾರಿಗಳು ಕೆಲಸಕ್ಕೆ ಬರುವುದಿಲ್ಲವೆಂದು ಮುಷ್ಕರ ಹಿಡಿದರು. ಕ್ಲೈವನು ಇದಕ್ಕೆ ಹೆದರದೆ ಅವರ ಕೆಲಸಗಳಿಗೆ ಕೂಡಲೆ ಬೇರೆಯವರನ್ನು ನೇಮಿಸಿದನು. ಈ ಏರ್ಪಾಡುಗಳಿಂದ ಅನೇಕರು ಕ್ಲೈವನ ಶತ್ರುಗಳಾದರು.

ಕಡೆಗೆ ಕ್ಲೈವನು 1767ರಲ್ಲಿ ಸೀಮೆಗೆ ಹೋಗಿ ಬಹುಕಾಲ ಶತ್ರು ಗಳಿಂದ ಕಿರುಕುಳವನ್ನನುಭವಿಸಿ 1774ರಲ್ಲಿ ಆತ್ಮಹತ್ಯಮಾಡಿಕೊಂಡನು. ಕ್ಲೈವನು ಯುದ್ಧದಲ್ಲಿ ಶೂರನಾಗಿಯೂ, ಆಲೋಚನೆಯಲ್ಲಿ ಸಮರ್ಥನಾ ಗಿಯೂ, ಕಷ್ಟದಲ್ಲಿ ಹೆದರದವನಾಗಿಯೂ ಇದ್ದನು. ಸ್ವಾಮಿಕಾರ್ಯ ವೆಂದರೆ ಇವನು ಮೋಸಕ್ಕೂ ತಂತ್ರಕ್ಕೂ ಹಿಂದೆಗೆಯುತ್ತಿರಲಿಲ್ಲ. ಇವನ ಕಷ್ಟಪ್ರಯತ್ನಗಳಿಂದಲೇ ಈ ದೇಶದಲ್ಲಿ ಇಂಗ್ಲಿಷರ ಚಕ್ರಾಧಿಪತ್ಯಕ್ಕೆ ತಳ ಹದಿ ಬಿದ್ದಂತಾಯಿತು.

ಕ್ಲೈವನು ಕ್ಯಾಪ್ಟನ್ ಆಗಿದ್ದಾಗ ದಕ್ಷಿಣ ಹಿಂದೂಸ್ಥಾನದಲ್ಲಿ ಫ್ರೆಂಚರ ಬಲವನ್ನು ಮುರಿದು ಮುಂದಿನ ಮದರಾಸಾಧಿಪತ್ಯಕ್ಕೆ ಶಂಕುಸ್ಥಾಪನೆ ಮಾಡಿದನು; ಅವನು ಕರ್ನಲ್ ಆಗಿದ್ದಾಗ ಪ್ಲಾಸಿಯ ವೀರನೆಂಬ ಹೆಸರನ್ನು ಪಡೆದು, ಬಂಗಾಳ ಆಧಿಪತ್ಯದ ಅಸ್ತಿಭಾರವನ್ನು ಹಾಕಿದನು ; "ಲಾರ್ಡ್ ಕ್ಲೈವ್" ಆದಾಗ ಬಂಗಾಳ ಆಧಿಪತ್ಯವನ್ನು ಪೂರ್ತಿಗೊಳಿಸಿ ಹಿಂದೂ ಸ್ಥಾನದಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ತಳಹದಿಯನ್ನು ಹಾಕಿದನು.

ಮೈಸೂರಿನ ಮೊದಲನೆಯ ಯುದ್ಧ ಕ್ರಿ. ಶ. 1767–69

ಹೈದರಲ್ಲಿಯು ಮೈಸೂರಿನ ರಾಜ್ಯವನ್ನು ಆಕ್ರಮಿಸಿದ ಸಂಗತಿಯನ್ನು ಹಿಂದೆಯೇ ತಿಳಿಸಿದೆಯಷ್ಟೆ. ತಿರುಚನಾಪಲ್ಲಿಯ ಮುತ್ತಿಗೆಯಲ್ಲಿ ಮೈಸೂರಿನವರು ಮುಹಮ್ಮದಲ್ಲಿಗೆ ಸಹಾಯ ಮಾಡಿದರು. ಅವನ ವಾಗ್ದಾನದಂತೆ ತಿರುಚನಾಪಲ್ಲಿಯು ಮೈಸೂರಿನವರಿಗೆ ಬರಬೇಕಾಗಿತ್ತು. ಆದರೆ ಇಂಗ್ಲಿಷರು ಇದಕ್ಕೆ ಅವಕಾಶಕೊಡದೆ ತಾವೇ ಅದನ್ನು ಆಕ್ರಮಿಸಿಕೊಂಡರು. ಆದುದರಿಂದ ಮೈಸೂರಿನವರು ಫ್ರೆಂಚರ ಸಹಾಯದಿಂದ ಇವರ ಮೇಲೆ ಮುಯ್ಯಿ ತೀರಿಸಿಕೊಳ್ಳಲು ಸಮಯನೋಡುತ್ತಿದ್ದರು. ಇಂಗ್ಲಿಷಿನವರೂ ಹೈದರನ ಪ್ರಾಬಲ್ಯವನ್ನು ಮುರಿಯಬೇಕೆಂದಿದ್ದರು. ಮರಾಟೆಯವರೂ, ಹೈದರಾಬಾದಿನ ನಿಜಾಮು ಇವರೂ ಇವನ ಪರಮವೈರಿಗಳಾಗಿದ್ದರು. ಆದುದರಿಂದ ಇಂಗ್ಲಿಷರು, ಹೈದರಾಬಾದಿನ ನಿಜಾಮು, ಮರಾಟೆಯವರು ಇವರೆಲ್ಲರೂ ಒಗ್ಗಟ್ಟಾಗಿ ಯುದ್ಧಕ್ಕೆ ಹೊರಟರು. ಹೀಗೆ ಒಟ್ಟುಗೂಡಿ ಬಂದವರೊಡನೆ ಯುದ್ಧಮಾಡುವುದು ಶ್ರಮಸಾಧ್ಯವೆಂದು ತಿಳಿದು ಹೈದರನು ತಂತ್ರದಿಂದ ಮರಾಟೆಯವರನ್ನೂ, ನಿಜಾಮನನ್ನೂ ಅಗಲಿಸಿಬಿಟ್ಟುದರಿಂದ ಇಂಗ್ಲಿಷರು ಮಾತ್ರವೇ ನಿಂತು ಯುದ್ಧಮಾಡಬೇಕಾಯಿತು. ಆದರೂ ಹೈದರನಿಗೆ ಚಂಗಮ, ತಿರುಣಾಮಲೆ, ಆಂಬೂರು, ಎಂಬ ಸ್ಥಳಗಳಲ್ಲಿ ಸೋಲಾಗಿ, ದಿಂಡಿಗಲ್ಲು, ಮಂಗಳೂರು, ಪಾಲಘಾಟು ವಾನಿಯಂಬಾಡಿ, ಬೆಂಗಳೂರು ಇವುಗಳೆಲ್ಲವೂ ಇಂಗ್ಲಿಷರ ವಶವಾದುವು.

ಮದರಾಸ್ ಕೌಲು ಕ್ರಿ. ಶ. 1769

ಹೈದರನು ಪುನಃ ಇವುಗಳನ್ನೆಲ್ಲ ಬಿಡಿಸಿಕೊಂಡು ಮದರಾಸಿನ ಮೇಲೆ ನುಗ್ಗಿದನು. ಇಂಗ್ಲಿಷರು ಹೆದರಿ 1769ರಲ್ಲಿ ಮದರಾಸಿನ ಕೌಲು ಮಾಡಿಕೊಂಡರು. ಇದರಿಂದ ಅವರವರ ರಾಜ್ಯವು ಯುದ್ಧಕ್ಕೆ ಪೂರ್ವದಲ್ಲಿದ್ದಂತೆಯೇ ಇರಬೇಕೆಂತಲೂ, ಯುದ್ಧಕಾಲದಲ್ಲಿ ಪರಸ್ಪರ ಸಹಾಯ ಮಾಡಬೇಕೆಂತಲೂ ತೀರ್ಮಾನವಾಗಿ ಹೈದರನು ಹಿಂದಿರುಗಿದನು.

ವಾರನ್ ಹೇಸ್ಟಿಂಗ್ಸ್—ಬಂಗಾಳದ ಗವರ್ನರ್

(ಹಿಂದೂದೇಶದ ಸ್ಥಿತಿ ಕ್ರಿ. ಶ. 1772-74)

ಈ ಕಾಲದ ಹಿಂದೂದೇಶದ ಚರಿತ್ರೆಯಲ್ಲಿ ಅನೇಕ ಬದಲಾವಣೆಗಳಾಗಿದ್ದುವು. ಬಹುಕಾಲದಿಂದಲೂ ನಡೆದುಬಂದಿದ್ದ ದೊರೆಗಳ ಹೆಸರೇ ಇಲ್ಲದಂತಾಗಿ, ಎಲ್ಲೆಲ್ಲಿಯೂ ಹೊಸಬರ ಆಡಳಿತವೇ ಆಗಿದ್ದಿತು. ಪಶ್ಚಿಮ ತೀರದಲ್ಲಿ ಮರಾಟೆಯವರು ಪ್ರಬಲವಾದ ರಾಜ್ಯವನ್ನು ಕಟ್ಟಿದ್ದರು. ಪೂರ್ವತೀರದಲ್ಲಿ ಇಂಗ್ಲಿಷಿನವರ ಪ್ರಾಬಲ್ಯವೇ ಕಾಣುತ್ತಿತ್ತು. ಇವರಿಬ್ಬರ ನಡುವೆ ಹೈದರಾಬಾದಿನ ನಿಜಾಮನೂ ಮೈಸೂರಿನ ಹೈದರಲ್ಲಿಯೂ ಹೆಸರು ಪಡೆಯುತ್ತಿದ್ದರು.

ಉತ್ತರ ಹಿಂದೂಸ್ಥಾನದಲ್ಲಿ ಸಿಕ್ಕರು ಪಂಜಾಬಿನ ಒಡೆಯರಾಗಿದ್ದರು. ಗುಜರಾತ್ ಮತ್ತು ಮಧ್ಯ ಹಿಂದೂದೇಶವು ಮರಾಟೆಯವರಿಗೆ ಸೇರಿದ್ದುವು. ಹೆಸರಿಗೆ ಮಾತ್ರ ದೊರೆಯಾಗಿದ್ದ ದೆಹಲಿಯ ಚಕ್ರವರ್ತಿಯು ಮರಾಟೆಯವರ ಆಶ್ರಿತನಾಗಿದ್ದನು. ಅಯೋಧ್ಯೆ, ರೋಹಿಲ್ಖಂಡವೆಂಬ ತುರುಕ ರಾಜ್ಯಗಳು ಹೆಸರಿಗೆ ಬಂದಿದ್ದುವು. ಬಂಗಾಳ, ಬಿಹಾರಗಳಲ್ಲಿದ್ದ ಮುಸಲ್ಮಾನ ಆಡಳಿತವು ಕಡೆಗೊಂಡು, ಇಂಗ್ಲಿಷ್ ಕಂಪೆನಿಯವರೇ ಅಲ್ಲಿಯ ಆಡಳಿತಕ್ಕೆ ಕೈಹಾಕಿದ್ದರು.

ಕ್ಲೈವನ ಏರ್ಪಾಟಿನಂತೆ ಬಂಗಾಳದಲ್ಲಿ ಇಚ್ಛೋಡಿ ಅಧಿಕಾರವು ನಡೆಯುತ್ತಿತ್ತು. ಇದರ ಪರಿಣಾಮವು ಸಮರ್ಪಕವಾಗಿರಲಿಲ್ಲ. ನವಾಬನ ಅಧಿಕಾರಿಗಳು ಕಂದಾಯವನ್ನು ವಸೂಲ್ಮಾಡಿ ಬಂದುದನ್ನೆಲ್ಲ ತಾವೇ ವಿನಿಯೋಗಿಸಿಕೊಂಡು ಕಂಪೆನಿಗೆ ಅತ್ಯಲ್ಪವಾದ ಹಣವನ್ನು ಮಾತ್ರ ಕೊಡುತ್ತಿದ್ದರು. ದೇಶೀಯ ಅಧಿಕಾರಿಗಳು ನಿಸ್ಪೃಹತೆಯಿಂದ ಕೆಲಸ ಮಾಡಲಿಲ್ಲ. ತಮ್ಮ ಅಧಿಕಾರವು ಎಂದು ಕೊನೆಗಾಣುವುದೋ ಎಂಬ ಭೀತಿಯಿಂದ ಆದಷ್ಟು ಬೇಗನೆ ದುಡ್ಡು ಕೂಡಿಹಾಕುವ ಪ್ರಯತ್ನಮಾಡಿದರು. ನ್ಯಾಯಾಧಿಪತಿಗಳು ಲಂಚವನ್ನು ತಿನ್ನಲಾರಂಭಿಸಿದರು. ಎಲ್ಲಾ ಅಧಿಕಾರಿಗಳೂ ಮುಹಮ್ಮದೀಯರೇ ಆಗಿದ್ದರು.

ಈ ಕಾರಣಗಳಿಂದ ದ್ರವ್ಯಾರ್ಜನೆಗಾಗಿಯೇ ಬಂದ ಕಂಪೆನಿಯವರಿಗೆ ಬಹಳ ಅಸಮಾಧಾನವುಂಟಾಯಿತು. ಕಂಪೆನಿಯ ಸೇವಕರು ಸ್ವಪ್ರ

ಯೋಜನಕ್ಕಾಗಿ ಪುನಃ ವ್ಯಾಪಾರಮಾಡತೊಡಗಿದರು. ಇದರಿಂದಲೂ ಕಂಪೆನಿಯ ಆದಾಯವು ಕಡಿಮೆಯಾಯಿತು. ಅವರು ಸಾಲಕ್ಕೆ ಕೈಹಾಕ ಬೇಕಾಯಿತು. ಈ ವೇಳೆಗೆ ಸರಿಯಾಗಿ ಬಂಗಾಳದಲ್ಲಿ ಭಯಂಕರವಾದ ಕ್ಷಾಮವೂ ಬಂದಿತು. ಮಾರಿಯ ಉಪದ್ರವವೂ ತಲೆದೋರಿತು. ಇದ ರಿಂದ ಲಕ್ಷಾಂತರ ಜನಗಳು ಹೊಟ್ಟೆಗಿಲ್ಲದೆ ಮಡಿದುಹೋದರು. ಕಂಪೆನಿ ಯವರಿಗೆ ಅಸಮರ್ಥರೆಂಬ ದುರ್ನಾಮವುಂಟಾದುದಲ್ಲದೆ ಕಂಪೆನಿಯವರು ಇಂಗ್ಲೆಂಡಿನ ಸರ್ಕಾರದ ಪ್ರತಿನಿಧಿಗಳೆಂಬ ರೂಢಿಯಾದ ಅಭಿಪ್ರಾಯದ ಮೇಲೆ ಇಂಗ್ಲೆಂಡಿನ ಸರ್ಕಾರಕ್ಕೂ ಅಪಖ್ಯಾತಿ ಉಂಟಾಯಿತು.

ಈ ಅಪಯಶಸ್ಸನ್ನು ತಪ್ಪಿಸುವುದಕ್ಕಾಗಿ ಇಂಗ್ಲೆಂಡಿನ ಸರ್ಕಾರದ ವರು ಕಂಪನಿಯ ಅಡಳಿತದಲ್ಲಿ ಕೈಹಾಕಬೇಕಾಯಿತು. ಕಂಪನಿಯವರು ತಮ್ಮ ದೇಶದ ಸರ್ಕಾರವನ್ನು ಸಾಲ ಕೇಳಿದುದೇ ನೆವವಾಗಿ ಇಂಗ್ಲೆಂಡಿನ ಸರ್ಕಾರದವರು ಕಂಪೆನಿಯ ಆಡಳಿತವನ್ನು ಸರಿಪಡಿಸುವುದಕ್ಕೆ ಮೊದಲು ಮಾಡಿದರು. ಇಂಡಿಯಾದೇಶದಲ್ಲಿ ಕಂಪೆನಿಯ ಸ್ಥಿತಿಯನ್ನು ಕ್ರಮಪಡಿ ಸಲು ವಾರ್ರ‍ಹೇಸ್ಟಿಂಗ್ಸ್ ಎಂಬವನು ಬಂಗಾಳದ ಗವರ್ನರಾಗಿ ಬಂದನು.

ವಾರ್ರ‍ಹೇಸ್ಟಿಂಗ್ಸ್

ಕ್ಲೈವನು ಸಮರ್ಥನಾದ ಯೋಧನು. ತನ್ನ ಸಾಮರ್ಥ್ಯದಿಂದ ಹಿಂದೂದೇಶದಲ್ಲಿ ಬ್ರಿಟಿಷ್ ರಾಜ್ಯಸ್ಥಾಪನೆಗೆ ತಳಹದಿಯನ್ನು ಹಾಕಿದ್ದನು. ಆ ತಳಹದಿಯಮೇಲೆ ಭದ್ರವಾದ ಕಟ್ಟಡವನ್ನು ಕಟ್ಟಲು ಶಕ್ತಿವಂತನಾದ ಒಬ್ಬ ರಾಜತಂತ್ರಜ್ಞ (Statesman) ನಿರುವುದು ಅತ್ಯಾವಶ್ಯಕವಾಗಿ ದ್ದಿತು. ಕಂಪೆನಿಯ ಉದ್ಯೋಗದಲ್ಲಿ ವಾರ್ರ‍ಹೇಸ್ಟಿಂಗ್ಸ್ ಎಂಬವನೊಬ್ಬ ನಿದ್ದನು. ಇವನೂ ಕ್ಲೈವನಂತೆ ತನ್ನ ಚಿಕ್ಕವಯಸ್ಸಿನಲ್ಲಿಯೇ ಈ ದೇಶಕ್ಕೆ ಬಂದು ಸಣ್ಣಸಣ್ಣ ಉದ್ಯೋಗಗಳಲ್ಲಿ ಪರಿಶ್ರಮಹೊಂದಿ ಬಂಗಾಳದಲ್ಲಿ ಕಂಪೆ ನಿಯ ಮುಖ್ಯಾಧಿಕಾರಿಯಾಗಿದ್ದನು. ಇವನಿಗೆ ಇಲ್ಲಿಯ ಜನರ ವಿಷಯದಲ್ಲಿ ಸಂಪೂರ್ಣವಾದ ತಿಳಿವಳಿಕೆ ಇದ್ದಿತು. ಆದುದರಿಂದ ಕ್ಲೈವನು ಆರಂಭಿ ಸಿದ ಕೆಲಸಗಳನ್ನು ಮುಗಿಸುವುದಕ್ಕೆ ಇವನಿಗೆ ಅವಕಾಶವಾಯಿತು.

ಹೇಸ್ಟಿಂಗ್ಸಿನ ಏರ್ಪಾಡುಗಳು

ಹೇಸ್ಟಿಂಗ್ಸನು ಬಂದಕೂಡಲೆ ಬಂಗಾಳದ ಇಚ್ಯೋಡಿ ರಾಜ್ಯಭಾರ ಕ್ರಮ (Double Government) ವನ್ನು ತಪ್ಪಿಸಿದನು. ಕಂದಾಯದ ವಸೂಲಿಗೂ, ನ್ಯಾಯವಿಚಾರಣೆಗೂ, ಇತರ ಅಧಿಕಾರಗಳನ್ನು ನಡೆಯಿಸುವುದಕ್ಕೂ ದೇಶೀಯ ಅಧಿಕಾರಿಗಳನ್ನು ತೆಗೆದುಹಾಕಿ ಇಂಗ್ಲಿಷ್ ಕಲೆಕ್ಟರುಗಳನ್ನು ನೇಮಿಸಿದನು. "ಸಾದರ್ ದಿವಾನಿ ಅದಾಲತ್" "ಸಾದರ್ ನಿಸಾಮತ್ ಅದಾಲತ್" ಎಂಬ ಎರಡು ನ್ಯಾಯಸ್ಥಾನಗಳನ್ನಿಟ್ಟು ಕೆಲವು ನ್ಯಾಯದ ಶಿಸ್ತುಗಳನ್ನು ಏರ್ಪಡಿಸಿದನು. ಕಲೆಕ್ಟರುಗಳೇ ಇನ್ನುಮೇಲೆ ನ್ಯಾಯಾಧಿಕಾರಿಗಳಾದರು. ಇವರ ಸಹಾಯಕ್ಕೆ ಹಿಂದೂಪಂಡಿತರನ್ನೂ ಮಹಮ್ಮದೀಯ ಖಾಜಿಗಳನ್ನೂ ನೇಮಿಸಿದನು. ಹಿಂದೂಪಂಡಿತರು ಧರ್ಮಶಾಸ್ತ್ರವನ್ನೂ, ಖಾಜಿಗಳು ಮಹಮದೀಯ ಕಾಯಿದೆಗಳನ್ನೂ ಕಲೆಕ್ಟರುಗಳಿಗೆ ತಿಳಿಸುತ್ತಿದ್ದರು.

ಗವರ್ನರು ಸಣ್ಣಸಣ್ಣ ತೆರಿಗೆಗಳನ್ನು ತೆಗೆದುಹಾಕಿ ಲಂಚವನ್ನು ಕಡಿಮೆಮಾಡಿ, ಸುಂಕದ ಬಾಬನ್ನು ಸರಿಪಡಿಸಿ ಸರ್ಕಾರದ ಹುಟ್ಟುವಳಿಯನ್ನು ಹೆಚ್ಚಿಸಿದನು. ಇವನ ಕಾಲದಲ್ಲಿಯೇ ಕಲ್ಕತ್ತೆಯು ಕಂಪೆನಿಯ ರಾಜ್ಯಕ್ಕೆ ರಾಜಧಾನಿಯಾಯಿತು.

ಕಂಪೆನಿಯವರಿಗಾಗಿ ಹೇಸ್ಟಿಂಗ್ಸನ ಧನಾರ್ಜನೆ

ಹೆಸರಿಗೆ ದೆಹಲಿಯ ಚಕ್ರವರ್ತಿಯಾದ ಷಹಾಲಮನು ಅಲಹಾಬಾದಿನ ಕೌಲಿನಂತೆ ಇಂಗ್ಲಿಷರ ಅಧೀನತೆಯನ್ನು ಬಿಟ್ಟು ದುರುದ್ದೇಶದಿಂದ ಮರಾಟೆಯವರನ್ನು ಸೇರಿಕೊಂಡನು. ಆದುದರಿಂದ ಹೇಸ್ಟಿಂಗ್ಸನು ಅವನಿಗೆ ಇಂಗ್ಲಿಷರು ಕೊಡುತ್ತಿದ್ದ 26 ಲಕ್ಷರೂಪಾಯಿಗಳ ವರ್ಷಾಶನವನ್ನು ನಿಲ್ಲಿಸಿಬಿಟ್ಟು ಅವನಿಗೆ ಕೊಡಬೇಕಾಗಿದ್ದ ಕೋರಾ, ಅಲಹಾಬಾದ ಸೀಮೆಗಳನ್ನು ಕಿತ್ತುಕೊಂಡನು.

ಈ ನಡುವೆ ಅಯೋಧ್ಯೆಯ ನವಾಬನಿಗೂ, ಅವನ ದೇಶದ ಪಕ್ಕದಲಿದ್ದ ರೋಹಿಲೆಯವರಿಗೂ ಜಗಳವುಂಟಾಯಿತು. ನವಾಬನು ಇಂಗ್ಲಿಷರ ಸಹಾಯವನ್ನು ಕೇಳಿದನು. ಆಗ ಹೇಸ್ಟಿಂಗ್ಸನು ನವಾಬನೊಂದಿಗೆ ಕಾಶೀಕೌಲನ್ನು 1773ರಲ್ಲಿ ಮಾಡಿಕೊಂಡನು. ಇದರಿಂದ ಕೋರಾ,

ಅಲಹಾಬಾದ್ ಪ್ರಾಂತಗಳನ್ನು ನವಾಬನು ತೆಗೆದುಕೊಂಡು, ಅದಕ್ಕೆ ಪ್ರತಿಫಲವಾಗಿ ಅವನು ಕಂಪನಿಯವರಿಗೆ 50ಲಕ್ಷ ರೂಪಾಯಿಗಳನ್ನು ಕೊಡಬೇಕೆಂತಲೂ, ಕಂಪೆನಿಯವರು ರೋಹಿಲ್‌ಖಂಡವನ್ನು ಗೆದ್ದು ನವಾಬನಿಗೆ ಕೊಡಬೇಕೆಂತಲೂ, ಇದಕ್ಕಾಗಿ ನವಾಬನು ಯುದ್ಧದ ಖರ್ಚಲ್ಲದೆ 40ಲಕ್ಷ ರೂಪಾಯಿಗಳನ್ನು ಕೊಡಬೇಕೆಂತಲೂ ತೀರ್ಮಾನವಾಯಿತು. ಇದರಂತೆ ಇಂಗ್ಲಿಷರು ಸೇನೆಯೊಡನೆ ಹೊರಟು, ರೋಹಿಲ್‌ಖಂಡವನ್ನು ಜಯಿಸಿ, ಅದನ್ನು ಅಯೋಧ್ಯೆಯ ರಾಜ್ಯಕ್ಕೆ ಸೇರಿಸಿಕೊಟ್ಟರು.

ಆದರೂ ಇಂಡಿಯಾದೇಶದ ಅಡಳಿತಗಳು ಸಮರ್ಪಕವಾಗಿರಲಿಲ್ಲವೆಂಬ ಅಭಿಪ್ರಾಯವು ಸೀಮೆಯಲ್ಲಿ ಬೇರೂರಿತ್ತು. ಆದುದರಿಂದ ವ್ಯಾಪಾರಕ್ಕಾಗಿ ಬಂದ ಕಂಪೆನಿಯವರು ರಾಜ್ಯ ಕಟ್ಟಿ ಆಳುವುದು ಸರಿಯಾಗಿಲ್ಲವೆಂದೂ, ಕಂಪೆನಿಯ ಆಡಳಿತವು ಬ್ರಿಟಿಷ್ ಸರ್ಕಾರದ ಅಧೀನಕ್ಕೆ ಒಳಪಡುವುದೇ ಒಳ್ಳೆಯದೆಂದೂ ಕೆಲವರು ಹೇಳುತ್ತಿದ್ದರು. ಈ ವಿಷಯವು ಇಂಗ್ಲೆಂಡಿನ ಪಾರ್ಲಿಮೆಂಟ್ ಸಭೆಯಲ್ಲಿ ಚರ್ಚೆಯಾಗಿ 1773ರಲ್ಲಿ ರೆಗ್ಯುಲೇಟಿಂಗ್ ಆಕ್ಟ್ (Regulating Act) ಎಂಬ ಒಂದು ಕಾನೂನು ಜಾರಿಗೆ ಬಂದಿತು.

ರೆಗ್ಯುಲೇಟಿಂಗ್ ಆಕ್ಟ್ ಕ್ರಿ. ಶ. 1773

ಈ ಕಾನೂನಿನಿಂದ ಬಂಗಾಳದಲ್ಲಿ ಗವರ್ನರ್ ಆಗಿದ್ದವನೇ ಇನ್ನು ಮುಂದೆ ಗವರ್ನರ್ ಜನರಲ್ ಎಂಬ ಹೆಸರಿನಿಂದ ಕಂಪೆನಿಯ ರಾಜ್ಯವನ್ನಾಳಬೇಕು. ಇವನ ಸಹಾಯಕ್ಕೆ ವಿಲಾಯಿತಿಯ ಸರ್ಕಾರದಿಂದ ಚುನಾಯಿಸಲ್ಪಟ್ಟ ನಾಲ್ಕು ಮಂದಿ ಸದಸ್ಯರು ಇರಬೇಕು. ಎಲ್ಲಕ್ಕಿಂತಲೂ ಮೇಲಾದ ಸುಪ್ರೀಂ ಕೋರ್ಟ್ ಎಂಬ ನ್ಯಾಯಸ್ಥಾನವು ಕಲ್ಕತ್ತೆಯಲ್ಲಿರಬೇಕು. ಗವರ್ನರ್ ಜನರಲ್ಲನು ವಿಲಾಯಿತಿಯ ಸರ್ಕಾರದ ಅನುಮತಿಯಂತೆ ನಡೆದುಕೊಳ್ಳಬೇಕು ; ಎಂದು ವ್ಯವಸ್ಥೆಯಾಯಿತು. ಇದುವರೆಗೂ ಕಂಪೆನಿಯ ಆಡಳಿತದ ಮೇಲ್ವಿಚಾರಣೆಯನ್ನು ಇಂಗ್ಲೆಂಡಿನಲ್ಲಿರತಕ್ಕ ಕಂಪೆನಿಯ ಬಂಡವಾಳಸ್ಥರ (Share holders) ಪೈಕಿ ಚುನಾಯಿಸಲ್ಪಟ್ಟಿದ್ದ ಬೋರ್ಡ್ ಆಫ್ ಡೈರೆಕ್ಟರುಗಳೇ ನೋಡುತ್ತಿದ್ದರು. ರೆಗ್ಯುಲೇಟಿಂಗ್ ಆಕ್ಟಿನ ಪ್ರಕಾರ ಬ್ರಿಟಿಷ್ ಪಾರ್ಲಿಮೆಂಟಿನವರಿಗೂ ಕಂಪೆನಿಯ ಮೇಲಿನ ಅಧಿಕಾರ ಉಂಟಾಯಿತು.

ಅಧ್ಯಾಯ ೪.—ವಾರ್ರ್ಲ ಹೇಸ್ಟಿಂಗ್ಸ್

ಕಂಪೆನಿಯ ರಾಜ್ಯವು ವಿಸ್ತಾರವಾದುದು ಕ್ರಿ. ಶ. 1773-1823
(ಮೊದಲನೆಯ ಗವರ್ನರ್ ಜನರಲ್)

ರೆಗ್ಯುಲೇಟಿಂಗ್ ಆಕ್ಟಿನಂತೆ ವಾರ್ರ್ಲಹೇಸ್ಟಿಂಗ್ಸನೇ ಮೊದಲನೆಯ ಗವರ್ನರ್ ಜನರಲ್ ಆದನು. ಇವನು ನಿರ್ವಹಿಸಬೇಕಾದ ಕೆಲಸವು ಬಹಳ ಕಠಿಣವಾಗಿತ್ತು. ಇದುವರೆಗೂ ಕಂಪೆನಿಯ ಗವರ್ನರುಗಳು ವ್ಯಾಪಾರಕಾರ್ಯವನ್ನು ಮಾತ್ರ ನಡೆಯಿಸಬೇಕಾಗಿದ್ದಿತು. ಇನ್ನುಮೇಲೆ ರಾಜ್ಯಭಾರಕಾರ್ಯವೂ ಗವರ್ನರ್ ಜನರಲ್ಲಿನ ತಲೆಯಮೇಲೆ ಬಿದ್ದಿತು. ವ್ಯಾಪಾರದಲ್ಲಿ ಲಾಭಪಡೆದು ಬೋರ್ಡ್ ಆಫ್ ಡೈರೆಕ್ಟರುಗಳಿಗೆ ಸಮಾಧಾನವನ್ನುಂಟುಮಾಡುವುದರ ಜತಗೆ ಜನಗಳ ನೆಮ್ಮದಿಗೂ ಸಂಪತ್ತಿಗೂ ಗವರ್ನರ್ ಜನರಲ್ಲನೇ ಕಾರಣಕರ್ತನಾಗಬೇಕಾಗಿ ಬಂದಿತು.

ಇಷ್ಟೇ ಅಲ್ಲ. ಮದರಾಸ್ ಮತ್ತು ಬೊಂಬಾಯಿ ಪ್ರಾಂತಗಳ ಗವರ್ನರುಗಳಮೇಲೆ ಅಧಿಕಾರ ವಹಿಸಿ, ಸಮಯಬಿದ್ದಾಗ ಅವರಿಗೆ ಸೈನ್ಯವನ್ನೂ ಹಣವನ್ನೂ ಒದಗಿಸಿಕೊಡುವ ಕಾರ್ಯವೂ ಗವರ್ನರ್ ಜನರಲ್ಲಿನ ಪಾಲಿಗೆ ಬಂದಿತು. ಇಷ್ಟು ಕೆಲಸವನ್ನು ವಿಚಕ್ಷಣತೆಯಿಂದ ನಡೆಯಿಸುವ ಶಕ್ತಿಯು ವಾರ್ರ್ಲಹೇಸ್ಟಿಂಗ್ಸಿಗೆ ಇದ್ದರೂ, ಇವನ ಸಾಮಾಜಿಕರು ಇವನಿಗೆ ವಿರೋಧವಾಗಿದ್ದುದರಿಂದ ಇವನ ಕಾರ್ಯಗಳಾವುವೂ ಸರಾಗವಾಗಿ ನಡೆಯಲಿಲ್ಲ.

ಇವನಿಗೂ ಸೀಮೆಯಿಂದ ಕೆಲಸಕ್ಕೆ ಬಂದ ಮೂರು ಜನ ಸಭ್ಯರಿಗೂ ಹಿಂದಿನಿಂದಲೂ ಮನಸ್ತಾಪವಿದ್ದಿತು; ಇವನು ಹಿಂದೆ ಮಾಡಿದ್ದ ಯಾವ ಕೆಲಸವನ್ನೂ ಅವರು ಒಪ್ಪಲಿಲ್ಲ. ಸೀಮೆಯಿಂದ ಆಗತಾನೇ ಬಂದಿದ್ದ ಆ ಸಾಮಾಜಿಕರಿಗೆ ಈ ದೇಶದ ನಡೆವಳಿಕೆಗಳೇ ತಿಳಿದಿರಲಿಲ್ಲ. ಆದರೂ ಹೇಸ್ಟಿಂಗ್ಸನ ಕೆಲಸಕ್ಕೆ ಅಡ್ಡಿಮಾಡುತ್ತಿದ್ದರು. ಗವರ್ನರ್ ಜನರಲ್ಲಿಗೂ ಸಾಮಾಜಿಕರಿಗೂ ಇರುವ ಪರಸ್ಪರ ಸಂಬಂಧವನ್ನು ರೆಗ್ಯುಲೇಟಿಂಗ್ ಆಕ್ಟಿನಲ್ಲಿ ಗೊತ್ತುಮಾಡದೆ ಹೋದುದೇ ಇವರುಗಳ ಜಗಳಕ್ಕೆ ಕಾರಣವಾಯಿತು. ಗವರ್ನರ್ ಜನರಲ್ಲನಿಗೆ ಇರುವಷ್ಟು ಅಧಿಕಾರವು

ತಮಗೂ ಇದೆಯೆಂದು ತಿಳಿದು ಅವರು ಇವನಿಗೆ ವಿರೋಧವಾಗಿಯೇ ವರ್ತಿಸುತ್ತಿದ್ದರು. ಹಿಂದೆ ಹೇಸ್ಟಿಂಗ್ಸನು ಅಯೋಧ್ಯೆಯ ನವಾಬನೊಡನೆ ಮಾಡಿಕೊಂಡಿದ್ದ ಕಾಶಿಯ ಒಪ್ಪಂದಕ್ಕೆ ವಿರೋಧವಾಗಿ ಸಾಮಾಜಿಕರು ಅವನ ಮಗನೊಡನೆ ಒಂದು ಹೊಸ ಕರಾರನ್ನು 1775ರಲ್ಲಿ ಮಾಡಿದರು. ಇದರಿಂದ ಆಯೋಧ್ಯೆಯ ನವಾಬನು ಕಾಶೀರಾಜ್ಯವನ್ನೂ ಹೆಚ್ಚು ಹಣ ವನ್ನೂ ಕಂಪೆನಿಗೆ ಕೊಡುವುದಾಗಿ ಒಪ್ಪಿಕೊಂಡನು. ಇಷ್ಟರಲ್ಲಿಯೇ ಹೇಸ್ಟಿಂಗ್ಸ್‌ನಿಗೂ ಅವನ ಸಾಮಾಜಿಕರಿಗೂ ದ್ವೇಷವೆಂಬ ಸುದ್ದಿಯು ದೇಶ ದಲ್ಲೆಲ್ಲ ಹರಡಿದುದರಿಂದ ಅನೇಕರು ಹೇಸ್ಟಿಂಗ್ಸಿನಮೇಲೆ ದೂರುಗಳನ್ನು ತಂದರು.

ನಂದಕುಮಾರ

ಇವರಲ್ಲಿ ನಂದಕುಮಾರನೆಂಬ ಬಂಗಾಳಿಯು ಮುಖ್ಯನಾದವನು. ಹೇಸ್ಟಿಂಗ್ಸನು ಲಂಚ ತೆಗೆದುಕೊಂಡನೆಂದು ನಂದಕುಮಾರನು ಸಭೆಗೆ ತಿಳಿಸಲು, ಅವರು ವಿಚಾರಣೆಗೆ ಕುಳಿತರು. ಇಷ್ಟರಲ್ಲಿಯೇ ಸುಳ್ಳುಪತ್ರ ವನ್ನು ಬರೆದ ತಪ್ಪಿಗಾಗಿ ನಂದಕುಮಾರನಿಗೆ ಗಲ್ಲಾಯಿತು. ಇದರಿಂದ ಹೇಸ್ಟಿಂಗ್ಸನಮೇಲೆ ಸುಳ್ಳುಸಾಕ್ಷ್ಯಗಳನ್ನು ತರುವುದು ನಿಂತುಹೋಯಿತು. ಇವನ ಶತ್ರುಗಳಾದ ಸಭ್ಯರು ವರ್ಗವಾಗಿ ಸೀಮೆಗೆ ಹೋದಮೇಲೆ ಅವನಿಗೆ ತೊಂದರೆಯು ಸಂಪೂರ್ಣವಾಗಿ ತಪ್ಪಿಹೋಯಿತು.

ಒಂದನೆಯ ಮರಾಟೆ ಯುದ್ಧ (ಕ್ರಿ. ಶ. 1778-1782)

ಸೂರತಿಯ ಕೌಲು

ಯುದ್ಧಕ್ಕೆ ಕೈಹಾಕಬಾರದೆಂಬ ಹೇಸ್ಟಿಂಗ್ಸಿನ ಶಪಥವು ಹೆಚ್ಚುಕಾಲ ಸಾಗಲಿಲ್ಲ. ಬೊಂಬಾಯಿ ಸರ್ಕಾರದವರ ಅವಿವೇಕದಿಂದ ಗವರ್ನರ್ ಜನರಲ್ಲನು ಮಾರಾಟೆಯವರೊಡನೆ ಯುದ್ಧಮಾಡಬೇಕಾಗಿ ಬಂದಿತು. ಪೇಷ್ವೆ ನಾರಾಯಣರಾಯನು ಸತ್ತಮೇಲೆ, ನಾನಾಫಡ್ನವೀಸನೆಂಬ ಮಂತ್ರಿಯು ನಾರಾಯಣರಾಯನ ಮಗನಿಗೆ ಪಟ್ಟಗಟ್ಟಿ ತಾನೇ ಮಂತ್ರಿ ಯಾದನೆಂದು ಹಿಂದೆಯೇ ಹೇಳಿದೆಯಷ್ಟೆ. ರಘೋಬನಿಗೆ ತಾನು ಪೇಷ್ವೆ ಯಾಗಬೇಕೆಂಬ ಆಸೆ ಇದ್ದಿತು. ಆದರೆ ನಾನಾಫಡ್ನವೀಸನು ಇದಕ್ಕೆ ಅವ ಕಾಶ ಕೊಡಲಿಲ್ಲವಾದುದುರಿಂದ ರಘೋಬನು ಬೊಂಬಾಯಿ ಗವರ್ನರ ಸಹಾಯ ಕೇಳಿದನು.

ಬೊಂಬಾಯಿ ಗವರ್ನರಿಗೂ ರಘೋಬನಿಗೂ "ಸೂರತ್" ಎಂಬಲ್ಲಿ ಒಂದು ಕರಾರು ನಡೆಯಿತು. ಈ ಕರಾರಿನಂತೆ ಇಂಗ್ಲಿಷರು ರಘೋಬನನ್ನು ಪೇಷ್ವೆಯಾಗಿ ಮಾಡುವುದೆಂತಲೂ, ಇದಕ್ಕಾಗಿ ಅವನು ಇವರಿಗೆ ಸಾಲ್ಸೆಟ್, ಬಸ್ಸೀನ್ ಪ್ರಾಂತಗಳನ್ನು ಕೊಡುವುದೆಂತಲೂ ತೀರ್ಮಾನವಾಯಿತು.

ಪುರಂಧರದ ಕೌಲು ಕ್ರಿ. ಶ. 1776

ಮೇಲಿನ ಅಧಿಕಾರಿಗಳ ಅನುಮತಿ ಇಲ್ಲದೆ ಮಾಡಿಕೊಂಡ ಸೂರತ್ ಕರಾರಿಗೆ ಗವರ್ನರ್ ಜನರಲ್‌ನು ಒಪ್ಪದೆ ರಘೋಬನ ಪಕ್ಷವನ್ನು ಇಂಗ್ಲಿಷರು ಬಿಡುವಂತೆ ಹೇಳಿ ನಾನಾಪಡ್ನವೀಸನೊಡನೆ ಪುರಂಧರದಲ್ಲಿ ಬೇರೊಂದುಕರಾರು ಮಾಡಿಕೊಂಡನು. ಈ ಕರಾರಿನಿಂದ "ಸಾಲ್ಸೆಟ್" ಮಾತ್ರ ಇಂಗ್ಲಿಷರಿಗೆ ದೊರೆಯುವಂತಾಯಿತು. ಆದರೆ ಹೆಚ್ಚು ರಾಜ್ಯ ಕೈಸೇರುವ ಸಂಭವವಿದ್ದುದರಿಂದ ಇಂಗ್ಲೆಂಡಿನಲ್ಲಿದ್ದ ಕಂಪೆನಿಯ ಡೈರೆಕ್ಟರುಗಳು ಬೊಂಬಾಯಿ ಗವರ್ನರು ಮಾಡಿಕೊಂಡಿದ್ದ ಸೂರತಿಯ ಕರಾರಿಗೇ ಒಪ್ಪಿದರು.

ವಾರ್ಗಾಂ ಒಪ್ಪಂದ

ಆದಕಾರಣ ಇಂಗ್ಲಿಷರು ರಘೋಬನ ಪಕ್ಷ ವಹಿಸಿ ನಾನಾಫಡ್ನವೀಸ್ ಮುಂತಾದ ಮರಾಟೆಯವರಮೇಲೆ ಯುದ್ಧಕ್ಕೆ ಹೊರಟರು. ತಲೆಗಾಂ, ವಾರ್ಗಾಂ ಎಂಬ ಸ್ಥಳಗಳಲ್ಲಿ ಯುದ್ಧನಡೆದು ಇಂಗ್ಲಿಷರಿಗೇ ಸೋಲಾಗಿ ಅವರು ವಾರ್ಗಾಂ ಒಪ್ಪಂದವನ್ನು ಮಾಡಿಕೊಂಡರು. ಈ ಕರಾರಿನಿಂದ ಇಂಗ್ಲಿಷರು ಕಿತ್ತುಕೊಂಡಿದ್ದ ಮರಾಟೆ ರಾಜ್ಯಗಳೆಲ್ಲನನ್ನೂ ಹಿಂದಕ್ಕೆ ಕೊಡಬೇಕಾಗಿ ಬಂದಿತು. ಬ್ರೋಚ್ ಪ್ರಾಂತವು ಸಿಂಧ್ಯನಿಗೆ ಸೇರಬೇಕಾಯಿತು. ಆದರೆ ಈ ಕರಾರನ್ನು ಸೀಮೆಯ ಡೈರೆಕ್ಟರುಗಳು ಒಪ್ಪಲಿಲ್ಲ. ಮೇಲಿನ ಸೋಲುಗಳಿಂದುಂಟಾದ ಅಪಯಶಸ್ಸನ್ನು ಕಳೆದುಕೊಳ್ಳಲು ಇಂಗ್ಲಿಷರು ಪುನಃ ಯುದ್ಧಮಾಡಿದರು.

ಕದನಗಳು

1780ರಲ್ಲಿ ಇಂಗ್ಲಿಷರು ಅಹಮುದಾಬಾದ್ ಕಲ್ಯಾಣ್, ಬಸೀನ್ ಪಟ್ಟಣಗಳನ್ನೂ, ಲೇಹಾರ್ ಮತ್ತು ಗ್ವಾಲಿಯರ್ ಕೋಟೆಗಳನ್ನೂ ಹಿಡಿದು

ಮರಾಟೆಯವರನ್ನು ಸೋಲಿಸಿದರು. ಇಷ್ಟರಲ್ಲಿಯೇ ಮರಾಟೆಯವರೂ, ಮೈಸೂರಿನ ಹೈದರಲ್ಲಿಯೂ, ಹೈದರಾಬಾದಿನ ನಿಸಾಮನೂ ಒಟ್ಟುಗೂಡಿ ಇಂಗ್ಲಿಷರನ್ನು ಅಡಗಿಸಬೇಕೆಂದು ಒಳಸಂಚು ನಡೆಸಿದರು. ಆದರೆ 1782ರಲ್ಲಿ ಶಕ್ತನಾದ ಹೈದರ್ ಅಲ್ಲಿಯು ಕಾಲವಾದ ಸುದ್ದಿಯನ್ನು ಕೇಳಿದೊಡನೆಯೇ ಇಂಗ್ಲಿಷರೊಡನೆ ಯುದ್ಧಮಾಡಲು ಇದು ತಕ್ಕ ಸಮಯವಲ್ಲವೆಂದು ಮರಾಟೆಯವರು ಯೋಚಿಸಿ ಇಂಗ್ಲಿಷರೊಡನೆ ಸಾಲ್‌ಬಾಯ್ ಕೌಲನ್ನು ಮಾಡಿಕೊಂಡರು.

ಸಾಲ್‌ಬಾಯಿ ಕೌಲು ಕ್ರಿ. ಶ. 1782

ಇದರಿಂದ ಸಾಲ್ಸೆಟ್ ದ್ವೀಪ ಮಾತ್ರ ಇಂಗ್ಲಿಷರಿಗೆ ಸೇರಬೇಕೆಂತಲೂ, ಪೋರ್ಚುಗೀಸರು, ಇಂಗ್ಲಿಷರು ಇವರುಗಳ ವಿನಾ ಮತ್ತಾವ ಪರಂಗಿಯವರನ್ನೂ ಮರಾಟೆರಾಜ್ಯದಲ್ಲಿರಿಸಿಕೊಳ್ಳಕೂಡದೆಂತಲೂ, ರಘೋಬನಿಗೆ 2 ಲಕ್ಷ ರೂಪಾಯಿ ಜೀವನಾಂಶ ಕೊಡಬೇಕೆಂತಲೂ, ಬ್ರೋಚ್ ಪ್ರಾಂತವು ಸಿಂಧ್ಯನಿಗೆ ಸೇರಬೇಕೆಂತಲೂ ನಿಷ್ಕರ್ಷೆಯಾಯಿತು, ಎರಡನೆಯ ಮಾಧವರಾಯನೇ ಪೇಷ್ವೆಯೆಂದು ಎಲ್ಲರೂ ಅಂಗೀಕರಿಸಿದರು.

ಮೈಸೂರಿನ ಎರಡನೆಯ ಯುದ್ಧ (ಕ್ರಿ. ಶ. 1780–84)

ಯುದ್ಧಕ್ಕೆ ಕಾರಣಗಳು :—1769ರಲ್ಲಿ ನಡೆದ ಮದ್ರಾಸಿನ ಕರಾರಿನಂತೆ ಮೈಸೂರಿನವರಿಗೆ ಒದಗುವ ಯುದ್ಧಗಳಲ್ಲೆಲ್ಲಾ ಇಂಗ್ಲಿಷರು ಸಹಾಯಮಾಡಬೇಕಾಗಿತ್ತು. ಆದರೆ ಮೂರನೆಯ ವರ್ಷವೇ ಪೇಷ್ವೆ ಮಾಧವರಾಯನು ಮೈಸೂರಿನಮೇಲೆ ದಂಡೆತ್ತಿ ಬಂದಾಗ ಹೈದರಿನ ಸಹಾಯಕ್ಕೆ ಇಂಗ್ಲಿಷರು ಹೋಗಲಿಲ್ಲವಾದುದರಿಂದ, ಅವನಿಗೆ ಅಸಮಾಧಾನವಾಯಿತು. ಅವನು ಇಂಗ್ಲಿಷರನ್ನು ಅಡಗಿಸಲು ಫ್ರೆಂಚರ ಸಹಾಯವನ್ನು ಪಡೆದು ಸಮಯನೋಡುತ್ತಿದ್ದನು.

ಹೀಗಿರಲು 1778ರಲ್ಲಿ ಇಂಗ್ಲಿಷರಿಗೂ ಫ್ರೆಂಚರಿಗೂ ಸೀಮೆಯಲ್ಲಿ ಯುದ್ಧವಾರಂಭವಾಯಿತು. ಇದೇ ನೆವವಾಗಿ ಇಂಡಿಯಾದಲ್ಲಿದ್ದ ಇಂಗ್ಲಿಷರು ಫ್ರೆಂಚರ ಮಾಹೀ ಎಂಬ ರೇವುಪಟ್ಟಣವನ್ನು ಹಿಡಿದರು. ಅಲ್ಲಿಗೆ ಹೋಗುವಾಗ ಮೈಸೂರು ಸೀಮೆಯನ್ನು ತನ್ನ ಅಪ್ಪಣೆಯಿಲ್ಲದೆ ದಾಟಿ

ಹೋದರೆಂಬ ನೆವದಿಂದ ಹೈದರನು ಇಂಗ್ಲಿಷರಮೇಲೆ ಯುದ್ಧಕ್ಕೆ ನಿಂತನು. ಈ ಸಮಯದಲ್ಲಿ ಇಂಗ್ಲಿಷರಿಗೂ ಮರಾಟೆಯವರಿಗೂ ಮೊದಲನೆಯ ಮರಾಟೆಯುದ್ಧ ನಡೆಯುತಿದ್ದುದರಿಂದ ತನ್ನ ಕೆಲಸವು ಸುಲಭಸಾಧ್ಯವಾಗುವುದೆಂದು ಎಣಿಸಿ, ಹೈದರನು ದೊಡ್ಡ ಸೈನ್ಯದೊಡನೆ ಕರ್ನಾಟಕ ಪ್ರಾಂತದಮೇಲೆ ಬಿರುಗಾಳಿಯಂತೆ ನುಗ್ಗಿದನು.

ಕದನಗಳು

ಮದ್ರಾಸ್ ಸರ್ಕಾರದವರು ಯುದ್ಧಕ್ಕೆ ಸಿದ್ಧರಾಗಿರಲಿಲ್ಲ. ಅದರೂ ಕರ್ನಲ್ ಬೇಲಿ, ಕರ್ನಲ್ ಬ್ರೆತ್‌ವೈಟ್ ಎಂಬವರು ಎರಡು ಸಣ್ಣ ಸೈನ್ಯಗಳೊಡನೆ ಪಾಲಿಲೂರ್ ಬಳಿಯಲ್ಲಿ (1780)ರಲ್ಲಿ ಹೈದರನನ್ನು ಎದಿರಿಸಿದರು. ಅವರ ಕೈಸಾಗದೆ ಅವರು ಶರಣಾಗತರಾದರು. ಸರ್ ಹೆಕ್ಟರ್ ಮನ್ರೋ ಎಂಬವನು ಈ ಮೇಲಿನ ಸಮಾಚಾರವನ್ನು ಕೇಳಿದೊಡನೆಯೇ ಕಾಲಿಗೆ ಬುದ್ಧಿಹೇಳಿ ಮದರಾಸನ್ನು ಸೇರಿದನು. ಹೈದರನು ವೆಲ್ಲೂರನ್ನು ಹಿಡಿದುಕೊಂಡನು. ಈ ಅಪಯಶಸ್ಸನ್ನು ಕಳೆದುಕೊಳ್ಳುವುದಕ್ಕಾಗಿ ಹೇಸ್ಟಿಂಗ್ಸನು ಸರ್ ಐರ್‌ಕೂಟ್ ಎಂಬುವನೊಡನೆ ಒಂದುದೊಡ್ಡ ದಂಡನ್ನು ಕಳುಹಿಸಿದನು.

ಈ ದಳಪತಿಯು 1780ರಲ್ಲಿ ಪೋರ್ಟೋನೋವೊ ಬಳಿಯಲ್ಲಿ ಹೈದರನನ್ನು ಸೋಲಿಸಿದನು. ಇದಾದಮೇಲೆ ಪೊಲಿಲೂರ್, ಷೋಲಿಂಗರ್, ಆರಣಿ ಈ ಸ್ಥಳಗಳಲ್ಲಿಯೂ ಹೈದರನಿಗೆ ಸೋಲಾಯಿತು. ಇಷ್ಟರಲ್ಲಿಯೇ ಹೈದರನು ಬೆನ್ನುಫಣಿ ಎದ್ದು 1782ರಲ್ಲಿ ಸತ್ತುಹೋದನು. ತಂದೆಯು ಸತ್ತ ವರ್ತಮಾನವನ್ನು ಕೇಳಿದೊಡನೆಯೇ ಟೀಪುವು ಮಂಗಳೂರಿನಿಂದ ಶ್ರೀರಂಗಪಟ್ಟಣಕ್ಕೆ ಹೋಗಿ ಅಧಿಕಾರವನ್ನು ವಹಿಸಿಕೊಂಡು, ಸ್ವಲ್ಪವೂ ತಡಮಾಡದೆ ಫ್ರೆಂಚರ ಸಹಾಯದಿಂದ ಯುದ್ಧಕ್ಕೆ ನಿಂತು ಇಂಗ್ಲಿಷರನ್ನು ಸೋಲಿಸಿ ಮಂಗಳೂರು, ನಗರ ಮುಂತಾದ ಪ್ರಾಂತಗಳನ್ನು ಹಿಡಿದುಕೊಂಡನು.

ಮಂಗಳೂರು ಕೌಲು ಕ್ರಿ. ಶ. 1784

ಇಷ್ಟರಲ್ಲಿಯೇ ಫ್ರೆಂಚರಿಗೂ, ಇಂಗ್ಲಿಷರಿಗೂ ಯೂರೋಪಿನಲ್ಲಿ ಯುದ್ಧನಿಂತು ಸಮಾಧಾನವಾದುದರಿಂದ ಟೀಪುವಿಗೆ ಫ್ರೆಂಚರ ಬೆಂಬ

ಲವೂ ಕಡಿಮೆಯಾಯಿತು. ಮರಾಟೆಯವರು ತನ್ನ ದೇಶದಮೇಲೆ ದಂಡೆತ್ತಿ ಬಂದಾರೆಂಬ ಭಯವೂ ಟೀಪುವಿನ ಮನಸ್ಸಿನಲ್ಲಿತ್ತು. ಈ ಸನ್ನಿವೇಶಗಳಲ್ಲಿ ಮದರಾಸ್ ಸರ್ಕಾರದವರು ಕರಾರು ಮಾಡಿಕೊಳ್ಳಬೇಕೆಂದು ಕೇಳಲು ಟೀಪುವು ಅದಕ್ಕೆ ಒಡಂಬಟ್ಟನು. 1784ರಲ್ಲಿ "ಮಂಗಳೂರು" ಎಂಬಲ್ಲಿ ಒಪ್ಪಂದವು ನಡೆಯಿತು. ಇದರಿಂದ ಯುದ್ಧಕ್ಕೆ ಮುಂಚೆ ಇದ್ದಂತೆ ಅವರವರ ರಾಜ್ಯವು ಅವರಲ್ಲಿಯೇ ನಿಂತಿತು ; ಸೆರೆಸಿಕ್ಕಿದವರೆಲ್ಲರನ್ನೂ ಬಿಡಬೇಕೆಂದು ಗೊತ್ತಾಯಿತು.

ಹೇಸ್ಟಿಂಗ್ಸ್ ದ್ರವ್ಯಾರ್ಜನೆ ಮಾಡಿದುದು

ಕಾಶಿಯ ಛೇತ್‌ಸಿಂಗನು—ಮೇಲೆ ಹೇಳಿದ ಯುದ್ಧಗಳಿಗಾಗಿ ಇಂಗ್ಲಿಷರು ಬಹಳ ಹಣವನ್ನು ಒದಗಿಸಿಕೊಳ್ಳಬೇಕಾಯಿತು. ಹಿಂದೆ 1775 ರಲ್ಲಿ ನಡೆದಿದ್ದ ಕರಾರಿನಂತೆ ಕಾಶಿರಾಜನಾದ ಛೈತ್‌ಸಿಂಗನು ಸಮಯ ಬಿದ್ದಾಗ ಕಂಪೆನಿಯವರಿಗೆ ಸಹಾಯಮಾಡುವುದಾಗಿ ಒಪ್ಪಿಕೊಂಡಿದ್ದನು. ಅದರಂತೆ ಸಹಾಯವನ್ನೂ ಮಾಡಿದನು. ಆದರೆ ಹೇಸ್ಟಿಂಗ್ಸನು ಅವನನ್ನು ಮೇಲೆಮೇಲೆ ಹಣ ಕೇಳುತ್ತಾ ಬಂದುದರಿಂದ, ಅಷ್ಟು ಹಣವನ್ನೂ ಅವನು ಕೊಡಲಾರದೆ ಹೋದುದರಿಂದ ಹೇಸ್ಟಿಂಗ್ಸನು ಅವನನ್ನು ಸೆರೆಯಲ್ಲಿಡಿಸಿದನು. ಇದಕ್ಕಾಗಿ ಕಾಶಿಯ ಜನರು ದಂಗೆ ಎದ್ದರು. ಹೇಸ್ಟಿಂಗ್ಸನ ಪ್ರಾಣಕ್ಕೆ ಭಯ ಉಂಟಾಯಿತು. ಅವನು ತಪ್ಪಿಸಿಕೊಂಡು ಹೋಗುವುದೇ ಬಹಳ ಕಷ್ಟವಾಯಿತು.

ಅಯೋಧ್ಯೆಯ ಬೀಗಂಗಳು

ಇನ್ನೊಂದುಕಡೆ ಅಯೋಧ್ಯೆಯ ನವಾಬನು ಕಂಪೆನಿಯವರಿಗೆ ಬಹಳವಾಗಿ ಸಾಲ ಕೊಡಬೇಕಾಗಿತ್ತು. ಅದನ್ನು ಕೇಳಿದಾಗ, ತನ್ನ ಆಸ್ತಿಯನ್ನೆಲ್ಲಾ ತನ್ನ ತಾಯಿಗೂ, ಅಜ್ಜಿಗೂ ಅನ್ಯಾಯವಾಗಿ ಕೊಡಿಸಿದುದರಿಂದ ತನ್ನಲ್ಲಿ ಹಣವಿಲ್ಲವೆಂದು ಹೇಳಿಬಿಟ್ಟನು. ಅದೇ ಪ್ರಕಾರ ಹೇಸ್ಟಿಂಗ್ಸನು ಈ ಬೀಗಮುಗಳನ್ನು ಹಿಡಿದು ಅವರಿಂದ 7 ಲಕ್ಷ ರೂಪಾಯಿಗಳನ್ನು ಕಿತ್ತುಕೊಂಡು ಅವರ ಜಹಗೀರುಗಳನ್ನು ನವಾಬನಿಗೆ ಕೊಡಿಸಿದನು.

ಹಣದಾಸೆಗಾಗಿ ಹೀಗೆ ಹೇಸ್ಟಿಂಗ್ಸನು ನಡೆಸಿದ ಅಕೃತ್ಯಗಳ ಸುದ್ದಿಯು ಸೀಮೆಯನ್ನು ಮುಟ್ಟಿತು. ಇಷ್ಟು ದಿನವೂ ನಡೆಯುತ್ತಿದ್ದ ಯುದ್ಧಗಳಿ

ಗಾಗಿ ವೆಚ್ಚವು ಹೆಚ್ಚಿಹೋಗಿ ಕಂಪೆನಿಯ ಷೇರುದಾರರಿಗೆ ಬಡ್ಡಿಯು ಗಿಟ್ಟಲಿಲ್ಲ. ಆದುದರಿಂದ ಅವರುಗಳು ಅಸಮಾಧಾನಪಟ್ಟು ಇದಕ್ಕೆಲ್ಲಾ ಹೇಸ್ಟಿಂಗ್ಸನೇ ಹೊಣೆ ಎಂದು ಅವನನ್ನು ರಾಜೀನಾಮೆ ಕೊಡುವಂತೆ ಮಾಡಿದರು. ಅವನು ಸೀಮೆಗೆ ಹೋದಕೂಡಲೆ ಅವನ ಶತ್ರುಗಳು ಅವನನ್ನು ವಿಚಾರಣೆಗೆ ಗುರಿಪಡಿಸಿದರು. ವಿಚಾರಣೆಯು ಏಳುವರ್ಷಗಳ ವರೆಗೆ ಜರುಗಿ ಕಡೆಗೆ ಅವನಿಂದ ತಪ್ಪಿಲ್ಲವೆಂದು ತೀರ್ಮಾನವಾಗಿ, ಅವನು ಸ್ವಾಮಿಕಾರ್ಯಕ್ಕಾಗಿ ಅಷ್ಟು ಕೆಲಸಗಳನ್ನು ಮಾಡಿದನೇ ಹೊರತು ಸ್ವಪ್ರಯೋಜನಕ್ಕಾಗಿ ಅಲ್ಲವೆಂಬುದು ಎಲ್ಲರಿಗೂ ತಿಳಿಯಿತು.

ಹೇಸ್ಟಿಂಗ್ಸನ ಕೆಲಸ

ಇಂಡಿಯಾದೇಶದಲ್ಲಿ ಬ್ರಿಟಿಷ್ ರಾಜ್ಯಸ್ಥಾಪಕರೊಳಗೆ ಹೇಸ್ಟಿಂಗ್ಸನು ಬಹಳ ಪ್ರಮುಖನು. ಆದರೆ ಇವನು ಕ್ಲೈವನಂತೆ ಕಂಪೆನಿಯವರಿಗೆ ಹೊಸ ರಾಜ್ಯಗಳನ್ನು ಸಂಪಾದಿಸಿಕೊಡಲಿಲ್ಲ. ಆದರೂ ಕಂಪೆನಿಗೆ ಸೇರಿದ್ದ ರಾಜ್ಯಗಳನ್ನು ಸುವ್ಯವಸ್ಥೆಗೆ ತಂದನು. ಹೇಸ್ಟಿಂಗ್ಸನು ಹೋಗುವಾಗ ಬಂಗಾಳ, ಬಿಹಾರ, ಕಾಶಿ, ಉತ್ತರಸರ್ಕಾರಗಳು, ಸಾಲ್ಸತಿ, ಬೇಸಿನ್ ಇವುಗಳು ಕಂಪೆನಿಯ ರಾಜ್ಯಗಳಾಗಿದ್ದುವು. ತಂಜಾವೂರು, ಆರ್ಕಾಟು, ಅಯೋಧ್ಯೆ ಇವುಗಳು ಕಂಪೆನಿಯ ಅಧೀನದಲ್ಲಿದ್ದುವು. ಹೇಸ್ಟಿಂಗ್ಸನ ಕಾಲದಿಂದೀಚೆಗೆ ಈಸ್ಟಿಂಡಿಯಾ ಕಂಪೆನಿಯವರು ನಿಜವಾಗಿಯೂ ಬಂಗಾಳದ ಅಧಿಪತಿಗಳಾಗಿ ನಿಂತುಬಿಟ್ಟರು.

ಪಿಟ್ಟನ ಇಂಡಿಯಾ ಬಿಲ್ (1784)

ಇಂಡಿಯಾದೇಶದ ಆಡಳಿತಗಳು ಇನ್ನೂ ಸಮರ್ಪಕವಾಗಿಲ್ಲವೆಂದು ತಿಳಿದು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ "ಇಂಡಿಯಾಬಿಲ್" ಎಂಬ ಹೊಸ ಕಾನೂನು ಜಾರಿಗೆ ಬಂದಿತು. ಇದರಿಂದ ಇದುವರೆಗೆ ಕಂಪೆನಿಯ ಮುಖ್ಯಾಧಿಕಾರಿಗಳಾಗಿದ್ದ ಡೈರೆಕ್ಟರುಗಳ ಮೇಲ್ವಿಚಾರಣೆಗಾಗಿ 6 ಜನ ಸದಸ್ಯರನ್ನುಳ್ಳ "ಬೋರ್ಡ್ ಆಫ್ ಕಂಟ್ರೋಲ್" ಎಂಬ ಒಂದು ಸಭೆಯು ಏರ್ಪಟ್ಟಿತು. ಇದರ ಸದಸ್ಯರನ್ನು ಆರಿಸತಕ್ಕವರು ಪಾರ್ಲಿಮೆಂಟಿನವರೇ. ಇನ್ನು ಮುಂದೆ ಕಂಪೆನಿಯ ದೊಡ್ಡದೊಡ್ಡ ಅಧಿಕಾರ

ಗಳನ್ನು ಇಂಗ್ಲೆಂಡಿನ ದೊರೆಯ ಸಮ್ಮತಿಯಿಂದ ಕೆಲಸಕ್ಕೆ ಚುನಾಯಿಸ ಬೇಕೆಂತಲೂ ಯುದ್ಧವನ್ನಾಗಲೀ ಸಮಾಧಾನವನ್ನಾಗಲೀ ಬೋರ್ಡಿನ ಅನುಮತಿಯಿಲ್ಲದೆ ಮಾಡಕೂಡದೆಂತಲೂ ತೀರ್ಮಾನವಾಯಿತು. ಈ ರೀತಿಯಾಗಿ ಕಂಪೆನಿಯ ಆಡಳಿತಗಳು ಬಲುಮಟ್ಟಿಗೆ ಇಂಗ್ಲೆಂಡಿನ ಸರ್ಕಾರಕ್ಕೆ ಅಧೀನವಾಗುತ್ತಾ ಬಂದುವು.

ಗವರ್ನರ್ ಜನರಲ್ಲಿನ ಮಂತ್ರಾಲೋಚನಾಸಭೆಯಲ್ಲಿ ಮೂರುಮಂಧಿ ಸಭ್ಯರಿರಬೇಕೆಂತಲೂ, ಅತ್ಯಗತ್ಯವಾದ ಸಂದರ್ಭದಲ್ಲಿ ಅವರ ಇಷ್ಟವನ್ನು ಮೀರಿ ಗವರ್ನರ್ ಜನರಲನು ನಡೆಯಬಹುದೆಂತಲೂ ಗೊತ್ತಾಯಿತು. ಇದೇಬಗೆಯಾಗಿ ಮದರಾಸು, ಬೊಂಬಾಯಿ ಗೌರ್ನರುಗಳಿಗೂ ಒಂದೊಂದು ಸಭೆ ಇರಬೇಕೆಂದೂ, ಕಂಪೆನಿಯ ಚಾಕರರು ಇಲ್ಲಿನ ದೊರೆಗಳೊಂದಿಗೆ ಲೇವಾದೇವೀ ಮಾಡಕೂಡದೆಂದೂ ನಿರ್ಧರವಾಯಿತು.

ಅಧ್ಯಾಯ ೫. (೨) ಲಾರ್ಡ್ ಕಾರ್ನವಾಲೀಸ್ ಮತ್ತು (೩) ಸರ್ ಜಾರ್ಜಷೋರ್

(ಕ್ರಿ. ಶ. 1785–1798)

ಯುದ್ಧಗಳಿಂದುಂಟಾಗುವ ತೊಂದರೆ ಮತ್ತು ನಷ್ಟಗಳು ಗೊತ್ತಾಗಿ, ಇನ್ನುಮೇಲೆ ಕೈಲಾದಮಟ್ಟಿಗೂ ಯುದ್ಧದ ಗೊಡವೆಗೂ, ರಾಜ್ಯವನ್ನು ಹೆಚ್ಚಿಸುವ ಗೋಜಿಗೂ, ಹೋಗಕೂಡದೆಂದು ಕಂಪೆನಿಯ ಬೋರ್ಡಿನವರು ತೀರ್ಮಾನಿಸಿದರು.

ಹೇಸ್ಟಿಂಗ್ಸನು ಹಿಂದೂದೇಶವನ್ನು ಬಿಟ್ಟು ಹೋಗುವವೇಳೆಗೆ ಬಂಗಾಳ, ಬಿಹಾರ, ಒರಿಸ್ಸ, ಘಾಸೀಪುರ, ಕಾಶಿ, ಉತ್ತರಸರ್ಕಾರ; ಮದ್ರಾಸು ಮತ್ತು ಅದರ ಸಮೀಪದ ಪ್ರಾಂತಗಳು; ಪೋರ್ಟ್‌ಸೆಂಟ್ ಡೇವಿಡ್, ಬೊಂಬಾಯಿ, ಸೂರತಿ ಇವೇ ಮೊದಲಾದ ಪ್ರಾಂತಗಳು ಕಂಪೆನಿಗೆ ಸೇರಿದ್ದುವು. ಇವಿಷ್ಟನ್ನೂ ವಿಚಕ್ಷಣೆಯಿಂದ ಆಳಿದರೆ ಸಾಕೆಂಬ ಅಭಿಪ್ರಾಯವನ್ನನುಸರಿಸಿ ಪಿಟ್ಟಿನ ಇಂಡಿಯಾಬಿಲ್ಲನ್ನು ಜಾರಿಗೆ ತಂದಿದ್ದರು.

ಬರೀ ಯುದ್ಧದಿಂದಲೇ ಫಲವಿಲ್ಲವೆಂದೂ, ಜನಗಳಿಗೆ ಒಳ್ಳೆಯದು ಮಾಡುವುದೇ ಮುಖ್ಯವೆಂದೂ ಅಭಿಪ್ರಾಯಪಟ್ಟು, ಆ ಕೆಲಸಕ್ಕೆ ತಕ್ಕವನಾದ ಲಾರ್ಡ್ ಕಾರ್ರ್‌ವಾಲೀಸ್ ಎಂಬಾತನನ್ನು ಗವರ್ನರ್ ಜನರಲ್ಲಾಗಿ ಕಳುಹಿಸಿದರು. ಆದರೆ ಸ್ವಲ್ಪ ದಿನಗಳಲ್ಲಿಯೇ ಇವನು ಯತ್ನವಿಾರಿ ಯುದ್ಧಮಾಡಬೇಕಾಯಿತು.

ಮೂರನೆಯ ಮೈಸೂರು ಯುದ್ಧ (ಕ್ರಿ. ಶ. 1790–92)

ಯುದ್ಧಕ್ಕೆ ಕಾರಣಗಳು—ಟೀಪುಸುಲ್ತಾನನು ಮಲೆಯಾಳವನ್ನೂ ಕೊಡಗುದೇಶವನ್ನೂ ತನ್ನ ವಶಮಾಡಿಕೊಂಡು ತನ್ನ ರಾಜ್ಯವನ್ನು ವಿಸ್ತರಿಸಿ, ಹಿಂದೂಗಳನ್ನು ಹಿಂಸಿಸಿ ಮಹಮದನ ಮತಕ್ಕೆ ಸೇರಿಸಲಾರಂಭಿಸಿದನು; ದೆಹಲಿಯ ಚಕ್ರವರ್ತಿಗಳಿಗೆ ಮಾತ್ರ ಸಲ್ಲಬೇಕಾಗಿದ್ದ ಪಾದ್‌ಷಹ (ಚಕ್ರವರ್ತಿ) ಎಂಬ ಬಿರುದನ್ನು ವಹಿಸಿದನು: ಹಿಂದೂಸ್ಥಾನದಲ್ಲಿ ತನಗಿಂತಲೂ ಸಮರ್ಥರು ಯಾರೂ ಇಲ್ಲವೆಂದು ಗರ್ವಿಸುತ್ತಾ ಇಂಗ್ಲಿಷರನ್ನು ಹಿಂದೂದೇಶದಿಂದಲೇ ಓಡಿಸುವೆನೆಂದು ಬಹಿರಂಗವಾಗಿಯೇ ಹೇಳುತ್ತಿದ್ದನು.

ಇದೇ ಸಮಯದಲ್ಲೇ ಮಲೆಯಾಳದ ನಾಯರುಗಳನ್ನು ಜಾತಿಗೆಡಿಸುವ ಪ್ರಯತ್ನಮಾಡಲು ಅವರೆಲ್ಲರೂ ಅನಂತಶಯನದ ಹಿಂದೂದೊರೆಯ ಆಸರೆಯನ್ನು ಹೊಕ್ಕರು. ಆದುದರಿಂದ ಟೀಪುವು ಅನಂತಶಯನವನ್ನು ಮುತ್ತಿಗೆಹಾಕಿದನು. ಆಗ ಅಲ್ಲಿಯ ದೊರೆಯು ತನ್ನ ಸ್ನೇಹಿತರಾದ ಇಂಗ್ಲಿಷರ ಸಹಾಯವನ್ನು ಕೋರಿದನು. ಟೀಪೂವಿನ ಏಳಿಗೆಯನ್ನು ಅಡಗಿಸಬೇಕೆಂದಿದ್ದ ಹೈದರಾಬಾದಿನ ನಿಜಾಮ, ಮರಾಟೆಯವರು, ಇಂಗ್ಲಿಷರು ಇವರೆಲ್ಲರೂ ಒಟ್ಟಾಗಿ ಮೈಸೂರಿನಮೇಲೆ ದಂಡೆತ್ತಿ ಹೊರಟರು.

ಯುದ್ಧಗಳು

ಕಾರ್ರ್ ವಾಲೀಸನು ತಾನೇ ಸೈನ್ಯಾಧಿಪತ್ಯವನ್ನು ಕೈಕೊಂಡು ಕಲ್ಕತ್ತೆಯಿಂದ ಮದ್ರಾಸಿಗೆ ಬಂದು ದೊಡ್ಡ ಸೇನೆಯೊಡನೆ ಹೊರಟು, ಬೆಂಗಳೂರನ್ನು ಹಿಡಿದುಕೊಂಡು ಅರಕೆರೆಯ ಯುದ್ಧದಲ್ಲಿ (1791ರಲ್ಲಿ) ಟೀಪುವನ್ನು ಸೋಲಿಸಿದರು. ಗವರ್ನರ್ ಜನರಲ್‌ನು ಇನ್ನೂ ಕೆಲವು

ದುರ್ಗಗಳನ್ನು ಹಿಡಿದು ರಾಜಧಾನಿಯಾದ ಶ್ರೀರಂಗಪಟ್ಟಣಕ್ಕೆ 1792 ರಲ್ಲಿ ಮುತ್ತಿಗೆ ಹಾಕಿದನು. ಈಗ ಪಟ್ಟಣವು ಶತ್ರುಗಳ ಪಾಲಾಗುವುದೆಂದು ಹೆದರಿ ಟೀಪುವು ಶ್ರೀರಂಗಪಟ್ಟಣದ ಕೌಲನ್ನು ಮಾಡಿಕೊಂಡನು.

ಶ್ರೀರಂಗಪಟ್ಟಣದ ಕೌಲು 1792

ಇದರಿಂದ ಟೀಪುವು ತನ್ನ ರಾಜ್ಯದಲ್ಲಿ ಅರ್ಧವನ್ನೂ ಯುದ್ಧದ ಖರ್ಚಿಗಾಗಿ ಮೂರುಕೋಟಿ ರೂಪಾಯಿಗಳನ್ನೂ ಶತ್ರುಗಳಿಗೆ ಕೊಡಬೇಕಾಗಿ ಬಂದಿತು. ಈ ಹಣವು ಪೂರ್ತಿಯಾಗಿ ಸಲ್ಲುವವರೆಗೂ ಟೀಪುವು ತನ್ನ ಇಬ್ಬರು ಮಕ್ಕಳನ್ನು ಇಂಗ್ಲಿಷರಲ್ಲಿ ಹೊಣೆಯಾಗಿಡಲು ಒಪ್ಪಿದನು. ಮೇಲಿನ ರೀತಿಯಲ್ಲಿ ಸಿಕ್ಕಿದರಾಜ್ಯವನ್ನು ನಿಜಾಮು, ಮರಾಟೆಯವರು,ಇಂಗ್ಲಿಷರು ಹಂಚಿಕೊಂಡರು. ತುಂಗಭದ್ರಾನದಿಯ ಉತ್ತರಭಾಗವು ಮರಾಟೆಯವರಿಗೂ, ಪೆನ್ನಾರ್ ನದಿಯ ಉತ್ತರಭಾಗವು ನಿಜಾಮನಿಗೂ, ಬಾರಾಮಹಲ್, ದಿಂಡಿಗಲ್, ತಲಚೇರಿ, ಕಲ್ಲೀಕೋಟೆ, ಈ ಪ್ರದೇಶಗಳು ಇಂಗ್ಲಿಷರಿಗೂ ಸೇರಿದುವು. ಮೂರನೆಯ ಮೈಸೂರು ಯುದ್ಧವಾದಮೇಲೆ ಇಂಗ್ಲಿಷರ ಕೀರ್ತಿಯು ತುಂಬಾ ಹೆಚ್ಚಿತು. ಯುದ್ಧದಲ್ಲಿ ಇತರ ಯೂರೋಪಿಯನ್ ಜನಾಂಗಗಳಿಗಿಂತಲೂ ಇಂಗ್ಲಿಷರೇ ಶಕ್ತರೆಂಬ ಭಾವನೆಯು ಜನಗಳ ಮನಸ್ಸಿನಲ್ಲಿ ನಾಟಿಹೋಯಿತು.

ಕಾರನ್ ವಾಲೀಸನ ತಿದ್ದುಪಾಟುಗಳು

(೧) ಖಾಯಂ ಜಮೀನ್ದಾರಿ ಸಿಸ್ತು

ಆಕ್ಬರನ ಕಾಲದಲ್ಲಿ ರೈತನು ತನ್ನ ಹಿಡುವಳಿಯ ಭೂಮಿಗೆ ಕೊಡತಕ್ಕ ಕಂದಾಯವು ಇಷ್ಟೇ ಎಂದು ಗೊತ್ತಾಗಿದ್ದಿತು. ಇದನ್ನು ವಸೂಲ್ಮಾಡಿ ಸರ್ಕಾರಕ್ಕೆ ನಿಗದಿಯಾದ ಹಣವನ್ನು ಕೊಡುವುದಕ್ಕೆ ಬೇರೆ ಅಧಿಕಾರಿಗಳಿದ್ದರು. ಇವರ ಅಧಿಕಾರವು ವಂಶಪಾರಂಪರ್ಯವಾಗಿ ನಡೆದು ಬರುತ್ತಿತ್ತು. ಭೂಮಿಗೆಲ್ಲಾ ಚಕ್ರವರ್ತಿಯೇ ಒಡೆಯನಾದುದರಿಂದ, ಜಮೀನುದಾರರು ಚಕ್ರವರ್ತಿಯಿಂದ ಸಂಬಳ ಪಡೆಯುವ ಸೇವಕರಾಗಿದ್ದರು. ಸರ್ಕಾರಕ್ಕೆ ಬರಬೇಕಾದ ಹಣವು ಇಷ್ಟೇ ಎಂದು ನಿರ್ಧಾರವಾಗಿದ್ದುದರಿಂದ ಭೂಮಿಯ ಉತ್ಪತ್ತಿಯು ಹೆಚ್ಚಿದರೆ ಅದರ ಫಲವು

ಜಮೀನುದಾರರಿಗೆ ಸೇರುತ್ತಿತ್ತೇ ಹೊರತು ಸರ್ಕಾರಕ್ಕೆ ಲಾಭವಿರಲಿಲ್ಲ.

ಈ ಜಮೀನುದಾರರು ರೈತರನ್ನು ಜೀತದ ಆಳುಗಳಂತೆ ಭಾವಿಸಿ ಅವರಿಂದ ಸಾಧ್ಯವಾದಷ್ಟು ಹೆಚ್ಚಾದ ಕಂದಾಯವನ್ನು ವಸೂಲ್ಮಾಡುತ್ತಿದ್ದರು. ಸರ್ಕಾರಕ್ಕೆ ಹೆಚ್ಚುಪ್ರಯೋಜನವಾಗಬೇಕೆಂಬ ಉದ್ದೇಶದಿಂದ ವಾರನ್ ಹೇಸ್ಟಿಂಗ್ಸನು ಪ್ರತಿವರ್ಷವೂ ಕಂದಾಯದ ಗುತ್ತಿಗೆಯನ್ನು ಹರಾಜು ಹಾಕುವಂತೆ ಮಾಡಿದನು. ಇದರಿಂದ ಗುತ್ತಿಗೇದಾರರಿಗೆ ಅನುಕೂಲವಾಯಿತೇ ವಿನಾ, ಸರ್ಕಾರಕ್ಕಾಗಲೀ, ರೈತರಿಗಾಗಲೀ ಫಾಯಿದೆ ಆಗಲಿಲ್ಲ. ಜಮೀನುಗಳು ಫಲವತ್ತಾಗಲು ಅವಕಾಶವಿಲ್ಲದೇ ಹೋಯಿತು.

ಇದು ಸರಿಯಿಲ್ಲವೆಂದು ಕಾರನ್‌ವಾಲೀಸನು ಭೂಮಿಯಮೇಲೆ ಜಮೀನುದಾರರ ಹಕ್ಕನ್ನು ಒಪ್ಪಿಕೊಂಡು ಖಾಯಂಗುತ್ತಾ ಪದ್ಧತಿಯನ್ನು ಏರ್ಪಡಿಸಿದನು. ಇದರಿಂದ ಭೂಮಿಯು ಜಮೀನುದಾರನಿಗೆ ಉಚಿತವಾಗಿ ಬಂದಂತೆಯೇ ಆಯಿತು. ಜಮೀನುದಾರರು ಸರ್ಕಾರಕ್ಕೆ ಕೊಡಬೇಕಾದ ಹಣವು ಇಷ್ಟೇ ಎಂದು ನಿರ್ಧರವಾಯಿತು. ಯಾವ ಸಂದರ್ಭದಲ್ಲಿಯೂ ಕಂಪನಿಯವರು ಕಂದಾಯವನ್ನು ಹೆಚ್ಚಿಸಕೂಡದೆಂತಲೂ ಮತ್ತು ಜಮೀನುದಾರರು ಕಂದಾಯವನ್ನು ಕಡಿಮೆಮಾಡಬೇಕೆಂದು (ರಿಮಿಷನ್) ಕೇಳಕೂಡದೆಂತಲೂ ನಿಗದಿಯಾಯಿತು. ಜಮೀನುದಾರರು ರೈತರಿಂದ ನ್ಯಾಯವಾದ ತೆರಿಗೆಯನ್ನು ಮಾತ್ರ ಎತ್ತುವರೆಂತಲೂ, ಉತ್ತಮ ಬೆಳೆಬಂದರೆ ತಮ್ಮ ಉತ್ಪತ್ತಿಯು ಹೆಚ್ಚುವುದು ಎಂಬ ನಿರೀಕ್ಷಣೆಯಿಂದ ರೈತರು ತಮ್ಮ ಭೂಮಿಯನ್ನು ಚೆನ್ನಾಗಿ ಸಾಗುವಳಿ ಮಾಡುವರೆಂದೂ ತಿಳಿದು ಕಾರನ್‌ವಾಲೀಸನು ಈ ಖಾಯಂಗುತ್ತಾ ಪದ್ಧತಿಯನ್ನು ಜಾರಿಗೆ ತಂದನು. ಆದರೆ ಭೂಮಿಯ ಹುಟ್ಟುವಳಿಯೂ, ಬೆಳೆಯೂ ಹೆಚ್ಚಿದಂತೆಲ್ಲಾ ಯಾವ ಕಷ್ಟನಿಷ್ಠುರಗಳೂ ಇಲ್ಲದೆ ಭೂಮಿಯನ್ನು ಪಡೆದ ಜಮೀನುದಾರರಿಗೆ ಲಾಭವಾಯಿತೇ ಹೊರತು ಕಂಪೆನಿಗೂ ರೈತರಿಗೂ ಏನೂ ಆದಾಯವಾಗಲಿಲ್ಲ. ಸೀಮೆಯಲ್ಲಿದ್ದ ಪದ್ಧತಿಯನ್ನು ಆಚರಣೆಗೆ ತಂದುದು ಇಲ್ಲಿನ ಸನ್ನಿವೇಶಗಳಿಗೆ ಸರಿಬೀಳಲಿಲ್ಲ.

ಮೊದಮೊದಲಿನಲ್ಲಿ ಜಮೀನುದಾರರು ಬೇಕಾದಷ್ಟು ಅನುಕೂಲ

ವನ್ನು ಪಡೆದಾಗ್ಯೂ, ಧನಮತ್ತರಾದ ಇವರುಗಳು ಲೋಲರಾಗಿ ಕಾಲವನ್ನು ಕಳೆಯುತ್ತಾ, ತಾವು ಸರ್ಕಾರಕ್ಕೆ ಕೊಡಬೇಕಾದ ಹಣವನ್ನು ಕೊಡುವುದಕ್ಕೂ ಮಾರ್ಗವಿಲ್ಲದೆ ತಮ್ಮ ಸರ್ವಸ್ವವನ್ನೂ ಮಾರಬೇಕಾದ ಹೊತ್ತು ಬಂದಿತು. ಖಾಯಂಗುತ್ತಾ ಪದ್ಧತಿಯು ವಿಶೇಷವಾಗಿ ಆಚರಣೆಯಲ್ಲಿರುವ ಬಂಗಾಳ ದೇಶದಲ್ಲಿ ಈ ಪದ್ಧತಿಯ ಕ್ರೂರಪರಿಣಾಮಗಳು ಈಗಲೂ ವಾಡಿಕೆಯಲ್ಲಿವೆ.

ಇತರ ತಿದ್ದುಪಾಟುಗಳು

ಕಾರ್ನ್ ವಾಲೀಸನು ಒಳದೇಶದ ಆಡಳಿತವನ್ನು ಕ್ರಮಪಡಿಸುವುದಕ್ಕಾಗಿ ಅಲ್ಲಲ್ಲಿ ನ್ಯಾಯಸ್ಥಾನಗಳನ್ನು ಏರ್ಪಡಿಸಿ, ಇದುವರೆಗೂ ಇದ್ದಂತೆ ಮುಲ್ಕಿ (ರೆವೆನ್ಯೂ) ಅಧಿಕಾರವಿಲ್ಲದವರನ್ನೇ ನ್ಯಾಯಾಧಿಪತಿಗಳನ್ನಾಗಿ ಮಾಡಿದನು; ಕಂದಾಯದ ಮೇಲ್ವಿಚಾರಣೆಗಾಗಿ ರೆವಿನ್ಯೂ ಬೋರ್ಡ್ ಎಂಬ ಸಭೆಯನ್ನು ನೇಮಕಮಾಡಿದನು. ದೇಶೀಯರಿಗೆ ದೊಡ್ಡಹುದ್ದೆಗಳು ಸಿಕ್ಕದಂತೆ ಮಾಡಿ, ಭಾರೀ ಉದ್ಯೋಗಗಳಿಗೆಲ್ಲಾ ಪರಂಗಿಯವರನ್ನೇ ನೇಮಿಸುತ್ತಿದ್ದನು. ಕಂಪೆನಿಯ ಚಾಕರರು ಲಂಚ ತೆಗೆದುಕೊಳ್ಳದಂತೆಯೂ, ಸ್ವಂತಕ್ಕಾಗಿ ವ್ಯಾಪಾರ ಮಾಡದಂತೆಯೂ ನಿಯಮಿಸಿ, ಅವರ ಸಂಬಳಗಳನ್ನು ಹೆಚ್ಚಿಸಿದನು. 1793ರಲ್ಲಿ ಕಾರನ್ ವಾಲೀಸನು ಸೀಮೆಗೆ ಹೊರಟುಹೋದನು.

(೩) ಸರ್‌ಜಾನ್ ಷೋರ್ ಕ್ರಿ. ಶ. (1793-98)

ಈತನು ಮುಲ್ಕೀ ವಿಚಾರದಲ್ಲಿ ಸಮರ್ಥನು. ದೇಶೀಯ ರಾಜರ ಯುದ್ಧಗಳ ವಿಚಾರದಲ್ಲಿ ಕೈಹಾಕದಿರುವುದೇ ಕಂಪೆನಿಗೆ ಒಳ್ಳೆಯದೆಂದು ನಂಬಿ, ಅದರಂತೆ ನಡೆದುಕೊಳ್ಳಬೇಕೆಂಬ ಉದ್ದೇಶದಿಂದಿದ್ದನು. ಆದರೆ ಇವನು ತಟಸ್ಥನಾದುದರಿಂದ ಕಂಪೆನಿಯವರಿಗೆ ಪ್ರತಿಕೂಲವಾಯಿತು.

ತಾಟಸ್ಥ್ಯದ ಪರಿಣಾಮ—ಕರ್ಡ್ಲ ಯುದ್ಧ 1795

ನಾನಾ ಫಡ್ನವೀಸನ ಮಂತ್ರಿತ್ವದಲ್ಲಿ ಮರಾಟೆಯವರು ಪ್ರಬಲರಾಗಿ ಫ್ರೆಂಚ್ ಸೇನಾಧಿಪತಿಗಳಿಂದ ತಿದ್ದಿದ ಒಂದು ದೊಡ್ಡ ಸೈನ್ಯವನ್ನು ಕಟ್ಟಿದ್ದರು. ಹೈದರಾಬಾದ್ ನಿಜಾಮನು ಒಪ್ಪಂದದಂತೆ ಕೊಡಬೇಕಾ

ಗಿದ್ದ ಚೌತಾಯದ ಬಾಕಿಯನ್ನು ಕೊಡದಿದ್ದುದರಿಂದ ಮರಾಟೆಯವರು 1795ರಲ್ಲಿ ಅವನಮೇಲೆ ದಂಡೆತ್ತಿ ಹೋದರು.

ನಿಜಾಮನು ಕರಾರಿನಂತೆ ಇಂಗ್ಲಿಷರ ಸಹಾಯುವನ್ನು ಕೇಳಿದನು. ಇದಕ್ಕೆ ಷೋರನು ಒಪ್ಪಲಿಲ್ಲ. ಇದೇ ಸಮಯವೆಂದು ಮರಾಟೆಯವರ ಒಂದು ದೊಡ್ಡ ಸೈನ್ಯವು 1795ರಲ್ಲಿ ಕಡ್ಲಾರ್ಬಳಿಯಲ್ಲಿ ನಿಜಾಮನಮೇಲೆ ಬಿದ್ದಿತು. ನಿಜಾಮನು ಫ್ರೆಂಚರ ಸಹಾಯದಿಂದ ಯುದ್ಧಮಾಡಿ ಸಂಪೂರ್ಣವಾಗಿ ಸೋತುಹೋದನು. ಇದರಿಂದ ಅವನು ಮರಾಟೆಯವರಿಗೆ ಮೂರುಕೋಟಿ ರೂಪಾಯಿಗಳನ್ನೂ, ತನ್ನ ರಾಜ್ಯದ ಕೆಲವು ಭಾಗವನ್ನೂ ಕೊಡಬೇಕಾಯಿತು.

ಮರಾಟೆಯವರ ಪ್ರಾಬಲ್ಯವು ಹೆಚ್ಚುವುದಕ್ಕೆ ಷೋರನ ತಾಟಸ್ಥ್ಯವೇ ಕಾರಣವಾಯಿತು. ಇದರಿಂದ ನಿಜಾಮನು ಇಂಗ್ಲಿಷರಿಗೆ ಶತ್ರುವಾದನು, ಮೈಸೂರಿನ ಟೀಪುವಿಗೆ ಪುರಸತ್ತುಸಿಕ್ಕಿ, ಅವನು ಫ್ರೆಂಚರೊಡನೆ ಒಳಸಂಚು ನಡೆಸಿ ಯುದ್ಧಕ್ಕೆ ಸನ್ನದ್ಧನಾಗಲು ಅವಕಾಶವೂ ಉಂಟಾಯಿತು.

ಆದರೆ ಅಯೋಧ್ಯೆಯ ಆಡಳಿತವು ಬಹಳ ಕೆಟ್ಟುಹೋದಾಗ ಮಾತ್ರ ತಾನು ಹಿಂದಿನಂತೆ ತಟಸ್ಥನಾಗಿದ್ದರೆ, ಇಂಗ್ಲಿಷಿನವರಿಗೆ ತೊಂದರೆಯಾಗಬಹುದೆಂದು ಭಾವಿಸಿ, ಷೋರನು ಅಲ್ಲಿನ ನವಾಬನನ್ನು ಕಿತ್ತುಹಾಕಿ ಬೇರೆಯವರನ್ನು ಗೊತ್ತುಮಾಡಿ, ತಾನು 1798ರಲ್ಲಿ ವಿಲಾಯತಿಗೆ ಪ್ರಯಾಣ ಮಾಡಿದನು.

(೪) "ಲಾರ್ಡ್ ಮಾರ್ನಿಂಗ್‌ಟನ್" ಮಾರ್ಕ್ವಿಸ್‌ವೆಲ್ಲೆಸ್ಲಿ ಇಂಗ್ಲಿಷರ ಪರಾಭವಗಳು ಕ್ರಿ. ಶ. (1798–1805)

ಈತನು ಗವರ್ನರ್ ಜನರಲ್ ಆಗಿ ಬರುವುದಕ್ಕೆ ಮೊದಲು ಸೀಮೆಯಲ್ಲಿ ಕಂಪೆನಿಯ "ಬೋರ್ಡ್ ಆಫ್ ಕಂಟ್ರೋಲಿನ" ಮೆಂಬರಾಗಿದ್ದು ಹಿಂದೂಸ್ಥಾನದ ಸ್ಥಿತಿಗತಿಗಳನ್ನು ಚೆನ್ನಾಗಿ ತಿಳಿದಿದ್ದನು. ಇವನು ಇಲ್ಲಿಗೆ ಬಂದಾಗ ಕಂಪೆನಿಗೆ ಬಹಳ ಕಷ್ಟ ಒದಗಿತ್ತು. ಸೀಮೆಯಲ್ಲೂ ಇಂಗ್ಲಿಷರಿಗೆ ಪರಾಭವಗಳೇ ತಲೆದೋರುತ್ತಿದ್ದುವು. ಸಂಪದ್ಯುಕ್ತವಾದ ಅಮೆರಿಕ ದೇಶವು ಆಗತಾನೆ ಅವರ ಕೈಬಿಟ್ಟು ಹೋಗಿದ್ದಿತು. ಎಲ್ಲೆಲ್ಲಿಯೂ

ಅವರಿಗೆ ಶತ್ರುಗಳ ಕಾಟವೇ ಆಗಿದ್ದಿತು. ಅದರಲ್ಲಿಯೂ ಫ್ರಾನ್ಸ್ ದೇಶದ ನೆಪೋಲಿಯನ್ನನು ಅವರ ನೌಕಾಬಲವನ್ನೇ ಮುರಿದು ಅವರನ್ನು ಮೂಲೆಗೆ ತಳ್ಳಬೇಕೆಂದು ಮಹಾಪ್ರಯತ್ನಗಳನ್ನು ನಡೆಯಿಸುತ್ತಿದ್ದನು.

ಇಂಡಿಯಾದೇಶದಲ್ಲಿಯೂ ಹಾಗೆಯೇ. ಅಫ್ಘಾನಿಸ್ಥಾನದ ಸಮ್ರಾಟ ಷಹನೂ, ಫ್ರಾನ್ಸ್‌ದೇಶದ ನೆಪೋಲಿಯನ್ನನೂ ಇಂಡಿಯಾದೇಶದ ಮೇಲೆ ದಂಡೆತ್ತಿ ಬರುವವರಾಗಿದ್ದರು. ನೆಪೋಲಿಯನ್ನನು ಈಜಿಪ್ಟ್ ದೇಶದ ವರೆಗೂ ಬಂದೇ ಇದ್ದನು.

ಹಿಂದೂರಾಜರ ಸೈನ್ಯದಲ್ಲೆಲ್ಲಾ ಫ್ರೆಂಚರ ಸಿಪಾಯಿಗಳು ಕೆಲಸಕ್ಕೆ ಸೇರಿದ್ದರು. ಮೈಸೂರು ದೇಶದ ಟೀಪುವು ಇಂಗ್ಲಿಷರಿಗೆ ಪ್ರಬಲವಾದ ಶತ್ರುವಾಗಿದ್ದನು. ನೆಪೋಲಿಯನ್ನಿನ ಬೆಂಬಲದಿಂದ ಇಂಗ್ಲಿಷರನ್ನು ಈ ದೇಶದಿಂದಲೇ ಅಟ್ಟಿಬಿಡುವುದಾಗಿ ಟೀಪುವು ಬಹಿರಂಗವಾಗಿ ಹೇಳುತ್ತಿದ್ದನು. ಇವರುಗಳಲ್ಲದೆ ನಿಜಾಮನೂ, ಮರಾಟೆಯವರೂ, ಇಂಗ್ಲಿಷರನ್ನು ಇಂಡಿಯಾದಿಂದಲೇ ಓಡಿಸುವುದಕ್ಕೆ ಬೇರೆಬೇರೆಯಾಗಿ ಸನ್ನಾಹಗಳನ್ನು ಮಾಡುತ್ತಲೇ ಇದ್ದರು.

ಮಾರ್ನಿಂಗ್‌ಟನ್ನನ ರಾಜತಂತ್ರ

ಮೇಲೆ ಹೇಳಿದ ಸನ್ನಿವೇಶಗಳಲ್ಲಿ "ಯಾರಗೊಡವೆಗೂ ಹೋಗಬಾರದೆಂಬ" ತತ್ವವು ಫಲಕಾರಿಯಲ್ಲವೆಂಬುದು ಸ್ಪಷ್ಟವಾಯಿತು. ಹಿಂದೂಸ್ಥಾನದಲ್ಲಿ ಶಾಂತತೆಯು ನೆಲೆಗೊಂಡು ಇಂಗ್ಲಿಷರ ವ್ಯಾಪಾರ ಕಾರ್ಯಗಳು ಅಡ್ಡಿಯಿಲ್ಲದೆ ನಡೆಯಬೇಕಾದರೆ ಮೇಲಿನ ಸನ್ನಾಹಗಳೆಲ್ಲವನ್ನೂ ಅಡಗಿಸಿ ಕಂಪನಿಯವರ ಅಧಿಕಾರವನ್ನು ನೆಲೆಗೊಳಿಸುವ ಏರ್ಪಾಡೇ ಮುಖ್ಯವಾದುದೆಂದು ವೆಲ್ಲೆಸ್ಲಿಯು ತೀರ್ಮಾನಿಸಿದನು.

ಇಂಗ್ಲಿಷರ ರಾಜ್ಯಗಳು

ಮಾರ್ನಿಂಗ್‌ಟನ್ನನು ಪದವಿಗೆ ಬಂದಾಗ ಮದ್ರಾಸ್, ಬಂಗಾಳ, ಬಿಹಾರ, ಒರಿಸ್ಸ ಪ್ರಾಂತಗಳು, ಉತ್ತರ ಸರ್ಕಾರ, ಕಾಶೀದೇಶ, ಸಾಲ್ಸೆಟ್ಟಿ, ದಿಂಡಿಗಲ್, ಬಾರಾಮಹಲ್, ತಲಶೆರಿ ಮತ್ತು ಕಲ್ಲಿಕೋಟೆ, ಇವುಗಳು

ಇಂಗ್ಲಿಷರ ಅಧೀನದಲ್ಲಿದ್ದುವು. ಇವುಗಳ ಜತೆಗೆ ಮತ್ತೆ ಅನೇಕ ರಾಜ್ಯಗಳನ್ನು ಸಂಪಾದಿಸಬೇಕೆಂಬ ಆಸೆಯು ಗವರ್ನರ್ ಜನರಲ್ಲನಿಗೆ ವಿಶೇಷವಾಗಿದ್ದಿತು.

ಈ ದೇಶದ ರಾಜರು ಫ್ರೆಂಚರ ಸಹಾಯವನ್ನು ಪಡೆಯುತ್ತಿರುವವರೆಗೂ ಇಂಗ್ಲಿಷರಿಗೆ ಪ್ರತಿಕೂಲವುಂಟೆಂಬ ಭಾವನೆಯು ವೆಲ್ಲೆಸ್ಲಿಯ ಮನಸ್ಸಿನಲ್ಲಿ ನಾಟಿಹೋಗಿದ್ದಿತು. ಹೇಗಾದರೂ ಮಾಡಿ ಹಿಂದೂ ದೊರೆಗಳು ಕಂಪನಿಯವರ ಸಹಾಯಕ್ಕೆ ಒಳಪಡುವಂತೆ ಮಾಡಬೇಕೆಂಬುದೇ ಇವನ ಆಸೆಯಾಗಿದ್ದಿತು. ಇದಕ್ಕಾಗಿ ಸಹಾಯಕ ಸೈನ್ಯಪದ್ಧತಿ "ಸಬ್ಸಿಡಿಯರೀ ಕೌಲು" ಎಂಬುದನ್ನು ಆಚರಣೆಗೆ ತಂದನು.

ಸಹಾಯಕಸೈನ್ಯ ಪದ್ಧತಿ

ಇದರಿಂದ ಯಾವ ದೇಶಿಯ ರಾಜನಾಗಲೀ ಇಂಗ್ಲೀಷರ ಸಹಾಯ ಸೈನ್ಯವನ್ನಪೇಕ್ಷಿಸಿದರೆ ಅವನ ರಾಜ್ಯದಲ್ಲಿ ಅವನ ವೆಚ್ಚದಿಂದಲೇ ಒಂದು ಇಂಗ್ಲಿಷ್ ಸೈನ್ಯವನ್ನು ಇಡತಕ್ಕದ್ದು. ಕಂಪನಿಯ ಅನುಮತಿಯಿಲ್ಲದೆ ಅಂಥಾ ರಾಜನ ದೇಶದಲ್ಲಿ ಇತರ ಯೂರೋಪಿಯನರು ಇರಲಾಗದು. ಅವನ ಆಸ್ಥಾನದಲ್ಲಿ ರೆಸಿಡೆಂಟ್ ಎಂಬ ಒಬ್ಬ ಇಂಗ್ಲಿಷ್ ಅಧಿಕಾರಿಯೂ ಇರತಕ್ಕದ್ದು. ಆ ರಾಜನು ಇಂಗ್ಲೀಷರಿಗೆ ತಿಳಿಸದೆ ಪರರಾಜರೊಡನೆ ಯಾವ ವ್ಯವಹಾರವನ್ನೂ ನಡೆಸಲಾಗದು. ಇವೇ ಸಬ್ಸಿಡಿಯರೀ ಪದ್ಧತಿಯ ಮುಖ್ಯಾಂಶಗಳು. ಈ ಪದ್ಧತಿಯನ್ನು ಹೇಸ್ಟಿಂಗ್ಸನು ಅಯೋಧ್ಯೆಯಲ್ಲಿ ಮೊದಲೇ ಜಾರಿಗೆ ತಂದಿದ್ದನು. ವೆಲ್ಲೆಸ್ಲಿಯು ಇದನ್ನು ಹಿಂದೂಸ್ಥಾನದಲ್ಲೆಲ್ಲಾ ಜಾರಿಗೆ ತಂದನು.

ಈ ನಿಬಂಧನೆಗೆ ಸಮ್ಮತಿಸಿದವರೆಲ್ಲರೂ ಸ್ವಾತಂತ್ರ್ಯವನ್ನು ಕಳೆದುಕೊಂಡು ಅವರು ಇಂಗ್ಲಿಷರಿಗೆ ಅಧೀನರಾಗಬೇಕಾಯಿತು. ಹೈದರಾಬಾದಿನ ನಿಜಾಮನು ಮೊದಲು ಈ ಕೌಲಿಗೆ ಒಪ್ಪಿದನು. ಅವನ ದೇಶವು ಅವ್ಯವಸ್ಥೆಯಾಗಿದ್ದಿತು. ಮರಾಠೆಯವರಿಂದ ಅವನಿಗೆ ಅಡಿಗಡಿಗೆ ತೊಂದರೆ ಸಂಭವಿಸುತ್ತಿತ್ತು. ಅದನ್ನು ಸರಿಪಡಿಸುವಷ್ಟು ಸಹಾಯ ಸಂಪತ್ತುಳ್ಳ ದೇಶೀಯ ರಾಜರು ಮತ್ತಾರೂ ಇರಲಿಲ್ಲ. ಈ ಕಾರಣಗಳಿಂದ ಅವನು ಸಹಾಯಸೈನ್ಯ ಪದ್ಧತಿಗೆ ಒಪ್ಪಿದನು.

ನಿಜಾಮನು ಇದಕ್ಕೆ ಒಪ್ಪಿದುದರಿಂದ ಆ ದೇಶದಲ್ಲಿದ್ದ ಹೇರಳವಾದ ಫ್ರೆಂಚರ ಸೈನ್ಯವು ದೇಶವನ್ನು ಬಿಟ್ಟು ಹೊರಟುಹೋಯಿತು. ಅದಕ್ಕೆ ಪ್ರತಿಯಾಗಿ ಇಂಗ್ಲಿಷರ ಸೈನ್ಯವು ನಿಂತಿತು. ಅಂದಿನಿಂದ ನಿಜಾಮನಿಗೆ ಶತ್ರುಗಳ ಭಯವಿಲ್ಲದಂತಾಗಿ ಆತನು ತನ್ನ ಸೀಮೆಯನ್ನು ಶಾಂತತೆಯಿಂದ ಆಳಿಕೊಂಡು, ಇಂಗ್ಲೀಷರ ಆಶ್ರಿತನೂ ಸ್ನೇಹಿತನೂ ಆಗಿರುವನು.

ಆದರೆ ಟೀಪುವು ವೆಲ್ಲೆಸ್ಲಿಯ ಸಲಹೆಯನ್ನು ಅಂಗೀಕರಿಸಲಿಲ್ಲ. ಇಷ್ಟೇ ಅಲ್ಲದೆ ಫ್ರಾನ್ಸ್‌ದೇಶದ ನೆಪೋಲಿಯನ್, ಕಾಬೂಲಿನ ಸಮಾನ್‌ಷಹ ಇವರುಗಳ ಸಹಾಯದಿಂದ ಇಂಗ್ಲಿಷರನ್ನು ಈ ದೇಶದಿಂದಲೇ ಓಡಿಸುವುದಕ್ಕೆ ಯತ್ನಿಸುತ್ತಿದ್ದನು. ಇವನಿರುವವರೆಗೂ ಹಿಂದೂಸ್ಥಾನದಲ್ಲಿ ತಮ್ಮ ಆಳಿಕೆಯು ಸ್ಥಿರಪಡಲಾರದೆಂಬ ಭಯವು ಇಂಗ್ಲೀಷರ ಮನಸ್ಸಿನಲ್ಲಿ ನಾಟಿಹೋಗಿದ್ದಿತು. ಇವನ ಪುಂಡನ್ನು ಮುರಿಯುವುದಕ್ಕಾಗಿ ಇಂಗ್ಲೀಷರು ಯುದ್ಧ ಸನ್ನದ್ಧರಾದರು.

ಮೈಸೂರಿನ 4ನೆಯ ಯುದ್ಧ—(ಕ್ರಿ. ಶ. 1798–99)

ಟೀಪುವಿನ ಅಧಿಕಾರಕ್ಕೆ ಪ್ರತೀಕಾರ ಮಾಡುವುದೇ ಸರಿಯೆಂದು ಇಂಗ್ಲೀಷರ ಮೂರು ಸೈನ್ಯಗಳು ಮೈಸೂರಿನಮೇಲೆ ಹೊರಟವು. ಗವರ್ನರ್ ಜನರಲನೇ ಯುದ್ಧವನ್ನು ನಡೆಸಲು ಮದರಾಸಿಗೆ ಹೊರಟನು. ಅಲ್ಲಿಂದ 18,000 ಸೇನೆಯನ್ನು, ಮುಂದೆ ಡ್ಯೂಕ್ ಆಫ್ ವೆಲಿಂಗ್ಟನ್ ಎಂದು ಕೀರ್ತಿಪಡೆದ ಆರ್ಥರ್ ವೆಲ್ಲಸ್ಲಿ ಮತ್ತು ಜನರಲ್ ಹ್ಯಾರಿಸ್ ಎಂಬವರ ಕೈಕೆಳಗೆ ಮದರಾಸಿಗೆ ಕಳುಹಿಸಿದನು. ಹೈದರಾಬಾದಿನ ಸೈನ್ಯವೂ ಮರಾಟೆಯವರ ಸೈನ್ಯವೂ ಸಹಾಯಕ್ಕೆ ಬಂದುವು. ಬೊಂಬಾಯಿ ಪ್ರಾಂತದಿಂದ ಮತ್ತೊಂದು ಇಂಗ್ಲೀಷ್ ಸೈನ್ಯವೂ ಬಂದಿತು.

ಯುದ್ಧಗಳು

ಇವೆಲ್ಲವೂ ಒಟ್ಟುಗೂಡುವುದಕ್ಕೆ ಮೊದಲೇ ಇವುಗಳನ್ನು ಬೇರೆ ಬೇರೆಯಾಗಿ ಸೋಲಿಸಬೇಕೆಂದು ಟೀಪುವು ಬೊಂಬಾಯಿನ ಸೈನ್ಯವನ್ನು ಸಿದ್ದೇಶ್ವರದಬಳಿ ಎದುರಿಸಿ ಸೋತುಹೋದನು. ಕೂಡಲೆ ಹ್ಯಾರಿಸ್ಸಿನ ಸೈನ್ಯವನ್ನು ಮಳವಳ್ಳಿಯಲ್ಲಿ ಎದುರಿಸಲಾಗಿ ಅಲ್ಲಿಯೂ ಅವನಿಗೆ ಅಪಜಯ

ವಾಯಿತು. ಈ ರೀತಿ ಪರಾಜಿತನಾದ ಟೀಪುವು ಓಡಿಹೋಗಿ ಶ್ರೀರಂಗ ಪಟ್ಟಣದ ಕೋಟೆಯಲ್ಲಿ ಸೇರಿಕೊಂಡನು. ಆಗ ಶತ್ರುಗಳ ಸೈನ್ಯಗಳೆಲ್ಲವೂ 1799ರಲ್ಲಿ ಶ್ರೀರಂಗಪಟ್ಟಣದ ಕೋಟೆಯನ್ನು ಮುತ್ತಿದುವು. ಇದನ್ನು ಲಗ್ಗೆಹತ್ತುವುದು ಇಂಗ್ಲೀಷರಿಗೆ ಅತಿಕಷ್ಟವಾಯಿತು.

ಟೀಪುವಿನ ಮರಣ

ಶ್ರೀರಂಗಪಟ್ಟಣವು ಇಂಗ್ಲಿಷರ ವಶವಾದುದು

ನಾಲ್ಕು ವರ್ಷಗಳಿಂದಲೂ ಅಲ್ಲೇ ಸೆರೆಯಲ್ಲಿದ್ದು ಕೋಟೆಯ ಒಳಗುಟ್ಟನ್ನು ತಿಳಿದಿದ್ದ ಬೇರ್ಡನು ಹಲ್ಲಾ ಹತ್ತುವುದರಲ್ಲಿ ಮುಖಂಡನಾದನು. ಮೀರ್‌ಸಾದಖ್ ಎಂಬ ದ್ರೋಹಿಯು ಟೀಪುವಿಗೆ ವಂಚಿಸಿದುದರಿಂದ ಅವನಿಗೆ ಸೋಲಾಯಿತೆಂದು ಜನರು ಹೇಳುತ್ತಾರೆ. ಈ ಯುದ್ಧದಲ್ಲಿ ಟೀಪುವು ಕೊನೆಯವರೆಗೂ ಬಹು ಪರಾಕ್ರಮದಿಂದ ಕಾದಿ ಮಡಿದನು ಕೋಟೆಯು ಶತ್ರುಗಳ ಪಾಲಾಯಿತು. ಟೀಪುವಿನ ಮಕ್ಕಳನ್ನು ವೇಲೂರಿಗೆ ಸಾಗಿಸಿ, ಇಂಗ್ಲೀಷರು ಅವರಿಗೆ ಪೆನ್ಷನ್ ಕೊಟ್ಟರು. ಮೈಸೂರು ರಾಜ್ಯವು ಶತ್ರುಗಳ ವಶವಾಯಿತು. 40 ವರ್ಷಗಳ ಮಹಮ್ಮದೀಯ ಆಡಳಿತವು ಒಂದು ಕ್ಷಣದಲ್ಲಿ ಕೊನೆಗಂಡಿತು.

ರಾಜ್ಯದ ಹಂಚಿಕೆ

ಇಂಗ್ಲಿಷರು ವೈನಾಡು, ಕೊಯಿಮತ್ತೂರು, ಕನೆರ ಈ ದೇಶಗಳನ್ನು ತಾವೇ ಇಟ್ಟುಕೊಂಡು, ಬಳ್ಳಾರಿ, ಕಡಪ, ಕರ್ನೂಲ್ ಈ ಪ್ರಾಂತಗಳನ್ನು ನಿಜಾಮನಿಗೂ, ಹರಪನಹಳ್ಳಿ, ಸುಂಡ, ಆನೆಗೊಂದಿ, ಚಿತ್ರದುರ್ಗದ ಹಲವು ಭಾಗಗಳು, ಘಟ್ಟದ ಮೇಲಿನ ಬಿದನೂರು, ಇವುಗಳನ್ನು ಮರಾಟೆಯವರಿಗೂ ಕೊಟ್ಟರು. ಈ ಹಂಚಿಕೆಗೆ ಮರಾಟೆಯವರು ಒಪ್ಪದಿರಲು ಅವರ ಪಾಲನ್ನು ಇಂಗ್ಲೀಷರೂ ನಿಜಾಮನೂ ತಾವು ತಾವೇ ಹಂಚಿಕೊಂಡರು. ಮಿಕ್ಕ ರಾಜ್ಯವನ್ನು, ಏಕಾಂತದಲ್ಲಿ ತಮಗೆ ಸಹಾಯ ಮಾಡಿದ್ದ ಮಹಾರಾಣಿ ಲಕ್ಷ್ಮಮ್ಮಣ್ಣಿಯುವರ ಪೋಷಣೆಯಲ್ಲಿದ್ದ ನಿಜವಾದ ಹಕ್ಕುದಾರರಾದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಕೊಟ್ಟು ಆತನನ್ನು ಮೈಸೂರು ದೊರೆಯೆಂದು ಅಂಗೀಕರಿಸಿದರು. ಈ ಸಂದರ್ಭದಲ್ಲಿ ಸಬ್ಸಿ

ಡಿಯರೀ ಪದ್ಧತಿಯು ಮೈಸೂರು ರಾಜ್ಯದಲ್ಲಿಯೂ ಆಚರಣೆಗೆ ಬಂದಿತು. ಮೈಸೂರು ಪಟ್ಟಣವೇ ಮತ್ತೆ ರಾಜಧಾನಿಯಾಯಿತು.

ಹೈದರ್ ಮತ್ತು ಟೀಪು ಇವರ ಗುಣಗಳು

ಹೈದರನು ಅನ್ಯಮತಗಳನ್ನು ದ್ವೇಷಿಸದೆ ಹಿಂದೂಗಳ ವಿಶ್ವಾಸಕ್ಕೆ ಪಾತ್ರನಾಗಿದ್ದನು. ಟೀಪುವು ಅನ್ಯಮತವೈರಿಯಾಗಿ ತನ್ನ ಮತದ ಅಭಿವೃದ್ಧಿಗಾಗಿ ಅನೇಕ ಕ್ರೂರ ಕೃತ್ಯಗಳನ್ನು ನಡೆಸಿ ಹಿಂದುಗಳ ದ್ವೇಷಕ್ಕೆ ಗುರಿಯಾದನು. ಹೈದರನು ವಿದ್ಯಾವಂತನಲ್ಲದಿದ್ದರೂ ಸ್ವಾಭಾವಿಕವಾಗಿ ರಾಜನೀತಿ ಕುಶಲನೂ ವಿವೇಕಿಯೂ ಆಗಿದ್ದನು. ಒಂದು ಚಕ್ರಾಧಿಪತ್ಯವನ್ನೇ ಕಟ್ಟಬೇಕೆಂಬ ಆಸೆಯು ಇವನಿಗಿದ್ದಿತು. ಟೀಪುವು ವಿದ್ಯಾವಂತನಾದರೂ ರಾಜನೀತಿಕುಶಲನೂ ವಿವೇಕಿಯೂ ಆಗಿರಲಿಲ್ಲ. ಹೈದರನು ತನ್ನ ಸ್ವಸಾಮರ್ಥ್ಯದಿಂದಲೇ ಹೊಸದಾಗಿ ರಾಜ್ಯವನ್ನು ಸಂಪಾದಿಸಿಕೊಂಡು ಅದನ್ನು ವಿವೇಕವಾಗಿ ಆಳಿದನು. ಟೀಪುವಿಗೆ ಪಿತ್ರಾರ್ಜಿತವಾದ ರಾಜ್ಯವು ದೊರಕಿದರೂ ಅದನ್ನು ಅನುಭವಿಸುವ ಅದೃಷ್ಟವಿಲ್ಲದೆ ಕಳೆದುಕೊಂಡನು.

ಎರಡನೆಯ ಮರಾಟೆ ಯುದ್ಧ (ಕ್ರಿ. ಶ. 1803)

ಈ ವೇಳೆಗೆ ಮರಾಟೆಯವರ ವಿನಾ ಇಂಗ್ಲೀಷರಿಗೆ ಮತ್ತಾವ ಶತ್ರುಗಳೂ ಇರಲಿಲ್ಲ. ನಾನಾಪಡ್ನವೀಸನೆಂಬ ಮಂತ್ರಿಯು ಮರಾಟೆ ಸರದಾರರೆಲ್ಲರೂ ಒಕ್ಕಟ್ಟಾಗಿರುವಂತೆ ಮಾಡಿದ್ದನು. ಆದರೂ ಅವರುಗಳಲ್ಲಿ ಮನಸ್ತಾಪವಿದ್ದೇ ಇದ್ದಿತು. ಈಗ ಪುಣೆಯಲ್ಲಿ ಎರಡನೆಯ ಬಾಜಿರಾಯನು ಪೇಷ್ವೆಯಾಗಿದ್ದನು. ಗಾಯಕವಾಡನು ಬರೋಡೆಯಲ್ಲಿಯೂ, ಹೋಳ್ಕರನು ಇಂದೂರಿನಲ್ಲಿಯೂ, ಆಳುತ್ತಿದ್ದರು. ಭೋಸ್ಲೆಯು ನಾಗಪುರ, ಬಿಹಾರ್ ಮತ್ತು ಒರಿಸ್ಸ ಪ್ರದೇಶಗಳಿಗೆ ಅಧಿಪತಿಯಾಗಿದ್ದನು. ಸಿಂಧ್ಯನ ರಾಜ್ಯವು ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿದ್ದಿತು. ಇವನ ಅಧಿಕಾರವು ದೆಹಲಿಯ ಚಕ್ರವರ್ತಿಯ ಆಸ್ಥಾನದಲ್ಲಿಯೂ ಹರಡಿದ್ದಿತು.

1800ರಲ್ಲಿ ನಾನಾಫಡ್ನವೀಸನು ಸತ್ತಮೇಲೆ ಮರಾಟೆರಾಜ್ಯದ ಬಿಗಿಯೂ, ವಿವೇಕವೂ ಸಂಪೂರ್ಣವಾಗಿ ತಪ್ಪಿಹೋದುವು. ಶಿವಾಜಿಯು

ಕಾಲದ ಧರ್ಮಮಾರ್ಗದ ಹೆಸರೇ ಅಳಿಸಿಹೋಯಿತು. ಮರಾಟೆಯವರಲ್ಲಿ ವಿಶೇಷವಾಗಿದ್ದ ಐಕಮತ್ಯವು ಇಲ್ಲದಂತಾಯಿತು. ಎಲ್ಲೆಲ್ಲಿಯೂ ಜೀತಕ್ಕಾಗಿ ಸೇರಿಕೊಂಡಿದ್ದ ಫ್ರೆಂಚ್ ಸೈನಿಕರ ಸಹಾಯದಿಂದ ಕೊಳ್ಳೆ ಹೊಡೆಯುವುದೂ, ಚೌತಾಯ ಎತ್ತುವುದೂ ಇವುಗಳೇ ಕಣ್ಣಿಗೆ ಬೀಳುತ್ತಿದ್ದುವು. ಇಷ್ಟಾದರೂ ನಾನಾಫಡ್ನವೀಸನಿರುವವರೆಗೂ ಮರಾಟಾ ರಾಷ್ಟ್ರವನ್ನು ಹತೋಟಿಯಲ್ಲಿಟ್ಟಿದ್ದನು. ಆತನು ಇಂಗ್ಲಿಷರ ಸಹಾಯಕ ಸೈನ್ಯಪದ್ಧತಿಗೆ ಒಡಂಬಟ್ಟಿರಲಿಲ್ಲ. ಈಗ ಮರಾಟೆಯವರು ತಾವಾಗಿಯೇ ಇಂಗ್ಲಿಷರ ಸಹಾಯವನ್ನು ಕೋರಬೇಕಾಗಿ ಬಂದಿತು.

ದೌಲತ್‌ರಾವ್ ಸಿಂಧ್ಯನಿಗೂ ಯಶವಂತರಾವ್ ಹೋಳ್ಕರನಿಗೂ ಮನಸ್ತಾಪಹುಟ್ಟಿ ಯುದ್ಧವು ಪ್ರಾರಂಭವಾಯಿತು. ಈ ಯುದ್ಧದಲ್ಲಿ ಪೇಷ್ವೆಯಾದ IIನೇ ಬಾಜಿರಾಯನು ಸಿಂಧ್ಯನ ಪಕ್ಷವನ್ನು ವಹಿಸಿದನು. 1801ರಲ್ಲಿ ನಡೆದ ಪುಣೆಯುದ್ಧದಲ್ಲಿ ಸಿಂಧ್ಯನಿಗೂ ಪೇಷ್ವೆಗೂ ಸೋಲಾಯಿತು. ಪೇಷ್ವೆಯು ಹೆದರಿ ಓಡಿಹೋಗಿ ಇಂಗ್ಲಿಷರ ಮರೆಹೊಕ್ಕು 1802ರಲ್ಲಿ ಬೇಸಿನ್ ಕರಾರನ್ನು ಮಾಡಿಕೊಂಡನು.

ಬೇಸಿನ್ ಒಪ್ಪಂದ 1802

ಇದರಿಂದ ಇಂಗ್ಲೀಷರು ಬಾಜಿರಾಯನನ್ನು ಪುನಃ ಪೇಷ್ವೆಯಾಗಿ ಮಾಡುವುದಾಗಿಯೂ, ಇಂಗ್ಲಿಷರ ಸಮ್ಮತಿಯಿಲ್ಲದೆ ಪೇಷ್ವೆಯು ಇತರರ ಗೊಡೆವೆಗೆ ಹೋಗುವುದಿಲ್ಲವೆಂತಲೂ, ಇಂಗ್ಲಿಷರ ವಿನಾ ಮತ್ತಾವ ಯೂರೋಪಿಯನ್ ಜನಾಂಗದವರನ್ನೂ ತನ್ನ ಸೀಮೆಯಲ್ಲಿಟ್ಟುಕೊಳ್ಳುವುದಿಲ್ಲವೆಂತಲೂ, ತನ್ನ ದೇಶದ ರಕ್ಷಣೆಗಾಗಿ ಇಂಗ್ಲಿಷ್ ಸೈನ್ಯವನ್ನಿಟ್ಟುಕೊಳ್ಳುವೆನೆಂತಲೂ, ಅದರ ವೆಚ್ಚಕ್ಕಾಗಿ 26 ಲಕ್ಷ ರೂಪಾಯಿಗಳನ್ನೂ, ಈಗಿನ ಬೊಂಬಾಯಿಸೀಮೆಯ ಕೆಲವು ಪ್ರದೇಶಗಳನ್ನೂ ಇಂಗ್ಲಿಷರಿಗೆ ಕೊಡುವೆನೆಂತಲೂ ಒಪ್ಪಿಕೊಂಡನು. ಈ ಸಬ್ಸಿಡಿಯರಿ ಕರಾರಿನ ದೆಸೆಯಿಂದ ಪೇಷ್ವೆಯು ಇಂಗ್ಲಿಷರಿಗೆ ಅಧೀನನಾದನು. ಇದೇ ವೇಳೆಗೆ ಗಾಯಕವಾಡನು ಹಿಂದೂಸ್ಥಾನಕ್ಕೆಲ್ಲಾ ಇಂಗ್ಲಿಷರೇ ಸಾರ್ವಭೌಮರೆಂದು ಒಪ್ಪಿಕೊಂಡು ಅವರೊಡನೆ ಸಬ್ಸಿಡಿಯರಿ ಕೌಲನ್ನು ಮಾಡಿಕೊಂಡನು.

ಯುದ್ಧಗಳು

ಮೇಲೆ ಹೇಳಿದ ರೀತಿಯಲ್ಲಿ ಮರಾಟಿ ರಾಜ್ಯದ ಸ್ವಾತಂತ್ರ್ಯವು ತಪ್ಪಿ ಅವರ ರಾಷ್ಟ್ರದಲ್ಲೆಲ್ಲಾ ಇಂಗ್ಲಿಷರ ಪ್ರಾಬಲ್ಯವೇ ನೆಲೆಸುವಂತೆ ಕಂಡಿತು. ಬೇಸಿನ್ ಒಪ್ಪಂದದಂತೆ ಇಂಗ್ಲಿಷರು ಸೈನ್ಯದೊಡನೆ ಹೊರಟು ಪುಣೆಯನ್ನು ಪ್ರವೇಶಿಸಿ ಬಾಜೀರಾಯನನ್ನು ಪೇಷ್ವೆಯಾಗಿ ಮಾಡಿದರು. ಇದು ಮರಾಟೆ ಸರದಾರರಿಗೆ ಒಪ್ಪಲಿಲ್ಲ. ಆದುದರಿಂದ ದೌಲತ್‌ರಾವ್ ಸಿಂಧ್ಯ, ರಘೋಜಿ ಭೋನ್ಸ್ಲೆ ಇವರುಗಳು ಯುದ್ಧಕ್ಕೆ ಸಿದ್ಧರಾದರು. ಈ ಸುದ್ದಿಯು ವೆಲ್ಲೆಸ್ಲಿಗೆ ತಿಳಿದಮೇಲೆ ಅವನೂ ಯುದ್ಧಕ್ಕೆ ಸಿದ್ಧನಾದನು. ಅಸ್ಸಾಯಿ, ಆರ್ಗಾಮ್ ಮತ್ತು ಲಾಸ್ವಾರೀ ಎಂಬ ಸ್ಥಳಗಳಲ್ಲಿ ಘೋರ ಯುದ್ಧಗಳು ನಡೆದು ಇಂಗ್ಲಿಷರಿಗೇ ಜಯವಾಯಿತು.

ದೇವಗಾಂ ಮತ್ತು ಸರ್ಜೆ ಅರ್ಜೆಗಾಂ ಒಪ್ಪಂದಗಳು (1803)

ರಘೋಜಿಯು ದೇವಗಾಂ ಕೌಲಿನ ಪ್ರಕಾರ 1803ರಲ್ಲಿ ಸಬ್ಸಿಡಿಯರಿ ಪದ್ಧತಿಗೆ ಒಳಗಾದನು. ಇದರಿಂದ ಕಟಕ್‌ಪ್ರಾಂತವು (ಒರಿಸ್ಸ) ಇಂಗ್ಲಿಷರ ವಶವಾಯಿತು. ಕಂಪೆನಿಯವರ ಅಪ್ಪಣೆಯಿಲ್ಲದೆ ಪರರಾಜರೊಡನೆ ಯಾವ ವ್ಯವಹಾರವನ್ನೂ ನಡೆಸುವುದಿಲ್ಲವೆಂದೂ ವಿದೇಶೀಯರನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದಿಲ್ಲವೆಂದೂ, ಇಂಗ್ಲಿಷರ ರೆಸಿಡೆಂಟನ್ನು ನಾಗಪುರದಲ್ಲಿ ಇಟ್ಟುಕೊಳ್ಳುವುದಾಗಿಯೂ ರಘೋಜಿಯು ಮಾತುಕೊಟ್ಟನು. ಅತ್ತ ಸರ್ಜೆ ಅರ್ಜೆಗಾಂ ಕೌಲಿನಂತೆ ಸಿಂಧ್ಯನ ಪ್ರಾಬಲ್ಯವೂ ಕುಗ್ಗಿಹೋಯಿತು. ಇದರಿಂದ ಗಂಗಾ, ಯಮುನಾ ನದಿಗಳ ಮಧ್ಯ ಪ್ರದೇಶವೂ ದೆಹಲಿ, ಆಗ್ರಾ, ಅಹಮದ್ ನಗರಗಳೂ ಬ್ರೋಚ್ ಪ್ರಾಂತವೂ ಇಂಗ್ಲಿಷರಿಗೆ ಸೇರಿದುವು. ಸಿಂಧ್ಯನು ಇಂಗ್ಲಿಷರಿಗೆ ಆಶ್ರಿತನಾದನು. ಗ್ವಾಲಿಯರಿನಲ್ಲಿ ಒಬ್ಬ ಇಂಗ್ಲಿಷ್ ರೆಸಿಡೆಂಟನ್ನಿಟ್ಟರು.

ಎರಡನೆಯ ಮರಾಟೆ ಯುದ್ಧದ ಫಲಗಳು

ಈ ಯುದ್ಧದಿಂದ ಇಂಗ್ಲಿಷರ ರಾಜ್ಯವು ದೊಡ್ಡದಾದುದಲ್ಲದೆ ಅವರ ಕೀರ್ತಿಯು ಎಲ್ಲೆಲ್ಲಿಯೂ ಹರಡಿತು. ಪ್ರಬಲರಾದ ಮರಾಟರೇ ಇಂಗ್ಲಿಷರ ಆಶ್ರಿತರಾದುದನ್ನು ನೋಡಿ, ಅನೇಕ ರಾಜಪುತ್ರಸ್ಥಾನದ ಸರದಾರರೂ ಸಹಾಯಕ ಸೈನ್ಯಪದ್ಧತಿಗೆ ಒಡಂಬಟ್ಟರು.

ಮೂರನೆಯ ಮರಾಟೆ ಯುದ್ಧ (ಕ್ರಿ. ಶ. 1804-5)

ಲಾರ್ಡ್ ವೆಲ್ಲೆಸ್ಲಿಯ ಸಬ್ಸಿಡಿಯರಿ ಪದ್ಧತಿಗೆ, ಸಮರ್ಥನಾದ ಇಂದೂರಿನ ಹೋಳ್ಕರ್ ಒಬ್ಬನು ಮಾತ್ರ ಒಳಗಾಗದೆ ಇದ್ದನು. ಇವನು ಎರಡನೆಯ ಮರಾಟೆ ಯುದ್ಧದಲ್ಲಿ ಭಾಗಿಯಾಗದೆ, ತಾನೇ ಬೇರೆ ಯುದ್ಧ ಮಾಡಲು ಅಣಿಪಡಿಸಿಕೊಳ್ಳುತ್ತಿದ್ದನು.

ಯುದ್ಧಕ್ಕೆ ಕಾರಣಗಳು

ಇವನು ಉತ್ತರ ಹಿಂದೂಸ್ಥಾನದ ರಾಜಪುತ್ರ ದೊರೆಗಳಿಂದ ಚೌತಾಯ ಕೇಳಿದುದರಿಂದ, ಸಬ್ಸಿಡಿಯರಿ ಪದ್ಧತಿಗೆ ಒಳಪಟ್ಟಿದ್ದ ರಾಜಪುತ್ರರು ಇಂಗ್ಲಿಷರ ಸಹಾಯವನ್ನು ಬೇಡಿದರು. ಆದಕಾರಣ ಇಂಗ್ಲಿಷರು ಹೋಳ್ಕರನಮೇಲೆ ಯುದ್ಧಮಾಡಬೇಕಾಯಿತು.

ಯುದ್ಧಗಳು

ಇತರ ಮರಾಟೆ ಸರದಾರರು ಕೆಲಸದಿಂದ ತೆಗೆದುಹಾಕಿದ್ದ ಸೈನಿಕರೆಲ್ಲಾ ಹೋಳ್ಕರನ ಸೈನ್ಯದಲ್ಲಿ ಸೇರಿ ಅದು ಬಹಳ ಬಲವಾಗಿದ್ದಿತು. ಇಂಗ್ಲಿಷರಿಗೂ ಹೋಳ್ಕರನಿಗೂ ಆದ ಕೆಲವು ಯುದ್ಧಗಳಲ್ಲಿ ಇಂಗ್ಲಿಷರೇ ಸೋತುಹೋದರು. ಇಂಗ್ಲಿಷರ ದಳಪತಿಯು ವಿಶೇಷವಾಗಿ ನಷ್ಟಪಟ್ಟು ಆಗ್ರಾ ಪಟ್ಟಣಕ್ಕೆ ಓಡಿಹೋದನು. ಇದನ್ನು ನೋಡಿ ಭರತಪುರದ ರಾಜನು ಹೋಳ್ಕರನ ಪಕ್ಷವನ್ನು ಸೇರಿಕೊಂಡನು. ಆ ಮೇಲೆ ಇಂಗ್ಲಿಷರು ತಮ್ಮ ಸೈನ್ಯವನ್ನು ಹೆಚ್ಚಿಸಿಕೊಂಡು 1804ರಲ್ಲಿ ಪರಕಾಬಾದ್ ಮತ್ತು ಡೀಗ್ ಎಂಬ ಸ್ಥಳಗಳಲ್ಲಿ ಯುದ್ಧಮಾಡಿದರು. ಇವುಗಳಲ್ಲಿ ಇಂಗ್ಲಿಷರಿಗೆ ಜಯವಾಯಿತು.

ಭರತಪುರದ ದೊರೆಯು ಹೋಳ್ಕರನನ್ನು ಸೇರಿದನೆಂದು ಇಂಗ್ಲಿಷರು 1805ರಲ್ಲಿ ಭರತಪುರದ ಪ್ರಸಿದ್ಧಿಯಾದ ಮಣ್ಣಿನ ಕೋಟೆಯನ್ನು ಹಿಡಿಯುವುದಕ್ಕೆ ಮಾಡಿದ ಪ್ರಯತ್ನವು ಸಫಲವಾಗಲಿಲ್ಲ. ಇದರಿಂದ ಸೈನ್ಯದ ಹೆಸರು ಕೆಟ್ಟುಹೋಯಿತು. ಆದರೂ ಭರತಪುರದ ರಾಜನು ಇಂಗ್ಲಿಷರಿಗೆ ಶರಣಾಗತನಾದನು. ಈ ಪ್ರಕಾರ ಹೋಳ್ಕರನಿಗೆ ಅಪಜಯವಾಯಿತು. ಇಷ್ಟರಲ್ಲಿಯೇ ವೆಲ್ಲೆಸ್ಲಿಯು ಸೀಮೆಗೆ ಹೊರಟುಹೋಗಬೇಕಾದುದರಿಂದ ಹೋಳ್ಕರನೊಡನೆ ಸಬ್ಸಿಡಿಯರಿ ಕೌಲನ್ನು ಮಾಡಿಕೊಳ್ಳಲು ಆಗಲಿಲ್ಲ.

ವೆಲ್ಲೆಸ್ಲಿಯು ಇತರ ರಾಜ್ಯಗಳನ್ನು ಕಂಪೆನಿಗೆ ಸೇರಿಸಿದ್ದು

ಮೈಸೂರಿನ ಯುದ್ಧವಾದಮೇಲೆ ಹೈದರಾಬಾದಿನಲ್ಲಿಟ್ಟಿದ್ದ ಇಂಗ್ಲಿಷ್ ಸೈನ್ಯವನ್ನು ಇನ್ನೂ ಹೆಚ್ಚಿಸುವುದು ಕ್ಷೇಮವೆಂದು ಕಂಡುಬಂದಿತು. ಅದರ ವೆಚ್ಚಕ್ಕಾಗಿ ಬೇಕಾಗುವ ಹಣಕ್ಕೆ ಬದಲಾಗಿ ನಿಜಾಮನು ಬಳ್ಳಾರಿ ಕಡಪ, ಕರ್ನೂಲ್, ಅನಂತಪುರ ಈ ಡಿಸ್ಟ್ರಿಕ್ಟುಗಳನ್ನು 1799ರಲ್ಲಿ ಇಂಗ್ಲಿಷರಿಗೆ ವಹಿಸಿಕೊಟ್ಟನು. ಇವುಗಳನ್ನು "ವಹಿಸಿಕೊಟ್ಟ" (Ceded Districts) ಡಿಸ್ಟ್ರಿಕ್ಟುಗಳೆಂದು ಈಗಲೂ ಕರೆಯುವ ವಾಡಿಕೆಯುಂಟು.

ಇದೇ ವೇಳೆಗೆ ಸುಮಾರು 150 ವರ್ಷಗಳಿಂದಲೂ ಮಹಾರಾಷ್ಟ್ರರ ಆಳಿಕೆಗೆ ಒಳಪಟ್ಟು ಶಿವಾಜಿಯ ಸಹೋದರನಾದ ವೆಂಕೋಜಿಯು ಗೆದ್ದು ಸ್ವಾಧೀನಮಾಡಿಕೊಂಡಿದ್ದ ತಂಜಾವೂರಿನ ಕೊನೆಯ ಅರಸನು ದುರುಳನಾಗಿ ಆಳುತ್ತಿದ್ದು ಕೊನೆಗೆ ಮಕ್ಕಳಿಲ್ಲದೆ ಸತ್ತುಹೋದನು. ಇವನ ತರುವಾಯ ಇಬ್ಬರು ರಾಜಪುತ್ರರು ಪಟ್ಟಕ್ಕೆ ಹೋರಾಡುತ್ತಿದ್ದರು. ಆಗ ವೆಲ್ಲೆಸ್ಲಿಯು ದೊರೆಯ ಮನೆತನಕ್ಕೆ ಜೀವನಾಂಶವನ್ನು ಕೊಟ್ಟು ಆ ರಾಜ್ಯವನ್ನು 1801ರಲ್ಲಿ ಕಂಪೆನಿಯ ಸ್ವಾಧೀನಮಾಡಿಕೊಂಡನು.

ಇಂಗ್ಲಿಷರ ಸಹಾಯದಿಂದ ಕರ್ಣಾಟಕದ ನವಾಬನಾಗಿದ್ದ ಮಹಮ್ಮದಲ್ಲಿಯು ಸರಿಯಾಗಿ ರಾಜ್ಯವಾಳದೆ ಇಂಗ್ಲಿಷರಿಗೆ ವಿರೋಧವಾಗಿ ಒಳಸಂಚು ನಡೆಸುತ್ತಿದ್ದನು. ಅವನ ತರುವಾಯ ಅವನ ಮಗನ ಆಳಿಕೆಯು ಇನ್ನಷ್ಟು ಕೇಡಾಯಿತು. ಅವನು ಇಂಗ್ಲಿಷರ ಮೇಲೆ ಟೀಪುವಿಗೆ ಬರೆದ ಕಾಗದ ಪತ್ರಗಳು ಇಂಗ್ಲಿಷರ ಕೈಸೇರಿದುವು. ಇಷ್ಟರಲ್ಲಿಯೇ ನವಾಬನು 1801ರಲ್ಲಿ ಗಂಡು ಸಂತತಿ ಇಲ್ಲದೆ ಸತ್ತುಹೋದನು. ಆಗ ಗವರ್ನರ್ ಜನರಲನು ಕರ್ಣಾಟಕವನ್ನು ಕಂಪೆನಿಯ ಆಳಿಕೆಗೆ ಸೇರಿಸಿಬಿಟ್ಟನು.

ಇಲ್ಲಿಗೆ ಮದ್ರಾಸ್ ಅಧಿಪತ್ಯದ ರಚನೆಯು ಪೂರೈಸಿದಂತಾಯಿತು. 1759ರಲ್ಲಿ ಫ್ರೆಂಚರಿಂದ ಕ್ಲೈವನು ತೆಗೆದುಕೊಂಡ ಉತ್ತರ ಸರ್ಕಾರವು ಈ ಅಧಿಪತ್ಯದ ರಚನೆಗೆ ಮೊದಲನೆಯ ಮೆಟ್ಟಲು. ಮೈಸೂರಿನ ಎರಡನೆಯ ಯುದ್ಧವಾದಮೇಲೆ ಮಲಬಾರ್, ಸೇಲಂ, ಮಧುರೆ ಈ ಪ್ರಾಂತಗಳು ಸೇರಿದುವು. ಲಾರ್ಡ್ ವೆಲ್ಲೆಸ್ಲಿಯು ಕೆನೆರಾ, ಕೊಯಮತ್ತೂರು, ತಂಜಾವೂರು, ಕರ್ಣಾಟಕ, "ವಹಿಸಿಕೊಟ್ಟ ಡಿಸ್ಟ್ರಿಕ್ಟುಗಳು" ಇವುಗಳನ್ನೂ ಸೇರಿಸಿ ಈಗಿನ ಮದರಾಸಾಧಿಪತ್ಯವನ್ನು ಪೂರ್ತಿಮಾಡಿದನು.

ಅಯೋಧ್ಯೆಯ ನವಾಬನು ರಾಜ್ಯವನ್ನು ವಿಚಕ್ಷಣೆಯಿಂದ ಆಳುತ್ತಿರಲಿಲ್ಲ. ಈ ವೇಳೆಗೆ ಆಫ್ಘಾನಿಸ್ಥಾನದ ಸರ್ಮಾಷಹನು ದೆಹಲಿಯ ಮೇಲೆ ದಂಡೆತ್ತಿಬರುವ ಸಂಭವವೂ ಇದ್ದಿತು. ಈ ಸಂದರ್ಭಗಳಲ್ಲಿ ಶತ್ರುವನ್ನು ಹೊಡೆದಟ್ಟುವಷ್ಟು ಶಕ್ತಿಯುಳ್ಳ ಸೈನ್ಯವು ಉತ್ತರ ಹಿಂದೂಸ್ಥಾನದಲ್ಲಿ ಅತ್ಯಾವಶ್ಯಕವಾಗಿದ್ದಿತು. ಈ ಕಾರಣಗಳಿಂದ ಇಂಗ್ಲಿಷರು ಹಿಂದೆ ಅಯೋಧ್ಯೆಯ ನವಾಬನಿಗೆ ಕೊಟ್ಟಿದ್ದ ಕೊರಾ, ಅಲಹಾಬಾದ್, ರೋಹಿಲ್‌ಖಂಡ ಮೊದಲಾದ ಪ್ರಾಂತಗಳನ್ನು ತೆಗೆದುಕೊಂಡು, ಆ ಪ್ರಾಂತದಲ್ಲಿ ಸರಿಯಾಗಿ ತಿದ್ದಿದ ಒಂದು ಸೈನ್ಯವನ್ನಿಟ್ಟರು. ಇವೇ ವಾಯವ್ಯ ಪ್ರಾಂತದ ರಾಜ್ಯಗಳು.

ಬೇಸಿನ್ ಕರಾರಿನ ಪ್ರಕಾರ ಇಂಗ್ಲಿಷ್ ಸೈನ್ಯದ ವೆಚ್ಚಕ್ಕೆ ಸಲ್ಲಬೇಕಾಗಿದ್ದ ಹಣಕ್ಕೆ ಪ್ರತಿಯಾಗಿ ಪೇಷ್ವೆಯು ಬಂದಲ್ ಖಂಡವನ್ನು ಇಂಗ್ಲಿಷರಿಗೆ ಕೊಟ್ಟನು. ರಘೋಜಿಯೊಡನೆ ನಡೆದ ಕರಾರಿನಂತೆ ಒರಿಸ್ಸಾ ಪ್ರಾಂತವೂ ಇವರ ವಶವಾಯಿತು. ಸಿಂಧ್ಯನಿಂದ ಕಿತ್ತುಕೊಂಡ ಗಂಗಾ, ಯಮುನಾ ನದಿಗಳ ಮಧ್ಯಪ್ರದೇಶವೂ, ದೆಹಲಿ ಅಹಮದಾಬಾದ್, ಆಗ್ರಾ ಪಟ್ಟಣಗಳೂ, ಬ್ರೋಚ್ ಡಿಸ್ಟ್ರಿಕ್ಟೂ, ಇಂಗ್ಲಿಷರ ವಶವಾದುವು. 1799ರಲ್ಲಿ ಸೂರ್ತಿಯ ನವಾಬನು ಸತ್ತುಹೋಗಲು ಇಂಗ್ಲಿಷರು ನವಾಬನ ತಮ್ಮನಿಗೆ ಜೀವನಾಂಶವನ್ನು ಕೊಟ್ಟು ಆ ರಾಜ್ಯವನ್ನೂ ಸೇರಿಸಿಕೊಂಡರು. ಹೀಗೆ ಕಂಪೆನಿಯ ರಾಜ್ಯವು ನಾಲ್ಕು ಕಡೆಯಲ್ಲಿಯೂ ವೃದ್ಧಿಯಾಯಿತು.

ವೆಲ್ಲೆಸ್ಲಿಯು ಹಿಂದಕ್ಕೆ ಹೋದುದು

ಲಾರ್ಡ್ ವೆಲ್ಲೆಸ್ಲಿಯ ಯುದ್ಧಗಳಿಗಾಗಿ ಕಂಪೆನಿಯ ಡೈರೆಕ್ಟರುಗಳು ಬಹಳ ಹಣವನ್ನು ಒದಗಿಸಬೇಕಾದುದಲ್ಲದೆ, ಇಂಗ್ಲಿಷರು ಒಂದೆರಡು ಅಪಜಯಗಳನ್ನೂ ಅನುಭವಿಸಬೇಕಾಯಿತು. ಇದರಿಂದ ಡೈರೆಕ್ಟರುಗಳಿಗೆ ಅಸಮಾಧಾನವಾಗಿ, ಮರಾಟೆಯುದ್ಧವು ಮುಗಿಯುವುದರೊಳಗಾಗಿ ವೆಲ್ಲಸ್ಲಿಯನ್ನು ಹಿಂದಕ್ಕೆ ಕರೆಸಿಕೊಂಡರು.

ಸಮರ್ಥನಾದ ಗವರ್ನರ್ ಜನರಲನು ಮೈಸೂರಿನವರನ್ನೂ, ಡಚ್ಚರನ್ನೂ, ಫ್ರೆಂಚರನ್ನೂ ಅಡಗಿಸಿ ಹೋಳ್ಕರನೊಬ್ಬನು ಹೊರತಾಗಿ ಉಳಿದ ಮರಾಟೆಯವರನ್ನೆಲ್ಲಾ ಕಂಪೆನಿಗೆ ಆಶ್ರಿತರನ್ನಾಗಿ ಮಾಡಿದನು; ಮೊಗ

ಲರ ಸಾಮ್ರಾಜ್ಯದ ಹೆಸರನ್ನು ನಿರ್ಮೂಲಮಾಡಿ, ಅದರ ಸ್ಥಾನದಲ್ಲಿ ಕಂಪೆನಿಯ ರಾಜ್ಯಭಾರವನ್ನು ನೆಲೆಗೊಳಿಸಿದನು. ಈತನು ಅನೇಕ ರಾಜ್ಯಗಳನ್ನು ಜಯಿಸಿ, ಪಂಜಾಬ್, ಇಂದೂರ್, ಸಿಂಧೂದೇಶ, ನೇಪಾಳ ಇವುಗಳ ವಿನಾ ಹಿಂದೂಸ್ಥಾನವೆಲ್ಲಾ ಕಂಪೆನಿಯ ಆಧಿಪತ್ಯಕ್ಕೆ ಒಳಗಾಗುವಂತೆ ಮಾಡಿದನು.

ಕಂಪೆನಿಯವರಿಗೆ ಮೊದಲಿದ್ದ ವ್ಯಾಪಾರೋದ್ದೇಶವು ಹೋಗಿ ರಾಜ್ಯಭಾರೋದ್ದೇಶವು ಉಂಟಾದುದು ಈತನ ಕಾಲದಲ್ಲಿಯೇ. ಆದುದರಿಂದ ಇಂಗ್ಲಿಷರ ರಾಜ್ಯಭಾರಕ್ಕೆ ಆರಂಭವಾದುದು 1803ರಲ್ಲಿಯೇ ಎನ್ನಬಹುದು. ಇವನನ್ನು ಎರಡನೆಯ ಬ್ರಿಟಿಷ್ ರಾಜ್ಯಸ್ಥಾಪಕನೆಂದು ಕರೆಯುವರು. ಇದು ಸಹಜವಾಗಿಯೇ ಇದೆ.

ವೆಲ್ಲೆಸ್ಲಿಯು ದೂರಾಲೋಚನೆಮಾಡಿ ಕಂಪೆನಿಯ ಉದ್ಯೋಗಸ್ಥರು ಸರಿಯಾಗಿ ರಾಜ್ಯವಾಳಬೇಕಾದರೆ ಅವರಿಗೆ ರಾಜಯೋಗ್ಯವಾದ ವಿದ್ಯೆಯನ್ನು ಕಲಿಸಬೇಕೆಂದು ಆಲೋಚಿಸಿ ಕಲ್ಕತ್ತೆಯಲ್ಲಿ ಒಂದು ಕಾಲೇಜನ್ನು ಸ್ಥಾಪಿಸುವುದರಲ್ಲಿದ್ದನು. ಲಾಭದಲ್ಲಿಯೇ ದೃಷ್ಟಿಯುಳ್ಳ ಡೈರೆಕ್ಟರುಗಳು ಇದಕ್ಕಾಗಿ ತಗಲುವ ವೆಚ್ಚಕ್ಕೆ ಅಂಜಿ ಅಂತಹ ಕಾಲೇಜನ್ನು (Hailbury College) ಸೀಮೆಯಲ್ಲಿಯೇ ಸ್ಥಾಪಿಸಬೇಕೆಂದು ತೀರ್ಮಾನಿಸಿದರು.

ವೆಲ್ಲೆಸ್ಲಿಯ ಕಾಲದಲ್ಲಿ ಹಿಂದೂಸ್ಥಾನದಲ್ಲಿ ಬ್ರಿಟಿಷ್ ಸಾಮ್ರಾಜ್ಯವು ಸ್ಥಾಪಿತವಾಯಿತು. ಆದರೆ ಡೈರೆಕ್ಟರುಗಳ ಸ್ವಾರ್ಥತೆಯಿಂದಲೂ, ಮುಂದೆ ಬಂದ ಗವರ್ನರ್ ಜನರಲ್‌ಗಳು ಅಲ್ಪಸ್ವಲ್ಪ ಕಾಲಗಳಲ್ಲಿಯೇ ನಿವೃತ್ತರಾಗುತ್ತಿದ್ದುದರಿಂದಲೂ, ಬಹಳ ಕಾಲ ರಾಜ್ಯವನ್ನು ತಹಬಂದಿಗೆ ತರುವುದರಲ್ಲಿಯೇ ಕಾಲವು ಕಳೆದುಹೋಯಿತು.

ರಾಜ್ಯದ ಆಡಳಿತವು ಸಂಪೂರ್ಣವಾಗಿ ಅಧಿಕಾರಿಗಳ ವಶದಲ್ಲಿದ್ದು ಕೊಂಡು ಆ ಅಧಿಕಾರಿಗಳು ಯಂತ್ರಗಳಂತೆ ಹಿಂದಿನ ಕ್ರಮವನ್ನು ಕೊಂಚವೂ ಬದಲಾಯಿಸದೆ, ಅಭಿವೃದ್ಧಿಯ ಏರ್ಪಾಡುಗಳೇನೂ ಇಲ್ಲದಿದ್ದುದನ್ನು ಪಾರ್ಲಿಮೆಂಟಿನವರು ಆಗಾಗ್ಗೆ ಗಮನಿಸಿ ರಾಜ್ಯಭಾರದ ವಿಷಯದಲ್ಲಿ ಮುಖ್ಯವಾದ ಕೆಲವು ನಿಯಮಗಳನ್ನು ಮಾಡಿದರು.

ಅಧ್ಯಾಯ ೬.—ಕಂಪೆನಿಯ ಆಳಿಕೆ

(೫) ಲಾರ್ಡ್ ಕಾರ್ನವಾಲೀಸ್ 2ನೆಯ ಸಲ

ಈಸ್ಟ್ ಇಂಡಿಯಾ ಕಂಪೆನಿಯವರು ವ್ಯಾಪಾರದ ಲಾಭದಲ್ಲಿಯೇ ದೃಷ್ಟಿಯುಳ್ಳವರಾಗಿದ್ದರು. ಆದರೆ ಟೀಪು ಮತ್ತು ಮಹಾರಾಷ್ಟ್ರರ ಸಂಗಡ ಆದ ಯುದ್ಧದಿಂದ ಅವರ ವೆಚ್ಚವು ಹೆಚ್ಚಿಹೋಗಿ ಅವರಿಗೆ ಬರುತ್ತಿದ್ದ ಲಾಭವು ಕಡಿಮೆಯಾಯಿತು. ಆದುದರಿಂದ ಹಿಂದಿನ ಗವರ್ನರ್ ಜನರಲ್ಲಿನ ಆಡಳಿತದಲ್ಲಿ ನಡೆದಂತೆ ಯುದ್ಧಗಳಿಗೆ ಅವಕಾಶಕೊಡದೆ ಶಾಂತತೆಯಿಂದ ಆಡಳಿತ ನಡೆಸಬೇಕೆಂದು ತಿಳಿಸಿ, ಕಂಪೆನಿಯವರು ಹಿಂದೆ ಗವರ್ನರ್ ಜನರಲ್ಲಾಗಿದ್ದ ಲಾರ್ಡ್ ಕಾರ್ನವಾಲೀಸನನ್ನೇ ಪುನಃ ಗವರ್ನರ್ ಜನರಲ್ಲಾಗಿ ಕಳುಹಿಸಿದರು. ಆದರೆ ಇವನು ಇಲ್ಲಿಗೆ ಬಂದ ಸ್ವಲ್ಪ ದಿನಗಳಲ್ಲೇ ಸತ್ತುಹೋದನು.

(೬) ಸರ್ ಜಾರ್ಜ್ ಬಾರ್ಲೋ (ಕ್ರಿ. ಶ. 1805–7)

ಆಮೇಲೆ ಬಂದ ಸರ್ ಜಾರ್ಜ್ ಬಾರ್ಲೋ ಎಂಬವನು ಅಧಿಕಾರವನ್ನು ವಹಿಸಿದ ಕೂಡಲೇ ಹೋಳ್ಕರನೊಡನೆ ಕೌಲುಮಾಡಿಕೊಂಡು 2ನೆಯ ಮರಾಟೆ ಯುದ್ಧವನ್ನು ಮುಗಿಸಿದನು. ಇದರಮೇರೆಗೆ ಹೋಳ್ಕರನ ರಾಜ್ಯಗಳು ಪುನಃ ಅವನಿಗೆ ದೊರೆತುವು. ರಾಜಪುತ್ರರ ಸಂಸ್ಥಾನಗಳ ಗೊಡವೆಗೆ ತಾವು ಬರುವುದಿಲ್ಲವೆಂದು ಇಂಗ್ಲಿಷರು ಒಪ್ಪಿಕೊಂಡರು. ಇದರಿಂದ ಹೋಳ್ಕರನಿಗಿದ್ದ ತೊಂದರೆಗಳೆಲ್ಲಾ ತಪ್ಪಿ ತಾನೇ ತಾನಾದನು. ಆಮೇಲೆ ಅವನು ಬೂಂದಿ, ಜಯಪುರ ಮುಂತಾದ ರಾಜಪುತ್ರ ಸಂಸ್ಥಾನಗಳಿಂದ ಚೌತಾಯವನ್ನು ಎತ್ತಲು ಮೊದಲುಮಾಡಿದನು.

ವೇಲೂರಿನ ದಂಗೆ ಕ್ರಿ. ಶ. 1806

ಮದರಾಸಿನ ಸೇನೆಯಲ್ಲಿ ರೂಢಿಗೆ ಬಂದ ಕೆಲವು ಏರ್ಪಾಡುಗಳಿಂದ ಸೈನಿಕರಿಗೆ ಅಸಮಾಧಾನ ಉಂಟಾಯಿತು. ಹಿಂದೂ ಸಿಪಾಯಿಗಳು ಹಣೆಯಲ್ಲಿ ಜಾತಿಸಂಬಂಧವಾದ ಗುರುತನ್ನು ಇಡಕೂಡದೆಂದೂ,

ತುರುಕ ಸಿಪಾಯಿಗಳು ತಮ್ಮ ಗಡ್ಡವನ್ನು ತೆಗಿಸಬೇಕೆಂದೂ, ಎಲ್ಲರೂ ತಲೆಗೆ ಫರಂಗಿ ಟೋಪಿಗಳನ್ನು ಹಾಕಿಕೊಳ್ಳಬೇಕೆಂದೂ ಇವೇ ಮೊದಲಾಗಿ ಏರ್ಪಡಿಸಿದ ಕಟ್ಟುಗಳಿಂದ ತಮ್ಮ ಜಾತಿಯನ್ನು ಕೆಡಿಸುತ್ತಾರೆಂದು ವೇಲೂರಿನಲ್ಲಿ ಸಿಪಾಯಿಗಳು ದಂಗೆ ಎದ್ದರು.

ಇಂಗ್ಲೀಷರು ಈ ದಂಗೆಯನ್ನು ಕಷ್ಟಪಟ್ಟು ನಿಲ್ಲಿಸಿ, ಇದಕ್ಕೆ ಆಗ ವೇಲೂರಿನಲ್ಲಿದ್ದ ಟೀಪುವಿನ ಮಕ್ಕಳೇ ಕಾರಣರೆಂದು ಅವರನ್ನು ಕಲ್ಕತ್ತೆಗೆ ಸಾಗಿಸಿದುದೂ ಅಲ್ಲದೆ, ಮೇಲೆ ಹೇಳಿದ ಅವಿವೇಕದ ಬದಲಾವಣೆಗಳನ್ನು ಕಂಪೆನಿಯ ಡೈರೆಕ್ಟರುಗಳು ರದ್ದುಮಾಡಿ, ಬಾರ್ಲೋವಿಗೆ ಶಕ್ತಿಸಾಲದೆಂದು ಭಾವಿಸಿ, ಅವನ ಸ್ಥಾನಕ್ಕೆ ಲಾರ್ಡ್ ಮಿಂಟೋವನ್ನು ಗವರ್ನರ್ ಜನರಲ್ಲಾಗಿ ಕಳುಹಿಸಿದರು.

(೭) ಲಾರ್ಡ್ ಮಿಂಟೋ ಕ್ರಿ. ಶ. 1807–13

ಬಂದಲ್‌ಖಂಡದ ಅನಾಯಕತ್ವ 1812

ಬಾರ್ಲೋವಿನ ತಾಟಸ್ಥ್ಯದಿಂದ, ಅಲ್ಲಲ್ಲಿ ಅನಾಯಕತೆಯು ತಲೆದೋರಿತು. ಇಂಗ್ಲಿಷರ ಆಧೀನದಲ್ಲಿದ್ದ ಬಂದಲ್‌ಖಂಡ ಪ್ರಾಂತವು ಅನಾಯಕವಾಗಿ ಸಮೀಪದಲ್ಲಿದ್ದ ಇತರ ಇಂಗ್ಲಿಷರ ರಾಜ್ಯಕ್ಕೆ ತೊಂದರೆಯಾಗುವಂತಿತ್ತು. ಆದುದರಿಂದ ಇಂಗ್ಲಿಷ್ ಸೈನ್ಯವು ಅಲ್ಲಿಗೆ ಹೋಗಿ ಅಲ್ಲಿನ ಪುಂಡನ್ನು ಅಡಗಿಸಿತು.

ಪರರಾಜರೊಡನೆ ಸ್ನೇಹ

ಫ್ರೆಂಚರ ನೆಪೋಲಿಯನ್ನನು ಭೂಮಾರ್ಗವಾಗಿ ಇಂಡಿಯಾಕ್ಕೆ ಬರುವನೆಂಬ ಭಯವು ಇಂಗ್ಲಿಷರಿಗೆ ತಪ್ಪಲೇ ಇಲ್ಲ. ಒಂದುವೇಳೆ ಅವನು ಹಾಗೆ ದಂಡೆತ್ತಿಬಂದರೆ ಅವನನ್ನು ಮಾರ್ಗದಲ್ಲಿಯೇ ಎದುರಿಸಲು ಪಾರ್ಸಿಸ್ಥಾನ, ಆಫ್ಘಾನಿಸ್ಥಾನ, ಸಿಂಧೂದೇಶ, ಪಂಜಾಬ್ ಈ ಪ್ರದೇಶಗಳಲ್ಲಿ ಇಂಗ್ಲಿಷರಿಗೆ ಸಹಾಯಕರಿರಬೇಕಾದುದು ಅತ್ಯಾವಶ್ಯಕವಾಗಿದ್ದಿತು. ಇದಕ್ಕಾಗಿ ಮಿಂಟೋವು ಲಾಹೋರ್, ಆಫ್ಘಾನಿಸ್ಥಾನ, ಪಾರ್ಸಿಸ್ಥಾನ, ಈ ಪ್ರದೇಶಗಳಿಗೆ ರಾಯಭಾರಿಗಳನ್ನು ಕಳುಹಿಸಿ ಅಲ್ಲಿಯ ದೊರೆಗಳೊಂದಿಗೆ ಸ್ನೇಹವನ್ನು ಬಳೆಸಿದನು. ಲಾಹೋರಿನಲ್ಲಿ ಪ್ರಖ್ಯಾತನಾಗಿದ್ದ ರಣಜಿತಸಿಂಗನು ಲೂಧಿಯಾನದಲ್ಲಿ ಒಂದು ಇಂಗ್ಲಿಷ್ ದಂಡನ್ನು ಇಡಬಹುದೆಂದು

ಒಪ್ಪಿದನು. ಫ್ರೆಂಚರನ್ನು ತಮ್ಮ ದೇಶದ ಮಾರ್ಗವಾಗಿ ಬಿಡುವುದಿಲ್ಲವೆಂದು ಸಿಂಧೂದೇಶದ ಅಮೀರರು ಒಪ್ಪಿಕೊಂಡರು.

ಗುಡಾರದ ದಂಗೆ (ಕ್ರಿ. ಶ. 1809)

ಕಂಪೆನಿಯ ವೆಚ್ಚವನ್ನು ಕಡಿಮೆಮಾಡುವುದಕ್ಕಾಗಿ ಗುಡಾರದ ಖರ್ಚಿಗಾಗಿ ಸರ್ಕಾರದವರು ಸಿಪಾಯಿಗಳಿಗೆ ಕೊಡುತ್ತಿದ್ದ ಭತ್ಯವನ್ನು ಮದರಾಸ್ ಸರ್ಕಾರದವರು ನಿಲ್ಲಿಸಿದರು. ಇದಕ್ಕಾಗಿ ಅಲ್ಲಿನ ಸಿಪಾಯಿಗಳು ದಂಗೆ ಎದ್ದರು. ಮಿಂಟೋವು ತಾನೇ ಮದರಾಸಿಗೆ ಹೋಗಿ ದಂಗೆಯನ್ನು ಅಡಗಿಸಿದನು.

ವ್ಯಾಪಾರದ ಹಕ್ಕು

1600ರಲ್ಲಿ ಇಂಗ್ಲೆಂಡಿನ ಎಲಿಜಿಬಿತ್ ರಾಣಿಯು ಈಸ್ಟಿಂಡಿಯಾ ಕಂಪೆನಿಯ ವರ್ತಕರಿಗೆ ಹಿಂದೂದೇಶದೊಡನೆ ವ್ಯಾಪಾರಮಾಡುವುದಕ್ಕೆ ಒಂದು ನಿರೂಪವನ್ನು ಕೊಟ್ಟಿದ್ದಳು. 1773ರಲ್ಲಿ ಆಚರಣೆಗೆ ಬಂದ ರೆಗ್ಯುಲೇಟಿಂಗ್ ಆಕ್ಟಿನಿಂದ ಕಂಪೆನಿಯ ನಿರೂಪವು 20 ವರ್ಷಕ್ಕೊಂದಾವೃತ್ತಿ ಪುನರವಧಿಯನ್ನು ಪಡೆಯಬೇಕೆಂದು ತೀರ್ಮಾನವಾಯಿತು. ಅದರಂತೆ 1813ರಲ್ಲಿ ಕಂಪೆನಿಯ ಸನ್ನದನ್ನು ಮಾರ್ಪಡಿಸಿದರು. ಇದುವರೆಗೂ (1600—1813) ಈಸ್ಟಿಂಡಿಯಾ ಕಂಪೆನಿಯವರು ಮಾತ್ರ ಇಂಡಿಯಾದೊಡನೆ ವ್ಯಾಪಾರಮಾಡಬಹುದೆಂದಿತ್ತು. ಈ ಹಕ್ಕನ್ನು ತಪ್ಪಿಸಿ ಇನ್ನು ಮುಂದೆ ಯಾರು ಬೇಕಾದರೂ ವ್ಯಾಪಾರಮಾಡಬಹುದೆಂದೂ, ಸದ್ಯಕ್ಕೆ ಚೀಣಾದೇಶದ ವ್ಯಾಪಾರವು ಕಂಪೆನಿಯವರಿಗೆ ಮಾತ್ರ ಇರಬೇಕೆಂತಲೂ ನಿಷ್ಕರ್ಷೆಯಾಯಿತು. ಆದುದರಿಂದ ಕಂಪೆನಿಯವರಿಗೆ ಇನ್ನು ಮೇಲೆ ತಮ್ಮ ರಾಜ್ಯಗಳ ಕ್ಷೇಮಚಿಂತನೆಯೇ ಮುಖ್ಯ ಕೆಲಸವಾಯಿತು. 1813ರಲ್ಲಿ ಮಿಂಟೋವು ಸೀಮೆಗೆ ಹೋದನು.

(ಲ) ಮಾರ್ಕ್ವಿಸ್ ಆಫ್ ಹೇಸ್ಟಿಂಗ್ಸ್ (ಲಾರ್ಡ್ ಮಾಯಿರ) (ಕ್ರಿ. ಶ. 1813–22)

ಹೇಸ್ಟಿಂಗ್ಸನು ದೊಡ್ಡ ಮನೆತನಕ್ಕೆ ಸೇರಿದ್ದನು. ಇವನು ಅನೇಕ ಯುದ್ಧಗಳಲ್ಲಿ ಪರಾಕ್ರಮದಿಂದ ಹೋರಾಡಿ "ಮಹಾವೀರ" ಎಂದು

ಹೆಸರು ಪಡೆದಿದ್ದನು. ಇವನು ಬ್ರಿಟಿಷ್ ಇಂಡಿಯಾ ರಾಜ್ಯಸ್ಥಾಪಕರಲ್ಲಿ ಮೂರನೆಯವನು. ಇವನು ಬರುವುದಕ್ಕೆ ಹಿಂದೆ ಕೆಲವು ವರ್ಷಗಳಿಂದಲೂ ದೇಶೀಯರಾಜರ ಗೊಡವೆಗೆ ಹೋಗಬಾರದೆಂಬ ಧರ್ಮವು ಆಚರಣೆಯಲ್ಲಿದ್ದುದರಿಂದ ಎಲ್ಲೆಲ್ಲಿಯೂ ಅನಾಯಕತೆಯೂ ಯುದ್ಧ ಪ್ರಸಂಗವೂ ತಲೆದೋರುತ್ತಿದ್ದಿತು. ಮಧ್ಯ ಹಿಂದೂಸ್ಥಾನದಲ್ಲಿ ಪಿಂಡಾರಿಗಳೆಂಬ ಹೊಸ ಶತ್ರುಗಳು ಪ್ರಬಲರಾಗಿದ್ದರು. ದೇಶವು ಮುಂದರಿಯಬೇಕಾದರೆ ಎಲ್ಲಾ ಕಡೆಯಲ್ಲಿಯೂ ಶಾಂತತೆಯು ನೆಲೆಗೊಳ್ಳಬೇಕಾದುದು ಮುಖ್ಯವಾದುದೆಂದು ತಿಳಿದು ಇವನು ದೇಶದಲ್ಲಿದ್ದ ತುಂಟರನ್ನು ಹತೋಟಿಗೆ ತರುವ ಅನೇಕ ಪ್ರಯತ್ನಗಳನ್ನು ಮಾಡಿದನು.

ನೇಪಾಳದ ಯುದ್ಧ 1814–16

ಇವನು ಬಂದ ಸ್ವಲ್ಪ ದಿವಸದಲ್ಲಿಯೇ ನೇಪಾಳದ ಮೇಲೆ ಯುದ್ಧ ಮಾಡಬೇಕಾಯಿತು. ಅಲ್ಲಿನ ಘೂರ್ಕರು ತಮ್ಮ ರಾಜ್ಯವನ್ನು ವಿಸ್ತರಿಸುವ ಉತ್ಸಾಹದಲ್ಲಿ ತಮ್ಮ ಮಗ್ಗುಲಲ್ಲಿದ್ದ ಇಂಗ್ಲಿಷರ ಪ್ರಾಂತಗಳನ್ನೂ ಅಕ್ರಮಿಸಿದರು. ಆದುದರಿಂದ ಅವರ ಸೊಕ್ಕನ್ನು ಮುರಿಯುವುದಕ್ಕೆ ಒಂದು ದೊಡ್ಡ ಸೈನ್ಯವು ನೇಪಾಳದ ಮೇಲೆ ಹೊರಟಿತು.

ಕದನಗಳು

ಜನರಲ್ ಗಿಲ್ಲೆಸ್ಪಿಯು ಕಾಳಿಂಗವೆಂಬ ಕೋಟೆಯನ್ನು ಹಿಡಿಯುವ ಪ್ರಯತ್ನದಲ್ಲಿ ಮಡಿದುಹೋದನು. ಎಲ್ಲೆಲ್ಲಿಯೂ ಇಂಗ್ಲಿಷರಿಗೆ ಅಪಜಯವಾಯಿತು. ವೀರರಾದ ಘೂರ್ಕರು ಇಂಗ್ಲಿರನ್ನು ಸೋಲಿಸಿ ಹಿಮ್ಮೆಟ್ಟುವಂತೆ ಮಾಡಿದರು. ಇದನ್ನು ನೋಡಿ ಮರಾಟೆಯವರೂ, ಪಿಂಡಾರೆಯವರೂ, ಇಂಗ್ಲಿಷರ ಸಾಮ್ರಾಜ್ಯವು ಮೂಲೆಗೆ ಬೀಳುವ ಸಮಯ ಬಂತೆಂದು ಭಾವಿಸಿದರು.

ಸಿಗೌಲಿ ಒಪ್ಪಂದ ಕ್ರಿ. ಶ. 1816

ಆದರೆ ಜನರಲ್ ಆಕ್ಟರ್ಲೋನಿ ಎಂಬ ಇಂಗ್ಲಿಷ್ ಶೂರನ ಸಾಹಸದಿಂದ ಇಂಗ್ಲಿಷರ ಮಾನವು ಉಳಿಯಿತು. ಮಕ್ವನ್‌ಪುರದ ಬಳಿ ನಡೆದ ಯುದ್ಧದಲ್ಲಿ ಘೂರ್ಕರಿಗೆ ಸಂಪೂರ್ಣವಾಗಿ ಸೋಲಾಯಿತು. ಕುಮಾ

ಯೂನ್ ಪ್ರಾಂತವು ಇಂಗ್ಲಿಷರ ಕೈಸೇರಿತು. ಆಗ ಅವರು ಆಕ್ರಮಿಸಿಕೊಂಡಿದ್ದ ಇಂಗ್ಲಿಷರ ರಾಜ್ಯಗಳನ್ನು ಹಿಂದಕ್ಕೆ ಕೊಡುವಂತೆಯೂ, ಕಂಪೆನಿಯ ರೆಸಿಡೆಂಟನನ್ನು ನೇಪಾಳದಲ್ಲಿಟ್ಟುಕೊಳ್ಳುವಂತೆಯೂ, ಒಪ್ಪಿ 1816 ರಲ್ಲಿ ಸಿಗೌಲಿ ಕರಾರನ್ನು ಮಾಡಿಕೊಂಡರು. ಅಂದಿನಿಂದ ಅವರು ಕರಾರಿನಂತೆ ನಡೆಯುತ್ತಾ ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಇಂಗ್ಲಿಷರಿಗೆ ಸಹಾಯಕರಾಗಿರುವರು. ಇದರಿಂದ ಇಂಗ್ಲಿಷರಿಗೆ ಈಶಾನ್ಯದಿಕ್ಕಿನ ಕಣಿವೆಯ ಮಾರ್ಗವಾಗಿ ಬರಬಹುದಾದ ಶತ್ರುಗಳ ಭಯವಿಲ್ಲದಂತಾಯಿತು. ಘೂರ್ಕ ಸಿಪಾಯಿಗಳು ಇಂಗ್ಲಿಷ್ ಸೈನ್ಯದಲ್ಲಿ ಸೇರಿಕೊಂಡಿರುವರು.

ಪಿಂಡಾರೆ ಯುದ್ಧ ಕ್ರಿ. ಶ. 1818–19

ಮೇಲೆ ಹೇಳಿದ ನೇಪಾಳದ ಯುದ್ಧವು ಮುಗಿದ ಮೇಲೆ ಲಾರ್ಡ್ ಹೇಸ್ಟಿಂಗ್ಸನು ಮಧ್ಯ ಇಂಡಿಯಾದಲ್ಲಿ ಬಹಳ ಹಾವಳಿಯನ್ನು ಮಾಡುತ್ತಿದ್ದ ಪಿಂಡಾರೆಯವರನ್ನು ಅಡಗಿಸಲು ಹೊರಟನು. ಪಿಂಡಾರೆಯವರ ಗುಂಪಿನಲ್ಲಿ ಪಠಾನರೂ, ಜಾಟರೂ, ಮರಾಟೆಯವರೂ ಸೇರಿದ್ದರು. ಇವರು ಒಂದೇ ಜನಾಂಗಕ್ಕಾಗಲೀ ಅಥವಾ ಮತಕ್ಕಾಗಲೀ ಸೇರಿರಲಿಲ್ಲ. ಔರಂಗ್ ಜೇಬನ ಕಾಲದಿಂದಲೂ ಕೆಲಸವನ್ನು ಕಳೆದುಕೊಂಡಿದ್ದ ಹಿಂದೂ ಮತ್ತು ಮುಸಲ್ಮಾನ ಸಿಪಾಯಿಗಳೂ, ಇವರ ಗುಂಪಿಗೆ ಸೇರಿದ್ದರು. ದರೋಡೆ, ಊರುಗಳನ್ನು ಸುಡುವುದು, ಕೊಳ್ಳೆ ಇವುಗಳು ಇವರ ವಂಶಪಾರಂಪರ್ಯವಾದ ವೃತ್ತಿಗಳಾಗಿದ್ದುವು. ಮರಾಟೆಯ ದೊರೆಗಳಾದ ಸಿಂಧ್ಯ, ಹೋಳ್ಕರರು ತಾವು ನಡೆಸಿದ ಯುದ್ಧಗಳಲ್ಲಿ ಇವರ ಸಹಾಯವನ್ನು ಪಡೆದು ಇವರ ಮುಖಂಡರಾದ ಚಿತ್ತು, ಕರೀಂಖಾನ, ಅಮೀರ್‌ಖಾನ, ವಸೀಲ್ ಮಹಮ್ಮದ್ ಇವರುಗಳಿಗೆ ಕೆಲವು ಪ್ರದೇಶಗಳನ್ನು ಬಿಟ್ಟುಕೊಟ್ಟದ್ದಲ್ಲದೆ ಇವರಿಗೆ ಗುಟ್ಟಾಗಿ ಸಹಾಯಮಡುತ್ತಿದ್ದುದರಿಂದ ಇವರ ಹಾವಳಿಯನ್ನು ತಡೆಯುವುದು ಅಸಾಧ್ಯವಾಗಿತ್ತು.

ಈ ಪಿಂಡಾರೆಯವರು ಸಣ್ಣಸಣ್ಣ ಗುಂಪುಗಳಾಗಿ ಹೊರಟು ದಾರಿಯಲ್ಲಿ ಸಿಕ್ಕಿದ ಹಳ್ಳಿಗಳನ್ನು ಲೂಟಿಮಾಡುತ್ತಾ ತಮ್ಮ ಕೈಗೆ ಸಿಕ್ಕಿದವರನ್ನು ಹೆಂಗಸರು ಮಕ್ಕಳೆನ್ನದೆ ಚಿತ್ರಹಿಂಸೆಮಾಡಿ ಕೊಲ್ಲುತ್ತಿದ್ದರು. 1813—17ರವರೆಗೆ ಇವರ ಹಾವಳಿಯು ಇಂಡಿಯದ ಅನೇಕ ಭಾಗಗಳಲ್ಲಿ ವ್ಯಾಪಿ

ಸಿತ್ತು. ಇವರು ನಿಂತಕಡೆ ನಿಲ್ಲದೆ ತಮ್ಮ ಕುದುರೆಗಳ ಮೇಲೆ ಏಕಾಯೇಕಿ ಬಂದು ಹಳ್ಳಿಗಳನ್ನು ಲೂಟಿಮಾಡಿ, ಅತಿವೇಗವಾಗಿ ಅಲ್ಲಿಂದ ಹೊರಟು ಹೋಗುತ್ತಿದ್ದರು.

ಇವರು ಒಂದುಕಡೆ ನಿಂತು ಯುದ್ಧಕೊಡುವಂತೆ ಮಾಡುವುದು ಅಸಾಧ್ಯವಾದುದರಿಂದ ಲಾರ್ಡ್ ಹೇಸ್ಟಿಂಗ್ಸನು ಇವರನ್ನು ಸುತ್ತುಕಟ್ಟಿ ಹಿಡಿದು ನಾಶಪಡಿಸಲು ನಿಶ್ಚಯಿಸಿ, ಹಿಂದೆ ಎಂದೂ ಸೇರದಿದ್ದಷ್ಟು ಸೇನೆ ಯನ್ನು ಒಟ್ಟುಗೂಡಿಸಿ, ಅವರನ್ನು ಮಾಳವದಲ್ಲಿ ಸುತ್ತಿಕೊಂಡು ಸೋಲಿಸಿ, ಅವರ ಗುಂಪನ್ನು ದಿಕ್ಕುದಿಕ್ಕಿಗೆ ಚದರಿಸಿದನು.

ಪಿಂಡಾರೆಯವರಿಗೆ ಆಶ್ರಯನಾಗಿದ್ದ ಟಾಂಕ್ ಸಂಸ್ಥಾನದ ಜಹ ಗೀರಿ ಪಡೆದ ಅಮೀರ್‌ಖಾನನು ಇಂಗ್ಲಿಷರಕಡೆಗೆ ಸೇರಿದನು. ಸಿಂಧ್ಯ, ಹೋಳ್ಕರ್ ಇವರೆಲ್ಲರೂ ಇಂಗ್ಲಿಷರಿಗೆ ಸಹಾಯಮಾಡಿದುದರಿಂದ ಅವರ ಕೆಲಸವು ಸರಾಗವಾಗಿ ನೆರವೇರಿತು. ಪಿಂಡಾರೆಯವರ ಮುಖಂಡರಾದ ಚಿತ್ತು, ಕರೀಂಖಾನ್ ಇವರಿಬ್ಬರೂ ಸೋತು, ಕರೀಮನು ಶರಣಾಗತ ನಾದನು. ಚಿತ್ತುವು ಕಾಡಿಗೆ ಓಡಿಹೋಗಿ ಅಲ್ಲಿ ಹುಲಿಯಬಾಯಿಗೆ ತುತ್ತಾ ದನು. ಉಳಿದ ಪಿಂಡಾರೆಯವರು ತಮ್ಮ ತಮ್ಮ ಗ್ರಾಮಗಳಿಗೆ ಹೋಗಿ, ಅಲ್ಲಿ ತಮಗೆ ಯೋಗ್ಯವಾದ ಕಸಬುಗಳನ್ನು ಅವಲಂಬಿಸಿದರು.

ನಾಲ್ಕನೆಯ ಮರಾಟೆ ಯುದ್ಧ ಕ್ರಿ. ಶ. 1816–18

ದೇಶಕಂಟಕರಾದ ಪಿಂಡಾರೆಯವರನ್ನು ಅಡಗಿಸಿದ ಕೀರ್ತಿಯು ಎಲ್ಲೆಲ್ಲಿಯೂ ಹರಡಿತು. ಇಷ್ಟು ಸಮರ್ಥರಾದ ಇಂಗ್ಲಿಷರನ್ನು ಹೇಗಾ ದರೂ ಮುರಿಯಬೇಕೆಂದು ಮರಾಟೆ ಸರದಾರರು ಯೋಚಿಸುತ್ತಿದ್ದರು. ಬೇಸಿನ್ ಒಪ್ಪಂದದಂತೆ ಪೇಷ್ವೆ ಬಾಜೀರಾಯನು ಇಂಗ್ಲಿಷರ ಅಧೀನ ನಾಗುವುದಕ್ಕೆ ಒಪ್ಪಿದರೂ ತನ್ನ ಮಂತ್ರಿಯಾದ ತ್ರಿಯಂಬಕಜೀ ಡಾಂಗ್ಲಿ ಯನ ಮಾತಿನಂತೆ ಅವರಿಂದ ದೂರನಾಗುವುದಕ್ಕೆ ಒಳಸಂಚು ನಡೆಸು ತ್ತಲೇ ಇದ್ದು ಬಹುದಿನಗಳಿಂದಲೂ ಇಂಗ್ಲಿಷರ ಮಿತ್ರನಾಗಿದ್ದ ಗಾಯಕ ವಾಡನನ್ನು ಹಳೆಯ ಬಾಕಿಗಾಗಿ ಪೀಡಿಸುತ್ತಿದ್ದನು.

ಇದನ್ನು ವ್ಯವಸ್ಥೆಮಾಡಲು ಗಾಯಕವಾಡನ ಮಂತ್ರಿಯಾದ ಗಂಗಾಧರಶಾಸ್ತ್ರಿಯು ಪುಣೆಗೆ ಬಂದಾಗ ತ್ರಿಯಂಬಕನು ಅವನನ್ನು

ಕೊಲ್ಲಿಸಿದನು. ತಮ್ಮ ಸ್ನೇಹಿತನ ಮಂತ್ರಿಯ ವಿಷಯದಲ್ಲಿ ನಡೆಸಿದ ಅಕೃತ್ಯಕ್ಕಾಗಿ ಇಂಗ್ಲಿಷರು ತ್ರಿಯಂಬಕನನ್ನು ಸೆರೆಯಲ್ಲಿಟ್ಟರು. ಅವನು ಅಲ್ಲಿಂದ ಹೇಗೋ ಬಿಡುಗಡೆಹೊಂದಿ ಪುನಃ ಇಂಗ್ಲಿಷರಿಗೆ ಕಿರುಕುಳವನ್ನು ಕೊಡಲಾರಂಭಿಸಿದನು. ಇಂಗ್ಲಿಷರು ನಿರ್ಬಂಧಪಡಿಸಿದುದರಿಂದ ಬಾಜೀರಾಯನು ಅಹಮ್ಮದ್‌ನಗರವನ್ನು ಅವರಿಗೆ ಕೊಟ್ಟು, ತನ್ನ ಮಂತ್ರಿಯಾದ ತ್ರಿಯಂಬಕನ ಸಹವಾಸವನ್ನೇ ಬಿಡುವುದಾಗಿಯೂ, ಇಂಗ್ಲಿಷರ ಅಧೀನದಲ್ಲಿ ತಾನು ಇರುವುದಾಗಿಯೂ ಒಪ್ಪಿಕೊಂಡನು. ಇದೇ ಪುಣೆಯ ಕೌಲು. ಇದರಿಂದ ಬಾಜೀರಾಯನು ತಾನು ಮಹಾರಾಷ್ಟ್ರಕ್ಕೆ ಅಧಿಪತಿಯಲ್ಲವೆಂಬುದನ್ನು ಒಪ್ಪಿಕೊಂಡಂತಾಯಿತು

ಪೇಷ್ವೆಯೊಡನೆ ಯುದ್ಧ

ಆದರೂ ಬಾಜೀರಾಯನು ರಹಸ್ಯವಾಗಿ ಸೈನ್ಯವನ್ನು ಕಟ್ಟಿ 1817 ರಲ್ಲಿ ಇಂಗ್ಲಿಷರೊಡನೆ ಯುದ್ಧಕ್ಕೆ ನಿಂತನು. ಇಂಗ್ಲಿಷರು ಅವನನ್ನು ಕಡಕಿ, ಕೊರೆಗಾಂ, ಆಷ್ಟ ಎಂಬ ಸ್ಥಳಗಳಲ್ಲಿ ಸೋಲಿಸಿ ಪೇಷ್ವೆಯ ರಾಜ್ಯವನ್ನು ತಮ್ಮ ವಶಮಾಡಿಕೊಂಡರು. ಆಗ ಪೇಷ್ವೆಯು 1818ರಲ್ಲಿ ಶರಣಾಗತನಾದನು. ಆದರೂ ನಂಬಿಕೆಗೆ ಅರ್ಹನಲ್ಲವೆಂದು ಅವನಿಗೆ 8 ಲಕ್ಷ ರೂಪಾಯಿ ಜೀವನಾಂಶಕೊಟ್ಟು ಕಾರ್ನಪುರದಬಳಿ ಇರುವ ಬಿತ್ತೂರಿನಲ್ಲಿ ನಿರ್ಬಂಧದಲ್ಲಿಟ್ಟರು. ಈ ರೀತಿಯಾಗಿ ಇತರ ಮರಾಟೆಯವರಿಂದಲೂ ಪೇಷ್ವೆಯಿಂದಲೂ ಪಡೆದ ರಾಜ್ಯವು ಬೊಂಬಾಯಾಧಿಪತ್ಯವೆನಿಸಿಕೊಂಡಿದೆ.

ಭೌನ್ಸ್ಲೆಯೊಡನೆ ಯುದ್ಧ 1816

ಈ ನಡುವೆ ನಾಗಪುರದ ರಘೋಜಿಭೌನ್ಸ್ಲೆಯು ಕಾಲವಾಗಲು ಅಪ್ಪಾಸಾಹೇಬನು ದೊರೆಯಾದನು. ಇವನೂ ಬಾಜೀರಾಯನ ಮೇಲ್ಪಂಕ್ತಿಯನ್ನನುಸರಿಸಿ, ಸೀತಾಬಲ್ಡಿ ಎಂಬಕಡೆ ಇಂಗ್ಲಿಷರಮೇಲೆ ಬಿದ್ದು ಸೋತು ಅವರ ಕೈಸೆರೆ ಸಿಕ್ಕಿದನು. ರಘೋಜಿಭೌನ್ಸ್ಲೆಯ ಮುಮ್ಮಗನಿಗೆ ನಾಗಪುರದಲ್ಲಿ ಪಟ್ಟವಾಯಿತು. ಅವನು ಇಂಗ್ಲಿಷರ ಅಧೀನದಲ್ಲಿರುವುದಕ್ಕೆ ಒಪ್ಪಿದನು.

ಇಂದೂರಿನೊಡನೆ ಯುದ್ಧ

ಇಂದೂರಿನ ಹೋಳ್ಕರನು ಸತ್ತಮೇಲೆ ಅವನ ಹೆಂಡತಿ ತುಳಸೀ ಬಾಯಿಯು ಇಂಗ್ಲಿಷರೊಡನೆ ಸ್ನೇಹವಾಗಿದ್ದುಕೊಂಡು ರಾಜ್ಯವನ್ನು ವಿವೇಕದಿಂದ ಆಳುತ್ತಿದ್ದಳು. ಆದರೆ ಯುದ್ಧಮಾಡುವುದಕ್ಕೆ ತವಕ ಪಡುತ್ತಿದ್ದ ಆಕೆಯ ಸೈನ್ಯವು ತಮ್ಮ ರಾಣಿಯನ್ನೇ ಕೊಂದು ಇಂಗ್ಲಿಷರ ಮೇಲೆಬಿದ್ದಿತು. ಮೆಹಿದ್‌ಪುರದ ಯುದ್ಧದಲ್ಲಿ ಮರಾಟೆಯವರಿಗೆ ಸೋಲಾಯಿತು. ಆಗ ಹೋಳ್ಕರನ ಕಡೆಯವರಿಗೂ ಇಂಗ್ಲಿಷರಿಗೂ ಮಂಡೇಶ್ವರದಲ್ಲಿ 1818ರಲ್ಲಿ ಕೌಲಾಯಿತು. ಇದರಿಂದ ಇಂದೂರಿನ ಸಂಸ್ಥಾನವು ಇಂಗ್ಲಿಷರ ಆಶ್ರಿತಸಂಸ್ಥಾನವಾಯಿತು. ಈ ರೀತಿಯಾಗಿ ಮರಾಟೆ ಸರದಾರರ ಪ್ರಾಬಲ್ಯವು 1818ರಲ್ಲಿ ಕಡೆಗಂಡಿತು.

ತಿದ್ದುಪಾಟುಗಳು

ಮಾರ್ಕ್ವಿಸ್ ಹೇಸ್ಟಿಂಗ್ಸನು ಕಂಪೆನಿಯ ಹೆಸರನ್ನು ತುಂಬಾ ಮುಂದಕ್ಕೆತಂದು 1823ರಲ್ಲಿ ಸೀಮೆಗೆ ಹೊರಟುಹೋದನು. ಇವನು ನ್ಯಾಯವಿಚಾರದಲ್ಲಿ ಕೆಲವು ತಿದ್ದುಪಾಟುಗಳನ್ನು ಮಾಡಿ ವಿದ್ಯಾಭ್ಯಾಸಕ್ಕೆ ಹೆಚ್ಚು ಪ್ರೋತ್ಸಾಹವನ್ನು ಕೊಟ್ಟನು. ಕಲ್ಕತ್ತೆಯ "ಹಿಂದೂ ಕಾಲೇಜ್" ಎಂಬುದು ಇವನ ಕಾಲದಲ್ಲಿ ಸ್ಥಾಪಿತವಾಯಿತು. ಕ್ರೈಸ್ತಮತದ ಪಾದ್ರಿಗಳು ಅಲ್ಲಲ್ಲಿ ಪಾಠಶಾಲೆಗಳನ್ನಿಡುವುದಕ್ಕೂ, ವರ್ತಮಾನಪತ್ರಿಕೆಗಳನ್ನು ಮುದ್ರಿಸುವುದಕ್ಕೂ ಹೇಸ್ಟಿಂಗ್ಸನು ತುಂಬಾ ಉತ್ತೇಜನವನ್ನು ಕೊಟ್ಟನು.

ಅಧ್ಯಾಯ ೭.–(೯) ಲಾರ್ಡ್ ಅಮ್‌ಹರ್ಸ್ಟ್ (1824–28)

೧ನೆಯ ಬರ್ಮಾ ಯುದ್ಧ

ಈತನು ಇಂಡಿಯಾಕ್ಕೆ ಬಂದ ಒಡನೆಯೇ ಬರ್ಮಾದವರೊಂದಿಗೆ ಯುದ್ಧಮಾಡಬೇಕಾಯಿತು. ಬರ್ಮೀಯರ ದಳಪತಿಯಾದ ಮಹಾ ಬುಂದೇಲನು ಅಸ್ಸಾಂ ಮತ್ತು ಮಣಿಪುರಗಳನ್ನು ಗೆದ್ದು ಇಂಗ್ಲಿಷರಿಗೆ ಸೇರಿದ್ದ ಷಾಪುರಿ, ಡಕ್ಕಾ ಮೊದಲಾದ ಪ್ರಾಂತಗಳಮೇಲೆ ಬಿದ್ದನು.

ಆದುದರಿಂದ ಬರ್ಮೀಯರ ಹೆಮ್ಮೆಯನ್ನು ಮುರಿಯುವುದಕ್ಕಾಗಿ ಇಂಗ್ಲಿಷರು ಯುದ್ಧಮಾಡಬೇಕಾಯಿತು. ಸರ್ ಆರ್ಕಿಬ್ಯಾಲ್ಡ್ ಕ್ಯಾಂಬಲ್ ಎಂಬ ಇಂಗ್ಲಿಷರ ದಳಪತಿಯು ರಂಗೂನ್ ಪಟ್ಟಣವನ್ನು ವಶಮಾಡಿಕೊಂಡನು. ಬಂದೂಲನು ರಾಮು ಎಂಬ ಸ್ಥಳದಲ್ಲಿ ಇಂಗ್ಲಿಷರನ್ನು ಸೋಲಿಸಿ ಅವರ ಮೇಲೆ ಮತ್ತೆ ಬೀಳುವುದಕ್ಕಾಗಿ ರಂಗೂನಿನಮೇಲೆ ಹೊರಟನು. ಡೊನೆಬು ಎಂಬ ಸ್ಥಳದಲ್ಲಿ ಪುನಃ ಯುದ್ಧ ನಡೆಯಿತು. ಬಂದೂಲನು ಗುಂಡಿನ ಬಾಯಿಗೆ ತುತ್ತಾದನು. ಬರ್ಮೀಯರು ಓಡಿಹೋದರು. ಪ್ರೋಂ, ಅಸ್ಸಾಂ, ಕಚಾರ್, ಮಣಿಪುರ, ಇವುಗಳು ಇಂಗ್ಲಿಷರ ಕೈಸೇರಿದುವು. ಇಂಗ್ಲಿಷರು ಪೇಘನ್ ಯುದ್ಧದಲ್ಲಿ ಜಯಶೀಲರಾಗಲು, ಬರ್ಮೀಯರು 1826ರಲ್ಲಿ ಎಡೆಂಬು ಕರಾರನ್ನು ಮಾಡಿಕೊಂಡರು. ಇದರಿಂದ ಇಂಗ್ಲಿಷರಿಗೆ ಅಸ್ಸಾಂ, ಅರೆಕಾನ್, ಟೆನಾಸರಿಂ ಪ್ರಾಂತಗಳು ಸೇರಿದುವಲ್ಲದೆ, ಯುದ್ಧದ ವೆಚ್ಚಕ್ಕಾಗಿ ಒಂದುಕೋಟಿ ರೂಪಾಯಿಗಳೂ ದೊರೆತುವು. ಈ ಕೌಲಿನಿಂದ ಬರ್ಮಾದೇಶದ ದೊರೆಯು ಮಣಿಪುರದಮೇಲೆ ತನಗಿದ್ದ ಹಕ್ಕನ್ನು ಬಿಟ್ಟುಕೊಟ್ಟು ಆವಾದಲ್ಲಿ ಇಂಗ್ಲಿಷರ ರೆಸಿಡೆಂಟನ್ನು ಇಟ್ಟುಕೊಳ್ಳಲು ಒಪ್ಪಿದನು.

ಭರತಪುರದ ಮುತ್ತಿಗೆ

1805ನೇ ಇಸವಿಯಲ್ಲಿ ಇಂಗ್ಲಿಷರು ಭರತಪುರದ ಕೋಟೆಯನ್ನು ಹಿಡಿಯಲಾರದೆಹೋಗಿದ್ದರಷ್ಟೆ. ಆ ಅಪಯಶಸ್ಸನ್ನು ಹೋಗಲಾಡಿಸಿಕೊಳ್ಳುವುದಕ್ಕೆ ಈಗ ಒಂದು ಅವಕಾಶಸಿಕ್ಕಿತು. ಹೇಗೆಂದರೆ, ಅಲ್ಲಿಯ ಅರಸನು ಕಾಲವಾದುದರಿಂದ ದುರ್ಜನಸಾಲನೆಂಬಾತನು ನಿಜವಾದ ಹಕ್ಕುದಾರನನ್ನು ಸೆರೆಯಲ್ಲಿಟ್ಟು ತಾನೇ ದೊರೆಯಾದನು. ಇದೇ ಕಾರಣವಾಗಿ ಇಂಗ್ಲಿಷರು 1826ರಲ್ಲಿ ಭರತಪುರವನ್ನು ಮುತ್ತಿದರು. ಈ ಕೋಟೆಯ ಮಣ್ಣುಗೋಡೆಯನ್ನು ಕೆಡಹಲು ಬಂದೂಕಿನಿಂದ ಪ್ರಯೋಜನವಿಲ್ಲವಾಯಿತು. ಆಗ ಲಾರ್ಡ್ ಕಂಬರ್‌ಮಿಯರನು ಸುರಂಗ ಹಾಕಿ ಕೋಟೆಯನ್ನು ಒಡೆದು ಊರನ್ನು ಪ್ರವೇಶಿಸಿ ಲೂಟಿಮಾಡಿ, ದುರ್ಜನಸಾಲನನ್ನು ಸೆರೆಯಲ್ಲಿಟ್ಟು ನಿಜವಾದ ಹಕ್ಕುದಾರನಿಗೆ ರಾಜ್ಯವನ್ನು ಕೊಟ್ಟನು. ಆಮ್‌ಹರ್ಸ್ಟನು 1828ರಲ್ಲಿ ಸೀಮೆಗೆ ಹಿಂದಿರುಗಿದನು.

(೧೦) ಲಾರ್ಡ್ ವಿಲಿಯಂ ಬೆಂಟಿಂಕ್ ಕ್ರಿ. ಶ. 1828–35

ಪ್ರಜಾಹಿತದ ಕಾಲ.—ಇವನು ಹಿಂದೆ ಮದ್ರಾಸಿನ ಗವರ್ನರ್ ಆಗಿದ್ದುದರಿಂದ ಈ ದೇಶದ ಸ್ಥಿತಿಗತಿಗಳು ಇವನಿಗೆ ಸರಿಯಾಗಿ ಮುಂದಟ್ಟಾಗಿದ್ದುವು. ಇವನ ಕಾಲದಲ್ಲಿ ಯಾವ ಯುದ್ಧಗಳೂ ನಡೆಯಲಿಲ್ಲ. ರಾಜ್ಯವೂ ವಿಸ್ತರಿಸಲಿಲ್ಲ. ಆದರೆ ಜನರ ಹಿತಕ್ಕಾಗಿ ಈತನು ಮಾಡಿದ ಸತ್ಕಾರ್ಯಗಳು ಇವನ ಹೆಸರನ್ನು ಮರೆಯದಂತೆ ಮಾಡಿವೆ. ದೇಶದಲ್ಲಿ ಹರಡಿಕೊಂಡಿದ್ದ ಶಾಂತತೆಯೇ ಇವನ ತಿದ್ದುಪಾಟುಗಳಿಗೆ ಅವಕಾಶವನ್ನುಂಟುಮಾಡಿತು. ಇವನಂತೆಯೇ ಮದ್ರಾಸ್ ಆಧಿಪತ್ಯದಲ್ಲಿಯೂ, ಬೊಂಬಾಯಿಯಲ್ಲಿಯೂ ಪ್ರಜಾಕ್ಷೇಮಕ್ಕಾಗಿ ಲಕ್ಷ್ಯಕೊಡುತ್ತಿದ್ದ ಇಬ್ಬರು ಮಹನೀಯರಿದ್ದರು. ಹಾಗೆಯೇ ದೃಷ್ಟಿಸಿ ನೋಡಿದರೆ ಪ್ರಜಾಭಿಮಾನವೆನ್ನುವುದು ಎಲ್ಲೆಲ್ಲಿಯೂ ತುಂಬಿತ್ತೆಂದು ಕಾಣುತ್ತದೆ. ಇದೇ ಸಮಯದಲ್ಲಿಯೇ ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿಯೂ ರಾಷ್ಟ್ರಾಭಿಮಾನಿಗಳಾದ ಸಚಿವರು ಜನಗಳ ಹಿತಕ್ಕಾಗಿ ಅನೇಕ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದರು. ನಮ್ಮ ದೇಶದಲ್ಲಿ ಈ ಕೆಲಸಗಳಿಗೆ ಕಂಕಣಬದ್ಧರಾಗಿದ್ದವರಲ್ಲಿ ಮದ್ರಾಸಿನ ಗವರ್ನರಾದ ಮನ್ರೋ, ಬೊಂಬಾಯಿಯ ಗವರ್ನರಾದ ಎಲ್ಫಿನ್‌ಸ್ಟನ್, ಗವರ್ನರ್ ಜನರಲ್ ಆದ ಬೆಂಟಿಂಕ್–ಇವರುಗಳು ಪ್ರಮುಖರು.

ಸರ್ ಥಾಮಸ್ ಮನ್ರೋವಿನ ಹೆಸರು ಮದ್ರಾಸಿನಲ್ಲಿ ಈಗಲೂ ನೆನಪಿನಲ್ಲಿರುವುದು. ದೇಶೀಯರಿಗೆ ದೊಡ್ಡ ಹುದ್ದೆಗಳನ್ನು ಕೊಡುವುದಕ್ಕೆ ಇವನೇ ಮೊದಲನೆಯವನು. ರೈತರಿಗೆ ಇವನು ಮಾಡಿದ ಅಪಾರವಾದ ಸಹಾಯಗಳ ದೆಸೆಯಿಂದ ಇವನನ್ನು "ರೈತರಗೆಳೆಯ" ಎಂದು ಕರೆಯುತ್ತಿದ್ದರು.

ಬೊಂಬಾಯಿಯ ಗವರ್ನರಾದ ಎಲ್ಫಿನ್‌ಸ್ಟನ್ನನೂ ಹೀಗೆಯೇ. ಬೊಂಬಾಯಿ ಪಟ್ಟಣದಲ್ಲಿ ಇವನ ಜ್ಞಾಪಕಾರ್ಥವಾಗಿ ಒಂದು ವಿದ್ಯಾಶಾಲೆಯು ಸ್ಥಾಪಿತವಾಗಿದೆ.

ಬೆಂಟಿಂಕನು ಮಾಡಿದ ಉಪಕಾರಗಳು

ಬೆಂಟಿಂಕನು ಮಾಡಿದ ಉಪಕಾರಗಳನ್ನು ಎಂದಿಗೂ ಮರೆಯುವಂತಿಲ್ಲ.

ಸಹಗಮನ

ಗಂಡಸತ್ತರೆ ಅವನೊಡನೆ ಹೆಂಡತಿಯು ಪ್ರಾಣಬಿಡುವುದು (ಸಹ ಗಮನ) ಹಿಂದೂಗಳಲ್ಲಿ ವಾಡಿಕೆಯಾಗಿತ್ತು. ಅಕ್ಬರನು ಇದನ್ನು ನಿಲ್ಲಿಸುವುದಕ್ಕೆ ಪ್ರಯತ್ನಪಟ್ಟಿದ್ದನು. ಆದರೂ ಬಂಗಾಳದಲ್ಲಿ ಸಹಗಮನದ ಪದ್ಧತಿಯು ವಾಡಿಕೆಯಲ್ಲಿತ್ತು. ರಾಜಾ ರಾಮಮೋಹನರಾಯ್ ಎಂಬ ಬಂಗಾಳೀ ಮಹನೀಯನ ಸಹಾಯದಿಂದ ಬೆಂಟಿಂಕನು ಈ ಘೋರಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಿದನು.

ಶಿಶುವಧೆ

ಕೆಲವು ಜಾತಿಯವರಲ್ಲಿ ಹೆಣ್ಣುಮಕ್ಕಳು ಹುಟ್ಟಿದರೆ ಅವುಗಳನ್ನು ಕೊಲ್ಲುವುದೂ, ಮತ್ತೆ ಕೆಲವರಲ್ಲಿ ಅವುಗಳನ್ನು ಕಾಳಿ ಮೊದಲಾದ ದೇವತೆಗಳಿಗೆ ಬಲಿಕೊಡುವುದೂ ಆಚರಣೆಯಲ್ಲಿದ್ದುವು. ಬೆಂಟಿಂಕನು ಇವುಗಳನ್ನು ಪ್ರತಿಬಂಧಿಸಿದನು.

ಠಕ್ಕರು

ಪಂಜಿನಕಳ್ಳರನ್ನೂ, ಯಾತ್ರೆಗಾಗಿ ಪ್ರಯಾಣಮಾಡುತ್ತಿದ್ದವರನ್ನು ಕತ್ತುಹಿಸುಕಿ ಸುಲಿಗೆಮಾಡುತ್ತಿದ್ದ ಠಕ್ಕರೆಂಬ ಕಳ್ಳರನ್ನೂ ಅಡಗಿಸಿ ಬೆಂಟಿಂಕನು ಪ್ರಯಾಣೀಕರಿಗೆ ಅತ್ಯುಪಕಾರಮಾಡಿದನು.

ಇವನು ಮಾಡಿದ ತಿದ್ದುಪಾಟುಗಳು

ಹಿಂದೆ ನಡೆದ ಯುದ್ಧಗಳ ದೆಸೆಯಿಂದ ಕಂಪೆನಿಯ ಬೊಕ್ಕಸವು ಬರಿದಾಗಿದ್ದಕಾರಣ ಗವರ್ನರ್ ಜನರಲ್‌ನು ಸರ್ಕಾರದ ವೆಚ್ಚವನ್ನು ಕಡಿಮೆಮಾಡಿ, ಕಂದಾಯದ ವಸೂಲಿಯನ್ನು ಕ್ರಮಪಡಿಸಿ, ಕಂಪೆನಿಗೆ ಹಣವನ್ನುಳಿಸಿಕೊಟ್ಟನು. ಮಾಳವದೇಶದ ಅಫೀಮಿನಮೇಲೆ ಸುಂಕವನ್ನು ಹಾಕಿ, ಕಂಪನಿಯ ಆದಾಯವನ್ನು ಹೆಚ್ಚಿಸಿದನು.

ನ್ಯಾಯಸ್ಥಾನಗಳಲ್ಲಿ ಪ್ರಚಾರದಲ್ಲಿದ್ದು ಎಲ್ಲರಿಗೂ ತಿಳಿಯದ ಪಾರಸೀ ಭಾಷೆಗೆ ಬದಲಾಗಿ, ಕಾಗದಪತ್ರಗಳು ಆಯಾ ದೇಶಭಾಷೆಗಳಲ್ಲಿರಬಹುದೆಂದು ತೀರ್ಮಾನಿಸಿದನು. ಇದರಿಂದ ಜನಗಳಿಗೆ ಎಷ್ಟೋ ಅನುಕೂಲವಾಯಿತು. ನ್ಯಾಯಾಧಿಪತಿಗಳ ಸಂಬಳಗಳನ್ನು ಹೆಚ್ಚಿಸಿ, ಆ ಅಧಿಕಾರ

ವನ್ನು ದೇಶೀಯರಿಗೂ ಕೊಟ್ಟನು. ಈ ದೇಶದ ಜನರಿಗೆ ಸರ್ಕಾರದಲ್ಲಿ ಭಾರಿಭಾರಿ ಉದ್ಯೋಗಗಳು ದೊರೆಯುವಂತೆ ಮಾಡಿದವನೇ ಈತನು. ಲಾರ್ಡ್ ಕಾರ್ನವಾಲೀಸನು ಇದನ್ನು ನಿಷೇಧಿಸಿದ್ದನು.

ಇಲ್ಲಿಯ ಜನಗಳ ವಿದ್ಯಾಭಿವೃದ್ಧಿಗಾಗಿ ಅನೇಕ ಇಂಗ್ಲಿಷ್ ಸ್ಕೂಲುಗಳು ಸ್ಥಾಪಿತವಾಗುವುದಕ್ಕೆ ಮೊದಲಾದುದು ಈತನಕಾಲದಲ್ಲಿಯೇ. ಲಾರ್ಡ್ ಮೆಕಾಲೆ ಎಂಬಾತನು ಇಂಗ್ಲಿಷ್ ವಿದ್ಯೆಯನ್ನು ಅಭಿವೃದ್ಧಿಗೆ ತರುವುದರಲ್ಲಿ ಗವರ್ನರ್ ಜನರಲ್ಲಿಗೆ ಬಹುಮಟ್ಟಿಗೆ ಸಹಾಯಮಾಡಿದನು. ಬೆಂಟಿಂಕನ ಕಾಲದಲ್ಲಿ ಕಲ್ಕತ್ತಾ ಮತ್ತು ಮದ್ರಾಸ್ ನಗರಗಳಲ್ಲಿ ವೈದ್ಯ ವಿದ್ಯಾಲಯಗಳು (Medical Colleges) ಸ್ಥಾಪಿತವಾದುವು.

ರಾಜ್ಯಗಳನ್ನು ಕಂಪೆನಿಗೆ ಸೇರಿಸಿದದು

ಬೆಂಟಿಂಕನು ರಾಜ್ಯವನ್ನು ಕಟ್ಟುವ ಮತಕ್ಕೆ ವಿರೋಧಿಯಾಗಿದ್ದರೂ ಪ್ರಮಾದವಾಗಿ ಪರಿಣಮಿಸಿದ ಒಂದೆರಡು ಸಂದರ್ಭಗಳಲ್ಲಿ ಅವನು ತನ್ನ ಇಷ್ಟಕ್ಕೆ ವಿರೋಧವಾಗಿ ನಡೆಯಬೇಕಾಯಿತು. ಮೈಸೂರು (1832) ಮತ್ತು ಕೊಡಗು (1833) ರಾಜ್ಯಗಳಲ್ಲಿ ಪ್ರಜಾಸಂಖ್ಯೆವು ಕಡಿಮೆಯಾಗಿದ್ದಿತು. ಇದಕ್ಕೆ ಇಲ್ಲಿನ ದೊರೆಗಳ ಅಸಾಮರ್ಥ್ಯ, ಅನ್ಯಾಯ, ಅತ್ಯಾಚಾರ ಇವುಗಳೇ ಕಾರಣವೆಂದು ಅವರನ್ನು ಪಟ್ಟದಿಂದ ತೆಗೆದು ಅವರ ರಾಜ್ಯಗಳನ್ನು ಕಂಪೆನಿಗೆ ಸೇರಿಸಿಕೊಂಡನು. ಆಗ ಮೈಸೂರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಆಳುತ್ತಿದ್ದರು.

ಪರರಾಜರ ವಿಚಾರ

ಈ ವೇಳೆಗೆ ರಷ್ಯಾದೇಶದವರು ಮಧ್ಯ ಏಷ್ಯಾವನ್ನು ವಶಮಾಡಿಕೊಂಡು ಹಿಂದೂದೇಶದಕಡೆಗೆ ಒತ್ತಿಕೊಂಡು ಬರುತ್ತಿದ್ದರು. ಇವರನ್ನು ಅಡ್ಡಿಮಾಡುವುದಕ್ಕಾಗಿ ಬೆಂಟಿಂಕನು ಲಾಹೋರಿನ ರಣಜಿತ್‌ಸಿಂಗನೊಡನೆಯೂ, ಸಿಂಧೂದೇಶದ ಅಮೀರರೊಡನೆಯೂ ಸಂಧಿಮಾಡಿಕೊಂಡು ಅವರ ಸ್ನೇಹ ಬಳೆಸಿದನು.

ಕಂಪೆನಿಯ ಸನ್ನದು 1833

ಬೆಂಟಿಂಕನ ಕಾಲದಲ್ಲಿ ಕಂಪೆನಿಯ ಸನ್ನದಿನಲ್ಲಿ ಕೆಲವು ಬದಲಾವಣೆಗಳಾದುವು. ಇದರಿಂದ ಇನ್ನು ಮುಂದೆ ಕಂಪೆನಿಯವರು ವ್ಯಾಪಾರದ ಗೋಜಿಗೆ ಹೋಗಲಾಗದೆಂದೂ ಅವರು ರಾಜ್ಯವಾಳುವ ಕೆಲಸದಲ್ಲೇ ಇರಬೇಕೆಂದೂ ನಿರ್ಣಯವಾಯಿತು. ಪ್ರಜಾಕ್ಷೇಮಕ್ಕಾಗಿ ಅನೇಕ ಸೌಕರ್ಯಗಳನ್ನುಂಟುಮಾಡಿದ ಬೆಂಟಿಂಕನು 1835ರಲ್ಲಿ ಸೀಮೆಗೆ ಹೊರಟು ಹೋದನು. ಯುದ್ಧಮಾಡಿ ರಾಜ್ಯಕಟ್ಟಿ ಕೀರ್ತಿ ಪಡೆಯುವುದಕ್ಕಿಂತಲೂ ಪ್ರಜಾಕ್ಷೇಮವನ್ನು ಹಾರೈಸುವುದೇ ರಾಜರ ಮುಖ್ಯ ಕರ್ತವ್ಯವೆಂಬುದನ್ನು ಬೆಂಟಿಂಕನ ಆಳಿಕೆಯು ಮನದಟ್ಟಿಸುತ್ತದೆ.

೧೧ ಲಾರ್ಡ್ ಆಕ್ಲೆಂಡ್ 1887–42

ಈತನು ಗವರ್ನರ್ ಜನರಲ್ಲಾಗಿ ನೇಮಕವಾಗಿ ಸೀಮೆಯಿಂದ ಬರುವವರೆಗೂ, ಸರ್ ಚಾರಲ್ಸ್ ಮೆಟ್‌ಕಾಫ್ ಎಂಬಾತನು ಬದಲಿ ನೋಡುತ್ತಿದ್ದನು. ಇವನಿದ್ದ ಒಂದು ವರ್ಷದಲ್ಲಿಯೇ ವರ್ತಮಾನಪತ್ರಿಕೆ ಮತ್ತು ಪುಸ್ತಕಗಳ ಪ್ರಕಟನೆಗೆ ಇದ್ದ ಕುಂದುಕೊರತೆಗಳನ್ನು ತೆಗೆದುಹಾಕಿದನು. ಆದುದರಿಂದ ಅನೇಕರು ಈ ಕೆಲಸಗಳಿಗೆ ಕೈಹಾಕಿ ಇಂಡಿಯಾದೇಶದಲ್ಲಿ ವರ್ತಮಾನಪತ್ರಿಕೆಗಳ ಸಂಖ್ಯೆಯನ್ನು ಹೆಚ್ಚಿಸಿದರು. ಆದರೆ ಗವರ್ನರ್ ಜನರಲ್‌ನ ಈ ಕೆಲಸವು ಕಂಪೆನಿಯ ಡೈರೆಕ್ಟರುಗಳಿಗೆ ಒಪ್ಪಿಗೆಯಾಗಲಿಲ್ಲ. ಆದುದರಿಂದ ಮೆಟ್‌ಕಾಫನು ಕೆಲಸದಿಂದ ನಿವೃತ್ತನಾದನು. 1837ರಲ್ಲಿ ಲಾರ್ಡ್ ಆಕ್ಲೆಂಡನು ಸೀಮೆಯಿಂದ ಬಂದು ಆಧಿಕಾರವನ್ನು ವಹಿಸಿದನು.

೧ನೆಯ ಆಫ್ಘನ್ ಯುದ್ಧ (1838–42)

ಇದುವರೆಗೂ ಇಂಡಿಯಾದೇಶದಮೇಲೆ ಫ್ರೆಂಚರು ದಂಡೆತ್ತಿ ಬಂದಾರೆಂಬ ಭಯವಿದ್ದಿತು. ಈಗ ಅದು ತಪ್ಪಿ, ರಷ್ಯಾದವರ ಭಯವುಂಟಾಯಿತು. ರಷ್ಯಾದವರು ಭೂಮಾರ್ಗವಾಗಿ ಇಂಡಿಯಾಕ್ಕೆ ಬರಬೇಕಾದರೆ ಪರ್ಸಿಯಾ, ಆಫ್ಘಾನಿಸ್ಥಾನಗಳನ್ನು ಹಾದು ಬರಬೇಕು. ಇದಕ್ಕಾಗಿ ಇಂಗ್ಲಿಷರು ಪರ್ಸಿಯಾ ಮತ್ತು ಆಫ್ಘಾನಿಸ್ಥಾನಗಳೊಂದಿಗೆ ಸ್ನೇಹ ಬಳೆಸಬೇಕಾಗಿ ಬಂದಿತು. ಆದರೆ ಪರ್ಷಿಯಾದಲ್ಲಿ ಮಾತ್ರ ರಷ್ಯ

ನ್ನರೇ ಪ್ರಬಲರಾಗಿ ಇಂಗ್ಲಿಷರಿಗೆ ಅವಕಾಶ ಕೊಡಲಿಲ್ಲ. ಆದುದರಿಂದ ಆಫ್ಘಾನಿಸ್ಥಾನದಲ್ಲಿಯಾದರೂ ಇಂಗ್ಲಿಷರಿಗೆ ಸ್ನೇಹಿತನಾದ ಅಮೀರನಿರುವುದು ಆವಶ್ಯಕವಾಗಿದ್ದಿತು.

ಯುದ್ಧಕ್ಕೆ ಕಾರಣಗಳು

ಹೀಗಿರುವಾಗ ದೋಸ್ತ್ ಮಹಮದನೆಂಬ ಆಫ್ಘನ್ ಸರದಾರನು ಅಲ್ಲಿಯ ಹಕ್ಕುದಾರ ಅಮೀರನಾದ ಷಹಷೂಜನನ್ನು ಓಡಿಸಿ ತಾನೇ ದೊರೆಯಾದನು. ದೋಸ್ತಮಹಮದನೊಡನೆ ಸಂಧಿಮಾಡಿಕೊಳ್ಳುವುದಕ್ಕಾಗಿ ಇಂಗ್ಲಿಷರು ತಮ್ಮ ರಾಯಭಾರಿಯನ್ನು ಅಮೀರನ ಆಸ್ಥಾನಕ್ಕೆ ಕಳುಹಿಸಿದರು. ಆದರೆ ಇಂಗ್ಲಿಷರ ಸ್ನೇಹಿತನಾದ ರಣಜಿತ್‌ಸಿಂಗನು ಅಮೀರನಿಂದ ಕಸುಕೊಂಡಿದ್ದ ಕಾಂದಹಾರ್ ಪ್ರಾಂತವನ್ನು ಹಿಂದಕ್ಕೆ ಕೊಡಿಸುವ ವಿಷಯದಲ್ಲಿ ಇಂಗ್ಲಿಷರು ಅಮೀರನಿಗೆ ಸಹಾಯಮಾಡದೇ ಇದ್ದುದರಿಂದ, ದೋಸ್ತ್ ಮಹಮದನು ಇಂಗ್ಲಿಷರ ರಾಯಭಾರಿಗೆ ಅಪಮಾನಮಾಡಿ ರಷ್ಯಾದೇಶದಿಂದ ತನ್ನ ಆಸ್ಥಾನಕ್ಕೆ ಬಂದಿದ್ದ ಆ ದೇಶದ ರಾಯಭಾರಿಯನ್ನೇ ಸನ್ಮಾನಿಸಿದನು.

ಇಂಗ್ಲಿಷರ ನಷ್ಟಕಾಲ

ಈ ವೇಳೆಗೆ ರಾಜಪದವಿಯನ್ನು ಕಳೆದುಕೊಂಡಿದ್ದ ಷಹಷೂಜನು ಇಂಗ್ಲಿಷರ ಮರೆಹೊಕ್ಕನು. ತಮ್ಮ ಇಷ್ಟಾರ್ಥ ನೆರವೇರಲು ಇದು ತಕ್ಕ ಸಮಯವೆಂದು ಕಂಪೆನಿಯವರೂ, ರಣಜಿತಸಿಂಗನೂ, ಷಹಷೂಜನೂ 1838ರಲ್ಲಿ ಒಂದು ಕರಾರನ್ನು ಮಾಡಿಕೊಂಡರು. ಲಾಹೋರಿನ ರಣಜಿತನ ಸಹಾಯದಿಂದ ಸರ್ ಜಾರ್ಕೀನ್ ಎಂಬ ದಳಪತಿಯ ಕೈಕೆಳಗೆ ಒಂದು ದೊಡ್ಡ ಸೈನ್ಯವು ಆಫ್ಘಾನಿಸ್ಥಾನಕ್ಕೆ ಹೊರಟಿತು. ಈ ಸೈನ್ಯವು ಘುಸ್ನಿ ಮತ್ತು ಕಾಬೂಲ್ ಪಟ್ಟಣಗಳನ್ನು ವಶಮಾಡಿಕೊಂಡಕೂಡಲೆ, ದೋಸ್ತ್‌ಮಹಮದನು ದೇಶವನ್ನು ಬಿಟ್ಟು ಓಡಿಹೋದನು. 1839ರಲ್ಲಿ ಇಂಗ್ಲಿಷರಿಗೆ ಜಯವಾಗಲು, ಅವರು ಷಹಷೂಜನಿಗೆ ಪುನಃ ಪಟ್ಟವನ್ನು ಕಟ್ಟಿ ತಮ್ಮ ಕಡೆಯ ಒಬ್ಬ ಅಧಿಕಾರಿಯನ್ನು ಕಾಬೂಲಿನಲ್ಲಿ ರೆಸಿಡೆಂಟನನ್ನಾಗಿ ನೇಮಿಸಿ, ಅವನ ಸಹಾಯಕ್ಕೆ ಒಂದು ಸೈನ್ಯವನ್ನು ಬಿಟ್ಟು

ಉಳಿದವರೆಲ್ಲರೂ ಇಂಡಿಯಾಕ್ಕೆ ಹಿಂದಿರುಗಿದರು. ಇಷ್ಟರಲ್ಲಿಯೇ ಓಡಿ ಹೋಗಿದ್ದ ದೋಸ್ತ್‌ಮುಹಮುದನು ಸಿಕ್ಕಿ ಕಲ್ಕತ್ತೆಯಲ್ಲಿ ಸೆರೆಯಲ್ಲಿ ಡಲ್ಪಟ್ಟನು.

ಆದರೆ ಪರದೇಶದವರು ತಮ್ಮ ದೇಶದಲ್ಲಿರುವುದೂ, ಷಹಷೂಜನು ರಾಜನಾಗಿರುವುದೂ ಆಫ್ಘನರಿಗೆ ಸರಿಬೀಳಲಿಲ್ಲ. ಸ್ವಲ್ಪದಿನಗಳಲ್ಲಿಯೇ ಅವರು ಪುನಃ ದಂಗೆಯೆದ್ದು, ಅಲ್ಲಿದ್ದ ಇಂಗ್ಲಿಷ್ ಸರದಾರರನ್ನೂ, ರೆಸಿಡೆಂಟನನ್ನೂ ನಿಷ್ಕರುಣದಿಂದ ಹೊಡೆದು ಕೊಂದರು. ಅವರು ದೇಶವನ್ನು ಬಿಟ್ಟುಹೋದರೆ ಅವರಿಗೆ ಯಾವ ತೊಂದರೆಯನ್ನೂ ಕೊಡುವುದಿಲ್ಲವೆಂದು ಆಫ್ಘನರು ಮಾತುಕೊಟ್ಟರು. ಇಂಗ್ಲಿಷರು ಬಿಟ್ಟರೆ ಸಾಕೆಂದು ತಮ್ಮ ಆಯುಧಗಳನ್ನು ಹಿಂದೆಯೇ ಬಿಟ್ಟು ಇಂಡಿಯಾಕ್ಕೆ ಹೊರಟರು. ನಿರಾಯುಧರಾದ ಇವರಿಗೆ ವಿಶ್ವಾಸಘಾತುಕರಾದ ಆಫ್ಘನರು ದಾರಿಯಲ್ಲಿ ಉಂಟುಮಾಡಿದ ಕಷ್ಟಗಳನ್ನು ಹೇಳತೀರದು ; ಇಂಗ್ಲಿಷ್ ಸಿಪಾಯಿಗಳನ್ನು ನುಚ್ಚುನುರಿ ಮಾಡಿದರು ; ಅನೇಕರು ಚಳಿಯಲ್ಲಿ ಸತ್ತರು ; ಕಡೆಗೆ ಬ್ರೈಡನ್ ಎಂಬ ವೈದ್ಯನೊಬ್ಬನು ವಿನಾ ಉಳಿದ ಇಂಗ್ಲಿಷರೆಲ್ಲಾ ದಾರಿಯಲ್ಲೇ ನಾಶವಾದರು. ಆಫ್ಘನರು ಷಹಷೂಜನನ್ನು ಗಾದಿಯಿಂದ ತಳ್ಳಿ ಕೊಂದುಹಾಕಿದರು. ಈ ಆಪತ್ತಿಗೆಲ್ಲಾ ಆಕ್ಲೆಂಡನೇ ಕಾರಣನೆಂದು ಡೈರೆಕ್ಟರುಗಳು ಅವನನ್ನು ಸೀಮೆಗೆ ಕರೆಸಿಕೊಂಡುಬಿಟ್ಟರು.

೧೨ ಲಾರ್ಡ್ ಎಲ್ಲೆಬರೊ (ಕ್ರಿ. ಶ. 1842-44)

ಆಫ್ಘನ್ ಯುದ್ಧವು ಕೊನೆಗಂಡುದು—ಹೊಸದಾಗಿ ಬಂದ ಈ ಗವರ್ನರ್ ಜನರಲ್‌ನು ಆಫ್ಘಾನಿಸ್ಥಾನದಲ್ಲಿ ಇಂಗ್ಲಿಷರಿಗುಂಟಾಗಿದ್ದ ಅಪಕೀರ್ತಿಯನ್ನು ಹೋಗಲಾಡಿಸುವುದಕ್ಕಾಗಿ ಒಂದು ದೊಡ್ಡ ಸೈನ್ಯವನ್ನು ಜಲಾಲಾಬಾದಿಗೆ ಕಳುಹಿಸಿದನು. ಈ ಸೈನ್ಯವು ಶತ್ರುಗಳನ್ನು ಶಿಕ್ಷಿಸಿ, ಕಾಬೂಲನ್ನು ವಶಮಾಡಿಕೊಂಡು ಅಲ್ಲಿ ಸೆರೆಯಲ್ಲಿದ್ದ ಇಂಗ್ಲಿಷರನ್ನೆಲ್ಲಾ ಬಿಡಿಸಿತು. ಷಹಷೂಜನು ಆಗಲೇ ಸತ್ತುಹೋಗಿದ್ದುದರಿಂದ, ಇಂಗ್ಲಿಷರು ದೋಸ್ತ್‌ಮಹಮದನನ್ನು ನಿರ್ಬಂಧದಿಂದ ಬಿಡಿಸಿ ಅವನಿಗೆ ಅಮೀರ್ ಪದವಿಯನ್ನು ಕೊಟ್ಟು, ತಮ್ಮ ಸೈನ್ಯವನ್ನು ಹಿಂದಕ್ಕೆ ಕರೆಯಿಸಿದರು. ಈ ಯುದ್ಧದಿಂದ ಇಂಗ್ಲಿಷರಿಗೆ ಧನ, ಪ್ರಾಣ, ಮಾನ

ಇವುಗಳೆಲ್ಲವೂ ನಷ್ಟವಾಯಿತೇ ವಿನಾ ಮತ್ತಾವ ಪ್ರಯೋಜನವೂ ಆಗಲಿಲ್ಲ.

ಸಿಂಧೂದೇಶದ ಯುದ್ಧ

ಹಿಂದೂದೇಶಕ್ಕೆ ಶತ್ರುಗಳು ಬರುವ ಬಾಗಿಲಲ್ಲಿದ್ದ ಸಿಂಧುದೇಶವು ಇಂಗ್ಲಿಷರ ಅಧೀನದಲ್ಲಿರುವುದು ಅತ್ಯಾವಶ್ಯಕವಾಗಿದ್ದಿತು. ಈ ವೇಳೆಗೆ ಅಲ್ಲಿನ ಅಮೀರರೊಡನೆ ಯುದ್ಧಮಾಡಿ ಅದನ್ನು ಆಕ್ರಮಿಸುವುದಕ್ಕೆ ಕಾರಣವು ತಾನಾಗಿಯೇ ಒದಗಿತು. ಇಂಗ್ಲಿಷರು ಆಫ್ಘನ್ ಯುದ್ಧಕ್ಕೆ ಸಿಂಧೂದೇಶದ ಮಾರ್ಗವಾಗಿ ಹೋದಾಗ ಅಲ್ಲಿನ ಅಮೀರರು ಅವರನ್ನು ತಡೆದಿದ್ದರು. ಈಗ ಅವರನ್ನು ಶಿಕ್ಷಿಸುವುದಕ್ಕಾಗಿ ಇಂಗ್ಲಿಷರು ಒಂದು ದಂಡನ್ನು ಕಳುಹಿಸಿದರು. ಅಮೀರರು ಇನ್ನು ಮುಂದೆ ಇಂಗ್ಲಿಷರಿಗೆ ಸಹಾಯಕರಾಗಿರುವುದಾಗಿಯೂ, ಅವರಿಗೆ ಕೆಲವು ರಾಜ್ಯಗಳನ್ನು ಕೊಡುವುದಾಗಿಯೂ ಕರಾರು ಮಾಡಿಕೊಂಡಿದ್ದರು. (1839).

ಆದರೆ ಅಪಮಾನಕರವಾದ ಈ ಕರಾರಿನಂತೆ ನಡೆಯುವುದು ಅವರಿಗೆ ಇಷ್ಟವಿರಲಿಲ್ಲ. ಇಂಗ್ಲಿಷರನ್ನು ತಮ್ಮ ಸೀಮೆಯಿಂದಲೇ ಓಡಿಸುವುದಕ್ಕೆ ಒಳಗೊಳಗೇ ಪ್ರಯತ್ನಮಾಡುತ್ತಿದ್ದರು. ಇಷ್ಟರಲ್ಲಿಯೇ ಕಾಬೂಲಿನಲ್ಲಿ ಇಂಗ್ಲಿಷರಿಗಾದ ಪರಾಭವದ ಸುದ್ದಿಯನ್ನು ಕೇಳಿ, ಅಮೀರರು ಯುದ್ಧಸನ್ನಾಹಮಾಡಿ, ತಮ್ಮ ದೇಶದಲ್ಲಿದ್ದ ರೆಸಿಡೆಂಟನಮೇಲೆ ಬಿದ್ದರು. ಆದುದರಿಂದ ಇಂಗ್ಲಿಷರು ಪುನಃ ಅವರೊಡನೆ ಯದ್ಧಮಾಡಬೇಕಾಯಿತು. 1843ರಲ್ಲಿ ಮೀಯಾನಿ, ಹೈದರಾಬಾದು (ಸಿಂಧು) ಎಂಬ ಸ್ಥಳಗಳಲ್ಲಿ ಯುದ್ಧ ನಡೆದು ಇಂಗ್ಲಿಷರಿಗೇ ಜಯವಾಗಿ ಸಿಂಧೂದೇಶವು ಕಂಪೆನಿಗೆ ಸೇರಿಹೋಯಿತು. ಅದನ್ನು ಈಗ ಬೊಂಬಾಯಿ ಆಧಿಪತ್ಯದ ಆಡಳಿತಕ್ಕೆ ಸೇರಿಸಿರುವರು. ಆದರೆ ಸಿಂಧೂದೇಶದ ಆಕ್ರಮಣವು ಇಂಗ್ಲಿಷರ ಅಧಿಕಾರಿಗಳಿಗೇ ಒಪ್ಪಲಿಲ್ಲ. ಇದು ಧರ್ಮವಿರುದ್ಧವಾದುದೆಂದು ತಿಳಿದರೂ ಹಿಂದೂದೇಶದ ಬಾಗಿಲಲ್ಲಿರುವ ದೇಶವು ತಮ್ಮ ವಶದಲ್ಲಿರುವುದೇ ಕ್ಷೇಮವೆಂದು ಎಲ್ಲರೂ ಸುಮ್ಮನಾದರು.

ಗ್ವಾಲಿಯರ್ ಯುದ್ಧ

ಇಲ್ಲಿಯ ದೊರೆಯ ಬಾಲ್ಯದಲ್ಲಿ ಯಾರು ರೀಜಂಟರಾಗಿರಬೇಕೆಂಬ ವಿಷಯದಲ್ಲಿ ಅಲ್ಲಿನ ರಾಣಿಗೂ, ಸೈನ್ಯಕ್ಕೂ ಮನಸ್ತಾಪ ಉಂಟಾಗಿ ದೇಶ

ದಲ್ಲೆಲ್ಲಾ ಗಲಭೆಯಾಯಿತು. ಈ ಅನಾಯಕತೆಯು ಮಗ್ಗುಲಲ್ಲಿದ್ದ ಇಂಗ್ಲಿಷರ ಸೀಮೆಗೂ ಹರಡುವಂತಿದ್ದುದರಿಂದ, ಒಂದು ಇಂಗ್ಲಿಷ್ ಸೈನ್ಯವು ಅಲ್ಲಿಗೆ ಹೋಗಿ ಮಹಾರಾಜಪುರ ಮತ್ತು ಪಾನಾರ್ ಎಂಬ ಸ್ಥಳಗಳಲ್ಲಿ 1843ರಲ್ಲಿ ಜಯಹೊಂದಿತು. ಆಗ ಆ ದೇಶದವರೂ ಸಬ್ಸಿಡಿಯರಿ ಪದ್ಧತಿಯನ್ನನುಸರಿಸಿ ಕೌಲನ್ನು ಮಾಡಿಕೊಂಡು ಇಂಗ್ಲಿಷರ ಅಧೀನರಾದರು. ಸಣ್ಣವಯಸ್ಸಿನ ರಾಜನು ಪ್ರಾಪ್ತವಯಸ್ಕನಾಗುವವರೆಗೂ ಆರು ಜನ ಮರಾಟೆ ಸರದಾರರ ಒಂದು ಸಭೆಯು (Council of Regency) ರಾಜ್ಯದ ಆಡಳಿತವನ್ನು ನಿರ್ವಹಿಸಬೇಕೆಂದು ತೀರ್ಮಾನವಾಯಿತು.

ಸಿಂಧೂದೇಶವನ್ನು ಕಿತ್ತುಕೊಂಡುದೇ ಮೊದಲಾದ ಅನೇಕ ಕೆಲಸಗಳು ಡೈರೆಕ್ಟರುಗಳಿಗೆ ಒಪ್ಪಿಗೆಯಾಗದೆ, ಅವರು ಎಲ್ಲೆನ್‌ಬರೋವನ್ನು ಹಿಂದಕ್ಕೆ ಕರೆಸಿಕೊಂಡು ಲಾರ್ಡ್ ಹಾರ್ಡಿಂಗ್‌ನನ್ನು ಅಧಿಕಾರಕ್ಕೆ ನೇಮಿಸಿದರು.

(೧೩) ಲಾರ್ಡ್ ಹಾರ್ಡಿಂಗ್ 1844–48

ಸಿಕ್ಕರ ೧ನೆಯ ಯುದ್ಧ—ಇವನು ಬಂದೊಡನೆಯೇ ಸಿಕ್ಕರ ಮೇಲೆ ಯುದ್ಧಕ್ಕೆ ನಿಲ್ಲಬೇಕಾಯಿತು. "ಲಾಹೋರಿನ ಸಿಂಹ" ಎಂದು ಹೆಸರು ಪಡೆದ ರಣಜಿತಸಿಂಗನು ಜೀವಂತನಾಗಿರುವವರೆಗೂ, ಲಾಹೋರಿನ ಆಡಳಿತವು ಬಹು ದರ್ಪದಿಂದ ನಡೆಯುತ್ತಿದ್ದಿತು. ಬಲವಾದ ಅವನ ಸೈನ್ಯವೂ ಹತೋಟಿಯಲ್ಲಿದ್ದಿತು. 1839ರಲ್ಲಿ ರಣಜಿತಸಿಂಗನು ಕಾಲವಾದ ಮೇಲೆ ಅವನ ಹಿರಿಯ ಮಗನು ಪಟ್ಟಕ್ಕೆ ಬಂದನು. ಆದರೆ ರಾಜ್ಯದಲ್ಲಿ ಒಳಸಂಚು ನಡೆದು, ಇವನು ಮರಣಕ್ಕೆ ಗುರಿಯಾದನು. ಇವನ ನಂತರ "ಖಾಲ್ಸಾ" ಪಂಚಾಯಿತರು ದುಲೀಪ್‌ಸಿಂಗನೆಂಬ 5 ವರ್ಷದ ಬಾಲಕನನ್ನು ಪಟ್ಟಕ್ಕೆ ತಂದರು.

ಯುದ್ಧದ ಕಾರಣಗಳು

ಆದರೆ ದರ್ಪದಿಂದ ಆಳತಕ್ಕವರಾರೂ ಇಲ್ಲದುದರಿಂದ ಯುದ್ಧಪ್ರಿಯರಾದ ಖಾಲ್ಸಾ ಸೈನಿಕರು ಹತೋಟಿ ತಪ್ಪಿ, ತೊಂದರೆ ಕೊಡಲಾರಂಭಿಸಿದರು. ಇದರಿಂದ ದೇಶಕ್ಕೆ ತೊಂದರೆಯುಂಟಾಗುವಂತಿತ್ತು. ಈ ವೇಳೆಗೆ ಇಂಗ್ಲಿಷರು ಸಿಂಧೂದೇಶದಮೇಲೆ ಯುದ್ಧಮಾಡಿದಂತೆಯೇ

ಪಂಜಾಬಿನಮೇಲೂ ಬೀಳುವರೆಂಬ ವದಂತಿಯು ದೇಶದಲ್ಲೆಲ್ಲಾ ಹರಡಿತು. ಈ ಸಂದರ್ಭದಲ್ಲಿ ಖಾಲ್ಸಾ ಸೈನ್ಯಕ್ಕೆ ಯಾವುದಾದರೂ ಕೆಲಸವನ್ನು ಒದಗಿಸಿಕೊಡುವುದೇ ಕ್ಷೇಮವೆಂದು ಯೋಚಿಸಿ, ಅದನ್ನು ಇಂಗ್ಲಿಷರಮೇಲೆ ಯುದ್ಧಕ್ಕೆ ಹೋಗುವಂತೆ ಪ್ರೇರೇಪಿಸಿದರು. ಸೈನ್ಯವು ಅದೇರೀತಿ ಮಾಡಲು ಇಂಗ್ಲಿಷರೂ ಯುದ್ಧಕ್ಕೆ ಕೈಹಾಕಬೇಕಾಯಿತು.

ಯುದ್ಧಗಳು

ಸಿಕ್ಕರು ನಿಜವಾದ ಯೋಧರಾಗಿ ಬಲು ಸಾಹಸದಿಂದ ಕಾದಿದರೂ, ತಕ್ಕ ದಳಪತಿಗಳಿಲ್ಲದುದರಿಂದಲೂ, ಅವರ ಅಂತಃಕಲಹಗಳಿಂದಲೂ, ಅವರಿಗೆ ಮುಡಕಿ, ಫಿರೋಜ್‌ಷಹರ್, ಆಲಿವಾಲ್, ಸೋಬ್ರೋನ್ ಎಂಬ ಸ್ಥಳಗಳಲ್ಲಿ (ಕ್ರಿ. ಶ. 1845—46) ಸೋಲಾಯಿತು.

ಲಾಹೋರಿನ ಒಪ್ಪಂದ 1846

ಲಾಹೋರಿನ ಕರಾರಿನಂತೆ, ಲಾಹೋರಿನಲ್ಲಿ ಇಂಗ್ಲಿಷ್ ರೆಸಿಡೆಂಟನು ಇರುವುದೆಂತಲೂ, ಸಿಕ್ಕರು ಜಲಂಧರ್ ದೋಅಬ್ ಪ್ರಾಂತವನ್ನೂ, $1\frac{1}{2}$ ಕೋಟಿ ರೂಪಾಯಿಗಳನ್ನೂ ಇಂಗ್ಲಿಷರಿಗೆ ಕೊಡುವುದೆಂತಲೂ ತೀರ್ಮಾನವಾಯಿತು. ಆದರೆ ಲಾಹೋರಿನ ಬೊಕ್ಕಸವು ಬರಿದಾಗಿದ್ದುದರಿಂದ ಸಿಕ್ಕರು $1\frac{1}{2}$ ಕೋಟಿ ಪರಿಹಾರ ದ್ರವ್ಯವನ್ನು ಕೊಡುವುದಕ್ಕೆ ಆಗಲಿಲ್ಲ. ಆಗ ಜಮ್ಮೂ ಪ್ರಾಂತದ ಮುಖ್ಯಾಧಿಕಾರಿಯಾದ ಗುಲಾಬ್‌ಸಿಂಗನು ಈ ಹಣವನ್ನು ಇಂಗ್ಲಿಷರಿಗೆ ಕೊಟ್ಟು ಕಾಶ್ಮೀರವನ್ನು ಕೊಂಡುಕೊಂಡು ಅವನೇ ಅಲ್ಲಿಗೆ ದೊರೆಯಾದನು. ಅಂದಿನಿಂದಲೂ ಅವನ ವಂಶಸ್ಥರೇ ಕಾಶ್ಮೀರದ ದೊರೆಗಳಾಗಿ ಇಂಗ್ಲಿಷರಿಗೆ ಆಶ್ರಿತರಾಗಿರುವರು.

ಹಾರ್ಡಿಂಗನು ಮಾಡಿದ ಲೋಕೋಪಕಾರಗಳು

ಹಾರ್ಡಿಂಗನು ಸಮರ್ಥನಾದ ಯೋಧನಾಗಿದ್ದುದಲ್ಲದೆ, ಪ್ರಜಾಹಿತೈಷಿಯಾಗಿಯೂ ಇದ್ದನು. ಈತನು ಇಲ್ಲಿಯ ಜನಗಳ ಅನುಕೂಲ್ಯಕ್ಕಾಗಿ ಅನೇಕ ಏರ್ಪಾಡುಗಳನ್ನು ಮಾಡಿದನು. ಗಂಗಾನದಿಯ ಕಾಲುವೆಯ ಕೆಲಸವು ಇವನ ಕಾಲದಲ್ಲಿ ಆರಂಭವಾಯಿತು. ಇದರ ಜತೆಯಲ್ಲಿಯೇ ರೂರ್ಕಿಯಲ್ಲಿ ಇಂಜನಿಯರಿಂಗ್ ಕಾಲೇಜು ಸ್ಥಾಪಿತವಾಯಿತು.

ನರಬಲಿ, ಸಹಗಮನ, ಶಿಶುಹತ್ಯ ಇವುಗಳನ್ನು ಆಶ್ರಿತಸಂಸ್ಥಾನಗಳಲ್ಲಿಯೂ ನಿಲ್ಲಿಸಬೇಕೆಂದು ವಿಧಾಯಕವಾದುದು ಇವನ ಕಾಲದಲ್ಲಿಯೇ. ಇಂಗ್ಲಿಷನ್ನು ಕಲಿತ ಇಲ್ಲಿಯ ಜನರಿಗೆ ದೊಡ್ಡ ಉದ್ಯೋಗಗಳು ಹೇರಳವಾಗಿ ಸಿಕ್ಕುವಂತೆ ಮಾಡಿದವನು ಈತನೇ. ಸರಕಾರದ ಕಚೇರಿಗಳಲ್ಲಿ ಭಾನುವಾರ ಕೆಲಸಮಾಡುವುದನ್ನು ಹಾರ್ಡಿಂಗನು ನಿಲ್ಲಿಸಿದನು. ಈತನು ಹಿಂದಿನಕಾಲದ ಸ್ಮಾರಕ ಕಟ್ಟಡಗಳು (Monuments) ದುಃಸ್ಥಿತಿಗೆ ಬಾರದಿರುವಂತೆ ಅನೇಕ ಏರ್ಪಾಡುಗಳನ್ನು ಮಾಡಿದನು. ಈತನು 1848ರಲ್ಲಿ ಸೀಮೆಗೆ ಹೊರಟುಹೋದನು.

(೧೪) ಲಾರ್ಡ್ ಡಾಲ್‌ಹೌಸಿ (ಕ್ರಿ. ಶ. 1848–56)

ಇದುವರೆಗೆ ಬಂದ ಗವರ್ನರ್ ಜನರಲ್ಲುಗಳಲ್ಲಿ ಇವನೇ ವಯಸ್ಸಿನಲ್ಲಿ ಚಿಕ್ಕವನು ; ಆದರೂ ಬಹಳ ಸಮರ್ಥನು. ಇವನು ಸೀಮೆಯಲ್ಲಿದ್ದಾಗ ವ್ಯಾಪಾರಖಾತೆಯ ಅಧ್ಯಕ್ಷನಾಗಿದ್ದುದರಿಂದ ಹಿಂದೂದೇಶದ ಸ್ಥಿತಿಯು ಇವನಿಗೆ ಚೆನ್ನಾಗಿ ತಿಳಿದಿತ್ತು. ಲಾರ್ಡ್ ಹಾರ್ಡಿಂಗನು ಈ ದೇಶವನ್ನು ಬಿಟ್ಟು ಹೋಗುವಾಗ ಈ ದೇಶದಲ್ಲಿ ಶಾಂತತೆಯು ಸಂಪೂರ್ಣವಾಗಿ ನೆಲೆಗೊಂಡಿದ್ದುದರಿಂದ "ಇನ್ನು ಏಳುವರ್ಷಗಳವರೆಗೂ ಇಂಡಿಯಾದೇಶದಲ್ಲಿ ಯುದ್ಧದ ಪ್ರಸಕ್ತಿಯೇ ಇರಲಾರದು" ಎಂದು ಹೇಳಿದ್ದನು. ಆದರೆ ಡಾಲ್‌ಹೌಸಿಯು ಬಂದೊಡನೆಯೇ ಅವನು ಸಿಕ್ಕರಮೇಲೆ ಕೈಮಾಡಬೇಕಾಯಿತು.

ಸಿಕ್ಕರ ಎರಡನೆಯ ಯುದ್ಧ

ಸಿಕ್ಕರ ಹೆಮ್ಮೆಯು ಇನ್ನೂ ತಗ್ಗಿರಲಿಲ್ಲ. ಅವರ ಸೈನ್ಯಕ್ಕೆ ಯುದ್ಧ ಮಾಡುವ ಬಯಕೆಯು ಇನ್ನೂ ಪೂರೈಸಿರಲಿಲ್ಲ. ತಮ್ಮ ಪ್ರಾಂತದ ಇಂಗ್ಲಿಷರ ಅಧಿಕಾರಿಯಾದ ಲಾರೆನ್ಸನಿರುವವರೆಗೂ ಸಮಾಧಾನಚಿತ್ತರಾಗಿದ್ದ ಸಿಕ್ಕರು ಅವನು ದೇಶವನ್ನು ಬಿಟ್ಟೊಡನೆಯೇ ಗದ್ದಲವನ್ನೆಬ್ಬಿಸಿದರು. ಸಿಕ್ಕರ ಅಧಿಕಾರಿಯಾಗಿದ್ದ ಮುಲ್‌ರಾಜನು ಒಪ್ಪಂದದಂತೆ ತಾನು ಇಂಗ್ಲಿಷರಿಗೆ ಕೊಡಬೇಕಾಗಿದ್ದ ಹಣವನ್ನು ಕೊಡದೆ ಇಂಗ್ಲಿಷರ ಅಧಿಕಾರಿಗಳಿಗೆ ಕಿರುಕುಳವನ್ನುಂಟುಮಾಡಿದನು. ಮುಲ್ತಾನಿನಲ್ಲಿದ್ದ ಸಿಕ್ಕರು ತಮ್ಮ ಅಧಿಕಾರಿಯಾದ ಮುಲ್‌ರಾಜನ ಪ್ರೇರಣೆಯಿಂದ ದಂಗೆ ಎದ್ದು ಅಲ್ಲಿದ್ದ

ಇಂಗ್ಲಿಷ್ ಅಧಿಕಾರಿಗಳನ್ನು ಕೊಂದರು. ಆದಕಾರಣ ಇಂಗ್ಲಿಷರು ಎರಡನೆಯ ಸಿಕ್ಕರ ಯುದ್ಧಕ್ಕೆ ಹೊರಡಬೇಕಾಯಿತು.

ಯುದ್ಧಗಳು

ಇಂಗ್ಲಿಷರು ಮುಲ್ತಾನನ್ನು ಹಿಡಿದುದರಿಂದ ಪಂಜಾಬಿನ ಸಿಕ್ಕರೆಲ್ಲರೂ ಯುದ್ಧಕ್ಕೆ ನಿಂತರು. ರಾಮನಗರ, ಚಿಲಿಯನ್‌ವಾಲ ಈ ಯುದ್ಧಗಳಲ್ಲಿ ಇಂಗ್ಲಿಷರಿಗೆ ಬಹಳ ಸೋಲಾಯಿತು. ಕೊನೆಗೆ ಗುಜರಾತ್ ಎಂಬ ಹಳ್ಳಿಯ ಬಳಿಯಲ್ಲಿ ನಡೆದ ಘೋರವಾದ ಯುದ್ಧದಲ್ಲಿ ಇಂಗ್ಲಿಷರಿಗೆ ಜಯವಾಯಿತು. ಈ ಕದನದಲ್ಲಿ ಫಿರಂಗಿಗಳನ್ನು ಬಹಳವಾಗಿ ಉಪಯೋಗಿಸಿದುದರಿಂದ ಇದಕ್ಕೆ "ಫಿರಂಗಿಯುದ್ಧ" ಎಂದು ಹೆಸರಾಗಿದೆ. ಸಿಕ್ಕರ ಮುಖಂಡರು ಶರಣಾಗತರಾದರು.

ಯುದ್ಧದ ಫಲಿತಾಂಶ

ಹಿಂದೂದೇಶದ ವಾಯವ್ಯಗಡಿಯಾದ ಈ ಪ್ರಾಂತದಲ್ಲಿ ಪದೇಪದೇ ಗಲಭೆಯಾಗುವುದು ಕ್ಷೇಮವಲ್ಲವೆಂದೆಣಿಸಿ, ಡಾಲ್‌ಹೌಸಿಯು ಪಂಜಾಬ್ ಸೀಮೆಯನ್ನು 1849ರಲ್ಲಿ ಕಂಪೆನಿಯ ರಾಜ್ಯಕ್ಕೆ ಸೇರಿಸಿಬಿಟ್ಟನು. ಅಲ್ಲಿಯ ದೊರೆಯಾದ ದಿಲೀಪ್‌ಸಿಂಗನಿಗೆ ಜೀವನಾಂಶ ದೊರೆತುದಲ್ಲದೆ, ಸಿಕ್‌ಸೈನಿಕರನೇಕರಿಗೆ ಇಂಗ್ಲಿಷ್ ಸೈನ್ಯದಲ್ಲಿ ಕೆಲಸಗಳು ದೊರೆತುವು. ಸ್ವಾಭಾವಿಕವಾಗಿಯೂ ಫಲವತ್ತಾದ ಈ ಪ್ರಾಂತವನ್ನು ತಹಬಂದಿಗೆ ತಂದರೆ, ಬ್ರಿಟಿಷ್ ಸರ್ಕಾರಕ್ಕೆ ವಿಶೇಷ ಫಾಯಿದೆಯಾಗುವುದೆಂದು ತಿಳಿದು ಸಮರ್ಥನಾದ ಲಾರ್ಡ್ ಲಾರೆನ್ಸ್ ಎಂಬಾತನನ್ನು ಅಲ್ಲಿನ ವ್ಯವಸ್ಥಾಪಕನನ್ನಾಗಿ ಕಳುಹಿಸಿದನು.

ಡಾಲ್‌ಹೌಸಿಯು ಈತನ ಸಲಹೆಗಳನ್ನನುಸರಿಸಿ ಪಂಜಾಬಿನಲ್ಲಿ ಪ್ರಜಾಕ್ಷೇಮಕ್ಕಾಗಿ ಅನೇಕ ರಸ್ತೆಗಳನ್ನೂ, ಕಾಲುವೆಗಳನ್ನೂ ಮಾಡಿಸಿದನು ; ಭೂಕಂದಾಯವನ್ನು ತಗ್ಗಿಸಿದನು ; ಅಲ್ಲಲ್ಲಿ ವಿದ್ಯಾಶಾಲೆಗಳನ್ನು ಸ್ಥಾಪಿಸಿದನು. ಅಂದಿನಿಂದ ನೆಮ್ಮದಿಯನ್ನು ಪಡೆದ ಪಂಜಾಬಿನವರು ಮುಂದೆ ನಡೆದ ದೊಡ್ಡ ದಂಗೆಯ ಕಾಲದಲ್ಲಿ ಇಂಗ್ಲಿಷರಿಗೆ ತುಂಬಾ ಸಹಾಯಮಾಡಿದರು.

ಎರಡನೆಯ ಬರ್ಮ್ಮಯುದ್ಧ (1852)

ಮೇಲ್ಕಂಡಂತೆ ಡಾಲ್‌ಹೌಸಿಯು ಪಂಜಾಬ್ ದೇಶವನ್ನು ಸುವ್ಯವಸ್ಥೆಗೆ ತರುತ್ತಿದ್ದಾಗಲೇ, ಬರ್ಮ್ಮಾದೇಶದವರೊಡನೆ ಪುನಃ ಯುದ್ಧವು ಒದಗಿತು. ಬರ್ಮೀಯರು 1826ರಲ್ಲಿ ಮಾಡಿಕೊಂಡ ಎಂಡಬೂ ಕರಾರನ್ನು ಮರೆತುಕೊಂಡು, ತಮ್ಮ ದೇಶದಲ್ಲಿದ್ದ ಇಂಗ್ಲೀಷ್ ವರ್ತಕರಿಗೆ ಬಹಳ ಹಿಂಸೆಮಾಡಿ, ಅವರ ಮುಖ್ಯಸ್ಥರನ್ನು ಸೆರೆಯಲ್ಲಿಟ್ಟರು. ಇದನ್ನೆಲ್ಲಾ ಸರಿಪಡಿಸಬೇಕೆಂದು ದೊರೆಗೆ ತಿಳಿಸುವುದಕ್ಕೆ ಬಂದ ಇಂಗ್ಲಿಷ್ ಅಧಿಕಾರಿಯನ್ನು ಅಪಮಾನಪಡಿಸಿದ್ದರಿಂದ, ಇಂಗ್ಲಿಷರು ಅವರಮೇಲೆ ಯುದ್ಧಕ್ಕೆ ನಿಲ್ಲಬೇಕಾಯಿತು. ಈ ಯುದ್ಧದಲ್ಲ ಇಂಗ್ಲಿಷರೇ ಜಯಶಾಲಿಗಳಾಗಿ ಕೆಳಗಣ ಬರ್ಮವನ್ನು ಕಂಪೆನಿಗೆ ಸೇರಿಸಿಕೊಂಡರು.

ಇತರ ರಾಜ್ಯಗಳನ್ನು ಸೇರಿಸಿಕೊಂಡುದು

ಹಿಂದೂದೇಶವು ಒಟ್ಟಿನಲ್ಲಿ ಊರ್ಜಿತಸ್ಥಿತಿಯನ್ನು ಪಡೆಯಬೇಕಾದರೆ ಅಲ್ಲಿನ ದೇಶಗಳು ಇಂಗ್ಲಿಷರ ಆಳಿಕೆಗೆ ಒಳಪಟ್ಟು ಇಂಗ್ಲಿಷ್ ವಿದ್ಯಾಭ್ಯಾಸವನ್ನು ಮಾಡಿದರೆ ಮಾತ್ರ ಸಾಧ್ಯವಾಗುವುದೆಂದು ಡಾಲ್‌ಹೌಸಿಯು ನಿಜವಾಗಿಯೂ ನಂಬಿದ್ದನು. 19ನೆಯ ಶತಮಾನದ ಆದಿಭಾಗದಲ್ಲಿ ದೇಶೀಯ ರಾಜರ ಅಸಮರ್ಪಕವಾದ ಆಳಿಕೆಯೇ ಇದಕ್ಕೆ ನಿದರ್ಶನವಾಗಿದ್ದಿತು.

ಕೆಲವು ದೇಶೀಯ ರಾಜರುಗಳ ಆಳಿಕೆಯಲ್ಲಿ ಪುಂಡರು, ತುಂಡರು, ದರೋಡೆಕಾರರು ಹೆಚ್ಚಿ ಸದ್ಗೃಹಸ್ಥರ ನೆಮ್ಮದಿಗೆ ಭಂಗವುಂಟಾಗುತ್ತಿದ್ದಿತು. ಭೋಗಾಪೇಕ್ಷಿಗಳಾದ ಕೆಲವು ಅರಸರು ಪ್ರಜಾಹಿತಕ್ಕೆ ಲಕ್ಷ್ಯಕೊಡದೆ ಸ್ವಾರ್ಥಪರಾಯಣರಾಗಿ ವರ್ತಿಸುತ್ತಿದ್ದರು. ಇವೆಲ್ಲವನ್ನೂ ತಪ್ಪಿಸಿ ಏನಾದರೂ ನೆವಮಾಡಿಕೊಂಡು ದೇಶೀಯ ಸಂಸ್ಥಾನಗಳನ್ನು ಕಂಪೆನಿಗೆ ಸೇರಿಸಿಕೊಳ್ಳಬೇಕೆಂಬುದೇ ಡಾಲ್‌ಹೌಸಿಯ ಸಿದ್ಧಾಂತವಾಗಿದ್ದಿತು.

ಯುದ್ಧದಿಂದ ಗೆದ್ದುಕೊಂಡರಾಜ್ಯಗಳು

ಇವನು ಕೆಲವು ರಾಜ್ಯಗಳನ್ನು ಯುದ್ಧದಲ್ಲಿ ಜಯಿಸಿಕೊಂಡನು. ಹೀಗೆ ಬಂದವುಗಳಲ್ಲಿ ಪಂಜಾಬು, ಕೆಳಗಣಬರ್ಮ—ಇವು ಮುಖ್ಯವಾದವುಗಳು.

ದತ್ತುಮಕ್ಕಳಿಗೆ ಹಕ್ಕಿಲ್ಲವೆಂದು ಹೇಳಿದುದು

ಅಶ್ರಿತಸಂಸ್ಥಾನಗಳಲ್ಲಿ ಆಯಾ ರಾಜರ ದತ್ತುಮಕ್ಕಳು ಪಟ್ಟಕ್ಕೆ ಬರುವುದು ಸೀಮೆಯ ಡೈರೆಕ್ಟರುಗಳಿಗೆ ಸಮ್ಮತವಿಲ್ಲವೆಂದು ಹೇಳಿ ಗವರ್ನರ್ ಜನರಲ್‌ನು ಕೆಲವು ರಾಜ್ಯಗಳನ್ನು ಸೇರಿಸಿಕೊಂಡನು. ಈ ರೀತಿ ಮಾಡುವುದು ಹಿಂದೂಧರ್ಮಶಾಸ್ತ್ರಕ್ಕೂ ಮೊಗಲ್‌ಚಕ್ರವರ್ತಿಗಳ ಕಾಲದ ಆಚರಣೆಗೂ ವಿರೋಧವಾಗಿದ್ದಿತು. ಆದರೂ ಡಾಲ್‌ಹೌಸಿಯು ಸತಾರ ರಾಜ್ಯದ ವಿಷಯದಲ್ಲಿ ತನ್ನ ಸಿದ್ಧಾಂತವನ್ನು ಆಚರಣೆಗೆ ತಂದನು. ಅಪುತ್ರವಂತನಾದ ಅಲ್ಲಿನ ರಾಜನು 1848ರಲ್ಲಿ ಕಾಲವಾದಮೇಲೆ ಅವನ ದತ್ತುಪುತ್ರನು ಗಾದಿಗೆ ಬಂದನು. ಇವನಿಗೆ ವಿರೋಧಿಗಳಾರೂ ಇಲ್ಲದಿದ್ದರೂ, ರಾಜ್ಯವು ಕಂಪೆನಿಯ ಅಧೀನದಲ್ಲಿ ಮೇಲ್ಮೆಯನ್ನು ಪಡೆಯುವುದೆಂದು ಹೇಳಿ, ಡಾಲ್‌ಹೌಸಿಯು ಅದನ್ನು ಕಂಪೆನಿಯ ರಾಜ್ಯಕ್ಕೆ ಸೇರಿಸಿಕೊಂಡನು. ಇದೇರೀತಿಯಾಗಿ ಜೈತಪುರ, ಸಂಬಲ್‌ಪುರ, ಬಾಘಾಟ್, ಉದಯಪುರ, ಝಾನ್ಸಿ (1853) ನಾಗಪುರ (1853) ಮೊದಲಾದ ಸಂಸ್ಥಾನಗಳೂ ಕಂಪೆನಿಗೆ ಸೇರಿಹೋದುವು.

ಪೇಷ್ವೆ ಬಾಜೀರಾಯ, ಆರ್ಕಾಟಿನ ನವಾಬ, ತಂಜಾವೂರಿನ ರಾಜ ಇವರುಗಳ ದತ್ತುಮಕ್ಕಳಿಗೆ ಇಂಗ್ಲಿಷರು ಕೊಡುತ್ತಿದ್ದ ಜೀವನಾಂಶವನ್ನೂ ಇದೇ ಕಾರಣದಿಂದ ನಿಲ್ಲಿಸಿದರು. ಹೈದರಾಬಾದಿನಲ್ಲಿಟ್ಟಿದ್ದ ಇಂಗ್ಲಿಷ್ ಸೈನ್ಯದ ವೆಚ್ಚಕ್ಕಾಗಿ ಬೀರಾರ್ ರಾಜ್ಯವನ್ನು ನಿಜಾಮನಿಂದ ತೆಗೆದುಕೊಂಡನು. (1853)

ರಾಜ್ಯಭಾರದ ಅವ್ಯವಸ್ಥೆಯೆಂದು ಹೇಳಿ ಸೇರಿಸಿಕೊಂಡ ರಾಜ್ಯಗಳು

ಕೆಟ್ಟ ಆಳ್ವಿಕೆಯೇ ಮೂರನೆಯ ಕಾರಣವಾಗಿ ಕೆಲವು ರಾಜ್ಯಗಳು ಇಂಗ್ಲಿಷರ ಪಾಲಾದುವು. ಇವುಗಳಲ್ಲಿ ಅಯೋಧ್ಯೆಯೇ (1856) ಮುಖ್ಯವಾದುದು. ಇಂಗ್ಲೀಷರು ಬಕ್ಸಾರ್ ಕದನದಲ್ಲಿ (1764) ಅಯೋಧ್ಯೆಯ ನವಾಬನನ್ನು ಸೋಲಿಸಿ ಅವನ ರಾಜ್ಯವನ್ನು ತಮ್ಮ ವಶಮಾಡಿಕೊಂಡಿದ್ದರು. ಕ್ಲೈವನು ಅದನ್ನು ಪುನಃ ನವಾಬನಿಗೇ ಕೊಟ್ಟಿದ್ದನು. ಸಹಾಯಕಸೈನ್ಯದ ವೆಚ್ಚಕ್ಕಾಗಿ ವೆಲ್ಲೆಸ್ಲಿಯು ಅಯೋಧ್ಯೆಯ ಹೆಚ್ಚುಭಾಗವನ್ನು ಕಂಪೆನಿಯ ವಶಮಾಡಿಕೊಂಡಿದ್ದನು. ಆದರೂ ನವಾಬನ ಆಡ

ಳಿತದಲ್ಲಿ ಜನರಿಗೆ ನೆಮ್ಮದಿಯೇ ಇರಲಿಲ್ಲ. ಈ ಸಂದರ್ಭದಲ್ಲಿ ಗೌರ್ನರ್ ಜನರಲ್‌ನು ಆ ರಾಜ್ಯವನ್ನು ಸಂಪೂರ್ಣವಾಗಿ ಕಂಪೆನಿಗೆ ಸೇರಿಸಿ ಕೊಂಡನು.

ಈ ಮೇಲೆಕಂಡ ರೀತಿಗಳಲ್ಲಿ ಕಂಪೆನಿಯ ರಾಜ್ಯವು ತುಂಬಾ ವಿಸ್ತಾರವಾಯಿತು. ಆದರೆ ದೇಶೀಯ ರಾಜರ ಆಸ್ಥಾನಗಳಲ್ಲಿ ಈತನ ಆಡಳಿತದ ವಿಷಯದಲ್ಲಿ ತುಂಬಾ ಅಸಮಾಧಾನವುಂಟಾಯಿತು.

ಇಂಗ್ಲಿಷರ ಆಡಳಿತವನ್ನು ಬಲಪಡಿಸಿದುದು

ಡಾಲ್‌ಹೌಸಿಯು ಇದುವರೆಗೂ ರಾಜ್ಯವನ್ನು ಕಟ್ಟುತ್ತಿದ್ದು ಇನ್ನು ಮುಂದೆ ಅವುಗಳ ಯೋಗಕ್ಷೇಮಕ್ಕೆ ಗಮನಕೊಟ್ಟನು. ವಿದ್ಯಾಪ್ರಚಾರ ಕ್ಕಾಗಿ ಈತನು ಅನೇಕ ಏರ್ಪಾಡುಗಳನ್ನು ಮಾಡಿದನು. ಪ್ರತಿ ಆಧಿ ಪತ್ಯದಲ್ಲಿಯೂ ಇದಕ್ಕಾಗಿಯೇ ಒಂದು ಇಲಾಖೆಯನ್ನು (Department of Public Instruction) ಏರ್ಪಡಿಸಿದನು ; ಆಧಿಪತ್ಯದ ಮುಖ್ಯ ನಗರಗಳಲ್ಲಿ ಸಕಲ ವಿದ್ಯಾನಿಲಯಗಳೂ, ಅಲ್ಲಲ್ಲಿ ಅನೇಕ ಪಾಠಶಾಲೆಗಳೂ ನಿರ್ಮಾಣವಾದುವು. ಆದರೂ ಇವುಗಳಲ್ಲಿ ಭಾಷಾವಿದ್ಯಕ್ಕೆ ಮಾತ್ರ ವಿಶೇಷ ಲಕ್ಷ್ಯಕೊಟ್ಟದ್ದರಿಂದ ಭಾರತಭೂಮಿಯಲ್ಲಿ ಹಿಂದಿನಕಾಲದಲ್ಲಿ ಏಳಿಗೆಯನ್ನು ಪಡೆದಿದ್ದ ಚಿತ್ರಕಲೆ, ವಾಸ್ತುಶಿಲ್ಪ (Architecture) ಅರ್ಥಶಾಸ್ತ್ರ, ವೇದಾಂತವಿದ್ಯೆ, ತತ್ವವಿದ್ಯೆ ಇವುಗಳು ಹಿಂದುಳಿದುಹೋದುವು.

ಜನೋಪಕಾರಗಳು

ಇವನು 500 ಮೈಲಿಗಳ ಉದ್ದವಿರುವ ಗಂಗಾನದಿಯ ಕಾಲುವೆ ಯನ್ನು ತೆಗೆಸಿ ಮುಗಿಸಿದನು. ಬಂಡಿಯರಸ್ತೆ, ರೈಲು, ತಂತಿ, ಸುಲಭ ಟಪಾಲು ಮುಂತಾದ ಸೌಕರ್ಯಗಳು ಇವನ ಕಾಲದಲ್ಲಿಯೇ ಏರ್ಪಟ್ಟುವು. ಅಲ್ಲಲ್ಲಿ ನ್ಯಾಯವಿಧಾಯಕ ಸಭೆಗಳೂ ಸ್ಥಾಪಿತವಾದುವು.

ಕಂಪೆನಿಯ ಸನ್ನದಿನ ಬದಲಾವಣೆ

1853ರಲ್ಲಿ ಕಂಪೆನಿಯ ಸನ್ನದು ಪುನಃ ಮಾರ್ಪಟ್ಟಿತು. ಇದುವ ರೆಗೂ ಇಂಗ್ಲೆಂಡಿನಲ್ಲಿದ್ದ ಬೋರ್ಡ್ ಆಫ್ ಕಂಟ್ರೋಲ್ ಸಭೆಯವರು

ತಮ್ಮ ಇಷ್ಟಬಂದವರಿಗೆ ಮಾತ್ರ ದೊಡ್ಡ ಅಧಿಕಾರಗಳನ್ನು ಕೊಡುತಿದ್ದುದನ್ನು ನಿಲ್ಲಿಸಿ, ಇನ್ನುಮುಂದೆ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಕೊಡಬಹುದೆಂದು ತೀರ್ಮಾನವಾಯಿತು. ಹಿಂದಿನ ಸುಪ್ರೀಂ ಕೋರ್ಟಿಗೆ ಬದಲಾಗಿ ಹೈಕೋರ್ಟುಗಳು ಸ್ಥಾಪಿತವಾದುವು. ಬಂಗಾಳಕ್ಕೆ ಬೇರೆ ಒಬ್ಬ ಲೆಫ್ಟಿನೆಂಟ್ ಗವರ್ನನು ನೇಮಕವಾದನು. ಡಾಲ್‌ಹೌಸಿಯು 1856ರಲ್ಲಿ ಸೀಮೆಗೆ ಹಿಂತಿರುಗಿದನು. ಈತನೂ ಕ್ಲೈವ್, ವೆಲ್ಲೆಸ್ಲಿ, ಲಾರ್ಡ್ ಹೇಸ್ಟಿಂಗ್ಸ್ ಇವರುಗಳಂತೆ ಬ್ರಿಟಿಷ್ ಇಂಡಿಯಾವನ್ನು ಕಟ್ಟುವುದರಲ್ಲಿ ಪ್ರಮುಖನು. ಇವನ ಕಾಲದಲ್ಲಿ ಸುಮಾರು ಭರತಖಂಡವೆಲ್ಲಾ ಕಂಪೆನಿಗೆ ಸೇರಿತು. ಇದರಿಂದ ಇಲ್ಲಿಯ ಜನಗಳಿಗೆ ಅಸಮಾಧಾನ ಉಂಟಾಯಿತು. ಮುಂದೆ ಸ್ವಲ್ಪ ದಿನದಲ್ಲಿಯೇ ನಡೆದ ಸಿಪಾಯಿ ದಂಗೆಗೆ ಈ ಅಸಮಾಧಾನವೂ ಒಂದು ಕಾರಣವಾಯಿತು.

ಅಧ್ಯಾಯ ೮.—(೧೫) ಲಾರ್ಡ್ ಕ್ಯಾಂನಿಂಗ್

(ಕ್ರಿ. ಶ. 1856–62)

ಸಿಪಾಯಿಗಳ ದಂಗೆ (ದೊಡ್ಡ ದಂಗೆ)

ಕ್ಯಾನಿಂಗನೇ ಕಡೆಯ ಗವರ್ನರ್ ಜನರಲನು. ಇವನು ಬಂದಾಗ ಇಂಡಿಯಾದಲ್ಲಿ ಶಾಂತಿಯು ನೆಲಸಿದ್ದಂತೆ ತೋರುತ್ತಿತ್ತು. ಆದರೂ ಅನೇಕರ ಮನಸ್ಸಿನಲ್ಲಿ ಅಸಮಾಧಾನವು ಬೇರೂರಿಕೊಂಡಿತ್ತು. ವಿದೇಶೀಯರ ಆಳಿಕೆಯು ಅಂಥವರಿಗೆ ಸಮ್ಮತವಾಗಿರಲಿಲ್ಲ. ಡಾಲ್‌ಹೌಸಿಯ ಕಾಲದಲ್ಲಿ ತಮ್ಮ ರಾಜ್ಯಗಳನ್ನು ಕಳೆದುಕೊಂಡಿದ್ದ ಅರಸರೂ, ತಮಗೆ ಸಲ್ಲುತ್ತಿದ್ದ ಜೀವನಾಂಶಗಳು ನಿಂತುಹೋಗಿದ್ದವರೂ, ಮುಸಲ್ಮಾನರ ಕಾಲದಿಂದಲೂ ದೊಡ್ಡ ಉದ್ಯೋಗಗಳಲ್ಲಿದ್ದು ಈಗ ಅವುಗಳು ತಪ್ಪಿಹೋಗಿದ್ದವರೂ, ಇಂಗ್ಲಿಷರ ವಿಷಯದಲ್ಲಿ ಜನರಿಗಿದ್ದ ಅಸಮಾಧಾನವನ್ನು ಇನ್ನೂ ಹೆಚ್ಚಿಸಿದರು.

ಕ್ರೈಸ್ತಪಾದ್ರಿಗಳು ತಮ್ಮ ಮತವನ್ನು ಹರಡುವ ಉತ್ಸಾಹದಲ್ಲಿ ಹಿಂದೂ ಆಚಾರ--ವ್ಯವಹಾರ ಪದ್ಧತಿಗಳನ್ನು ಅಲ್ಲಗಳೆದು ಅವರಿಗೆ ಅಪಮಾನಪಡಿಸುತ್ತಿದ್ದರು. ಆಗತಾನೇ ಏರ್ಪಡಿಸಿದ್ದ ರೈಲು, ತಂತಿಟಪಾಲು,

ವಿದ್ಯಾಶಾಲೆಗಳು, ಔಷಧಶಾಲೆಗಳು ಮೊದಲಾದುವು ತಮ್ಮ ಜಾತಿಗಳನ್ನು ಕೆಡಿಸಿ, ತಮ್ಮನ್ನು ವಿದೇಶಗಳಿಗೆ ಸಾಗಿಸುವ ಸಾಧನಗಳೆಂದು ಅನೇಕರಿಗೆ ಭೀತಿಯುಂಟಾಯಿತು. ಈ ನಡುವೆ 1857ರಲ್ಲಿ ಸೈನಿಕರಿಗೆ ಹೊಸ ಬಂದೂಕುಗಳನ್ನೂ (Enfield Rifle) ಕೊಟ್ಟರು. ಅವುಗಳಿಗೆ ಹಾಕ ತಕ್ಕ ತೋಟಾಗಳಿಗೆ ದನದ ಮತ್ತು ಹಂದಿಯಕೊಬ್ಬು ಸವರಿತ್ತು. ಇದು ಹಿಂದೂ ಮತ್ತು ತುರುಕ ಸಿಪಾಯಿಗಳ ಜಾತಿ—ಪದ್ಧತಿಗಳಿಗೆ ವಿರೋಧ ವಾಗಿದ್ದಿತು.

ಈ ಕಾರಣಗಳಿಂದ ಇಂಗ್ಲಿಷರಲ್ಲಿ ಈ ದೇಶದವರಿಗಿದ್ದ ಅಸಮಾಧಾನವು ಕೋಪ—ದ್ವೇಷಗಳಾಗಿ ಪರಿಣಮಿಸಿತು. ಮೀರಟ್‌ನಲ್ಲಿದ್ದ ಸಿಪಾಯಿಗಳಿಗೆ ಈ ತೋಟಾಗಳನ್ನು ಕೊಡಲು ಅವರಲ್ಲಿ ಕೆಲವರು ಅವುಗಳನ್ನು ಮುಟ್ಟಲಿಲ್ಲ. "ಅವರ ಜಾತಿಪದ್ಧತಿಗಳಿಗೆ ವಿರೋಧವಾಗಿ ನಡೆಯುವಂತೆ ಬಲಾತ್ಕಾರಮಾಡುವುದು ಅವಿವೇಕ" ಎಂಬ ವಿಚಕ್ಷಣೆಯಿಲ್ಲದೆ, ಅಲ್ಲಿನ ಅಧಿಕಾರಿಗಳು ಆಜ್ಞೆಯನ್ನು ಮೀರಿದವರನ್ನು ಸೆರೆಯಲ್ಲಿಟ್ಟರು. ಆಗ ಉಳಿದ ಸಿಪಾಯಿಗಳೆಲ್ಲರೂ ದಂಗೆಯೆದ್ದು ರೋಷಾವೇಶದಿಂದ ಇಂಗ್ಲಿಷರನ್ನು "ಹೆಂಗಸರು, ಮಕ್ಕಳು" ಎಂದು ನೋಡದೆ ಕಡಿದು ದೆಹಲಿಗೆ ಹೊರಟು, ಅಲ್ಲಿ ಒಳಸಂಚನ್ನು ನಡೆಸುತ್ತಿದ್ದ ಮೊಗಲರ ಬಹದ್ದೂರ್‌ಷಹನನ್ನು ಹಿಂದೂಸ್ಥಾನದ ಚಕ್ರವರ್ತಿಯೆಂದು ಸಾರಿದರು.

ಕೂಡಲೇ ದಂಗೆಯು ವಾಯುವ್ಯ ಪ್ರಾಂತಗಳು, ಮಧ್ಯ ಇಂಡಿಯ ಮೊದಲಾದ ಪ್ರದೇಶಗಳಿಗೆ ಹರಡಿತು. ಅಯೋಧ್ಯೆಯ ನಾಯಕರೂ, ಝಾನ್ಸೀ ರಾಣಿಯೂ, ಕಾನ್‌ಪುರದಲ್ಲಿ ಪೇಷ್ವೆ ಬಾಜೀರಾಯನ ದತ್ತು ಮಗನಾದ ನಾನಾ ಸಾಹೇಬನೂ, ಅವನ ದಳಪತಿಯಾದ ತಾಂತ್ಯಾಟೋಪಿಯೂ ದಂಗೆಗಾರರ ಜತೆಗೆ ಸೇರಿದರು. ಈ ದಂಗೆಯಲ್ಲಿ ನಾನಾರಾಯನೇ ಬಹಳ ಪ್ರಮುಖನಾಗಿದ್ದುದರಿಂದ ಈ ದಂಗೆಗೆ "ನಾನಾರಾಯನ ದಂಗೆ" ಯೆಂದು ಹೆಸರು ಬಂದಿತು.

ದಂಗೆಗಾರರು ತಮ್ಮ ಕೈಗೆ ಸಿಕ್ಕಿದ ಫರಂಗಿಯವರನ್ನು ಹತಮಾಡುತ್ತಾ ಹೊರಟರು. ಈ ದಂಗೆಯನ್ನು ಕೂಡಲೇ ನಿಲ್ಲಿಸುವುದು ಅಸಾಧ್ಯವಾಯಿತು. ಬಂಗಾಳವು ಹಿಂದಿನಿಂದಲೂ ಶಾಂತವಾಗಿಯೇ ಇದ್ದುದರಿಂದ ಅಲ್ಲಿ ಸ್ವಲ್ಪ ಸೈನ್ಯವನ್ನಿಟ್ಟಿದ್ದರು. ಈ ಸೈನಿಕರಲ್ಲಿ ಹಿಂದೂಗಳು,

ಮುಸಲ್ಮಾನರು ಇವರೇ ಹೆಚ್ಚಾಗಿದ್ದರು. ಬ್ರಿಟಿಷ್ ಸೈನ್ಯಗಳೆಲ್ಲಾ ಪರ್ಷಿಯಾ ಮತ್ತು ಚೀಣಾರಾಜ್ಯಗಳ ಮೇಲೆ ದಂಡೆತ್ತಿ ಹೋಗಿದ್ದುವು. ಈ ಕಷ್ಟಸಮಯದಲ್ಲಿ ಬೊಂಬಾಯಿ, ಮದ್ರಾಸ್, ಪಂಜಾಬ್, ಮೈಸೂರು, ಹೈದರಾಬಾದ್, ನೇಪಾಳ ಈ ದೇಶಗಳವರು ದಂಗೆಗೆ ಸೇರದೆ ಇಂಗ್ಲಿಷರ ಪಕ್ಷವಾಗಿ ಬಹಳ ಸಾಹಸಪಟ್ಟರು.

ಜನಸಮುದಾಯದ ಮನಸ್ಸಿನಲ್ಲಿ ಅಲ್ಪಸ್ವಲ್ಪ ಅಸಮಾಧಾನವಿದ್ದಾಗ್ಗೂ ಅವರೆಲ್ಲರೂ ದಂಗೆಗೆ ಸೇರಲಿಲ್ಲ. ಸೈನಿಕರುಮಾತ್ರ ಮುಂದಾಳುಗಳಾಗಿದ್ದರು. ಆದುದರಿಂದ ದಂಗೆಯು 1858ರಲ್ಲಿ ಅಡಗಿಹೋಯಿತು. ನಾನಾರಾಯನು ಸೋತು ನೇಪಾಳಕ್ಕೆ ಓಡಿಹೋದನು. ಕಾನ್‌ಪುರವು ಇಂಗ್ಲಿಷರ ವಶವಾಯಿತು. ಆಮೇಲೆ ದೆಹಲಿಯೂ ಇಂಗ್ಲಿಷರ ಕೈಸೇರಿತು. ಬಹದ್ದೂರ್‌ಷಹನನ್ನು ಹಿಡಿದು ರಂಗೂನಿಗೆ ಗಡೀಪಾರು ಮಾಡಿದರು. ತಾಂತ್ಯಾಟೋಪಿಗೆ ಗಲ್ಲಿನ ಶಿಕ್ಷೆಯಾಯಿತು.

ಈಸ್ಟಿಂಡಿಯಾ ಕಂಪೆನಿಯು ಕೊನೆಗಂಡುದು (ಕ್ರಿ. ಶ. 1858)

ದೇಶವೆಲ್ಲಾ ಶಾಂತವಾದಕೂಡಲೇ, ಇಂಗ್ಲೆಂಡಿನ ಪಾರ್ಲಿಮೆಂಟಿನವರು ಇಂಡಿಯಾ ರಾಜ್ಯಭಾರಕ್ರಮದಲ್ಲಿ ಬದಲಾವಣೆಗಳನ್ನು ಮಾಡಿದರು. ಕಂಪೆನಿಯವರಿಗೆ ಇಷ್ಟು ದೊಡ್ಡ ರಾಜ್ಯವನ್ನಾಳುವ ಶಕ್ತಿಯಿಲ್ಲವೆಂದು ಯೋಚಿಸಿ, ಅದನ್ನು ಇನ್ನುಮೇಲೆ ಇಂಗ್ಲೆಂಡಿನ ರಾಣಿಯೇ ಆಳಬೇಕೆಂದು ತೀರ್ಮಾನ ಮಾಡಿದರು. ಆದುದರಿಂದ 1858ನೇ ಇಸವಿಯಲ್ಲಿ ಈಸ್ಟ್ ಇಂಡಿಯಾ ಕಂಪೆನಿಯು ಕೊನೆಗಂಡು, ಈ ದೇಶದ ಆಡಳಿತವನ್ನು ನೋಡಿಕೊಳ್ಳುವುದಕ್ಕಾಗಿ ಇಂಗ್ಲೆಂಡಿನಲ್ಲಿ ಒಂದು ಬೇರೆ ಸಭೆಯನ್ನು ಏರ್ಪಡಿಸಿ, ರಾಣಿಯ ಒಬ್ಬ ಮಂತ್ರಿಯು "ಸೆಕ್ರಿಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ" ಎಂಬ ಹೆಸರಿನಿಂದ ಈ ಸಭೆಗೆ ಅಧ್ಯಕ್ಷನಾಗಿದ್ದುಕೊಂಡಿರಬೇಕೆಂದು ವ್ಯವಸ್ಥೆಯಾಯಿತು. ಇಲ್ಲಿಂದ ಮುಂದಕ್ಕೆ ಈ ದೇಶದ ಗವರ್ನರ್ ಜನರಲ್‌ನೇ ರಾಣಿಯ ಪ್ರತಿನಿಧಿಯಾಗಿ ವೈಸರಾಯಿ ಎಂಬ ಹೆಸರಿನಿಂದ ಹಿಂದೂದೇಶದಲ್ಲಿ ಆಳಬೇಕೆಂದು ಏರ್ಪಾಡಾಯಿತು

ವಿಕ್ಟೋರಿಯಾ ರಾಣಿಯ ಪ್ರಸಿದ್ಧ ಪತ್ರಿಕೆ ಕ್ರಿ. ಶ. 1858

1858ನೆಯ ನವಂಬರ್ 1ರಲ್ಲಿ ವಿಕ್ಟೋರಿಯಾ ಮಹಾರಾಣಿಯು ಹಿಂದೂದೇಶದ ರಾಜ್ಯಭಾರವನ್ನು ಕಂಪೆನಿಯಿಂದ ವಹಿಸಿಕೊಂಡ ಸಂಗತಿಯನ್ನು ಒಂದು ಪ್ರಸಿದ್ಧಪತ್ರಿಕೆಯ (Royal Proclamation) ಮೂಲಕ ಎಲ್ಲರಿಗೂ ತಿಳಿಸಿದಳು. "ಕಂಪೆನಿಯಿಂದ ನಾವೇ ಹಿಂದೂದೇಶದ ರಾಜ್ಯಭಾರವನ್ನು ವಹಿಸಿಕೊಂಡಿರುತ್ತೇವೆ. ಹಿಂದಿನಿಂದ ನಡೆದು ಬಂದ ಕರಾರುಗಳಲ್ಲೂ, ಪದ್ಧತಿಗಳಲ್ಲೂ ಏನೂ ವ್ಯತ್ಯಾಸಮಾಡುವುದಿಲ್ಲ. ದೇಶೀಯ ರಾಜ್ಯಗಳನ್ನು ಕಿತ್ತುಕೊಳ್ಳುವುದಿಲ್ಲ. ದತ್ತುಪುತ್ರರಿಗೆ ರಾಜ್ಯಕ್ಕೆ ಹಕ್ಕುಂಟು. ಫರಂಗಿಯವರಿಗೂ ದೇಶೀಯರಿಗೂ ಯಾವ ಭೇದವನ್ನೂ ಎಣಿಸುವುದಿಲ್ಲ. ಜನರು ತಮ್ಮ ತಮ್ಮ ಮತಾಚಾರಗಳನ್ನೂ, ಜಾತಿಪದ್ಧತಿಗಳನ್ನೂ ಅನುಸರಿಸುವುದರಲ್ಲಿ ಯಾವ ಅಡ್ಡಿಯೂ ಇರುವುದಿಲ್ಲ. ಸರ್ಕಾರಿ ಉದ್ಯೋಗಗಳನ್ನು ಪಕ್ಷಪಾತವಿಲ್ಲದೆ ಕೊಡಲಾಗುವುದು. ಪ್ರಜೆಗಳ ನೆಮ್ಮದಿಯೇ ನಮ್ಮ ಇಷ್ಟಾರ್ಥ" ಹೀಗೆಂಬುದೇ ಈ ಪತ್ರಿಕೆಯ ಸಾರಾಂಶ. ಲಾರ್ಡ್ ಕ್ಯಾನಿಂಗನೇ ಮೊದಲನೆಯ ವೈಸರಾಯಿ ಆದನು.

ಅಧ್ಯಾಯ ೯.—ಬ್ರಿಟಿಷ್ ಇಂಡಿಯಾ ಚಕ್ರಾಧಿಪತ್ಯ ವೈಸರಾಯಿಗಳು

೧ ಲಾರ್ಡ್ ಕ್ಯಾನಿಂಗ್ (ಕ್ರಿ. ಶ. 1858-62)

ಇವನು ಬಹಳ ದಯಾಳುವಾದುದರಿಂದ ಇವನು "ಕ್ಷಮಾಶೀಲನಾದ ಕ್ಯಾನಿಂಗ್" (Clemency Canning) ಎಂದು ಕರೆಯುತ್ತಾರೆ. ದೊಡ್ಡ ದಂಗೆಯಲ್ಲಿ ಸೇರಿದ್ದ ಅನೇಕರನ್ನು ಕ್ಷಮಿಸಿ, ತನ್ನ ಹೆಸರನ್ನು ಸಾರ್ಥಕಗೊಳಿಸಿಕೊಂಡನು. ದೇಶದಲ್ಲಿ ಶಾಂತತೆಯು ನೆಲೆಗೊಂಡ ಮೇಲೆ ವೈಸರಾಯಿಯು ಪ್ರಜಾಕ್ಷೇಮಚಿಂತನೆಯ ಕಡೆಗೆ ಗಮನಕೊಡಲಾರಂಭಿಸಿದನು. ಈತನ ಕಾಲದಲ್ಲಿ ಇಂಡಿಯನ್ ಪಿನಲ್‌ಕೋಡ್, ಕೋಡ್ ಆಫ್ ಸಿವಿಲ್ ಪ್ರೊಸಿಜರ್, ಕೋಡ್ ಆಫ್ ಕ್ರಿಮಿನಲ್ ಪ್ರೊಸಿಜರ್ ಎಂಬ

ಕಾನೂನುಗಳು ಜಾರಿಗೆ ಬಂದುವು. ಹಿಂದಿನ ಸುಪ್ರೀಂಕೋರ್ಟುಗ್, ಸಾದರ್ ಅದಾಲತ್‌ಕೋರ್ಟುಗ್, ಇವುಗಳ ಸ್ಥಾನದಲ್ಲಿ ಕಲ್ಕತ್ತೆ, ಬೊಂಬಾಯಿ ಮದರಾಸ್ ಪಟ್ಟಣಗಳಲ್ಲಿ ಈತನು ಹೈಕೋರ್ಟುಗಳನ್ನು ಸ್ಥಾಪಿಸಿದನು.

ವರಮಾನದ ತೆರಿಗೆಯೂ, (Income tax) ನೋಟುಗಳ ಚಲಾವಣೆಯೂ, ಇವನಕಾಲದಲ್ಲಿ ಆಚರಣೆಗೆ ಬಂದುವು. ಗವರ್ನರ್ ಜನರಲ್‌ನ ನ್ಯಾಯ ನಿರ್ಮಾಣಕ ಸಭೆಗೆ ದೇಶೀಯ ಸಭ್ಯರನ್ನು ಮೊದಲು ನೇಮಿಸಿದ ಕೀರ್ತಿಯು ಈತನಿಗೆ ಸಲ್ಲತಕ್ಕುದ್ದಾಗಿದೆ. ಈತನಿಗೆ ನಮ್ಮದೇಶದ ಜನರಲ್ಲಿ ತುಂಬಾ ಪ್ರೀತಿ ಇದ್ದಿತು. ಈತನು 1862ರಲ್ಲಿ ಸೀಮೆಗೆಹೋಗಿ ಮೂರುತಿಂಗಳೊಳಗಾಗಿಯೇ ಕಾಲವಾದನು.

೨. ಲಾರ್ಡ್ ಎಲ್ಗಿನ್ (ಕ್ರಿ. ಶ. 1862–64)

ಪಂಜಾಬಿಗೆ ವಾಯವ್ಯದಲ್ಲಿ ವಾಸಮಾಡುತ್ತಿದ್ದ ವಾಹಬಿಗಳೆಂಬ ತುರುಕರು ಈ ದೇಶಕ್ಕೆ ಆಗಾಗ್ಗೆ ತೊಂದರೆಮಾಡುತ್ತಿದ್ದುದರಿಂದ ಈ ವೈಸರಾಯಿಯು ಅವರನ್ನು ಅಡಗಿಸಿದನು. ಇವನು ಬಂದ ಒಂದು ವರುಷದಲ್ಲಿಯೇ ಕಾಲವಾದನು.

೩. ಸರ್ ಜಾರ್ಜ್ ಲಾರೆನ್ಸ್ (ಕ್ರಿ. ಶ. 1864–69)

ಈತನು ಹಿಂದೆ ಪಂಜಾಬಿನ ವ್ಯವಸ್ಥಾಪಕನಾಗಿದ್ದಾಗ ಪ್ರಜಾಕ್ಷೇಮಕ್ಕಾಗಿ ಅನೇಕ ಅನುಕೂಲ್ಯಗಳನ್ನು ಕಲ್ಪಿಸಿಕೊಟ್ಟಿದ್ದನು. ಈಗ ಅಫ್ಘಾನಿಸ್ಥಾನದ ದೊರೆಯು ಸತ್ತಮೇಲೆ ರಾಜ್ಯಕ್ಕಾಗಿ ಅವನ ಮಕ್ಕಳಲ್ಲಿ ಜಗಳ ಹುಟ್ಟಿತು. ಕೊನೆಗೆ ಷೇರ್ ಅಲ್ಲಿಯು ಇಂಗ್ಲಿಷರ ಸಹಾಯದಿಂದ ಕಾಬೂಲಿನಲ್ಲಿ ಪಟ್ಟಕ್ಕೆ ಬಂದನು. ಇವನು ಇಂಗ್ಲಿಷರಿಗೆ ಸ್ನೇಹಿತನಾಗಿದ್ದುದರಿಂದ ವಾಯವ್ಯಮಾರ್ಗದಿಂದ ಇಂಡಿಯಾಕ್ಕೆ ರಷ್ಯನ್ ಜನರು ಬರಲು ಅಡ್ಡಿಯಾಯಿತು.

(ಭೂತಾನಿನ ಯುದ್ಧಕ್ರಿ. ಶ. 1864)

ಇದೇ ಕಾಲದಲ್ಲಿ ಭೂತಾನಿನವರು ಇಂಗ್ಲಿಷ್ ರಾಜ್ಯದ ಮೇಲೆ ಬಿದ್ದುದರಿಂದ ಇಂಗ್ಲಿಷರು ಅವರನ್ನು ಜಯಿಸಿ ಅವರಿಂದ ಕೆಲವು ಸೀಮೆಗಳನ್ನು ಕಿತ್ತುಕೊಂಡರು.

ಕ್ಷಾಮ

1866ರಲ್ಲಿ ಒರಿಸ್ಸಾ ದೇಶದಲ್ಲಿ ಒಂದು ಘೋರವಾದ ಕ್ಷಾಮವು ತಲೆದೋರಿತು. ಆಗ ಸರ್ಕಾರದವರು ಬಹಳಹಣ ವೆಚ್ಚಮಾಡಿ ಸಾವಿರಾರು ಜನರ ಜೀವವನ್ನುಳಿಸಿದರು. ಇದಲ್ಲದೆ ವೈಸರಾಯಿಯು "ಕ್ಷಾಮ ವಿಮೆಯ ನಿಧಿ" (Famine Insurance Fund) ಎಂಬ ಹೆಸರಿನಿಂದ ಅನೇಕ ಹಣವನ್ನು ಕೂಡಿಸಿ ಅದನ್ನೇ ಪ್ರತ್ಯೇಕವಾಗಿಟ್ಟನು. ಇದನ್ನು ಕ್ಷಾಮನಿವಾರಣೆಯ ಕಾಲಗಳಲ್ಲಿ ಮಾತ್ರ ವಿನಿಯೋಗಿಸತಕ್ಕುದೆಂದು ತೀರ್ಮಾನಮಾಡಿದನು.

ಈತನ ಆಡಳಿತಕಾಲದಲ್ಲಿಯೇ, ಏಷ್ಯಾ ಆಫ್ರಿಕಾಗಳಿಗೆ ಮಧ್ಯದಲ್ಲಿದ್ದ ಸೂಯಸ್ ಭೂಸಂಧಿಯನ್ನೊಡೆದು ಕಾಲುವೆಯನ್ನು ಮಾಡಿದುದರಿಂದ, ಯೂರೋಪಿನವರು ನಮ್ಮ ದೇಶದೊಡನೆ ವ್ಯಾಪ್ಯಾರಮಾಡುವುದಕ್ಕೆ ಸಹಾಯವಾದುದಲ್ಲದೆ, ಪ್ರಯಾಣವೂ ಸುಲಭವಾಯಿತು. ಈತನು 1869ರಲ್ಲಿ ಸೀಮೆಗೆ ಪ್ರಯಾಣ ಮಾಡಿದನು.

೪. ಲಾರ್ಡ್ ಮೇಯೋ (ಕ್ರಿ. ಶ. 1869–72)

ಈತನು ಆಫ್ಘಾನಿಸ್ಥಾನದ ಷೇರ್ ಅಲ್ಲಿಯ ಸ್ನೇಹವನ್ನು ಬಲಪಡಿಸಿದನು. ಸರ್ಕಾರದ ಹುಟ್ಟುವಳಿಯನ್ನು ಹೆಚ್ಚಿಸತಕ್ಕ ಅನೇಕ ಏರ್ಪಾಡುಗಳನ್ನು ಮಾಡಿದನು. ಇವನು ಮಹಮದೀಯರ ಪಾಠಶಾಲೆಗಳನ್ನು ಅನೇಕವಾಗಿ ಸ್ಥಾಪಿಸಿದನು. ಇಂಡಿಯಾ ದೇಶದ ರಾಷ್ಟ್ರೀಯ ಅರಸು ಮಕ್ಕಳಿಗಾಗಿ ಮೇಯೋ ಕಾಲೇಜ್ ಎಂಬ ಒಂದು ಕಲಾಶಾಲೆಯು ಸ್ಥಾಪಿತವಾಯಿತು. ದೊಡ್ಡದೊಡ್ಡ ಊರುಗಳ ಆರೋಗ್ಯ ಮುಂತಾದುವುಗಳನ್ನು ನೋಡಿಕೊಳ್ಳುವುದಕ್ಕೆ ಊರುಗಳಲ್ಲಿಯೇ ಸಭೆಗಳು (Local Self Government) ಏರ್ಪಟ್ಟುವು. ಇವನ ಕಾಲದಲ್ಲಿ ಉಪ್ಪಿನಮೇಲೆ ಹಾಕಿದ್ದ ತೆರಿಗೆಯನ್ನು ತಗ್ಗಿಸಿದ್ದರಿಂದ ಬಡ ಜನರಿಗೆ ಬಹಳ ಸಹಾಯವಾಯಿತು. ಈತನ ಕಾಲದಲ್ಲಿಯೇ ವ್ಯವಸಾಯದ ಇಲಾಖೆಯು ಏರ್ಪಟ್ಟದ್ದಲ್ಲದೆ ಕಾಲುವೆಗಳೂ, ರಸ್ತೆಗಳೂ, ರೈಲು ಮಾರ್ಗಗಳೂ ಹೆಚ್ಚಿಸಲ್ಪಟ್ಟುವು. ಈ ವೈಸರಾಯಿಯು ಅಂದಮಾನ ದ್ವೀಪವನ್ನು ನೋಡುವುದಕ್ಕೆ ಹೋಗಿದ್ದಾಗ ಅಲ್ಲಿ ಬಂಕೊಲ್ ಶಿಕ್ಷೆಯನ್ನು

ಅನುಭವಿಸುತ್ತಿದ್ದ ಷೇರಲ್ಲಿ ಎಂಬೊಬ್ಬ ಪಠಾಣ್ ಖೈದಿಯು ವೈಸರಾಯಿಯನ್ನು ತಿವಿದು ಕೊಂದನು.

೫. ಲಾರ್ಡ್ ನಾರ್ತ್ ಬ್ರೂಕ್ (ಕ್ರಿ. ಶ 1873–76)

1874ರಲ್ಲಿ ಬಂಗಾಳದಲ್ಲಿ ದೊಡ್ಡ ಕ್ಷಾಮವು ತಲೆದೋರಿದಾಗ ಈ ವೈಸರಾಯಿಯು ಜನಗಳಿಗೆ ತುಂಬಾ ಸಹಾಯಮಾಡಿದನು. ಇವನ ಕಾಲದಲ್ಲಿ ಬರೋಡೆಯ ಗಾಯಕವಾಡನ ನಡತೆಯು ಅಸಮರ್ಪಕವಾಗಿದ್ದುದರಿಂದ ಅವನಿಗೆ ರಾಜ್ಯಭ್ರಷ್ಟತೆಯುಂಟಾಗಿ ಈಗಿರುವ ಮಹಾರಾಜ ಸಯಾಜಿರಾವ್ ಗಾಯಕವಾಡರಿಗೆ ಪಟ್ಟವಾಯಿತು. 1875ರಲ್ಲಿ ರಾಣಿಯ ಹಿರೀಮಗನು ಈ ದೇಶಕ್ಕೆ ಬಂದಿದ್ದನು; ಏಳನೆಯ ಎಡ್ವರ್ಡ್ ಎಂಬ ಹೆಸರಿನ ಚಕ್ರವರ್ತಿಯು ಈತನೇ. ಈ ವೈಸರಾಯಿಗೆ ಈ ದೇಶದ ಜನರಲ್ಲಿ ತುಂಬಾ ಪ್ರೇಮವಿದ್ದಿತು. ಈತನು ವರಮಾನದ ತೆರಿಗೆಯನ್ನು ತೆಗೆದುಹಾಕಿ ಈ ದೇಶಕ್ಕೆ ಬರತಕ್ಕ ಸರಕುಗಳಮೇಲೆ ಹಾಕುವ ತೆರಿಗೆಯನ್ನು ತಗ್ಗಿಸಿದನು. ಇದರಿಂದ ಇವನಿಗೂ ವಿಲಾಯತಿಯ ಸರ್ಕಾರಕ್ಕೂ ಮನಸ್ತಾಪ ಹುಟ್ಟಿ ಈತನು 1875ರಲ್ಲಿ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟನು.

೬. ಲಾರ್ಡ್ ಲಿಟ್ಟನ್ (ಕ್ರಿ. ಶ. 1876–80)

ಈ ವೈಸರಾಯಿಯು 1877ರಲ್ಲಿ ಈ ದೇಶದ ರಾಜರುಗಳನ್ನೆಲ್ಲಾ ದೆಹಲಿಯಲ್ಲಿ ಸಭೆ ಸೇರಿಸಿ, ವಿಕ್ಟೋರಿಯಾ ರಾಣಿಯು "ಇಂಡಿಯಾ ಚಕ್ರವರ್ತಿನಿ" ಎಂಬ ಬಿರುದನ್ನು ವಹಿಸಿದಾರೆಂದು ಪ್ರಸಿದ್ಧಪಡಿಸಿದನು. ಇದೇವರ್ಷ ದಕ್ಷಿಣ ದೇಶದಲ್ಲಿ "ಧಾತು, ಈಶ್ವರದ ಕ್ಷಾಮ" ಎಂಬ ದೊಡ್ಡಬರ ಉಂಟಾಗಲು, ಲಕ್ಷಾಂತರ ಪ್ರಜೆಗಳು ಮಡಿದುಹೋದರು.

ಎರಡನೆಯ ಆಫ್ಘನ್ಯುದ್ಧ (ಕ್ರಿ. ಶ. 1878-79)

ಆಫ್ಘನರ ದೊರೆಯಾದ ಷೇರ್ ಅಲ್ಲಿಯು ಇಂಗ್ಲಿಷರನ್ನು ಒಳಗೊಳಗೇ ದ್ವೇಷಿಸುತ್ತಾ ರಷ್ಯಾದವರೊಡನೆ ಸ್ನೇಹ ಬಳೆಸುತ್ತಿದ್ದನು. ಆದುದರಿಂದ ಇಂಗ್ಲಿಷರು ಅವನಮೇಲೆ ಯುದ್ಧಕ್ಕೆ ಹೊರಡಬೇಕಾಯಿತು. ಆ ಯುದ್ಧದಲ್ಲಿ ಷೇರ್ ಅಲ್ಲಿಯು ಸತ್ತುಹೋದುದರಿಂದ,

ಅವನ ಮಗನನ್ನು ಆಫ್ಘನರ ಅಮೀರನೆಂದು ಇಂಗ್ಲಿಷರು ಅಂಗೀಕರಿಸಿದರು. ಬ್ರಿಟಿಷರ ರೆಸಿಡೆಂಟನು ಕಾಬೂಲಿನಲ್ಲಿರಬಹುದೆಂದು ಆತನು ಒಪ್ಪಿಕೊಂಡನು. ಆದರೆ ಸ್ವಲ್ಪ ದಿವಸಗಳಲ್ಲಿಯೇ ಆಫ್ಘನರು ದೊಂಬಿಯೆದ್ದು ರೆಸಿಡೆಂಟನನ್ನು ಕೊಂದುಹಾಕಿದುದರಿಂದ ಇಂಗ್ಲೀಷರು ಮತ್ತೆ ಅವರಮೇಲೆ ಯುದ್ಧಕ್ಕೆ ಹೊರಟರು. ಇಷ್ಟರಲ್ಲಿಯೇ ಲಾರ್ಡ್ ಲಿಟ್ಟನ್ನನು ಕೆಲಸವನ್ನು ಬಿಟ್ಟು ಸೀಮೆಗೆ ಹೊರಟುಹೋದನು.

೭. ಲಾರ್ಡ್ ರಿಪ್ಪನ್ (1880–5)

ಮೂರನೆಯ ಆಫ್ಘನ್ ಯುದ್ಧ (1879-81)

ಈತನು ಎರಡನೆಯ ಆಫ್ಘನ್‌ಯುದ್ಧವನ್ನು ಕೊನೆಗಾಣಿಸುವುದಕ್ಕಾಗಿ ಮುಂದೆ ಲಾರ್ಡ್ ರಾಬರ್ಟ್ಸ್ ಎಂದು ಲೋಕಪ್ರಸಿದ್ಧನಾದ ಸೈನ್ಯಾಧಿಪತಿಯೊಡನೆ ಒಂದು ದೊಡ್ಡ ಸೈನ್ಯವನ್ನು ಕಳುಹಿಸಿದನು. ಈ ಸೈನ್ಯವು ಆಫ್ಘನರನ್ನು ಸೋಲಿಸಿ, ಕಾಬೂಲ್, ಕಾಂದಹಾರ್ ಪಟ್ಟಣಗಳನ್ನು ವಶಮಾಡಿಕೊಂಡಿತು. ತರುವಾಯ ಇಂಗ್ಲಿಷರ ಮಿತ್ರನಾಗಿರುವೆನೆಂದು ವಾಗ್ದಾನಮಾಡಿದ ಅಬ್ದುಲ್‌ರಹಿಮಾನನನ್ನು ಪಟ್ಟಕ್ಕೆ ಕೂರಿಸಿದರು.

ರಿಪ್ಪನ್ನನಿಗೆ ಈ ದೇಶದ ಜನರಲ್ಲಿ ವಿಶೇಷವಾದ ಪ್ರೀತಿಯಿದ್ದಿತು. ಈತನು ಸ್ಥಳೀಯ ವಿಚಾರಗಳಲ್ಲಿ ಜನರಿಗೆ ಅಧಿಕಾರವನ್ನು ಕೊಟ್ಟನು. (Local Self-Government) ಸ್ವರಾಜ್ಯಕ್ಕೆ ಇದೇ ಮುಖ್ಯವಾದ ತಳಹದಿ ಎನ್ನಬಹುದು ; ಮತ್ತು ಮ್ಯುನಿಸಿಪಲ್ ಬೋರ್ಡ್, ಡಿಸ್ಟ್ರಿಕ್ಟು ಬೋರ್ಡುಗಳು ನಿರ್ಮಾಣವಾದುದು ಇಂದಿನಿಂದಲೇ. ಇದೂ ಅಲ್ಲದೆ ದಯಾಳುವಾದ ರಿಪ್ಪನ್ನನು ಲಿಟ್ಟನ್ನಿನ ಕಾಲದಲ್ಲಿ ವರ್ತಮಾನ ಪತ್ರಿಕೆಗಳಿಗೆ ಒದಗಿದ್ದ ನಿರ್ಬಂಧಗಳನ್ನು ತೆಗೆದುಹಾಕಿ ಅವುಗಳಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟನು. ಖಾಸಗಿ ಜನರು ಸ್ಥಾಪಿಸುವ ಪಾಠಶಾಲೆಗಳಿಗೆ ಸಹಾಯದ್ರವ್ಯವನ್ನು ಸರ್ಕಾರದಿಂದ ಕೊಡುವಂತೆ ಈತನು ಏರ್ಪಡಿಸಿದನು. ಇಂಡಿಯಾ ದೇಶಕ್ಕೆ ಬರುವ ಸರಕುಗಳ ಮೇಲೆ ಹಾಕುತ್ತಿದ್ದ ತೆರಿಗೆಯನ್ನು ತೆಗೆದುಹಾಕಿದನು. ದೇಶೀಯ ನ್ಯಾಯಾಧಿಪತಿಗಳು ಫರಂಗಿ ತಪ್ಪಿತಸ್ಥರನ್ನು ವಿಚಾರಣೆ ಮಾಡಬಹುದೆಂದು ಈತನ ಕಾಲದಲ್ಲಿ ತೀರ್ಮಾನವಾಗಿದ್ದಿತು. ಇದು ಫರಂಗಿಯವರಿಗೆ ಸರಿಬೀಳದೆ ಈ ಕಾನೂನನ್ನು ರದ್ದುಮಾಡಿಬಿಟ್ಟರು.

ಮೈಸೂರು ರಾಜ್ಯ

ಹಿಂದೆ 50 ವರುಷಗಳಿಂದಲೂ ಇಂಗ್ಲಿಷರ ಆಡಳಿತಕ್ಕೆ ಒಳಪಟ್ಟ ಮೈಸೂರು ರಾಜ್ಯವು, ಈ ವೈಸ್‌ರಾಯಿಯ ಕಾಲದಲ್ಲಿ, ಪೂರ್ವದ ದೊರೆಗಳಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರವರ ದತ್ತ ಪುತ್ರರಾದ ಚಾಮರಾಜ ಒಡೆಯರವಶಕ್ಕೆ ಬಂದು 1881ರಲ್ಲಿ ಅವರಿಗೇ ಪಟ್ಟವಾಯಿತು. 1884ರಲ್ಲಿ ರಿಪ್ಪನ್ನನು ಸೀಮೆಗೆ ಹೊರಟುಹೋದನು. ಈತನು ಪ್ರಜೆಗಳಿಗೆ ಬಹಳ ಉಪಕಾರಿಯಾಗಿದ್ದುದರಿಂದ ಜನರು ಈಗಲೂ ಈತನನ್ನು ಕೃತಜ್ಞತೆಯಿಂದ ಜ್ಞಾಪಿಸಿಕೊಳ್ಳುವರು.

ಲ. ಲಾರ್ಡ್ ಡಫರಿನ್ ಕ್ರಿ. ಶ. (1884-88)

ಈತನ ಆಡಳಿತ ಕಾಲದಲ್ಲಿ ರಷ್ಯಾದವರು ಆಫ್ಗನ್ ರಾಜ್ಯವನ್ನು ಒತ್ತಿಕೊಂಡು ಬರುವ ಸಂಭವವು ಕಾಣುತ್ತಿತ್ತು. ಆದುದರಿಂದ ಆಫ್ಘಾನಿಸ್ಥಾನದ ಎಲ್ಲೆಕಟ್ಟನ್ನು ನಿರ್ಣಯಪಡಿಸುವುದಕ್ಕಾಗಿ ಡಫರಿನ್ನನು ಪ್ರಯತ್ನಿಸಿದನು. ಇದೇ ಕಾಲದಲ್ಲಿ ಬರ್ಮೀಯರ ದೊರೆಯಾದ ಥೀಬನು ಅಲ್ಲಿದ್ದ ಇಂಗ್ಲಿಷ್ ವರ್ತಕರನ್ನು ಹಿಂಸಿಸುತ್ತಿದ್ದುದರಿಂದ ಇಂಗ್ಲಿಷರು ಅವನಮೇಲೆ ದಂಡೆತ್ತಿಹೋಗಿ ಅವನನ್ನು 1885ರಲ್ಲಿ ಕೈಸೆರೆಹಿಡಿದರು. ಆದುದರಿಂದ ಉತ್ತರಬರ್ಮವೂ 1887ರಲ್ಲಿ ಬ್ರಿಟಿಷರ ಕೈಸೇರಿತು. ಈ ರೀತಿಯಾಗಿ ಇಡೀ ಬರ್ಮಾದೇಶವು ಇಂಗ್ಲಿಷರ ವಶವಾಯಿತು. ಈ ವೈಸ್‌ರಾಯಿಯ ಕಾಲದಲ್ಲಿ ಗ್ವಾಲಿಯರ್ ಪಟ್ಟಣವು ಮತ್ತೆ ಸಿಂಧ್ಯನಿಗೆ ಕೊಡಲ್ಪಟ್ಟಿತು.

ಭರತಭೂಮಿಯ ರಾಷ್ಟ್ರೀಯ ಸಭೆಯ ಸಮ್ಮೇಳನವು (Indian National Congress) 1885ರಲ್ಲಿ ಮೊದಲು ಜರುಗಿತು. ಇದನ್ನು ಸ್ಥಾಪಿಸುವುದಕ್ಕೆ ಎ. ಒ. ಹ್ಯೂಮ್ ಎಂಬ ಇಂಗ್ಲಿಷ್ ಅಧಿಕಾರಿಯೇ ಕಾರಣಭೂತನು. ದೇಶದ ಹಿತಕ್ಕಾಗಿ ಮಾಡಬಹುದಾದ ತಿದ್ದುಪಾಟುಗಳನ್ನು ಬ್ರಿಟಿಷ್ ಇಂಡಿಯಾ ಸರ್ಕಾರಕ್ಕೆ ಸೂಚಿಸುವುದೇ ಈ ಸಭೆಯ ಮುಖ್ಯ ಉದ್ದೇಶವು. ಅಂದಿನಿಂದ ಈ ಸಭೆಯು ಹಿಂದೂದೇಶದ ಪ್ರಧಾನ ಪಟ್ಟಣಗಳಲ್ಲಿ ವರ್ಷಕ್ಕೊಂದುವೇಳೆ ಜರುಗುವುದು.

1882ರಲ್ಲಿ ಹಿಂದೂಸ್ಥಾನದ ಒಂದು ದಂಡಿನ ತುಕ್ಕಡಿಯು ಬ್ರಿಟಿಷ್ ಸೈನ್ಯದ ಸಹಾಯಕ್ಕಾಗಿ ಈಜಿಪ್ಟಿಗೆ ಹೋಗಿದ್ದಿತು. ಬ್ರಿಟಿಷ್ ಸಾಮ್ರಾಜ್ಯಕ್ಕಾಗಿ ಯುದ್ಧಮಾಡಲು ದೇಶೀಯ ಸೈನ್ಯವು ಇಂಡಿಯಾದೇಶವನ್ನು ಬಿಟ್ಟು ಹೋದುದು ಇದೇ ಮೊದಲು. 50 ವರ್ಷಗಳಕಾಲ ಅವಿಚ್ಛಿನ್ನವಾಗಿ ರಾಜ್ಯವಾಳಿದ ವಿಕ್ಟೋರಿಯಾ ರಾಣಿಯ ಜೂಬಿಲಿ ಮಹೋತ್ಸವವು (Golden Jubilee) 1887ರಲ್ಲಿ ನಡೆಯಿತು. ಆಗ ಭಾರತೀಯರು ರಾಣಿಯಲ್ಲಿ ತಮಗಿದ್ದ ಭಕ್ತಿವಿಶ್ವಾಸಗಳನ್ನು ಬಗೆಬಗೆಯಾಗಿ ತೋರಿಸಿದರು.

೯. ಲಾರ್ಡ್ ಲ್ಯಾನ್ಸ್‌ಡೌನ್ (ಕ್ರಿ. ಶ 1888–94)

ಇವನ ಕಾಲದಲ್ಲಿ ಅಸ್ಸಾಮಿನಲ್ಲಿರುವ ಮಣಿಪುರವೆಂಬ ಚಿಕ್ಕ ಸಂಸ್ಥಾನದ ದೊರೆಯು ದಂಗೆಯೆದ್ದು ಅಸ್ಸಾಮಿನ ಚೀಫ್ ಕಮಿಷನರನ್ನು ಕೊಲ್ಲಿಸಿದನು. ಆಗ ವೈಸ್‌ರಾಯಿಯು ಆ ದೇಶಕ್ಕೆ ಒಂದು ಸೈನ್ಯವನ್ನು ಕಳುಹಿಸಿ ಮಣಿಪುರವನ್ನು ಇಂಗ್ಲಿಷರ ವಶಮಾಡಿಕೊಂಡು ದೊರೆಯನ್ನು ಗಡೀಪಾರು ಮಾಡಿಸಿದನು. ಬೆಲೂಚಿಸ್ಥಾನಕ್ಕೂ ಇಂಗ್ಲಿಷರ ಅಧಿಕಾರವು ವ್ಯಾಪಿಸಿತು. ಹಿಂದೂದೇಶಕ್ಕೆ ಭೂಮಾರ್ಗದಲ್ಲಿ ಬಾಗಲಾಗಿರುವ ವಾಯುವ್ಯಪ್ರಾಂತದ ಕಾವಲಿಗಾಗಿ ಬಹಳ ಸೈನ್ಯವನ್ನು ಇಡಲಾರಂಭಿಸಿದುದು ಈ ವೈಸ್‌ರಾಯಿಯ ಕಾಲದಿಂದಲೇ. ಅವಶ್ಯಕವಿದ್ದರೆ ಸೈನ್ಯವನ್ನು ಅತಿ ತ್ವರೆಯಿಂದ ಅಲ್ಲಿಗೆ ಸಾಗಿಸುವುದಕ್ಕಾಗಿ ವಾಯುವ್ಯಮೂಲೆಯ ಕಡೆಗೆ ಅನೇಕ ರೈಲುಮಾರ್ಗಗಳೂ ತಯಾರಾದುವು.

1892ರಲ್ಲಿ ಇಂಡಿಯಾ ಕೌನ್ಸಿಲ್ ಆಕ್ಟ್ ಎಂಬ ಸುಧಾರಣೆಯು ಜಾರಿಗೆ ಬಂದಿತು. ಇದುವರೆಗೂ ಕಲ್ಕತ್ತಾ, ಮದರಾಸು, ಬೊಂಬಾಯಿ ಈ ಆಧಿಪತ್ಯಗಳ ನ್ಯಾಯನಿರ್ಮಾಣಕ ಸಭೆಗಳಲ್ಲಿ ಸರ್ಕಾರದಿಂದ ಆರಿಸಿದ ಸಭ್ಯರೇ ಇರುತ್ತಿದ್ದರು. ಇನ್ನುಮುಂದೆ ಮ್ಯುನಿಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡ್, ವಿಶ್ವವಿದ್ಯಾನಿಲಯಗಳು ಇವೇ ಮೊದಲಾದ ಸಂಸ್ಥೆಗಳವರು ಚುನಾಯಿಸಿದ ಪ್ರತಿನಿಧಿಗಳು ನ್ಯಾಯನಿರ್ಮಾಣಕ ಸಭೆಗಳಿಗೆ ಬರಬಹುದೆಂದು ವಿಧಾಯಕವಾಯಿತು. ಈ ರೀತಿಯಾಗಿ ಈ ಸಭೆಗಳ ಸದಸ್ಯರ ಸಂಖ್ಯೆಯೂ ಹೆಚ್ಚಲಾಯಿತು.

೧೦. ಎರಡನೆಯ ಲಾರ್ಡ್ ಎಲ್ಗಿನ್ (ಕ್ರಿ. ಶ. 1894-99)

ಇವನ ಕಾಲದಲ್ಲಿ ವಾಯವ್ಯದ ಮೂಲೆಯಲ್ಲಿರುವ ಚಿತ್ರಾಲ್ ಪ್ರಾಂತದಲ್ಲಿ ದಂಗೆಯುಂಟಾಗಿ ಅಲ್ಲಿಯವರು ನಮ್ಮ ದೇಶದ ಮೇಲೆ ನುಗ್ಗಿ ಬರಲು ಯತ್ನಿಸಿದುದರಿಂದ ಅವರಮೇಲೆ ಯುದ್ಧ ನಡೆಯಿತು. ಈತನ ಆಡಳಿತದ ಕಾಲದಲ್ಲಿ ಜನಗಳಿಗೆ ಅನೇಕ ತೊಂದರೆಗಳು ಸಂಭವಿಸಿದುವು. ದೇಶದಲ್ಲೆಲ್ಲಾ ಪ್ಲೇಗು, ಕ್ಷಾಮ, ಭೂಕಂಪ ಮೊದಲಾದುವುಗಳು ತಲೆದೋರಿದುವು.

ವಿಕ್ಟೋರಿಯಾ ರಾಣಿಯ ಆಳಿಕೆಯು ಪ್ರಾರಂಭವಾಗಿ ಅರವತ್ತು ವರ್ಷಗಳು 1897ಕ್ಕೆ ಮುಗಿದುದರಿಂದ ಅದರ ಸಂತೋಷಾರ್ಥವಾಗಿ ಡೈಮಂಡ್ ಜೂಬಿಲಿ ಎಂಬ ಮಹೋತ್ಸವವು ನಡೆಯಿತು.

೧೧. ಲಾರ್ಡ್ ಕರ್ಜನ್ (ಕ್ರಿ. ಶ. 1899-905)

ಈತನು ವೈಸ್‌ರಾಯಿಯಾಗಿ ಬಂದೊಡನೆಯೇ, ಹಿಂದೂದೇಶದ ವಾಯವ್ಯದ ಮೂಲೆಯನ್ನು ಬಹಳ ಭದ್ರಪಡಿಸಬೇಕೆಂದು, ಪಂಜಾಬಿನ ಪಶ್ಚಿಮಭಾಗವನ್ನೇ ಬೇರೆಮಾಡಿ ಅದಕ್ಕೆ "ವಾಯವ್ಯದ ಗಡೀಪ್ರಾಂತ" (North Western Frontier Province) ಎಂಬ ಹೆಸರಿಟ್ಟು ಅದನ್ನು ಒಬ್ಬ ಸೈನ್ಯಾಧಿಪತಿಯ ಅಧೀನದಲ್ಲಿಟ್ಟನು; ಬೀರಾರ್ ದೇಶವು ಮಧ್ಯ ಪ್ರಾಂತಗಳೊಂದಿಗೆ ಸೇರಿತು; ಬಂಗಾಳ ಆಧಿಪತ್ಯವನ್ನು ಎರಡು ಭಾಗ ಮಾಡಿ "ಪೂರ್ವಬಂಗಾಳ ಮತ್ತು ಅಸ್ಸಾಂ" ಎಂಬ ಹೊಸ ಪ್ರಾಂತವನ್ನು 1905ರಲ್ಲಿ ಕಲ್ಪಿಸಿದನು. ಈ ರೀತಿಯಾದ ವಿಭಾಗವು ಬಂಗಾಳೀ ಜನಗಳಿಗೆ ತುಂಬಾ ಅಸಮಾಧಾನವುಂಟುಮಾಡಿತು.

1902ರಲ್ಲಿ ನಮ್ಮನ್ನಾಳುತ್ತಿರುವ ಶ್ರೀ ಕೃಷ್ಣರಾಜ ಒಡೆಯರವರು ಪ್ರಾಪ್ತವಯಸ್ಕರಾದುದರಿಂದ ಈ ವೈಸರಾಯಿಯು ಮೈಸೂರುದೇಶಕ್ಕೆ ಬಂದು ನಮ್ಮ ದೊರೆಗಳಿಗೆ ರಾಜ್ಯಭಾರವನ್ನು ವಹಿಸಿಕೊಟ್ಟನು. 1901 ರಲ್ಲಿ ವಿಕ್ಟೋರಿಯಾ ರಾಣಿಯು ಕಾಲವಾದಮೇಲೆ ಏಳನೆಯ ಎಡ್ವರ್ಡನು ಪಟ್ಟಕ್ಕೆ ಬಂದನು. ಈ ಕಿರೀಟಧಾರಣೆಯ ಸೂಚನಾರ್ಥವಾಗಿ ಚಕ್ರವರ್ತಿಯ ಪ್ರತಿನಿಧಿಯಾದ ಲಾರ್ಡ್ ಕರ್ಜನ್ನನೇ ಮುಂದೆನಿಂತು ದೇಶದ ರಾಜರನ್ನೆಲ್ಲಾ ಸಭೆಸೇರಿಸಿ 1903ರಲ್ಲಿ ದೆಹಲಿಯಲ್ಲಿ ಒಂದು ದರ್ಬಾರನ್ನು ನಡೆಸಿದನು.

ತಿಬೆಟ್ ದೇಶವನ್ನಾಳುತ್ತಿದ್ದ ದಲಾಯಿಲಾಮನು ವಿರೋಧಭಾವದಿಂದ ಇಂಗ್ಲಿಷರ ವ್ಯಾಪಾರಕ್ಕೆ ಅಡ್ಡಿಮಾಡಿ, ಅವರಮೇಲೆ ಯುದ್ಧಮಾಡುವುದಕ್ಕಾಗಿ ರಷ್ಯಾ ದೇಶದವರ ಸಹಾಯವನ್ನಪೇಕ್ಷಿಸಿದನು. ಇದರಿಂದ ಪ್ರಮಾದ ಪರಿಣಾಮಗಳುಂಟಾಗುವ ಸಂಭವವಿದ್ದುದರಿಂದ ಒಂದು ಇಂಗ್ಲಿಷ್ ಸೈನ್ಯವು ಆ ದೇಶದಮೇಲೆ ಹೋಗಿ ಲ್ಹಾಸ್ಸಾ ಪಟ್ಟಣವನ್ನು ವಶಮಾಡಿಕೊಂಡಿತು. ದಲಾಯಿಲಾಮನು ಓಡಿಹೋದನು. ಆ ಮೇಲೆ ಅವನ ಉತ್ತರಾಧಿಕಾರಿಯು ಇಂಡಿಯಾಕ್ಕೂ ತಿಬೆಟ್ಟಿಗೂ ಸರಾಗವಾಗಿ ವ್ಯಾಪಾರ ನಡೆಯುವುದಕ್ಕೆ ಏರ್ಪಾಡುಮಾಡುವುದಾಗಿ ಒಪ್ಪಿಕೊಂಡನು.

ಈ ವೈಸ್‌ರಾಯಿಯು ಉಪ್ಪಿನಮೇಲೆ ಹಾಕಿದ್ದ ತೆರಿಗೆಯನ್ನು ಮತ್ತಷ್ಟು ತಗ್ಗಿಸಿದನು. ಇದರಿಂದ ಬಡವರಿಗೆ ದೊಡ್ಡ ಉಪಕಾರವಾಯಿತು. ದೇಶೀಯ ರಾಜಕುಮಾರರಿಗೆ ಯುದ್ಧಕಲೆಯನ್ನು ಕಲಿಸಲು "ಇಂಪೀರಿಯಲ್ ಕೆಡೆಟ್‌ಕೋರ್" ಎಂಬ ಸಂಸ್ಥೆಯನ್ನು ಸ್ಥಾಪಿಸಿದವನು ಈತನೇ. ಈತನು ಪುರಾತನ ದೇವಾಲಯಗಳನ್ನೂ ಮಸೀತಿಗಳನ್ನೂ ಜೀರ್ಣೋದ್ಧಾರಮಾಡಿದನು.

ಇಷ್ಟಾದರೂ ಈ ವೈಸ್‌ರಾಯಿಯು ವಿದ್ಯಾಭ್ಯಾಸ ವಿಷಯದಲ್ಲಿ ಮಾಡಿದ ಮಾರ್ಪಾಡುಗಳೂ, ಬಂಗಾಳವನ್ನು ಎರಡಾಗಿ ಒಡೆದುದೂ, ಇನ್ನೂ ಕೆಲವು ಕಾರಣಗಳೂ, ಈ ದೇಶೀಯರಿಗೆ ಈತನಲ್ಲಿ ವಿಶೇಷ ಅಸಮಾಧಾನವನ್ನುಂಟುಮಾಡಿದುವು. ಕೆಲವು ರಾಜಕೀಯ ವಿಷಯಗಳಲ್ಲಿ ಈತನಿಗೂ, ಸೆಕ್ರಿಟೆರಿ ಆಫ್ ಸ್ಟೇಟಿಗೂ ಮನಸ್ತಾಪ ಹುಟ್ಟಿದುದರಿಂದ ಈತನು 1905ರಲ್ಲಿ ತನ್ನ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟನು.

೧೨. ಎರಡನೆಯ ಲಾರ್ಡ್ ಮಿಂಟೋ (ಕ್ರಿ. ಶ. 1906–10)

ಕರ್ಜನ್ನಿನ ಮೇಲಿನ ದ್ವೇಷದಿಂದ ದೇಶದಲ್ಲಿ ಅಲ್ಲಲ್ಲಿ ಗಲಭೆಗಳಾಗುತ್ತಿದ್ದುವು. ಮಿಂಟೋವು ವಿವೇಕದಿಂದಲೂ ಶಾಂತತೆಯಿಂದಲೂ ಆಡಳಿತಗಳನ್ನು ನಡೆಸಿ, ಅವುಗಳನ್ನೆಲ್ಲಾ ನಿಲ್ಲಿಸಿದನು. 1909ರಲ್ಲಿ ಇಂಡಿಯಾ ಕೌನ್ಸಿಲ್ ಆಕ್ಟ್ ಎಂಬುದು ಮತ್ತೆ ಆಚರಣೆಗೆ ಬಂದಿತು. ಇದರಂತೆ ಗವರ್ನರ್ ಮತ್ತು ವೈಸ್‌ರಾಯಿಯರ "ಎಗ್ಸಿಕ್ಯೂಟಿವ್ ಕೌನ್ಸಿಲ್" ಎಂಬ ಕಾರ್ಯನಿರ್ವಾಹಕ ಸಭೆಗೂ, "ಲೆಜಿಸ್ಲೆಟಿವ್ ಕೌನ್ಸಿಲ್"

ಎಂಬ ನ್ಯಾಯನಿರ್ಮಾಣಕ ಸಭೆಗೂ ಬರತಕ್ಕ ಸಭ್ಯರ ಸಂಖ್ಯೆಯು ಮೊದಲಿಗಿಂತಲೂ ಹೆಚ್ಚಾಯಿತು. ಇದರಲ್ಲಿ ಜನರೇ ಚುನಾಯಿಸತಕ್ಕ ಪ್ರತಿನಿಧಿಗಳ ಸಂಖ್ಯೆಯು ಅರ್ಧದಷ್ಟಿರಬೇಕೆಂದು ನಿರ್ಣಯವಾಯಿತು. ಇಂಡಿಯಾ ದೇಶದ ಆಡಳಿತದ ಮೇಲ್ವಿಚಾರಣೆಗಾಗಿ ಲಂಡನ್ನಿನಲ್ಲಿರುವ "ಸೆಕ್ರಿಟೆರಿ ಆಫ್ ಸ್ಟೇಟ್" ಎಂಬ ಸಚಿವರ ಮಂತ್ರಾಲೋಚನಾ ಸಭೆಗೆ ಒಬ್ಬ ಹಿಂದೂ, ಒಬ್ಬ ಮುಸಲ್ಮಾನ್ ಸಭ್ಯರನ್ನು ನೇಮಿಸಿದರು. ಇದರಿಂದ ಪ್ರಜೆಗಳ ಅಭಿಪ್ರಾಯಗಳು ಸರ್ಕಾರಕ್ಕೆ ಚೆನ್ನಾಗಿ ತಿಳಿಯುವುದಕ್ಕೂ, ಇನ್ನುಮುಂದೆ ಜನರ ಇಷ್ಟವನ್ನನುಸರಿಸಿ ರಾಜಕಾರ್ಯಗಳನ್ನು ನಡೆಸುವುದಕ್ಕೂ ಅನುಕೂಲವಾಯಿತು. ಮೇಲೆ ಹೇಳಿದ ಸುಧಾರಣೆಗಳೆಲ್ಲವೂ ಆ ಕಾಲದಲ್ಲಿ ಸೆಕ್ರಿಟೆರಿ ಆಫ್ ಸ್ಟೇಟ್ ಆಗಿದ್ದ ಲಾರ್ಡ್ ಮೋರ್ಲೆಯವರ ಸಹಾಯದಿಂದ ಏರ್ಪಟ್ಟುವಾದುದರಿಂದ ಇವುಗಳಿಗೆ "ಮೋರ್ಲೆ–ಮಿಂಟೋ ಸುಧಾರಣೆಗಳು" (Morley-Minto Reforms) ಎಂದು ಹೆಸರಾಗಿದೆ.

ಈ ವೈಸ್‌ರಾಯಿಯ ಕಾಲದಲ್ಲಿ ಅಫ್ಘಾನಿಸ್ಥಾನದ ಅಮೀರನೂ, ಆಗ ಪ್ರಿನ್ಸ್ ಆಫ್ ವೇಲ್ಸ್‌ರಾಗಿದ್ದ ಜಾರ್ಜರವರೂ ಇಂಡಿಯಾಕ್ಕೆ ಬಂದಿದ್ದರು. ಮಿಂಟೋವು ಕಾಶೀ ರಾಜ್ಯವನ್ನು ಪುನಃ ಅಲ್ಲಿಯ ರಾಜನ ವಶಕ್ಕೆಕೊಡುವ ಏರ್ಪಾಟುಮಾಡಿ ಸೀಮೆಗೆ ಹೊರಟುಹೋದನು.

೧೩ ಎರಡನೆಯ ಲಾರ್ಡ್ ಹಾರ್ಡಿಂಗ್ (ಕ್ರಿ. ಶ 1910–16)

1910ರಲ್ಲಿ ಎಡ್ವರ್ಡ್ ಚಕ್ರವರ್ತಿಯು ಕಾಲವಾದುದರಿಂದ, ಅವರ ಜ್ಯೇಷ್ಠಪುತ್ರರಾದ ಐದನೆಯ ಜಾರ್ಜರು ಚಕ್ರವರ್ತಿಗಳಾದರು. ಇಂಡಿಯಾ ದೇಶದ ಜನರಿಗೆ ತಮ್ಮಲ್ಲಿ ಅನುರಾಗ ಹೆಚ್ಚಲೆಂದು, ಸಾರ್ವಭೌಮರೂ, ಚಕ್ರವರ್ತಿನಿಯವರೂ 1911ರಲ್ಲಿ ಇಂಡಿಯಾಕ್ಕೆ ಬಂದು ದೆಹಲಿಯಲ್ಲಿ ತಾವೇ ಒಂದು ದರ್ಬಾರನ್ನು ನಡೆಸಿದರು. ಬ್ರಿಟಿಷ್ ಚಕ್ರವರ್ತಿಗಳು ಈ ದೇಶಕ್ಕೆ ಬಂದು ಪ್ರಜೆಗಳ ಸಮ್ಮುಖದಲ್ಲಿ ರಾಜ್ಯಾಭಿಷಿಕ್ತರಾದುದು ಇದೇ ಮೊದಲು.

ಹಾರ್ಡಿಂಗನ ಕಾಲದಲ್ಲಿ ಜನಸಮ್ಮತವಾದ ಕೆಲವು ಏರ್ಪಾಟುಗಳಾದುವು. ಕರ್ಜನ್ನಿನ ಕಾಲದಲ್ಲಿ ವಿಭಾಗವಾಗಿದ್ದ ಬಂಗಾಳವು ಪುನಃ

ಒಂದೇ ಆಧಿಪತ್ಯವಾಯಿತು ; ಬಿಹಾರ, ಒರಿಸ್ಸ ಪ್ರಾಂತಗಳಿಗೆ ಒಬ್ಬ ಲೆಫ್ಟಿನೆಂಟ್ ಗವರ್ನರೂ, ಅಸ್ಸಾಮಿಗೆ ಒಬ್ಬ ಚೀಫ್‌ಕಮಿಷನರೂ ಇರುವಂತೆ ಗೊತ್ತಾಯಿತು. ಕಲ್ಕತ್ತೆಗೆ ಪ್ರತಿಯಾಗಿ, ಪುರಾಣಗಳ ಕಾಲದಿಂದಲೂ ಭರತಭೂಮಿಗೆ ರಾಜಧಾನಿಯಾಗಿದ್ದು ಹಿಂದೂಸ್ಥಾನದ ಮಧ್ಯರಾಷ್ಟ್ರದಲ್ಲಿರುವ ದೆಹಲಿ ನಗರವೇ ಇಂಡಿಯಾ ದೇಶಕ್ಕೆ ಪುನಃ ರಾಜಧಾನಿಯಾಯಿತು. ಹಾರ್ಡಿಂಗನು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಕೊಡುವ ಉದ್ದೇಶದಿಂದ ರಂಗೂನ್, ಪಾಟ್ನಾ, ಡಾಕ್ಕಾ ಮೈಸೂರು, ಕಾಶಿ ಮೊದಲಾದ ಸ್ಥಳಗಳಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದಕ್ಕೆ ತುಂಬಾ ಸಹಾಯ ಮಾಡಿದನು.

1914ರಲ್ಲಿ ಯೂರೋಪಿನಲ್ಲಿ ಇಂಗ್ಲಿಷರಿಗೂ ಜರ್ಮನರಿಗೂ ಒಂದು ಘೋರಯುದ್ಧವು ಪ್ರಾರಂಭವಾಯಿತು. ಆ ಕಾಲದಲ್ಲಿ ಬ್ರಿಟಿಷ್ ಇಂಡಿಯಾ ಸರ್ಕಾರದವರೂ, ಆಶ್ರಿತರಾಜರೂ, ಪ್ರಜೆಗಳೂ, ತಾವಾಗಿ ಮುಂದರಿದು ಇಂಗ್ಲಿಷರಿಗೆ ನಾನಾ ರೀತಿಗಳಲ್ಲಿ ಸಹಾಯಮಾಡಿದರು. 1916ರಲ್ಲಿ ಹಾರ್ಡಿಂಗನು ಸೀಮೆಗೆಹೋದನು. ಈತನಿಗೆ ನಮ್ಮ ದೇಶದ ಜನರಲ್ಲಿ ತುಂಬಾ ಪ್ರೀತಿ ಇದ್ದಿತು. ಆದುದರಿಂದ ಈತನನ್ನು ಬೆಂಟಿಂಕ್, ಕ್ಯಾನ್ನಿಂಗ್ ರಿಪ್ಪನ್, ಮೊದಲಾದ ಇಂಡಿಯಾ ಹಿತೈಷಿಗಳ ಗುಂಪಿಗೆ ಸೇರಿಸಬಹುದು.

(೧೪) ಲಾರ್ಡ್ ಚೆಲ್ಮ್ಸ್‌ಫರ್ಡ್ (ಕ್ರಿ. ಶ. 1916–21)

ಈತನು ವೈಸ್‌ರಾಯಿಯಾಗಿ ಬಂದಾಗ ಜರ್ಮನ್ ಯುದ್ಧವು ನಡೆಯುತ್ತಲೇ ಇದ್ದಿತು. ಆದುದರಿಂದ ಈತನು ಯೂರೋಪಿನಲ್ಲಿ ಯುದ್ಧ ಮಾಡುತ್ತಿದ್ದ ಸೈನಿಕರ ಉಪಯೋಗಕ್ಕಾಗಿ ನಮ್ಮ ದೇಶದಿಂದ ಬೇಕಾದ ಪದಾರ್ಥಗಳನ್ನು ಒದಗಿಸಿಕೊಡುತ್ತಲಿದ್ದನು. ಕಡೆಗೆ ಯುದ್ಧವು 1918 ರಲ್ಲಿ ಕೊನೆಗಂಡಿತು.

ನಾಲ್ಕನೆಯ ಅಫ್ಘನ್‌ಯುದ್ಧ

1919ರಲ್ಲಿ ಆಫ್ಘನ್ ದೇಶಕ್ಕೆ ಒಬ್ಬ ಹೊಸ ಅಮೀರನು ದೊರೆಯಾದನು. ಈತನಿಗೂ ಬ್ರಿಟಿಷರಿಗೂ ಸರಿಬೀಳದೆ ಯುದ್ಧಕ್ಕೆ ಮೊದ

ಲಾಯಿತು. ಇಷ್ಟರಲ್ಲಿಯೇ ರಷ್ಯಾದವರು ಮಧ್ಯ ಏಷ್ಯದಲ್ಲಿ ಪ್ರಬಲರಾದುದರಿಂದ ಬ್ರಿಟಿಷರಿಗೂ, ಆಫ್ಘನರಿಗೂ ಭಯವುಂಟಾಗಿ ಅವರಿಬ್ಬರೂ ಪರಸ್ಪರಸಹಾಯ ಮಾಡಬೇಕೆಂದೂ, ಆಫ್ಘನರು ಸ್ವತಂತ್ರರೆಂದೂ ತೀರ್ಮಾನವಾಯಿತು.

ಮಾಂಟೆಗೂ ತಿದ್ದುಪಾಟುಗಳು

ಈಚೆಗೆ ಕೆಲವು ವರ್ಷಗಳಿಂದಲೂ ಇಲ್ಲಿನ ಜನರಿಗೆ ಬ್ರಿಟಿಷರ ರಾಜ್ಯಭಾರದಲ್ಲಿ ಸ್ವಲ್ಪ ಅಸಮಾಧಾನವು ತಲೆದೋರುತ್ತಿತ್ತು. ಇಷ್ಟಾದರೂ ಅವರು ಬ್ರಿಟಿಷ್ ಜನಾಂಗದ ಕ್ಷೇಮಕ್ಕಾಗಿ ಘೋರವಾದ ಜರ್ಮನ್ ಯುದ್ಧದಲ್ಲಿ ಬೇಕಾದಷ್ಟು ಸಹಾಯಮಾಡಿದರು. ಇದಕ್ಕೆ ಪ್ರತಿಫಲವನ್ನು ಕೊಡಬೇಕೆಂಬ ಉದ್ದೇಶದಿಂದ ಪಾರ್ಲಿಮೆಂಟಿನಲ್ಲಿ ಹಿಂದೂಸ್ಥಾನದ ರಾಜಕೀಯ ಸಚಿವನಾದ (Secretary of State for India) ಮಾಂಟೆಗೂ ಎಂಬಾತನೂ, ವೈಸ್‌ರಾಯಿಯೂ ಕಲೆತು ರಾಜಕೀಯ ವಿಷಯಗಳಲ್ಲಿ ಕೆಲವು ಮಾರ್ಪಾಡುಗಳನ್ನು ಗೌರ್ನಮೆಂಟ್ ಆಫ್ ಇಂಡಿಯಾ ಆಕ್ಟ್ ಎಂಬ ಅಭಿದಾನದಿಂಡ 1919ರಲ್ಲಿ ಜಾರಿಗೆ ತಂದರು. ಇದಕ್ಕೆ ಪೂರ್ವಭಾವಿಯಾಗಿ ಇಲ್ಲಿಯ ಸ್ಥಿತಿಗತಿಗಳನ್ನು ಕಣ್ಣಾರೆ ನೋಡುವುದಕ್ಕಾಗಿ ಮಾಂಟೆಗೂವು ತಾನೇ ಈ ದೇಶಕ್ಕೆ ಬಂದಿದ್ದನು.

ಈ ತಿದ್ದುಪಾಟುಗಳಿಂದ ಗವರ್ನರುಗಳ ಸಹಾಯಕ್ಕಾಗಿ ಪ್ರತಿಪ್ರಾಂತದಲ್ಲೂ ಪ್ರಾಂತಿಕ ಪ್ರತಿನಿಧಿಸಭೆಗಳು ಸ್ಥಾಪಿತವಾದುವು. ಈ ಸಭೆಗಳ ಸದಸ್ಯರನ್ನು ಪ್ರಜೆಗಳೇ ಚುನಾಯಿಸುವರು. ಆಯಾಪ್ರಾಂತದ ವಿದ್ಯಾಭ್ಯಾಸ, ಸ್ಥಳೀಯ ಸರ್ಕಾರ, ಕೈಗಾರಿಕೆ ಮತ್ತು ವ್ಯವಸಾಯ ಈ ಖಾತೆಗಳ ಸ್ವತಂತ್ರಾಧಿಕಾರವನ್ನು ಈ ಸದಸ್ಯರಿಗೆ ವಹಿಸಲಾಯಿತು. ಸಭೆಯಪರವಾಗಿ ಈ ಅಧಿಕಾರವನ್ನು ನಿರ್ವಹಿಸತಕ್ಕ ಅಧಿಕಾರಿಗಳಿಗೆ '' ಸಚಿವ '' ಎಂದು ಹೆಸರಾಯಿತು. ಉಳಿದ ಖಾತೆಗಳು '' ಅಧೀನ ವಿಚಾರ '' ಗಳೆಂಬ ಹೆಸರಿನಿಂದ ಪ್ರಾಂತಾಧಿಕಾರಿಗಳ ವಶದಲ್ಲೇ ಇದ್ದುವು.

ಈ ತಿದ್ದುಪಾಟುಗಳು ಆಚರಣೆಗೆ ಬಂದೊಡನೆಯೇ ಚೆಲ್ಮ್ಸ್‌ಫರ್ಡ್‌ನು ಸೀಮೆಗೆ ಹೊರಟುಹೋದನು. ಈತನ ಕಾಲದಲ್ಲಿ ಜನಗಳಿಗೆ ನೆಮ್ಮದಿ ಇರಲಿಲ್ಲ. ದೇಶದಲ್ಲೆಲ್ಲಾ ಹಾಹಾಕಾರ ಹುಟ್ಟಿತು.

ಅದನ್ನೆಲ್ಲಾ ತಪ್ಪಿಸಿ ದೇಶದಲ್ಲಿ ಶಾಂತತೆಯನ್ನು ನೆಲೆಗೊಳಿಸುವುದಕ್ಕಾಗಿ ಲಾರ್ಡ್ ರೀಡಿಂಗ್ ಎಂಬ ಪ್ರಸಿದ್ಧ ನ್ಯಾಯಾಧೀಶನನ್ನು ವೈಸ್‌ರಾಯಿ ಪದವಿಗೆ ನೇಮಿಸಿದರು.

೧೫ ಲಾರ್ಡ್ ರೀಡಿಂಗ್ (ಕ್ರಿ. ಶ. 1921-26)

ಈತನು ಬಂದಾಗ ಜನರ ಹಾಹಾಕಾರವು ಇನ್ನೂ ತಪ್ಪಿರಲಿಲ್ಲ. ಮಲೆಯಾಳದಲ್ಲಿ ಮಾಪಿಳ್ಳೆಯರೆಂಬ ಮುಸಲ್ಮಾನರು ದಂಗೆಯೆದ್ದು ಅನೇಕ ಕೊಲೆಗಳನ್ನು ನಡೆಸಿದರು. ಕೂಡಲೆ ಬ್ರಿಟಿಷರ ದಂಡು ಹೊರಟು, ಆ ದೊಂಬಿಯನ್ನಡಗಿಸಿತು. ಆದರೂ ಜನರ ಮನಸ್ಸಿನಲ್ಲಿದ್ದ ಅಸಮಾಧಾನವು ಮಾತ್ರ ಹೋಗಲಿಲ್ಲ. ರಾಜ್ಯಾಡಳಿತದಲ್ಲಿ ತಮಗೆ ಹೆಚ್ಚು ಅವಕಾಶ ಕೊಟ್ಟು, ತಾವು ಹೇಳಿದಂತೆ ಸರ್ಕಾರದವರು ನಡೆಯುವವರೆಗೂ ಜನರು ಸರ್ಕಾರದವರಿಗೆ ಯಾವಬಗೆಯ ಸಹಾಯವನ್ನೂ ಮಾಡಕೂಡದೆಂದು ಅನೇಕರು ಬೋಧಿಸಲಾರಂಭಿಸಿದರು. ಮಹಾತ್ಮಗಾಂಧಿಯೆಂಬವರೇ ಈ ಬೋಧನೆಗೆ ಕಾರಣರೆಂದು ತಿಳಿದು ಅವರನ್ನು ಕಾರಾಗೃಹದಲ್ಲಿಟ್ಟರು. ಇದರಿಂದ ಜನಗಳ ಮನಸ್ಸಿನಲ್ಲಿದ್ದ ಅಸಮಾಧಾನವು ಇನ್ನಷ್ಟು ಹೆಚ್ಚಿತು. ಇದೇ ಸಮಯಕ್ಕೆ ಉಪ್ಪಿನಮೇಲೆ ಹಾಕುತ್ತಿದ್ದ ತೆರಿಗೆಯನ್ನು ಹೆಚ್ಚಿಸಿದ್ದಲ್ಲದೆ, ದೇಶದಲ್ಲಿ ತಯಾರಾದ ಹತ್ತಿಯ ಬಟ್ಟೆಗಳಮೇಲೆ ಸುಂಕವನ್ನೂ ಹಾಕಿದರು. ಈ ಕಾರಣಗಳಿಂದ ರೀಡಿಂಗನ ಆಳಿಕೆಯು ಜನರಿಗೆ ಒಪ್ಪಿಗೆಯಾಗಲಿಲ್ಲ. ಈತನು ಕೆಲಸದಿಂದ ನಿವೃತ್ತನಾದಮೇಲೆ ಲಾರ್ಡ್ ಇರ್ವಿನ್ ಎಂಬುವರು ವೈಸ್‌ರಾಯಿ ಪದವಿಗೆ ಬಂದಿರುವರು.

ಈ ನಡುವೆ ಬ್ರಿಟಿಷ್ ಯುವರಾಜರು 1922ರಲ್ಲಿ ಹಿಂದೂದೇಶಕ್ಕೆ ದಯಮಾಡಿಸಿದ್ದರು.

ಅಧ್ಯಾಯ ೧೦—ಪ್ರಜಾಧರ್ಮ (Civics)

೧ನೆಯ ಭಾಗ—ಸರ್ಕಾರವೂ, ಅದರ ಕರ್ತವ್ಯಗಳೂ

ಸರ್ಕಾರದ ಆವಶ್ಯಕತೆ—ನೀವು ವಾಸಮಾಡುವ ಇಂಡಿಯಾ ದೇಶದಲ್ಲಿ ಹಿಂದೂ ಆರ್ಯರು, ಮಹಮ್ಮದೀಯರು, ಮೊಗಲರು, ಮರಾಟೆಯವರು ಮತ್ತು ಇಂಗ್ಲಿಷರು ಕ್ರಮವಾಗಿ ರಾಜ್ಯಗಳನ್ನು ಕಟ್ಟಿ ಹೇಗೆ ಆಳಿದರೆಂಬುದನ್ನೂ, ಕಡೆಗೆ ಇಂಗ್ಲಿಷರೇ ದೇಶೀಯರಾಜರನ್ನೆಲ್ಲಾ ಗೆದ್ದು ಹೇಗೆ ಇಂಡಿಯಾ ಚಕ್ರಾಧಿಪತ್ಯಕ್ಕೆಲ್ಲಾ ಅಧಿಪತಿಗಳಾದರೆಂಬುದನ್ನೂ ಓದಿರುತ್ತೀರಿ. ಹಿಂದೆ ಆಳಿದ ದೊರೆಗಳಲ್ಲಿ ಶ್ರೀರಾಮ, ಅಶೋಕ, ಅಕ್ಬರ್, ಶಿವಾಜಿ ಮೊದಲಾದವರು ತಮ್ಮ ಸದ್ಗುಣ ಪರಾಕ್ರಮಗಳಿಂದ ವಿಸ್ತಾರವಾದ ರಾಜ್ಯಗಳನ್ನಾಳಿದರು. ಇವರ ಆಳ್ವಿಕೆಯಲ್ಲಿ ಪ್ರಜೆಗಳು ತಮಗೆ ಬೇಕಾದ ಸೌಕರ್ಯಗಳನ್ನು ಪಡೆದು, ನೆಮ್ಮದಿಯಾಗಿ ಬಾಳುತ್ತಾ, ರಾಜನಿಗೆ ಒತ್ತಾಸೆಯಾಗಿದ್ದರು. ಇನ್ನು ಕೆಲವು ರಾಜರು ಅವಿವೇಕಿಗಳಾಗಿಯೂ, ಬಲಹೀನರಾಗಿಯೂ ಇದ್ದುದರಿಂದ ಅವರಕಾಲದಲ್ಲಿ ಪ್ರಜೆಗಳು ವಿಧವಿಧವಾದ ತೊಂದರೆಗಳಿಗೆ ಸಿಕ್ಕಿದುದಲ್ಲದೆ, ರಾಜ್ಯವೇ ಪರರ ಪಾಲಾಗಲು ಕಾರಣವಾಯಿತು. ಇವುಗಳಿಂದ ನೀವು ತಿಳಿಯಬೇಕಾದ ಅಂಶಗಳೇನೆಂದರೆ:—ಒಂದು ಮನೆಗೆ ಒಬ್ಬ ಶಕ್ತನಾದ ಯಜಮಾನನು ಇರಬೇಕಾಗುವಂತೆ ಒಂದು ರಾಜ್ಯಕ್ಕೆ ಅಂಥಾ ರಾಜನೊಬ್ಬನು ಆವಶ್ಯಕ. ರಾಜನು ನೀತಿವಂತನಾಗಿಯೂ, ದಯಾಶಾಲಿಯಾಗಿಯೂ, ಶಕ್ತನಾಗಿಯೂ ಇದ್ದರೆ ರಾಜ್ಯವು ಉತ್ತಮ ಸ್ಥಿತಿಗೆ ಬಂದು, ಪ್ರಜೆಗಳು ನೆಮ್ಮದಿಯಾಗಿ ಬಾಳುವರು. ರಾಜನು ಕ್ರೂರನಾಗಿಯೂ, ಸ್ವಾರ್ಥಪರನಾಗಿಯೂ ಅಥವಾ ಬಲಹೀನನಾಗಿಯೂ ಇದ್ದರೆ, ರಾಜ್ಯವು ಕ್ಷೀಣಗತಿಗೆ ಬರುವುದಲ್ಲದೆ ಪ್ರಜೆಗಳು ಅನೇಕ ಕಷ್ಟಗಳನ್ನು ಅನುಭವಿಸಬೇಕಾಗುವುದು. ರಾಜನೇ ಇಲ್ಲದಿದ್ದರೆ ಯಜಮಾನನಿಲ್ಲದ ಮನೆಯ ಜನರಂತೆ ಪ್ರಜೆಗಳು ತಮ್ಮ ತಮ್ಮ ಮನಸ್ಸು ಬಂದಂತೆ ನಡೆಯುವರು. ಈ ಅನಾಯಕತ್ವವನ್ನು ನೋಡಿ ಪರರಾಜರು ದೇಶವನ್ನು ಸ್ವಾಧೀನ ಪಡಿಸಿಕೊಂಡರೆ, ಪ್ರಜೆಗಳು ಅವರು ಕೊಡುವ

ತೊಂದರೆಗಳನ್ನು ಸಹಿಸಬೇಕಾಗುವುದಲ್ಲದೆ, ತಮ್ಮ ಸ್ವತಂತ್ರವನ್ನೂ ಕಳೆದುಕೊಂಡು ಅವರಿಗೆ ಅಡಿಯಾಳಾಗಬೇಕಾಗುವುದು. ಆದ್ದರಿಂದ ಒಂದು ರಾಜ್ಯವು ಸುಭಿಕ್ಷವಾಗಿಯೂ ನೆಮ್ಮದಿಯಾಗಿಯೂ ಇರಬೇಕಾದರೆ, ಅಲ್ಲಿ ಉತ್ತಮತರದ ಸರ್ಕಾರವಿರಬೇಕು.

೨. **ಸರ್ಕಾರವೆಂದರೇನು?** ಪ್ರಜೆಗಳ ನ್ಯಾಯವಾದ ಮನೋಗತವನ್ನನುಸರಿಸಿ, ಅವರ ಹಕ್ಕು ಬಾಧ್ಯತೆಗಳನ್ನು ಕಾಯ್ದು, ದೇಶದ ಸುಖಸಂಪತ್ತಿಗಳನ್ನು ಹೆಚ್ಚಿಸಲು ಸದಾ ಕೆಲಸಮಾಡುವ ಸಂಸ್ಥೆಗೆ ಸರ್ಕಾರವೆಂದು ಹೆಸರು. ಈ ಸಂಸ್ಥೆಗೆ ಯಜಮಾನನೇ ರಾಜನು. ಜಾತಿ, ಮತ, ವೃತ್ತಿ ಗುಣಗಳಿಂದ ಬೇರೆಬೇರೆಯಾಗಿರುವ ಲಕ್ಷಾಂತರ ಜನರನ್ನು ಕಾಪಾಡುವುದು ಬಾಯಮಾತಲ್ಲ. ಆದುದರಿಂದಲೇ ದೊರೆತನ ಮಾಡುವವನಿಗೆ ಸದಾಚಿಂತೆ ಎನ್ನುವರು. ಜನರ ಅಭಿವೃದ್ಧಿಗೆ ಬೇಕಾಗುವ ಸಹಾಯಗಳನ್ನು ಮಾಡುವುದೂ, ದೇಶವನ್ನು ಆಳುವುದರ ಸಲುವಾಗಿ ತಕ್ಕ ನಿಬಂಧನೆಗಳನ್ನು ಮಾಡುವುದೂ ರಾಜನ ಮತ್ತು ಅವನ ಸರ್ಕಾರದ ಕೆಲಸವಾಯಿತು. ಈ ಕರ್ತವ್ಯಗಳನ್ನೆಲ್ಲಾ ಯಾವ ಸರ್ಕಾರವು ಸಮರ್ಪಕವಾಗಿ ನಡೆಸುವುದೋ ಅದೇ ಉತ್ತಮ ಸರ್ಕಾರವೆನಿಸುವುದು.

೩. ಸರ್ಕಾರದ ಸಾಧನಗಳು

ಈ ಕೆಲಸಗಳನ್ನೆಲ್ಲಾ ರಾಜನಾಗಲೀ ಅವನ ಸರ್ಕಾರವಾಗಲೀ ಸಮರ್ಪಕವಾಗಿ ಮಾಡುವುದು ಸಾಧ್ಯವಲ್ಲ. ಆದ್ದರಿಂದ ಸರ್ಕಾರದವರು ಸಾವಿರಾರುಮಂದಿ ಅಧಿಕಾರಿಗಳನ್ನಿಟ್ಟು ಅವರಿಗೆ ಅಪ್ಪಣೆಗಳನ್ನು ಕೊಡುವುದರ ಮೂಲಕ ಅವರಿಂದ ಈ ಕೆಲಸಗಳನ್ನು ಮಾಡಿಸುವರು. ಈ ಅಧಿಕಾರಿಗಳು ಶಕ್ತರಾಗಿಯೂ ನ್ಯಾಯನಿರತರಾಗಿಯೂ ಇರಬೇಕು. ಸರ್ಕಾರದವರು ಕೊಡುವ ಅಪ್ಪಣೆಗಳನ್ನೂ ರಾಜ್ಯಾಡಳಿತಕ್ಕಾಗಿ ಮಾಡುವ ನಿಬಂಧನೆಗಳನ್ನೂ ಜಾರಿಮಾಡಿ ಕಾರ್ಯಗಳನ್ನು ನಿರ್ವಹಿಸುವ ಈ ಅಧಿಕಾರಿಗಳು "ಕಾರ್ಯ ನಿರ್ವಾಹಕ" ಸಾಧನಕ್ಕೆ ಸೇರಿದವರಾಗಿರುತ್ತಾರೆ. ರಾಜ್ಯಾಡಳಿತಕ್ಕೆ ಆವಶ್ಯಕವಾದ ನಿಬಂಧನೆಗಳನ್ನು ಮಾಡುವುದರಲ್ಲಿ ಸಲಹೆಗಳನ್ನು ಕೊಡುವವರು ಬೇರೆಯಾಗಿರುವರು. ಇವರು "ನ್ಯಾಯ ನಿರ್ಮಾಣಕ" ಸಾಧನಕ್ಕೆ ಸೇರಿದವರು. ಹೀಗೆ ಪ್ರತಿ

ಸರ್ಕಾರದಲ್ಲಿಯೂ, "ಕಾರ್ಯ ನಿರ್ವಾಹಕ", "ನ್ಯಾಯನಿರ್ಮಾಣಕ" ಗಳೆಂಬ ಸಾಧನಗಳೆರಡು ಇರುವುವು.

೪. ಪ್ರಜೆಗಳ ಕರ್ತವ್ಯ

ಮನುಷ್ಯನು ಯಾವಾಗಲೂ ಜನರ ಗುಂಪಿನಲ್ಲಿರುವುದಕ್ಕೆ ಬಯಸುವನು. ಜನರನ್ನು ಬಿಟ್ಟು ಒಬ್ಬೊಂಟಿಗನಾಗಿ ಬಾಳುವುದೇ ಅವನಿಗೆ ಅಸಾಧ್ಯವೆನಿಸುವುದು. ಆದುದರಿಂದಲೇ ಅವನು ಮನೆ ಮಠಗಳನ್ನೂ ಊರು–ಕೇರಿಗಳನ್ನೂ ಕಟ್ಟಿಕೊಂಡು ಜನಸಮುದಾಯದಲ್ಲಿ ವಾಸಿಸುವನು. ಈ ರೀತಿಯಾದ ಅನೇಕ ಊರುಗಳನ್ನು ಒಟ್ಟುಗೂಡಿಸಿ "ದೇಶ" ಎಂದು ಕರೆಯುತ್ತಾರೆ. ದೇಶದ ಪ್ರತಿಯೊಬ್ಬ ಮನುಷ್ಯನೂ, ಯಾರೊಬ್ಬರ ಸಹಾಯವಿಲ್ಲದೆ, ತನಗೆ ಇಷ್ಟವಾದ ಎಲ್ಲಾ ಅನುಕೂಲಗಳನ್ನು ಕಲ್ಪಿಸಿಕೊಳ್ಳುವುದಕ್ಕೂ ತನಗೆ ಅನಿಷ್ಟವಾದ ಅನಾನುಕೂಲಗಳನ್ನೆಲ್ಲಾ ನಿವಾರಿಸಿಕೊಳ್ಳುವುದಕ್ಕೂ ಸಮರ್ಥನಾಗಿಲ್ಲ. ಅವನು ತನ್ನ ಕಷ್ಟ ಸುಖಗಳು ಮಾತ್ರವಲ್ಲದೆ ಸಮಾಜದ ಕಷ್ಟಸುಖಗಳ ಕಡೆಗೂ ಗಮನಕೊಡಬೇಕಾದುದು ಆವಶ್ಯಕವಾಗಿದೆ. ಹೀಗೆ ತನ್ನ ಊರಿನ, ತನ್ನ ದೇಶದ ಸುಖಸಂಪತ್ತಿಗಳನ್ನು ಹೆಚ್ಚಿಸುವುದೂ, ಒದಗಬಹುದಾದ ಕಷ್ಟಗಳನ್ನು ತಪ್ಪಿಸಿಕೊಳ್ಳುವುದೂ, ಅವನಮೇಲೆ ಅಥವಾ ಜನಾಂಗದವರಮೇಲೆ ಬಿದ್ದ ಭಾರವಾಯಿತು. ಇದಕ್ಕಾಗಿ ಪ್ರಜೆಗಳು ಸರ್ಕಾರಕ್ಕೆ ವಿಧೇಯರಾಗಿಯೂ ಅದರ ಅಧಿಕಾರಿಗಳಿಗೆ ಸಹಾಯಕರಾಗಿಯೂ, ರಾಜ್ಯಾಡಳಿದಲ್ಲಿ ತಾವೂ ಭಾಗಿಗಳಾಗಿಯೂ ಇದ್ದುಕೊಂಡು ದೇಶದ ಅಭಿವೃದ್ಧಿಗೆ ಒಟ್ಟುಗೂಡಿ ಕೆಲಸಮಾಡುವುದು ಅವರ ಕರ್ತವ್ಯವಾಗಿದೆ. ಶಕ್ತರೂ ನೀತಿವಂತರೂ ಆದ ರಾಜರೂ, ನ್ಯಾಯಮಾರ್ಗದಲ್ಲಿ ನಡೆಯುವ ಅಧಿಕಾರಿಗಳೂ, ದೇಶದ ಹಿತಚಿಂತನೆಯುಳ್ಳ ಸ್ವಾಮಿಭಕ್ತರಾದ ಪ್ರಜೆಗಳೂ ಉತ್ತಮ ಸರ್ಕಾರದ ಅಂಗಗಳಾಗಿರುವರು.

೫. ಸರ್ಕಾರದ ವಿಧಗಳು

ಎಲ್ಲಾ ದೇಶಗಳಲ್ಲೂ ಒಂದೇತೆರನಾದ ಸರ್ಕಾರವಿರುವುದಿಲ್ಲ. ಕೆಲವು ದೇಶಗಳಲ್ಲಿ ಒಂದೇ ಮನೆತನದವರೇ ಬಹುಕಾಲದಿಂದಲೂ

ರಾಜರಾಗಿರುವರು. ಇವರು ತಮ್ಮ ಇಷ್ಟದಂತೆಯೇ ರಾಜ್ಯಾಡಳಿತವನ್ನು ನಡೆಸಿದರೆ ಅದನ್ನು "ನಿರಂಕುಶ ಪ್ರಭುತ್ವ" ಎಂದು ಕರೆಯುವರು. ರಾಜನು ಧರ್ಮಿಷ್ಟನಾದರೆ ಸರಿ; ಇಲ್ಲವಾದರೆ ಈ ಪ್ರಭುತ್ವದಿಂದ ದೇಶಕ್ಕೆ ಕೇಡಾಗುವ ಸಂಭವವುಂಟು. ಆದರೆ ಈ ಪ್ರಭುತ್ವವು ಈಚೀಚಿಗೆ ಮಾಯವಾಗುತ್ತಿದೆ.

ರಾಜರು ಒಂದೇ ಮನೆತನದವರೇ ಅದರೂ ಅವರು ಪ್ರಜೆಗಳ ಅಭಿಪ್ರಾಯಗಳನ್ನು ಅವರ ಮುಖಂಡರಿಂದ ತಿಳಿದು ಅದಕ್ಕೆ ತಕ್ಕಂತೆ ರಾಜ್ಯಾಡಳಿತವನ್ನು ಸಾಗಿಸಿದರೆ ಆದನ್ನು "ಸಾಂಕುಶ ಪ್ರಭುತ್ವ" ಎನ್ನುವರು. ಈ ಪ್ರಭುತ್ವವೇ ವಾಡಿಕೆಯಲ್ಲಿದೆ.

ರಾಜರೇ ಇಲ್ಲದೆ, ಪ್ರಜೆಗಳ ಮುಖಂಡರಲ್ಲಿ ಸಮರ್ಥನಾದ ಒಬ್ಬೊಬ್ಬರಿಗೆ ಕೆಲಕಾಲ ಯಜಮಾನಿಕೆಯನ್ನು ಕೊಟ್ಟು ಆತನಿಗೆ ಇತರರೂ ನೆರವಾಗಿ ರಾಜ್ಯಾಡಳಿತವನ್ನು ನಡೆಸುವುದೇ "ಪ್ರಜಾಪ್ರತಿನಿಧಿಪ್ರಭುತ್ವ" ಎಂದೆನಿಸುವುದು. ಈ ತರಹೆ ಪ್ರಭುತ್ವವು ಈಚೀಚೆಗೆ ಎಲ್ಲೆಲ್ಲಿಯೂ ಹರಡಲಾರಂಭಿಸಿದೆ.

೬. ಸರ್ಕಾರದ ಆದಾಯ

ಯಾವತರಹೆ ಸರ್ಕಾರವಾದರೂ ಸರಿಯೆ, ಅದರ ಕರ್ತವ್ಯಗಳು ಅನೇಕವಾಗಿರುವುವು ಶತ್ರುಗಳ ದೆಸೆಯಿಂದ ದೇಶವನ್ನು ಸಂರಕ್ಷಿಸುವುದೂ, ಪ್ರಜೆಗಳ ನೆಮ್ಮದಿಗೆ ಭಂಗಮಾಡುವ ಕಳ್ಳಕಾಕರನ್ನಡಗಿಸುವುದೂ, ಜನರಲ್ಲಿ ಹುಟ್ಟುವ ವ್ಯಾಜ್ಯಗಳನ್ನು ತೀರಿಸುವುದೂ, ಅವರ ಸೌಕರ್ಯಕ್ಕೆ ಬೇಕಾಗುವ ರಸ್ತೆಗಳು, ಕಾಲುವೆಗಳು, ಕಟ್ಟಡಗಳು, ರೈಲು, ಟಪಾಲು ಮೊದಲಾದುವುಗಳನ್ನು ಏರ್ಪಡಿಸುವುದೂ, ಜನರ ಆರೋಗ್ಯ ವಿದ್ಯಾಭ್ಯಾಸಗಳಿಗೆ ತಕ್ಕ ಅನುಕೂಲಗಳನ್ನು ಕಲ್ಪಿಸುವುದೂ ಸರ್ಕಾರದ ಮುಖ್ಯ ಕರ್ತವ್ಯಗಳಾಗಿವೆ. ಈ ಸಹಾಯಗಳನ್ನು ಮಾಡಲು ಸರ್ಕಾರಕ್ಕೆ ಹೇರಳವಾಗಿ ದ್ರವ್ಯಬೇಕೆಂಬುದನ್ನು ಹೇಳಬೇಕಾದುದೇ ಇಲ್ಲ. ಈ ದ್ರವ್ಯವು ಎಲ್ಲಿಂದ ಬರಬೇಕು? ಸರ್ಕಾರದಿಂದ ಸಹಾಯಹೊಂದುವ ದೇಶದ ಪ್ರತಿಯೊಬ್ಬ ಮನುಷ್ಯನೂ ಇದನ್ನು ಒದಗಿಸಬೇಕು. ಹೀಗೆ ಹಣ ಒದಗಿಸಲು ಜನರು ಕೆಲವು ನಿಯಮಗಳನ್ನು ಮಾಡಿಕೊಂಡು, ಪ್ರತಿಯೊಬ್ಬನೂ ಅದರಂತೆ ತನ್ನ ಆದಾಯದಲ್ಲಿ ಸ್ವಲ್ಪ ಭಾಗವನ್ನು ಸರ್ಕಾ

ರಕ್ಕೆ ಕೊಡಬೇಕಾಗಿದೆ. ಹೀಗೆ ಕೊಡುವ ಹಣವೇ "ಕಂದಾಯ" ಅಥವ "ತೆರಿಗೆ" ಎನ್ನಿಸುವುದು. ಇವೇ ದೇಶದ ಅಥವ ಸರ್ಕಾರದ ಆದಾಯ. ಈ ಆದಾಯದಿಂದ ರಾಜನು ದೇಶದ ಆಡಳಿತವನ್ನು ನಡೆಸುವುದಲ್ಲದೆ ಅದನ್ನು ಒಳ್ಳೆಯ ಮಾರ್ಗದಲ್ಲಿ ವ್ಯಯಮಾಡಿ ಪ್ರಜೆಗಳಿಗೆ ಬೇಕಾಗುವ ಸೌಕರ್ಯಗಳನ್ನು ಕಲ್ಪಿಸುವನು.

೨ನೆಯ ಭಾಗ—ಆಶ್ರಿತ ಸಂಸ್ಥಾನಗಳು

1. ಇಂಡಿಯಾದೇಶದಲ್ಲಿ ಇಂಗ್ಲಿಷರು ಸ್ವಂತವಾಗಿ ಆಳುವ ಪ್ರದೇಶಗಳಲ್ಲದೆ, ಇವರ ಅಧೀನದಲ್ಲಿ 160 ದೇಶೀಯ ಸಂಸ್ಥಾನಗಳಿವೆ. ಇವುಗಳ ಪೈಕಿ ಕೆಲವು ಮಾತ್ರ ದೊಡ್ಡರಾಜ್ಯಗಳು. ಮಿಕ್ಕವುಗಳು ಸಣ್ಣ ಸಣ್ಣ ಸಂಸ್ಥಾನಗಳಾಗಿವೆ. ಬಹುಕಾಲದಿಂದಲೂ ದೇಶೀಯ ರಾಜರೇ ಆಳುತ್ತಿರುವ ಈ ಸಂಸ್ಥಾನಗಳನ್ನು ಮೂರು ಬಗೆಯಾಗಿ ವಿಂಗಡಿಸಬಹುದು.

(i) ವೈಸ್‌ರಾಯಿಯವರಿಗೆ ನೇರವಾಗಿ ಅಧೀನವಾಗಿರತಕ್ಕವುಗಳು:—ಹೈದರಾಬಾದು, ಮೈಸೂರು, ಬರೋಡ, ಕಾಶ್ಮೀರ.

(ii) ವೈಸ್‌ರಾಯಿಯವರಿಗೆ ಅಧೀನರಾದ "ಪೊಲಿಟಿಕಲ್ ಏಜೆಂಟರ" ಮೇಲ್ವಿಚಾರಣೆಗೆ ಒಳಪಟ್ಟವುಗಳು:—ರಾಜಪುಟಾಣ, ಕಾಥೆವಾಡಿ, ಬ್ರಿಟಿಷ್ ಬೆಲೂಚಿಸ್ಥಾನ ಈ ಪ್ರಾಂತಗಳಲ್ಲಿರುವ ಆಶ್ರಿತ ಸಂಸ್ಥಾನಗಳು.

(iii) ಗವರ್ನರುಗಳ ಅಧೀನದಲ್ಲಿರುವ ಸಂಸ್ಥಾನಗಳು:—ಪುದುಕೋಟೆ, ಕೊಚ್ಚಿ, ಮೊದಲಾದುವುಗಳು.

2. ಆಶ್ರಿತ ಸಂಸ್ಥಾನಗಳಲ್ಲಿ ದೇಶೀಯ ರಾಜರೇ ವಂಶಪಾರಂಪರ್ಯವಾಗಿ ಆಳುತ್ತಲಿರುವರು. ಇವರೆಲ್ಲರೂ ಬ್ರಿಟಿಷ್ ಸಾಮ್ರಾಜ್ಯಕ್ಕೆ ಅಧೀನರಾಗಿ ಅವರಿಗೆ ಪಗುದಿಯನ್ನು ಕೊಡುತ್ತಾರೆ. ಇದಕ್ಕೆ ಪ್ರತಿಯಾಗಿ ಬ್ರಿಟಿಷರು ತಮ್ಮ ಸೈನ್ಯವನ್ನು ಈ ರಾಜ್ಯಗಳಲ್ಲಿಟ್ಟು ಹೊರದೇಶದ ಶತ್ರುಗಳ ಭಯವಿಲ್ಲದಂತೆ ನೋಡಿಕೊಳ್ಳುವರು. ಬ್ರಿಟಿಷ್ ಇಂಡಿಯಾಕ್ಕೂ ಆಶ್ರಿತ ಸಂಸ್ಥಾನಗಳಿಗೂ ಸಂಬಂಧಪಡುವ ವಿಷಯಗಳಲ್ಲಿ ಆಶ್ರಿತರಾಜರ ಅಭಿಪ್ರಾಯಗಳನ್ನು ತಿಳಿದು ಉಭಯತರೂ ಸೇರಿ ಕೆಲಸಮಾಡುವುದಕ್ಕಾಗಿ

"ನರೇಂದ್ರಮಂಡಲಿ" ಎಂಬ ಸಭೆಯು ಹೊಸದಾಗಿ ಏರ್ಪಾಡಾಗಿದೆ. ಈ ಮಂಡಲಿಗೆ ವೈಸ್‌ರಾಯಿಯವರೇ ಅಧ್ಯಕ್ಷರು.

3. ಇಂಡಿಯಾ ಚಕ್ರಾಧಿಪತ್ಯದಲ್ಲಿ $\frac{3}{4}$ ಭಾಗ ವಿಸ್ತೀರ್ಣವುಳ್ಳ ಪ್ರದೇಶಗಳನ್ನಾಳುವ ಭಾರವನ್ನು ಆಶ್ರಿತರಾಜರಿಗೆ ಒಪ್ಪಿಸಿರುವುದರಿಂದ ಬ್ರಿಟಿಷರಿಗೆ ಇವುಗಳನ್ನಾಳುವ ತೊಂದರೆಯೂ ಖರ್ಚೂ ಕಡಿಮೆಯಾಗಿದೆ. ಆಶ್ರಿತರಾಜರ ಸ್ನೇಹವೂ ರಾಜಭಕ್ತಿಯೂ ಬ್ರಿಟಿಷರಿಗೆ ಅತ್ಯಾವಶ್ಯಕವಾಗಿವೆ. ಕೆಲವು ವರ್ಷಗಳ ಹಿಂದೆ ನಡೆದ ಯೂರೋಪಿನ ಘೋರ ಯುದ್ಧದಲ್ಲಿ ದೇಶೀಯ ರಾಜರು ಮಾಡಿದ ಸಹಾಯವನ್ನು ಚಕ್ರವರ್ತಿಗಳೇ ಕೊಂಡಾಡಿರುವರು. ದೇಶೀಯ ರಾಜರ ಹಕ್ಕುಬಾಧ್ಯತೆಗಳನ್ನು ಯಾವ ಚ್ಯುತಿಯೂ ಇದಲ್ಲದೆ ಬ್ರಿಟಿಷರು ನಡೆಸುತ್ತಾ ಬಂದಿರುವುದರಿಂದ ಬ್ರಿಟಿಷರಲ್ಲಿ ಅಧಿಕವಾದ ನಂಬಿಕೆಯೂ, ಸ್ವಾಮಿಭಕ್ತಿಯೂ ಈ ದೇಶದ ರಾಜರಲ್ಲಿಯೂ ಜನರಲ್ಲಿಯೂ ಹುಟ್ಟಿವೆ. ಆಶ್ರಿತ ಸಂಸ್ಥಾನಗಳು ಚಿಕ್ಕವುಗಳಾದ್ದರಿಂದ ಪ್ರಜೆಗಳಿಗೆ ಬೇಕಾಗುವ ವ್ಯವಸಾಯ, ವಿದ್ಯೆ, ಕೈಗಾರಿಕೆ ಮೊದಲಾದವುಗಳ ಅಭಿವೃದ್ಧಿಗೆ ತಕ್ಕ ಏರ್ಪಾಡುಗಳನ್ನು ಆಯಾಯ ದೇಶಗಳಿಗೆ ತಕ್ಕಂತೆ ಮಾಡಲು ಅವಕಾಶ ದೊರೆತಿದೆ. ಆಶ್ರಿತ ರಾಜರು ತಮ್ಮ ರಾಜ್ಯಭಾರದ ಕ್ರಮದಲ್ಲಿ ಅನೇಕ ಬದಲಾವಣೆಗಳನ್ನು ಮಾಡಿ, ರಾಜ್ಯಾಡಳಿತದಲ್ಲಿ ಪ್ರಜೆಗಳು ಪರಿಶ್ರಮ ಹೊಂದಲು ಹೆಚ್ಚು ಅವಕಾಶವನ್ನು ಕೊಟ್ಟಿರುವರು. ದೇಶೀಯ ರಾಜರು, ಪ್ರಜೆಗಳ ಅಭಿಲಾಷೆ, ಮತ, ಪೂರ್ವಾಚಾರ—ಇವುಗಳಿಗೆ ವಿರುದ್ಧವಾಗಿ ವರ್ತಿಸದೆ, ತಮ್ಮ ರಾಜ್ಯಗಳನ್ನು ಉತ್ತಮಸ್ಥಿತಿಗೆ ತಂದಿರುವರು.

೩ನೆಯ ಭಾಗ.—ಮೈಸೂರು ಸರ್ಕಾರ

ಮುಖ್ಯವಾದ ಆಶ್ರಿತ ಸಂಸ್ಥಾನಗಳಲ್ಲಿ ಮೈಸೂರು ದೇಶವು ಒಂದಾಗಿದೆ. ಈ ದೇಶಕ್ಕೆ ಯಾದವ ವಂಶದ ದೊರೆಗಳೇ ಬಹುಕಾಲದಿಂದಲೂ ಪ್ರಭುಗಳಾಗಿರುವರು. ಇಂಡಿಯಾ ಸರ್ಕಾರದ ಸಂಪ್ರದಾಯವನ್ನು ಅನುಸರಿಸಿ, ದೇಶವು ಡಿಸ್ಟ್ರಿಕ್ಟುಗಳಾಗಿಯೂ ತಾಲ್ಲೂಕುಗಳಾಗಿಯೂ ಹೋಬಳಿಗಳಾಗಿಯೂ ವಿಂಗಡವಾಗಿದೆ.

ಹಳ್ಳಿಗಳು—"ಹಳ್ಳಿಯಿಂದ ದಿಲ್ಲಿ" ಎಂಬಂತೆ ಹಳ್ಳಿಗಳೇ ನಮ್ಮ ದೇಶಕ್ಕೆ ತಳಹದಿಯಾಗಿವೆ. ಹಳ್ಳಿಯ ಅಧಿಕಾರಕ್ಕೆ ಪಟೇಲನು ಮುಖ್ಯ

ಸ್ಥನು. ಇವನ ಸಹಾಯಕ್ಕೆ ಶಾನುಭೋಗ, ತೋಟಿ, ತಳವಾರ ಮುಂತಾದ ಗ್ರಾಮದ ಅಧಿಕಾರಿಗಳಿರುವರು. ಹಳ್ಳಿಗಳನ್ನು ಚೊಕ್ಕಟವಾಗಿಡುವುದೂ, ಅಲ್ಲಿಯ ಕೆರೆ, ಕಟ್ಟೆಗಳನ್ನು ಉತ್ತಮಸ್ಥಿತಿಯಲ್ಲಿಡುವುದೂ, ರೈತರಿಂದ ಬರಬೇಕಾದ ಕಂದಾಯವನ್ನು ಎತ್ತಿ ಖಜಾನೆಗೆ ಕಟ್ಟುವುದೂ ಪಟೇಲನ ಮುಖ್ಯ ಕೆಲಸಗಳು. ಹಳ್ಳಿಯಲ್ಲಿ ಹಣ, ಮತವಿಚಾರ, ವ್ಯಾಪಾರ ಮೊದಲಾದ ಕಾರಣಗಳಿಂದ ಹುಟ್ಟುವ ವ್ಯಾಜ್ಯಗಳನ್ನು ಸ್ಥಳದಲ್ಲಿಯೇ ವ್ಯವಸ್ಥೆಮಾಡಲು ಹಳ್ಳಿಯಲ್ಲಿ ಮುಖ್ಯಸ್ಥರಾದ ಐದು ಜನರನ್ನು ಪಂಚಾಯತರನ್ನಾಗಿ ನೇಮಿಸುವರು. ಇವರು ಹಳ್ಳಿಯ ಸ್ಥಿತಿಗತಿಗಳನ್ನು ಚೆನ್ನಾಗಿ ತಿಳಿದಿರುವುದರಿಂದ ವ್ಯಾಜ್ಯಗಳನ್ನು ಸುಲಭವಾಗಿಯೂ, ನ್ಯಾಯ ರೀತಿಯಲ್ಲಿಯೂ ತೀರ್ಮಾನಿಸುವರು. ಇಂಥ ಗ್ರಾಮಪಂಚಾಯತ ಸಭೆಗಳನ್ನು ಅಸಲೀ ಗ್ರಾಮಗಳಲ್ಲೆಲ್ಲಾ ಏರ್ಪಡಿಸಲು ಸರ್ಕಾರದವರು ಅಪ್ಪಣೆ ಮಾಡಿರುವರು.

ಗ್ರಾಮಗಳಲ್ಲಿ ಮಕ್ಕಳಿಗೆ ವಿದ್ಯೆಯನ್ನೂ, ಒಳ್ಳೇ ನಡತೆಯನ್ನೂ ಕಲಿಸುವುದಕ್ಕಾಗಿ ಸರ್ಕಾರದವರು ಪಾಠಶಾಲೆಗಳನ್ನು ಇಟ್ಟಿರುವರು. ಗ್ರಾಮರಕ್ಷಣೆಗೆ ತಕ್ಕ ಏರ್ಪಾಡುಗಳನ್ನು ಮಾಡಿರುವುರಲ್ಲದೆ ಗ್ರಾಮವಾಸಿಗಳು ವಿದ್ಯೆ, ನಾಗರೀಕತೆ, ವ್ಯವಸಾಯ ಕೈಗಾರಿಕೆಗಳಲ್ಲಿ ಅಭಿವೃದ್ಧಿ ಹೊಂದಲು ಸರ್ಕಾರದವರು ಅನುಕೂಲತೆಗಳನ್ನು ಕಲ್ಪಿಸಿರುವರು.

ತಾಲ್ಲೂಕು—ಅನೇಕ ಹಳ್ಳಿಗಳು ಸೇರಿ ಹೋಬಳಿಯೂ, ಅನೇಕ ಹೋಬಳಿಗಳು ಸೇರಿ ಒಂದು ತಾಲ್ಲೂಕು ಆಗಿವೆ. ತಾಲ್ಲೂಕಿನಲ್ಲಿ "ಅಮಲ್ದಾರನು" ಮುಖ್ಯಾಧಿಕಾರಿಯು. ಇವನ ಸಹಾಯಕ್ಕೆ ಎಲ್ಲಾ ಇಲಾಖೆಗಳಲ್ಲಿಯೂ ಬೇರೆ ಬೇರೆ ಅಧಿಕಾರಿಗಳಿರುವರು. ತಾಲ್ಲೂಕಿನಲ್ಲಿರುವ ರೈತರುಗಳಿಂದ ಕಂದಾಯವನ್ನು ಸಕಾಲದಲ್ಲಿ ಎತ್ತುವುದೂ, ರೈತರ ಮನವಿಗಳನ್ನು ತಿಳಿದು ತಕ್ಕ ಪರಿಹಾರಗಳನ್ನು ಮಾಡುವುದೂ ಇವನ ಕೆಲಸವಾಗಿದೆ.

ಡಿಸ್ಟ್ರಿಕ್ಟು—ಹತ್ತೆಂಟು ತಾಲ್ಲೂಕುಗಳು ಸೇರಿ ಒಂದು ಡಿಸ್ಟ್ರಿಕ್ಟು ಆಗಿದೆ. ಇಂಥಾ ಡಿಸ್ಟ್ರಿಕ್ಟುಗಳು ನಮ್ಮ ದೇಶದಲ್ಲಿ ಎಂಟಿವೆ. ಡಿಸ್ಟ್ರಿಕಿನ ಯಜಮಾನಿಕೆಗೆ "ಡೆಪ್ಯುಟಿ ಕಮಿಷನರ್" ಎಂಬ ಹುದ್ದೇದಾರನಿರುವನು. ಇವನನ್ನು "ಡಿಸ್ಟ್ರಿಕಿನ ದೊರೆ" ಎಂದು ಹೇಳಬಹುದು. ಇವನ ಸಹಾ

ಯಕ್ಕಾಗಿ ಎಲ್ಲಾ ಇಲಾಖೆಗಳಲ್ಲೂ ಬೇರೆಬೇರೆ ಅಧಿಕಾರಿಗಳಿರುವರು. ಇವನ ಕರ್ತವ್ಯಗಳು ಅನೇಕವಾಗಿರುವುವು.

ಪ್ರಜೆಗಳು ಸರ್ಕಾರದ ಆಡಳಿತದಲ್ಲಿ ಪರಿಶ್ರಮ ಹೊಂದಲು ಮತ್ತು ಸ್ಥಳೀಯ ಆಡಳಿತಗಳನ್ನು ಅವರೇ ನಡೆಸಲು ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ "ಡಿಸ್ಟ್ರಿಕ್ಟ್ ಬೋರ್ಡ್" ಎಂಬ ಸಭೆಯು ಏರ್ಪಟ್ಟಿದೆ. ಈ ಸಭೆಯ ಮೆಂಬರುಗಳಲ್ಲಿ ಕೆಲವರನ್ನು ಸರ್ಕಾರದವರು ನೇಮಿಸುವರು. ಮಿಕ್ಕವರನ್ನು ಪ್ರಜೆಗಳು ಚುನಾಯಿಸುವರು. ಈ ಬೋರ್ಡಿಗೆ ಉತ್ಪತ್ತಿಯಾಗುವ ಹಣದಿಂದಲೂ, ಸರ್ಕಾರದವರ ಸಹಾಯದ್ರವ್ಯದಿಂದಲೂ ಡಿಸ್ಟ್ರಿಕ್ಟಿನಲ್ಲಿ ಬೇಕಾಗುವ ರಸ್ತೆಗಳು, ಕಾಲುವೆಗಳು, ಸೇತುವೆಗಳು, ಪಾಠಶಾಲೆಗಳು, ಆಸ್ಪತ್ರೆಗಳು, ಸತ್ರಗಳು ಇವೇ ಮೊದಲಾದ ಅನುಕೂಲತೆಗಳನ್ನು ಪ್ರಜೆಗಳಿಗೆ ಮಾಡಿಕೊಡುವರು.

ಡಿಸ್ಟ್ರಿಕ್ಟಿನಲ್ಲಿ ಈ ಸಭೆಯು ಇರುವಂತೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ "ಮ್ಯುನಿಸಿಪಾಲಿಟಿ"ಗಳೆಂಬ ನಗರವಿಚಾರಕ ಸಂಘಗಳಿರುವವು. ಈ ಸಂಘಗಳ ಆಡಳಿತಗಳನ್ನು ಪಟ್ಟಣವಾಸಿಗಳು ಚುನಾಯಿಸುವ ಮೆಂಬರುಗಳೂ, ಸರ್ಕಾರದಿಂದ ನೇಮಿಸಲ್ಪಡುವ ಕೆಲವರೂ ಸೇರಿ ನಡೆಸುವರು. ಪಟ್ಟಣವಾಸಿಗಳು ಕೊಡುವ (1) ಮನೆ ಮತ್ತು ನೆಲದ ತೆರಿಗೆ, (2) ನೀರಿನ ತೆರಿಗೆ, (3) ದೀಪದ ತೆರಿಗೆ, (4) ಊರು ಹೊರಗಿನಿಂದ ಒಳಕ್ಕೆ ಬರುವ ಬಂಡಿಗಳ ಮತ್ತು ಕೆಲವು ಸರಕುಗಳಮೇಲಿನ ಸುಂಕ, (5) ವಾಹನಗಳ ತೆರಿಗೆ ಮೊದಲಾದವುಗಳು ಈ ಸಂಘಗಳ ಆದಾಯವಾಗಿದೆ. ಈ ಆದಾಯದಿಂದ ಮ್ಯುನಿಸಿಪಾಲಿಟಿಯವರು ಜನರಿಗೆ ಅನುಕೂಲಿಸುವಂತೆ ರಸ್ತೆಗಳನ್ನೂ, ರೋಗನಿವಾರಣೆಗಾಗಿ ಆಸ್ಪತ್ರೆಗಳನ್ನೂ ವಿದ್ಯಾಭ್ಯಾಸಕ್ಕೆ ಪಾಠಶಾಲೆಗಳನ್ನೂ, ವ್ಯಾಪಾರಕ್ಕೆ ಅಂಗಡಿ–ಮಾರ್ಕೆಟ್ಟುಗಳನ್ನೂ ಏರ್ಪಡಿಸುವರು. ಪಟ್ಟಣದ ಬೀದಿಗಳೆಲ್ಲವೂ ಶುಚಿಯಾಗಿರುವಂತೆ ಕಶ್ಮಲವನ್ನು ದೂರವಾಗಿ ಸಾಗಿಸುವರು. ಬೀದಿಬೀದಿಗೂ ರಾತ್ರೆ ಕಾಲದಲ್ಲಿ ಬೆಳಕನ್ನು ಹಾಕುವರು.

ಪ್ರಜೆಗಳಿಗೆ ತಮ್ಮ ತಮ್ಮ ಊರಿನ ಯೋಗಕ್ಷೇಮವನ್ನು ನೋಡಿಕೊಳ್ಳುವುದನ್ನು ಕಲಿಸಿ, ಅವರಿಗೆ ಸುಖವನ್ನುಂಟುಮಾಡಬೇಕೆಂಬ ಉದ್ದೇಶದಿಂದ ಮೇಲೆಹೇಳಿದ ಗ್ರಾಮಪಂಚಾಯಿತಿ, ಡಿಸ್ಟ್ರಿಕ್ಟು ಬೋರ್ಡು,

ಮ್ಯುನಿಸಿಪಾಲಿಟಿ ಮೊದಲಾದ ಸ್ಥಳೀಯ ಅಧಿಕಾರದ ಸಂಸ್ಥೆಗಳು ಏರ್ಪಟ್ಟಿರುವುವು. ಖಾಸಗೀ ದೊಡ್ಡಮನುಷ್ಯರು ಮೆಂಬರುಗಳಾಗಿರುವ ಈ ಸಭೆಗಳಿಗೆ ಸರ್ಕಾರದವರು ಹಿಂದೆನಿಂತು ಸಹಾಯಮಾಡುತ್ತಾ, ಜನರನ್ನು ಜವಾಬುದಾರಿಯ ಕೆಲಸಗಳಲ್ಲಿ ತರಪೇತು ಮಾಡುತ್ತಿರುವರು.

ಜನರಿಗೆ ಅನುಕೂಲವಾಗುವಂತೆ ನಮ್ಮ ಸರ್ಕಾರದಲ್ಲಿ ರೆವಿನ್ಯೂ, ಪೋಲೀಸು, ನ್ಯಾಯ ಪರಿಶೀಲನೆ, ವಿದ್ಯಾಭ್ಯಾಸ, ವೈದ್ಯ, ಅಬ್ಕಾರಿ ಮೊದಲಾದ ಇಲಾಖೆಗಳಿವೆ. ಇವಕ್ಕೆಲ್ಲಾ ಒಬ್ಬೊಬ್ಬ ಮುಖ್ಯಾಧಿಕಾರಿಗಳಿರುವರು. ಇವರು ಸಂಸ್ಥಾನದಲ್ಲಿ ತಮ್ಮತಮ್ಮ ಇಲಾಖೆಯ ಕೆಲಸಗಳು ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಅಧಿಕಾರಿಗಳಿಂದ ಸಮರ್ಪಕವಾಗಿ ಜರಗುವಂತೆ ನೋಡಿಕೊಳ್ಳುವರು.

ಈ ಅಧಿಕಾರಿಗಳೆಲ್ಲರನ್ನೂ ಅಧೀನದಲ್ಲಿಟ್ಟುಕೊಂಡು, ರಾಜ್ಯಾಡಳಿತದ ಮೇಲ್ವಿಚಾರಣೆಯನ್ನು ತೆಗೆದುಕೊಳ್ಳುವುದಕ್ಕೂ ಮಹಾರಾಜರವರಿಗೆ ತಕ್ಕ ಸಲಹೆಗಳನ್ನು ಕೊಡುವುದಕ್ಕೂ ನಾಲ್ಕುಜನ ಸಚಿವರಿರುವರು. ಇವರಲ್ಲಿ ಮುಖ್ಯ ಸಚಿವರಿಗೆ "ದಿವಾನರು" ಎಂದೂ ಉಳಿದವರಿಗೆ "ಕೌನ್ಸಿಲರ್"ಗಳೆಂದೂ ಹೆಸರು. ಈ ಸಚಿವ ಸಭೆಗೆ "ಕಾರ್ಯನಿರ್ವಾಹ ಸಭೆ" (Executive Council) ಎಂದು ಹೆಸರು. ಸಂಸ್ಥಾನದ ಮುಖ್ಯ ವಿಷಯಗಳೆಲ್ಲವೂ ಈ ಸಭೆಯಲ್ಲಿ ಚರ್ಚಿಸಲ್ಪಡುವುವು. ಇವರುಗಳು ಸಂಸ್ಥಾನದ ಖಾತೆಗಳನ್ನು ತಮ್ಮಲ್ಲಿ ಹಂಚಿಕೊಂಡು ರಾಜ್ಯಾಡಳಿತವನ್ನು ನಡೆಸುವರು. ಸಂಸ್ಥಾನದಲ್ಲಿ ಇವರು ಆಗಾಗ್ಗೆ ಸಂಚಾರಮಾಡಿ ಪ್ರಜೆಗಳ ಕಷ್ಟಸುಖಗಳನ್ನು ಖುದ್ದಾಗಿ ತಿಳಿದು ತಕ್ಕ ಏರ್ಪಾಡನ್ನು ಮಾಡುವರು.

ಇವರ ಸಹಾಯಕ್ಕಾಗಿ ಒಬ್ಬ ಚೀಫ್ ಸೆಕ್ರೆಟೆರಿಯೂ ಕೆಲವು ಸೆಕ್ರೆಟೆರಿಗಳೂ ನೂರಾರುಮಂದಿ ನೌಕರರೂ ಇರುವರು. ದಿವಾನರ ಮತ್ತು ಕೌನ್ಸಿಲರ್‌ಗಳ ಆಫೀಸುಗಳು ಬೆಂಗಳೂರಿನಲ್ಲಿರುವ ಪಬ್ಲಿಕ್ ಆಫೀಸು ಕಟ್ಟಡದಲ್ಲಿವೆ.

ಸರ್ಕಾರದ ಆದಾಯ

ಸರ್ಕಾರದವರು ಬೇಕಾದಷ್ಟು ದ್ರವ್ಯವನ್ನು ವೆಚ್ಚಮಾಡಿ ಪ್ರಜೆಗಳಿಗೆ ಸಹಾಯಮಾಡಿರುವುದಲ್ಲದೆ ಈಗಲೂ ಮಾಡುತ್ತಲೇ ಇರುವರು.

ಈ ಸಹಾಯಗಳನ್ನು ಅನುಭವಿಸುವ ಪ್ರಜೆಗಳು ತಮ್ಮ ಆದಾಯದಲ್ಲಿ ಸ್ವಲ್ಪ ಭಾಗವನ್ನು ಸರ್ಕಾರಕ್ಕೆ ಕೊಡಬೇಕಾದದ್ದು ಅವರ ಕರ್ತವ್ಯ ವೆಂದು ಹಿಂದೆಯೇ ಹೇಳಿದೆ. ಪ್ರಜೆಗಳು ವ್ಯವಸಾಯ, ಕೈಗಾರಿಕೆ ವ್ಯಾಪಾರ, ಸರ್ಕಾರಿನೌಕರಿ ಮುಂತಾದ ದಾರಿಗಳಲ್ಲಿ ತಮ್ಮ ಜೀವನ ವನ್ನು ಸಂಪಾದಿಸುತ್ತಲಿರುವರು. ಎಲ್ಲರಿಂದಲೂ ಅವರವರ ಆದಾಯಕ್ಕೆ ತಕ್ಕಂತೆ ತೆರಿಗೆಗಳನ್ನು ಎತ್ತಬೇಕಾದುದರಿಂದ ತೆರಿಗೆಗಳು ನಾನಾ ವಿಧ ವಾಗಿರುವವು. ಭೂಕಂದಾಯ, ಕಾಡುಗಳಿಂದ ಬರುವ ಉತ್ಪತ್ತಿ, ಆಬ್ಕಾರಿ ಇಲಾಖಾ ಉತ್ಪತ್ತಿ, ಆದಾಯದ ತೆರಿಗೆ, ಛಾಪಾಕಾಗದಗಳು, ಗಣಿ, ರೈಲು, ನ್ಯಾಯಸ್ಥಾನಗಳು, ವಿದ್ಯುಚ್ಛಕ್ತಿ ಮುಂತಾದವುಗಳಿಂದ ಬರುವ ಆದಾಯ, ಇವುಗಳೆಲ್ಲಾ ಆದಾಯದ ಮುಖ್ಯ ಬಾಬುಗಳಾಗಿವೆ. ಇವುಗಳಿಂದ ಸಂಸ್ಥಾನದಲ್ಲಿ ವರ್ಷಕ್ಕೆ ಸುಮಾರು 8¼ ಕೋಟಿ ರೂಪಾಯಿ ಗಳು ಒಟ್ಟು ಉತ್ಪತ್ತಿಯಾಗುವುವು. ಪ್ರತಿವರ್ಷದಲ್ಲಿ ಬರಬಹುದಾದ ಆದಾಯದ ಮತ್ತು ಅದರ ವ್ಯಯದ ಜಮಾ ಖರ್ಚನ್ನು ತೋರಿಸುವ ಪಟ್ಟಿಗೆ ಬಡ್ಜೆಟ್ (Budget) ಎಂದು ಹೆಸರು.

ವ್ಯಯ.—ಈ ಆದಾಯದಲ್ಲಿ ಹೆಚ್ಚು ಭಾಗವನ್ನು ಪ್ರಜೆಗಳ ಸೌಕ ರ್ಯಕ್ಕಾಗಿ ಸರ್ಕಾರದವರು ವ್ಯಯಮಾಡುವರು. ದೇಶದಲ್ಲಿ ಶಾಂತ ತೆಯು ನೆಲಸಿ, ಪ್ರಜೆಗಳು ಕಳ್ಳಕಾಕರ ಭೀತಿಯಿಲ್ಲದೆ ಸುಖವಾಗಿ ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿರುವಂತೆ ಮಾಡಲು ಸೈನ್ಯವನ್ನೂ ಪೋಲೀಸು ಶಿಬ್ಬಂದಿಯನ್ನೂ ಸಂಬಳಕ್ಕೆ ಇಟ್ಟಿರುವರು ; ಪ್ರಜೆಗಳ ರೋಗನಿವಾರಣೆ ಗಾಗಿ ವಿಕ್ಟೋರಿಯಾ ಆಸ್ಪತ್ರೆ ; ಕೃಷ್ಣರಾಜೇಂದ್ರ ಆಸ್ಪತ್ರೆ ಮೊದಲಾದ ಭಾರಿ ಆಸ್ಪತ್ರೆಗಳನ್ನು ದೊಡ್ಡದೊಡ್ಡ ಪಟ್ಟಣಗಳಲ್ಲಿ ಇಟ್ಟಿರುವುದಲ್ಲದೆ, ಗ್ರಾಮಾಂತರಗಳಲ್ಲಿಯೂ ವೈದ್ಯಶಾಲೆಗಳನ್ನು ಏರ್ಪಡಿಸಿ ರೋಗಿಗಳಿಗೆ ಔಷಧಗಳು ದೊರೆಯುವಂತೆ ಮಾಡಿರುವರು ; ನೇತ್ರರೋಗಗಳಿಗೆ ಚಿಕಿತ್ಸೆ ಮಾಡಲು ಬೆಂಗಳೂರಿನಲ್ಲಿ "ಮಿಂಟೊ ಆಫ್ತಾಲ್ಮಿಕ್ ಹಾಸ್ಪಿಟಲ್" ಎಂಬ ದೊಡ್ಡ ಕಣ್ಣಾಸ್ಪತ್ರೆಯನ್ನು ಸ್ಥಾಪಿಸಿರುವರು ; ಸಂಸ್ಥಾನದ ಪ್ರಜೆಗಳ ಲ್ಲದೆ ದೂರದೇಶಗಳಿಂದ ಜನರು ಈ ಆಸ್ಪತ್ರೆಗೆ ಬಂದು ತಮ್ಮ ಕಣ್ಣಿನ ವ್ಯಾಧಿಗಳನ್ನು ಪರಿಹಾರಮಾಡಿಕೊಳ್ಳುವರು. ಮನುಷ್ಯರಿಗಿರುವಂತೆಯೇ ಹಸು, ಕುದುರೆ, ನಾಯಿ ಮೊದಲಾದ ಪ್ರಾಣಿಗಳಿಗೆ ಚಿಕಿತ್ಸೆ ಮಾಡಲು

ಪಶುವೈದ್ಯಶಾಲೆಗಳಿವೆ. ದೊಡ್ಡದೊಡ್ಡ ಪಟ್ಟಣಗಳಲ್ಲಿ ಜನರಿಗೆ ಕುಡಿಯುವುದಕ್ಕೆ ಒಳ್ಳೆಯ ನೀರನ್ನು ಒದಗಿಸಲು ಏರ್ಪಾಟುಗಳನ್ನು ಮಾಡಿರುವರು. ಸಂಚಾರಕ್ಕಾಗಿ ರಸ್ತೆಗಳನ್ನೂ ರೈಲು ಮಾರ್ಗಗಳನ್ನೂ, ವರ್ತಮಾನ ಕಳುಹಿಸಲು ಅಂಚೆ ಮತ್ತು ತಂತೀ ಟಪಾಲನ್ನೂ, ನ್ಯಾಯ ತೀರ್ಪು ಮಾಡಲು ನ್ಯಾಯಸ್ಥಾನಗಳನ್ನೂ ಏರ್ಪಡಿಸಿರುವರು. ವ್ಯವಸಾಯಕ್ಕಾಗಿ ನೀರು ಒದಗಿಸಲು ಕಪಿಲೆ, ಕಾವೇರಿ, ಹೇಮಾವತಿ ಮೊದಲಾದ ನದಿಗಳಿಂದ ಕಾಲುವೆಗಳನ್ನು ತೆಗದಿರುವುದಲ್ಲದೆ ದೊಡ್ಡ ದೊಡ್ಡ ಕೆರೆಗಳನ್ನು ಉತ್ತಮಸ್ಥಿತಿಯಲ್ಲಿಟ್ಟಿರುವರು. ಎತ್ತರದಲ್ಲಿರುವ ಬಂಜರು ಪ್ರದೇಶಗಳನ್ನು ವ್ಯವಸಾಯಕ್ಕೆ ತರಲು ನದಿಗಳಿಗೆ ಎತ್ತರವಾದ ಸ್ಥಳಗಳಲ್ಲಿ ಅಡ್ಡ ಕಟ್ಟೆಗಳನ್ನು ಕಟ್ಟಿ ನಿಂತ ನೀರನ್ನು ಕಾಲುವೆಗಳ ಮೂಲಕ ಬಿಡುವರು. ಬೆಂಗಳೂರು, ಮೈಸೂರು ನಗರಗಳು ಕೋಲಾರದ ಗಣಿ—ಇವಕ್ಕೆ ಬೆಳಕನ್ನು ಕೊಡುವುದಕ್ಕೂ, ಕೈಗಾರಿಕೆಗಳಿಗೆ ಅನುಕೂಲಿಸುವಂತೆಯೂ ಶಿವನಸಮುದ್ರದಲ್ಲಿ ಕಾವೇರಿಯ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಸೃಷ್ಟಿಸಲು ಹೇರಳವಾಗಿ ಖರ್ಚುಮಾಡಿರುವರು. ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ಮಾಡಿರುವ ಸಹಾಯವು ಅಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ. ಗ್ರಾಮ ಗ್ರಾಮಗಳಲ್ಲಿ ಮಕ್ಕಳಿಗೆ ಓದು ಬರೆಹ ಕಲಿಸಲು ಪ್ರಾಥಮಿಕ ವಿದ್ಯಾಶಾಲೆಗಳು ಏರ್ಪಟ್ಟಿವೆ. ಪ್ರೌಢವಿದ್ಯಾಭ್ಯಾಸಕ್ಕೆ ಬಾಲಕ ಬಾಲಕಿಯರಿಗೆ ಪ್ರತ್ಯೇಕವಾದ ಹೈಸ್ಕೂಲುಗಳೂ, ಬೆಂಗಳೂರು ಮತ್ತು ಮೈಸೂರುಗಳಲ್ಲಿ ಕಾಲೇಜುಗಳೂ ಏರ್ಪಟ್ಟಿವೆ. ಪ್ರೌಢವಿದ್ಯಾಭ್ಯಾಸ ಮಾಡುವವರಿಗೆ ವಿದ್ಯಾಭ್ಯಾಸದ ಪದ್ಧತಿಗಳನ್ನು ಬೋಧಿಸಿ ಅವರ ಯೋಗ್ಯತೆಯನ್ನು ಪರೀಕ್ಷಿಸಲು "ಮೈಸೂರು ಯೂನಿವರ್ಸಿಟಿ" ಎಂಬ ಸರ್ವಕಲಾ ಸಮಾಜವು ಸ್ಥಾಪಿಸಲ್ಪಟ್ಟಿದೆ. ಇವುಗಳಲ್ಲದೆ ವ್ಯವಸಾಯ, ವಾಣಿಜ್ಯ, ವೈದ್ಯ, ಕೈಗಾರಿಕೆಮೊದಲಾದ ಕಸಬುಗಳನ್ನು ಕಲಿಸಲು ಬೇರೆಬೇರೆ ಶಾಲೆಗಳು ಏರ್ಪಟ್ಟಿವೆ. ವಿದ್ಯಾವಂತರುಗಳನ್ನು ಪರದೇಶಗಳಿಗೆ ಕಳುಹಿಸಿ ಅಲ್ಲಿಯ ಕೈಗಾರಿಕೆ, ಕಲಾಕೌಶಲ, ವೈದ್ಯವಿದ್ಯೆ ಮುಂತಾದ ಶಾಸ್ತ್ರಗಳಲ್ಲಿ ಪ್ರವೀಣರಾಗುವಂತೆ ಮಾಡಿ ಅವರು ಕಣ್ಣಾರೆ ನೋಡಿ ಕಲಿತು ಬಂದ ವಿದ್ಯೆಯನ್ನು ಇಲ್ಲಿಯೂ ಪ್ರಚಾರಗೊಳಿಸಲು ಸರ್ಕಾರದವರು ತಕ್ಕ ಏರ್ಪಾಟನ್ನು ಮಾಡಿರುವರು. ಈ ಅನುಕೂಲ

ಗಳನ್ನು ಸದುಪಯೋಗಪಡಿಸಿಕೊಂಡು ಅಭಿವೃದ್ಧಿ ಹೊಂದುವುದು ಪ್ರಜೆಗಳ ಮೇಲೆ ಬಿದ್ದ ಭಾರವಾಗಿದೆ.

ಸಂಸ್ಥಾನದ ಆಡಳಿತವು ಹೇಗೆ ನಿರ್ವಾಹವಾಗುವುದೆಂಬುದನ್ನು ಹೇಳಿಯಾಯಿತು. ರಾಜ್ಯಾಡಳಿತಕ್ಕೆ ಆವಶ್ಯಕವಾಗುವ ನ್ಯಾಯನಿಬಂಧನೆಗಳನ್ನು ಮಾಡುವುದರಲ್ಲಿ ವಿಶೇಷ ಅನುಭವ ಮತ್ತು ತಿಳಿವಳಿಕೆಯುಳ್ಳ ಖಾಸಗಿ ದೊಡ್ಡ ಮನುಷ್ಯರ ಸಲಹೆಗಳನ್ನು ಹೊಂದಲು ನ್ಯಾಯ ನಿರ್ಮಾಣ ಸಭೆಯು (Legislative Council) ಸ್ಥಾಪಿಸಲ್ಪಟ್ಟಿದೆ. ಈ ಸಭೆಗೆ ಸರ್ಕಾರದವರು ನೇಮಿಸುವ ಅಧಿಕಾರಿಗಳಲ್ಲದೆ ಮೂರು ವರ್ಷಕ್ಕೊಂದಾವರ್ತಿ ಚುನಾಯಿಸಲ್ಪಡುವ 50 ಮಂದಿ ಸಭ್ಯರಿರುವರು. ಈ ಸಭೆಗೆ ಸಂಸ್ಥಾನದ ದಿವಾನರು ಪ್ರಸಿಡೆಂಟ್ ಅಥವ ಆಧ್ಯಕ್ಷರಾಗಿದಾರೆ. ಸರ್ಕಾರದವರು ಮಾಡುವ ನಿಬಂಧನೆಗಳು ಈ ಸಭೆಯಲ್ಲಿ ಚರ್ಚಿಸಲ್ಪಟ್ಟು ಅಂಗೀಕೃತವಾದಮೇಲೆ ಮಹಾರಾಜರವರ ಅನುಮತಿಯನ್ನು ಪಡೆದು ಜಾರಿಗೆ ಬರುವುವು. ಸರ್ಕಾರದವರು ಈ ಸಭೆಗೆ ತರುವ ಬಡ್ಜೆಟ್ಟಿನ ವಿಷಯದಲ್ಲಿ ಸಭ್ಯರು ಚರ್ಚೆಮಾಡಿ ತಮ್ಮ ಅಭಿಪ್ರಾಯವನ್ನು ಸೂಚಿಸುವ ಅಧಿಕಾರವು ಕೊಡಲ್ಪಟ್ಟಿದೆ.

ಸಂಸ್ಥಾನದ ಮುಖ್ಯವಿಷಯಗಳಲ್ಲಿ ರೈತರ ಮತ್ತು ವರ್ತಕರ ಅಭಿಪ್ರಾಯವನ್ನು ನೇರವಾಗಿ ತಿಳಿದು ಅದರಂತೆ ರಾಜ್ಯಾಡಳಿತವನ್ನು ನಡೆಸಬೇಕೆಂಬ ಇಚ್ಛೆಯಿಂದಲೂ, ಜನರೂ ರಾಜಕಾರ್ಯದಲ್ಲಿ ಭಾಗಿಗಳಾಗಿರಲೆಂಬ ಕುತೂಹಲದಿಂದಲೂ ನಮ್ಮ ಮಹಾರಾಜರವರು ಪ್ರಜಾಪ್ರತಿನಿಧಿ ಸಭೆ (Representative Assembly) ಯನ್ನು ಏರ್ಪಡಿಸಿರುವರು. ಪ್ರಜೆಗಳೇ ಆರಿಸಿದ ಅವರುಗಳ ಮುಖಂಡರು 250 ಮಂದಿ ಈ ಸಭೆಯಲ್ಲಿರುವರು. ಇದರ ಸಭ್ಯರೂ ಸಹ ಮೂರು ವರ್ಷಕ್ಕೊಂದಾವರ್ತಿ ಚುನಾಯಿಸಲ್ಪಡುವರು. ಈ ಸಭೆಗೂ ದಿವಾನರವರೇ ಅಧ್ಯಕ್ಷರು. ಈ ಸಭೆಯು ವರ್ಷದಲ್ಲಿ ಎರಡುಸಲ ರಾಜಧಾನಿಯಲ್ಲಿ ಸೇರುವುದು. ಇದರ ಸಭ್ಯರು ಪ್ರಜೆಗಳ ಕಷ್ಟ ಸುಖಗಳನ್ನು ಸರ್ಕಾರಕ್ಕೆ ತಿಳಿಸಿ ಆವಶ್ಯಕವಾಗಿರುವ ಸೌಕರ್ಯಗಳನ್ನು ಸೂಚಿಸುವರು. ರಾಜ್ಯಾಡಳಿತದ ವಿಚಾರಗಳನ್ನೂ ಮತ್ತು ಸಂಸ್ಥಾನದ ಆದಾಯ ವ್ಯಯದ ಲೆಖ್ಖವನ್ನೂ ಅಧಿಕಾರಿಗಳೊಡನೆ ಚರ್ಚಿಸುವರು. ಹೊಸ ನಿಬಂಧನೆಯ ಮುಖ್ಯ ಉದ್ದೇಶಗಳು ಮೊದಲು ಈ ಸಭೆ

ಯಲ್ಲಿ ಚರ್ಚಿಸಲ್ಪಡುವುವು. ಈ ಸಭೆಯ ಅಧಿಕಾರವೂ ಜವಾಬುದಾರಿಯೂ ಹೆಚ್ಚಾಗುವಂತೆ ಮಹಾರಾಜರವರು ಈಚೆಗೆ ಅಪ್ಪಣೆಯನ್ನು ಕೊಟ್ಟಿರುತ್ತಾರೆ.

ಮೇಲ್ಕಂಡ "ಕಾರ್ಯನಿರ್ವಾಹಕ" ಮತ್ತು "ನ್ಯಾಯನಿರ್ಮಾಣಕ" ಸಾಧನಗಳ ಸಹಾಯದಿಂದ ಶ್ರೀಮನ್ಮಹಾರಾಜರವರು ಈ ದೇಶದ ಆಡಳಿತವನ್ನು ನಡೆಸುತ್ತಿರುವರು. ಇವರು ಸಾಮ್ರಾಜ್ಯ ಸರ್ಕಾರಕ್ಕೆ ಅಧೀನರಾಗಿದ್ದರೂ ದೇಶದ ಒಳ ಆಡಳಿತದ ವಿಷಯದಲ್ಲಿ ಪೂರ್ಣಸ್ವತಂತ್ರರೆಂದು ಹೇಳಬಹುದು. ಇವರ ಆಳ್ವಿಕೆಯಲ್ಲಿ ದೇಶವು ಎಲ್ಲಾ ವಿಧದಲ್ಲಿಯೂ ಅಭಿವೃದ್ಧಿಯನ್ನು ಹೊಂದಿ ಇತರ ಆಶ್ರಿತ ಸಂಸ್ಥಾನಗಳಿಗೆ ಮಾದರಿಯಾಗಿರುವುದು. ಈ ದೇಶವನ್ನು ನೋಡಲು ಬಂದ ಚಕ್ರವರ್ತಿಗಳ ಜ್ಯೇಷ್ಠ ಪುತ್ರರೂ, ವೈಸ್‌ರಾಯಿಗಳೂ ಮಹಾರಾಜರ ಏರ್ಪಾಟುಗಳನ್ನು ನೋಡಿ ಸಂತೋಷಪಟ್ಟಿರುವರು.

ಪ್ರಜೆಗಳಲ್ಲಿ ಎಲ್ಲಾ ಮತಸ್ಥರೂ ಕೋಮಿನವರೂ ಪರಸ್ಪರಸಹಾಯಕರಾಗಿ ದೇಶದ ಅಭಿವೃದ್ಧಿಯನ್ನೇ ಮುಂದುಮಾಡಿಕೊಂಡು ಒಕ್ಕಟ್ಟಿನಿಂದ ಕೆಲಸಮಾಡಿ ದೇಶದ ಸುಖ ಸಾಧನಗಳನ್ನು ಹೆಚ್ಚಿಸಿಕೊಂಡು, ಧರ್ಮವಾಗಿಯೂ ಸುಖವಾಗಿಯೂ ಬಾಳಲೆಂಬುದೇ ನಮ್ಮ ಮಹಾರಾಜರವರ ಆಶಯವಾಗಿದೆ. "ಸರ್ಕಾರವೆಂದರೆ ನಾವೇ, ಸರ್ಕಾರದ ಕೆಲಸವು ನಮಗಾಗಿಯೇ" ಎಂಬುದನ್ನು ಗಮನದಲ್ಲಿಟ್ಟುಕೊಂಡು ನಾವು ಸರ್ಕಾರಕ್ಕೆ ಸಹಾಯಕರಾಗಬೇಕು. ಇದೇ ರಾಜಭಕ್ತಿ. ಇದೇ ನಮ್ಮ ಪ್ರಭುಗಳ ನಿರೀಕ್ಷಣೆ.

೪ನೆಯ ಭಾಗ.—ಬ್ರಿಟಿಷ್ ಇಂಡಿಯಾದ ಒಳಸರ್ಕಾರಗಳು

ಬ್ರಿಟಿಷ್ ಇಂಡಿಯವನ್ನು ರಾಜ್ಯಾಡಳಿತಕ್ಕಾಗಿ 15 ಪ್ರಾಂತಗಳಾಗಿ ವಿಂಗಡಿಸಿದ್ದಾರೆ. ಅವುಗಳು ಯಾವುವೆಂದರೆ :—

(1) ಬಂಗಾಳ (2) ಬೊಂಬಾಯಿ (3) ಮದರಾಸು (4) ಅಸ್ಸಾಂ (5) ಬಿಹಾರ ಮತ್ತು ಒರಿಸ್ಸಾ (6) ಬರ್ಮ (7) ಮಧ್ಯಪ್ರಾಂತಗಳು ಮತ್ತು ಬೀರಾರ್ (8) ಪಂಜಾಬು (9) ಸಂಯುಕ್ತ ಪ್ರಾಂತಗಳು (10) ಅಜ್ಮೀರ್–ಮೇವಾಡ (11) ಅಂಡಮಾನ ಮತ್ತು ನಿಕೋಬಾರ್

ದ್ವೀಪಗಳು (12) ಬ್ರಿಟಿಷ್ ಬೆಲೂಚಿಸ್ಥಾನ (13) ಕೊಡಗು (14 ವಾಯವ್ಯ ಸರಹದ್ದಿನ ಪ್ರಾಂತಗಳು (15) ದೆಹಲಿ.

ಇವುಗಳ ಪೈಕಿ ಬಂಗಾಳ, ಬೊಂಬಾಯಿ, ಮದರಾಸುಗಳನು ಪ್ರೆಸಿಡೆನ್ಸಿ ಅಥವಾ ಆಧಿಪತ್ಯಗಳೆಂದು ಕರೆಯುತ್ತಾರೆ. ಇವುಗಳನ್ನಾಳು ಗವರ್ನರುಗಳನ್ನು ಚಕ್ರವರ್ತಿಗಳು ಸ್ಟೇಟ್ ಸೆಕ್ರಟೆರಿಯವರ ಅಭಿಪ್ರಾಯ ದಂತೆ ನೇಮಿಸುವರು. ಇತರ ಗೌರ್ನರುಗಳಿಗಿಂತ ಇವರಿಗೆ ಸಂಬಳವು ಸ್ವಾತಂತ್ರವೂ ಹೆಚ್ಚಾಗಿದೆ. ಇವರ ಸಹಾಯಕ್ಕೆ 4 ಜನ ಸಭ್ಯರಿರು ಒಂದು ಕಾರ್ಯನಿರ್ವಾಹ ಸಭೆಯೂ, ಮೂರುಜನ ಸಚಿವರೂ, ಒಂದ ನ್ಯಾಯ ನಿರ್ಮಾಣ ಸಭೆಯೂ ಇರುವುವು.

ಅಸ್ಸಾಂ, ಬಿಹಾರ್ ಮತ್ತು ಒರಿಸ್ಸಾ, ಬರ್ಮ, ಮಧ್ಯ ಪ್ರಾಂ ಗಳು ಮತ್ತು ಬೀರಾರ್, ಪಂಜಾಬು ಮತ್ತು ಸಂಯುಕ್ತ ಪ್ರಾಂತಗಳ ಇವುಗಳನ್ನು ರಾಷ್ಟ್ರ (Provinces) ಗಳೆಂದು ಕರೆಯುತ್ತಾರೆ. ಇ ಆಳುವ ಗೌರ್ನರುಗಳನ್ನು ಚಕ್ರವರ್ತಿಗಳು ವೈಸ್‌ರಾಯಿಯವರ ಸಲ ಯಂತೆ ನೇಮಿಸುವರು. ಆಧಿಪತ್ಯಗಳ ಗೌರ್ನರುಗಳಂತೆ ಇವರು ವಿ ಯಿತಿಯಿಂದಲೇ ಬರಬೇಕಾದುದಿಲ್ಲ. ಇಂಡಿಯಾದಲ್ಲಿ ಕೆಲಸಮಾಡಿ ಸ ರ್ಥರೆನಿಸಿಕೊಂಡ ಹುದ್ದೇದಾರರನ್ನು ಈ ಕೆಲಸಕ್ಕೆ ಆರಿಸುವುದೂ ಉಂಟು ಇವರ ಸಹಾಯಕ್ಕಾಗಿ ಇಬ್ಬರು ಸಭ್ಯರೂ, ಇಬ್ಬರು ಮಂತ್ರಿಗಳು ಒಂದು ನ್ಯಾಯ ನಿರ್ಮಾಣ ಸಭೆಯೂ ಇವೆ.

ಮಿಕ್ಕ ಆರು ಪ್ರಾಂತಗಳು ವೈಸ್‌ರಾಯಿಯವರಿಗೆ ಅಧೀನರಾ ಚೀಫ್ ಕಮಿಷನರ್ ಅಥವ ಪೊಲಿಟಿಕಲ್ ಏಜೆಂಟರವರ ಆಳ್ವಿಕೆಯಿಲ್ಲಿವೆ.

ನಮ್ಮ ದೇಶದಲ್ಲಿರುವ ಹಾಗೆಯೇ ಪ್ರತಿಯೊಂದು ಪ್ರಾಂತದ ಹಳ್ಳಿಗಳೂ, ತಾಲ್ಲೂಕುಗಳೂ, ಜಿಲ್ಲೆಗಳೂ ಇರುವುವು. ಹಳ್ಳಿಗಳಲ್ಲಿ ಪಟೇ ಲರು, ಶಾನುಭೋಗರು ಮೊದಲಾದ ಗ್ರಾಮಾಧಿಕಾರಿಗಳೂ, ತಾಲ್ಲೂಕ ಗಳಲ್ಲಿ ಇವರಿಗೆ ಮೇಲ್ಪಟ್ಟ ಅಧಿಕಾರಿಗಳೂ, ಜಿಲ್ಲೆಗಳಲ್ಲಿ ಇವರ ಮೇಲಿರು ಅಧಿಕಾರಿಗಳೂ ಇರುವರು. ಜಿಲ್ಲೆಯ ಮುಖ್ಯಾಧಿಕಾರಿಗೆ ಕಲೆಕ್ಟರ್ ಎಂದ ಹೆಸರು. ಈ ಹುದ್ದೆಗೆ ಬರುವವರು ದಯೆ, ದಾಕ್ಷಿಣ್ಯ, ಸತ್ಯಸಂಧತೆ ಮೊದ ಲಾದ ಸದ್ಗುಣಗಳನ್ನುಳ್ಳವರಾಗಿಯೂ, ಇಂಡಿಯನ್ ಸಿವಿಲ್ ಸರ್ವಿಸ್ ಎಂ ದೊಡ್ಡ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರುವರು.

ಇಂಡಿಯಾ ಸರ್ಕಾರಕ್ಕೆ ಅಧೀನವಾದ ಈ ಒಳ ಸರ್ಕಾರಗಳು ತಮ್ಮ ಅಧಿಕಾರಕ್ಕೆ ಒಳಪಟ್ಟ ಪ್ರಾಂತಗಳಲ್ಲಿನ ಪ್ರಜೆಗಳ ಆರೋಗ್ಯ, ಬಾಲ್ಯ ಮತ್ತು ಪ್ರೌಢ ವಿದ್ಯಾಭ್ಯಾಸ, ನ್ಯಾಯ ವಿಚಾರಣೆ, ಪ್ರಯಾಣ ಸೌಕರ್ಯಗಳು, ವ್ಯವಸಾಯ ಕೈಗಾರಿಕೆಗಳ ಅಭಿವೃದ್ಧಿ ಮೊದಲಾದ ಸ್ಥಳೀಯ ವಿಷಯಗಳಿಗೆ ಗಮನಕೊಡುವುವು.

೫ನೆಯ ಭಾಗ — ಇಂಡಿಯಾ ಸರ್ಕಾರ

ದೊಡ್ಡದೊಡ್ಡ ಆಶ್ರಿತ ಸಂಸ್ಥಾನಗಳ ಮತ್ತು ಬ್ರಿಟಿಷರೇ ಸ್ವಂತವಾಗಿ ಆಳುವ ಒಳ ಸರ್ಕಾರಗಳ ಮೇಲ್ವಿಚಾರಣೆಯನ್ನು ತೆಗೆದುಕೊಳ್ಳುವುದಕ್ಕೂ ಇಂಡಿಯಾ ದೇಶವನ್ನೆಲ್ಲಾ ಆಳುವುದಕ್ಕೂ ಗೌರ್ನರ್ ಜನರಲ್ ಎಂಬ ಅಧಿಕಾರಿಯು ಇರುವನು. ಇಂಡಿಯಾ ಚಕ್ರವರ್ತಿಗಳು ಇಲ್ಲಿಯೇ ಇದ್ದುಕೊಂಡು ದೇಶವನ್ನಾಳುವುದು ಸಾಧ್ಯವಲ್ಲದುದರಿಂದ ತಮ್ಮ ಪ್ರತಿನಿಧಿಯಾಗಿ ನೇಮಿಸುವ ಈ ಅಧಿಕಾರಿಯನ್ನು "ವೈಸ್‌ರಾಯಿ" ಎಂತಲೂ ಕರೆಯುವರು. ಚಕ್ರವರ್ತಿಗಳು ಇಲ್ಲಿಯೇ ಇದ್ದರೆ ಅವರು ಯಾವ ಯಾವ ಕೆಲಸಗಳನ್ನು ಮಾಡಬಹುದೊ ಅವುಗಳನ್ನೆಲ್ಲಾ ಈತನು ಮಾಡುವನು. ಈ ದೇಶದ ರಾಜರುಗಳಿಂದಲೂ ನವಾಬರಿಂದಲೂ ಕಪ್ಪಕಾಣಿಕೆಗಳನ್ನೂ ರಾಜಭಕ್ತಿಯನ್ನೂ ಸ್ವೀಕರಿಸುತ್ತಾನೆ. ಮರಣ ಶಿಕ್ಷೆಯಾದ ಅಪರಾಧಿಯನ್ನು ಕ್ಷಮಿಸುವ ರಾಜಠ ಅಧಿಕಾರವು ಈತನಿಗಿದೆ.

ಸಾಮಾನ್ಯವಾಗಿ ಈತನು ರಾಜ ತಂತ್ರ ನಿಪುಣನಾಗಿಯೂ, ಇಂಗ್ಲೆಂಡಿನ ದೊಡ್ಡ ಮನೆತನಕ್ಕೆ ಸೇರಿದವನಾಗಿಯೂ ಇರುವನು. ಈತನ ಸಹಾಯಕ್ಕಾಗಿ "ಮಂತ್ರಾಲೋಚನ" ಅಥವ "ಕಾರ್ಯನಿರ್ವಾಹ" ಸಭೆಯೊಂದಿರುವುದು. ಈ ಸಭೆಯಲ್ಲಿ ವೈಸ್‌ರಾಯಿಗಳೂ ಮತ್ತು ಮುಖ್ಯ ಸೇನಾಧಿಪತಿಯೂ ಸೇರಿ 8 ಜನ ಸಭ್ಯರಿರುತ್ತಾರೆ. ಇವರಲ್ಲಿ ಮೂವರು ಭರತಖಂಡದವರಾಗಿರುತ್ತಾರೆ. ಇವರನ್ನು ಚಕ್ರವರ್ತಿಗಳು 5 ವರ್ಷಕ್ಕೊಂದಾವರ್ತಿ ನೇಮಿಸುವರು. ವೈಸ್‌ರಾಯಿಗಳು ಮತ್ತು ಕಾರ್ಯನಿರ್ವಾಹ ಸಭೆಯು ಸೇರಿ "ಇಂಡಿಯಾ ಸರ್ಕಾರ" ಎಂದೆನಿಸುವುದು.

ಈ ಸರ್ಕಾರದ ಕೆಲಸಗಳನ್ನು 8 ಖಾತೆಗಳಾಗಿ ವಿಂಗಡಿಸಿ ಕಾರ್ಯನಿರ್ವಾಹ ಸಭೆಯ 8 ಮಂದಿ ಸಭ್ಯರು ಒಂದೊಂದು ಇಲಾಖೆಯ ಆಡ

ಳಿತವನ್ನು ನಡಿಸುವರು. ಇಂಡಿಯಾ ಸರ್ಕಾರದ ಮುಖ್ಯ ವಿಷಯಗಳೆಲ್ಲವೂ ವಾರಕ್ಕೆ ಒಂದುಸಲ ಸೇರುವ ಈ ಸಭೆಯಲ್ಲಿ ತೀರ್ಮಾನವಾಗುವುವು. ಈ ಸರ್ಕಾರವು ಛಳಿಗಾಲದಲ್ಲಿ ಇಂಡಿಯಾ ಚಕ್ರಾಧಿಪತ್ಯಕೆ ರಾಜಧಾನಿಯಾದ ದೆಹಲಿಯಲ್ಲಿಯೂ, ಬೇಸಿಗೆಯಲ್ಲಿ ಸಿಂಲಾ ಪಟ್ಟಣದಲ್ಲಿಯೂ ಇರುವುದು.

ಇಡೀ ಹಿಂದೂಸ್ಥಾನಕ್ಕೆ ಸಂಬಂಧಪಡುವ ಆಡಳಿತಗಳನ್ನು ನಡೆಸುವುದೂ ಒಳ ಸರ್ಕಾರಗಳ ಮೇಲ್ವಿಚಾರಣೆ ತೆಗೆದುಕೊಳ್ಳುವುದೂ, ಸಾರ್ವಕವಾದ ರಾಜ್ಯಾಡಳಿತಕ್ಕೆ ತಕ್ಕ ಸಲಹೆಗಳನ್ನು ಕೊಡುವುದೂ ಯಾವ ವಿಷಯದಲ್ಲಾದರೂ ಒಂದು ಒಳಸರ್ಕಾರಕ್ಕೂ ಮತ್ತೊಂದಕ್ಕೂ ಹುಟ್ಟಬಹುದಾದ ಭಿನ್ನಾಭಿಪ್ರಾಯಗಳನ್ನು ತೀರ್ಮಾನಿಸುವುದೂ, ಇವೆಲ್ಲವೂ ಇಂಡಿಯಾ ಸರ್ಕಾರದ ಕೆಲಸಗಳಾಗಿವೆ.

ಹಿಂದೂಸ್ಥಾನಕ್ಕೆಲ್ಲಾ ಸಂಬಂಧಪಡುವ ಮಸೂದೆಗಳನ್ನು ಮಾಡುವುದಕ್ಕೆ ಕೌನ್ಸಿಲ್ ಆಫ್ ಸ್ಟೇಟ್ ಮತ್ತು ಲೆಜಿಸ್ಲೆಟೀವ್ ಅಸೆಂಬ್ಲಿ ಎಂಬ ಎರಡು ನ್ಯಾಯನಿರ್ಮಾಣ ಸಭೆಗಳಿವೆ. ಕೌನ್ಸಿಲ್ ಆಫ್ ಸ್ಟೇಟಿನಲ್ಲಿ 60 ಮಂದಿ ಸಭ್ಯರಿರುವರು. ಇವರ ಪೈಕಿ 27 ಮಂದಿ ಸಭ್ಯರನ್ನು ವೈಸ್‌ರಾಯಿಯವರು ನೇಮಿಸುವರು. ಮಿಕ್ಕ 33 ಮಂದಿ ಸಭ್ಯರು ಜಹಗೀರುದಾರರು, ಇನಾಂದಾರರು, ಹೆಚ್ಚು ಕಂದಾಯ ಕೊಡುವ ಜಮೀನುದಾರರೂ ಇವರುಗಳಿಂದ ಚುನಾಯಿಸುವರು. ಇವರು ಸಭ್ಯರಾಗಿರುವ 5 ವರ್ಷಗಳ ಕಾಲದಲ್ಲಿ ಇವರುಗಳಿಗೆ "ಆನರಬಲ್" ಎಂಬ ಬಿರುದುಂಟು. ಲೆಜಿಸ್ಲೆಟೀವ್ ಅಸೆಂಬ್ಲಿಯಲ್ಲಿರುವ 144 ಮಂದಿ ಸಭ್ಯರ ಪೈಕಿ 103 ಮಂದಿ ಸಭ್ಯರನ್ನು ಪ್ರಜಾಸಮುದಾಯದಿಂದ ಆರಿಸುವರು. ಮಿಕ್ಕ 41 ಮಂದಿಯನ್ನು ವೈಸರಾಯಿಯವರು ನೇಮಿಸುವರು. ಇಂಡಿಯಾ ಸರ್ಕಾರದವರು ಆಚರಣೆಗೆ ತರಬೇಕೆಂಬ ಮಸೂದೆಗಳೆಲ್ಲವೂ ಸಾಮಾನ್ಯವಾಗಿ ಮೊದಲು ಅಸೆಂಬ್ಲಿಯಲ್ಲಿ ಚರ್ಚೆಯಾಗಿ ಅಲ್ಲಿನ ಸಭಿಕರು ಒಪ್ಪಿದ ಮೇಲೆ ಕೌನ್ಸಿಲ್ ಆಫ್ ಸ್ಟೇಟಿಗೆ ಕಳುಹಿಸಲ್ಪಡುವುವು. ಅಲ್ಲಿಯೂ ಅಂಗೀಕೃತವಾದಮೇಲೆ ವೈಸ್‌ರಾಯಿಯವರ ಅನುಮತಿಯನ್ನು ಪಡೆದು ಆಚರಣೆಗೆ ಬರುವುವು.

೭ನೆಯ ಭಾಗ.—ಸರ್ವಾಧಿಕಾರ ಸರ್ಕಾರ

ನಮ್ಮ ಭರತಖಂಡವು ಬ್ರಿಟಿಷ್ ಚಕ್ರಾಧಿಪತ್ಯದ ಮುಖ್ಯಭಾಗವಾಗಿದೆ. ಎಲ್ಲಾ ಖಂಡಗಳಲ್ಲಿಯೂ ಹರಡಿರುವ ವಿಸ್ತಾರವಾದ ಈ ಆಧಿಪತ್ಯದ ಆಡಳಿತವು ಚಕ್ರವರ್ತಿಗಳ ಮತ್ತು "ಪಾರ್ಲಿಮೆಂಟ್" ಸಭೆಯ ಸರ್ವಾಧಿಕಾರಕ್ಕೆ ಒಳಪಟ್ಟಿರುವುದು. ಸಾಂಕುಶಪ್ರಭುತ್ವಕ್ಕೆ ತವರುಮನೆಯಾದ ಇಂಗ್ಲೆಂಡ್ ದೇಶವೂ ಅದರ ಸ್ವಾಸ್ಥ್ಯಗಳೂ, ಈ ಸಭೆಯ ಅಭಿಪ್ರಾಯಕ್ಕೆ ತಕ್ಕಂತೆ ಪಾಲಿಸಲ್ಪಡುತ್ತಿವೆ.

ಈ ಸಭೆಯಲ್ಲಿ ಎರಡು ಭಾಗಗಳಿರುವುವು. ಜನರು ಆರಿಸಿದ ಮುಖಂಡರ ಸಭೆಗೆ "ಪ್ರಜಾಪ್ರತಿನಿಧಿಗಳ ಸಭೆ (House of Commons)" ಎಂದು ಹೆಸರು. ಈ ಸಭೆಯಲ್ಲಿ 670 ಜನ ಸಭ್ಯರಿರುವರು. ದೊಡ್ಡವು ಮನೆತನದ ಶ್ರೀಮಂತರು ವಂಶಪಾರಂಪರ್ಯವಾಗಿ ಸದಸ್ಯರಾಗಿರುವ ಸಭೆಗೆ "ಪ್ರಭುಗಳ ಸಭೆ (House of Lords)" ಎಂದು ಹೆಸರು. ಇದರಲ್ಲಿ 618 ಜನ ಸಭ್ಯರಿರುತ್ತಾರೆ. ಈ ಸಭೆಗಳಲ್ಲಿ ಪ್ರಜಾಪ್ರತಿನಿಧಿ ಸಭೆಯೇ ಪ್ರಬಲವಾದುದು. ಈ ಸಭೆಗಳು, ಆಧಿಪತ್ಯಕ್ಕೆ ರಾಜಧಾನಿಯಾದ ಲಂಡನ್ ಪಟ್ಟಣದಲ್ಲಿರುವ ವೆಸ್ಟ್‌ಮಿನಿಸ್ಟರ್ ಭವನದಲ್ಲಿ ಸೇರುವುವು. ಚಕ್ರಾಧಿಪತ್ಯದ ಎಲ್ಲಾ ಭಾಗಗಳ ಆಡಳಿತದ ಮೇಲ್ವಿಚಾರಣೆಯನ್ನು ತೆಗೆದುಕೊಳ್ಳುವುದೂ, ಅಧಿಪತ್ಯಕ್ಕಾಗಲೀ ಅದರ ಯಾವ ಭಾಗಕ್ಕಾಗಲೀ ಆವಶ್ಯಕವಾಗುವ ಮಸೂದೆಗಳನ್ನು ಮಾಡುವುದೂ ಚಕ್ರವರ್ತಿ ಮತ್ತು ಪಾರ್ಲಿಮೆಂಟ್ ಸಭೆಯ ಮುಖ್ಯ ಕೆಲಸಗಳಾಗಿವೆ.

ರಾಜ್ಯಾಡಳಿತ ಕಾರ್ಯಗಳನ್ನು ದೊಡ್ಡದೊಡ್ಡ ಸಭೆಗಳ ಸಹಾಯದಿಂದ ನಿರ್ವಹಿಸುವುದು ಸಾಧ್ಯವಲ್ಲದ್ದರಿಂದ ಚಕ್ರವರ್ತಿಗಳು ಪಾರ್ಲಿಮೆಂಟಿನ ಎರಡು ಸಭೆಗಳಿಂದಲೂ ಆರಿಸಲ್ಪಟ್ಟ ಪ್ರಮುಖರ ಸಭೆಗೆ ಈ ಕೆಲಸವನ್ನು ಒಪ್ಪಿಸಿರುವರು. ಈ ಸಭೆಗೆ ಕ್ಯಾಬಿನೆಟ್ (Cabinet) ಎಂದು ಹೆಸರು. ಇದರಲ್ಲಿ 19 ಜನ ಸಭ್ಯರಿರುವರು. ಇವರನ್ನು "ಪ್ರಧಾನ" ರೆಂದು ಕರೆಯುತ್ತಾರೆ. ಇವರ ಪೈಕಿ ನಿರ್ವಿವಾದವಾದ ಸಾಮರ್ಥ್ಯವುಳ್ಳವನನ್ನು ಚಕ್ರವರ್ತಿಗಳು ಪ್ರಧಾನ ಮಂತ್ರಿ (Prime Minister) ಯನ್ನಾಗಿ ನೇಮಿಸುವರು. ಇಂಡಿಯಾ ದೇಶದ ಆಡಳಿತದ ಮೇಲ್ವಿಚಾರಣೆಯನ್ನು ನೋಡುವ, "ಸೆಕ್ರಿಟೆರಿ ಆಫ್ ಸ್ಟೇಟ್" (Secretary of State for India) ಎಂಬ ಪ್ರಧಾನನು ಈ ಸಭ್ಯರಲ್ಲಿ ಒಬ್ಬನಾಗಿರುತ್ತಾನೆ.

ಆಧಿಪತ್ಯದ ಆಡಳಿತವು ಇಲಾಖೆಗಳಾಗಿ ವಿಂಗಡವಾಗಿದೆ. ಒಂದೊಂದು ಇಲಾಖೆಗೆ ಒಬ್ಬೊಬ್ಬ ಪ್ರಧಾನನು ಮುಖ್ಯಸ್ಥನಾಗಿರುವನು. ಇವನು ತನ್ನ ಖಾತೆಗೆ ಸಂಬಂಧಪಡುವ ವಿಷಯಗಳಲ್ಲಿ ಪಾರ್ಲಿಮೆಂಟಿನವರು ಮಾಡುವ ಆಕ್ಷೇಪಣೆಗಳಿಗೆ ತಕ್ಕ ಸಮಾಧಾನಗಳನ್ನು ಕೊಡಬೇಕು. ಇದರಿಂದ ಪ್ರತಿಯೊಬ್ಬ ಪ್ರಧಾನನೂ ಪಾರ್ಲಿಮೆಂಟಿನ ಅಧಿಕಾರಕ್ಕೆ ಒಳಪಟ್ಟಿರುವನು.

ಇಂಡಿಯಾ ದೇಶದ ಕಾರ್ಯದರ್ಶಿಯಾದ ಸ್ಟೇಟ್ ಸೆಕ್ರಿಟೆರಿಯವರನ್ನು ಚಕ್ರವರ್ತಿಗಳು ಪ್ರಧಾನ ಮಂತ್ರಿಗಳ ಸಲಹೆಯಂತೆ ನೇಮಿಸುವರು. ಈತನು ತನ್ನ ಅಧಿಕಾರಕ್ಕೆ ಒಳಪಟ್ಟಿರುವ ಈ ದೇಶದ ಕ್ಷೇಮವನ್ನೂ ಇಲ್ಲಿಯ ಆಡಳಿತದ ಮೇಲ್ವಿಚಾರಣೆಯನ್ನೂ ನೋಡುವನು. ಇಲ್ಲಿನ ಮುಖ್ಯ ವಿಷಯಗಳನ್ನು ವೈಸ್‌ರಾಯಿಯವರು ಈತನಿಗೆ ತಿಳಿಸಿ ಈತನ ಅಪ್ಪಣೆಯಂತೆ ನಡೆಯುವರು. ಇಂಡಿಯಾದೇಶದಲ್ಲಿ ಕೆಲಸಮಾಡುವ ಅನೇಕ ದೊಡ್ಡ ಅಧಿಕಾರಿಗಳನ್ನು ನೇಮಿಸುವ ಮತ್ತು ಕೆಲಸದಿಂದ ತೆಗೆದುಹಾಕುವ ಅಧಿಕಾರವು ಈತನಿಗಿದೆ.

ಈತನ ಸಹಾಯಕ್ಕೆ "ಇಂಡಿಯಾ ಕೌನ್ಸಿಲ್" ಎಂಬ ಸಭೆ ಇರುವುದು. ಇದರಲ್ಲಿ 8 ರಿಂದ 12ರ ವರೆಗೆ ಸಭಿಕರಿರುತ್ತಾರೆ. ಇವರ ಪೈಕಿ ಮೂರು ಜನ ಸಭಿಕರು ಭರತಖಂಡದವರು. ಹತ್ತು ವರ್ಷಗಳಿಗೆ ಕಡಮೆ ಇಲ್ಲದೆ ಈ ದೇಶದಲ್ಲಿದ್ದು ಇಲ್ಲಿಯ ವಿಚಾರಗಳಲ್ಲಿ ಚೆನ್ನಾಗಿ ಅನುಭವವುಳ್ಳವರನ್ನು ಈ ಸಭೆಗೆ ನೇಮಿಸುವರು. ಈ ದೇಶದ ಆಡಳಿತವನ್ನು ಸೆಕ್ರಿಟೆರಿಯವರು ಸಾಮಾನ್ಯವಾಗಿ ಸಭಿಕರ ಅಭಿಪ್ರಾಯದಂತೆ ನಡೆಸುವರು. ಈ ಸಭೆಯ ಸಮ್ಮತಿಯಿಲ್ಲದೆ ಹಿಂದೂಸ್ಥಾನದ ಆದಾಯ ವೆಚ್ಚಗಳು ನಡೆಸಲ್ಪಡುವುದಿಲ್ಲ. ಅದರೂ ಯುದ್ಧ, ಕರಾರು ಮೊದಲಾದ ರಾಜಕೀಯ ವಿಚಾರಗಳಲ್ಲಿ ಸೆಕ್ರಿಟೆರಿಯವರು ಸ್ವತಂತ್ರವಾಗಿ ವರ್ತಿಸುವರು. ಈ ಸಭೆಯಲ್ಲದೆ ಸೆಕ್ರೆಟೆರಿಯವರ ನಿತ್ಯಕೆಲಸದ ನಿರ್ವಾಹಕ್ಕಾಗಿ ಲಂಡನ್ ಪಟ್ಟಣದಲ್ಲಿ "ಇಂಡಿಯಾ ಆಫೀಸ್" ಎಂಬ ದೊಡ್ಡ ಕಛೇರಿಯು ಇರುವುದು.

ಮೈಸೂರು ಸರ್ಕಾರದ, ಇದಕ್ಕೆ ಮೇಲಿರುವ ಇಂಡಿಯಾ ಸರ್ಕಾರದ, ಇದಕ್ಕೂ ಮೇಲಿರುವ ಸರ್ವಾಧಿಕಾರ ಸರ್ಕಾರದ ರಾಜ್ಯಭಾರ ಕ್ರಮಗಳನ್ನು ಸಂಕ್ಷೇಪವಾಗಿ ಹೇಳಿಯಾಯಿತು. ಸರ್ಕಾರವನ್ನು ಒಂದು